ಬುಧವಾರ, ಅಕ್ಟೋಬರ್ 27, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಾನಪದ ನೃತ್ಯ
ಅಮೃತಸರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮವೊಂದರಲ್ಲಿ ಕಾಲೇಜು ಯುವತಿಯರು ಪಂಜಾಬಿ ಜಾನಪದ ನೃತ್ಯವನ್ನು ಪ್ರದರ್ಶಿಸಿದರು

ನಿಮಗೆ ಅಲರ್ಜಿ ಸಮಸ್ಯೆಯೆ?

ಇಸಿಎಚ್‌ಎಸ್/ಇಎಸ್ಐ/ ಸಿಜಿಎಚ್‌ಎಸ್ ಕಾರ್ಡ್‌ದಾರರಿಗೆ **ಹೆಚ್ಚುವರಿ ರಿಯಾಯಿತಿ**

ವಿಟಾಮಿನ್ ಬಿ12 & ವಿಟಾಮಿನ್ ಡಿ ಪರೀಕ್ಷೆ **ಉಚಿತ** ಅಲರ್ಜಿ ಪರೀಕ್ಷೆ ಜೊತೆಗೆ

ರಕ್ತ ತಪಾಸಣೆ ಮೂಲಕ ಅಲರ್ಜಿಯ ಕಾರಣ ಕಂಡುಹಿಡಿಯಬಹುದು

Aanjan Path Labs
& ALLERGY TESTING CENTRE
AFFORDABLE ACCURACY

ಕಾಯಿಲೆಗೆ ಭಯಪಡದಿರಿ, ಇಂದೇ ಅಲರ್ಜಿ ತಪಾಸಣೆ ಮಾಡಿಸಿಕೊಳ್ಳಿ ಕಾಯಿಲೆಯನ್ನು **ಹೊಡೆದೋಡಿಸಿರಿ**

ಸಮಯ ಬೆಳಗ್ಗೆ 9 ರಿಂದ ಸಂಜೆ 5

29, 30, 31 ಅಕ್ಟೋಬರ್ & 1 ನವಂಬರ್ 2021 ರಂದು ಅರ್ಧಕ್ಕಿಂತ ಕಡಿಮೆ ದರದಲ್ಲಿ ನಿಮ್ಮ ಅಲರ್ಜಿ ತಪಾಸಣೆ ಮಾಡಿಸಿಕೊಳ್ಳಿ

@ ಬೆಂಗಳೂರು, ಚಿಂತಾಮಣಿ, ಕೋಲಾರ, ಕಗ್ಗದಾಸನಪುರ, ಗುಬ್ಬಲಾಳ, ತುಮಕೂರು

ಕರ್ನಾಟಕ ಸ್ಪೆಸಿಫಿಕ್ ಅಲರ್ಜಿ ಪ್ಯಾನಲ್ ಲಭ್ಯವಿದೆ

ಕರ್ನಾಟಕ ಕಾಂಪ್ರಹೆನ್ಸಿವ್ ಅಲರ್ಜನ್ ಪ್ಯಾನಲ್. ಕರ್ನಾಟಕದ ಅಲರ್ಜನ್ಸ್ ಸ್ಪೆಸಿಫಿಕ್ (ಪ್ರಕಟಿತ ಅಧ್ಯಯನಗಳು ಮತ್ತು ವ್ಯಾಖ್ಯಾನಿತ ಅನುಭವಗಳ ಆಧಾರದಲ್ಲಿ)

ಹಾಗಾದರೆ ಅಲರ್ಜಿ ಎಂದರೇನು? ತಿಳಿಯೋಣ

ಪುರುಷರಾಗಿರಲಿ ಅಥವಾ ಮಹಿಳೆಯಾಗಿರಲಿ, ಪ್ರತಿ ವ್ಯಕ್ತಿಯಲ್ಲೂ ಬಾಹ್ಯ ವಸ್ತುಗಳಿಂದ ಉಂಟಾಗಬಲ್ಲ ಪ್ರಚೋದತೆಯನ್ನು ತಡೆಯಬಲ್ಲ ಒಂದಿಷ್ಟು ಶಕ್ತಿ ಇದ್ದೇ ಇರುತ್ತದೆ. ಆದರೆ, ಕೆಲವು ನಿರ್ದಿಷ್ಟ ವಸ್ತುಗಳಿಂದಾಗಿ ಕೆಲವರ ರೋಗನಿರೋಧಕ ವ್ಯವಸ್ಥೆಯಲ್ಲಿ ಅಸಹಜ ಪ್ರತಿಸ್ಪಂದನೆಗಳನ್ನು ಸೃಷ್ಟಿಸುವ ಮೂಲಕ ಅಲರ್ಜಿಗೆ ಕಾರಣವಾಗುತ್ತದೆ.

ಅಲರ್ಜಿ ಎಂಬುದು ಒಂದು ಕಾಯಿಲೆ, ಆದರೆ ಜನರು ಇದನ್ನು ಕಾಯಿಲೆ ಎಂದು ಪರಿಗಣಿಸುವುದಿಲ್ಲ. ಒಂದು ಬಾರಿ ಇದು ಆರಂಭವಾದ ಬಳಿಕ ವ್ಯಕ್ತಿಯು ಸಮಸ್ಯೆಗಳನ್ನು ಅನುಭವಿಸತೊಡಗುತ್ತಾರೆ. ಒಂದು ವೇಳೆ ವ್ಯಕ್ತಿಯೊಬ್ಬರಿಗೆ ಪರಿಮಳಗಳು ಇಷ್ಟವಾಗದಿದ್ದಲ್ಲಿ, ಅವರಿಗೆ ಹೂಗಳಿಂದ ಅಲರ್ಜಿ ಇರುತ್ತದೆ. ಇನ್ನು ಕೆಲವು ಜನರಿಗೆ ಸಾಕು ಪ್ರಾಣಿಗಳಿಂದ ಕೂಡ ಅಲರ್ಜಿ ಇರುತ್ತದೆ. ಆದರೆ, ಇಂತಹ ಅಲರ್ಜಿಗಳನ್ನು ಗುರುತಿಸಿದ ಬಳಿಕ ಪರಿಣಾಮಕಾರಿ ಚಿಕಿತ್ಸೆ ಪಡೆಯಲು ಸುಲಭವಾಗುತ್ತದೆ ಹಾಗೂ ಮುಂಜಾಗ್ರತೆ ಕೂಡ ಕೈಗೊಳ್ಳಬಹುದಾಗುತ್ತದೆ.

ಅಲರ್ಜಿಯ ಲಕ್ಷಣಗಳು

- ಚರ್ಮ ಕೆಂಪಗಾಗುವುದು
- ಕಲೆಗಳು/ಚರ್ಮದ ಮೇಲೆ ತುರಿಕೆ
- ತ್ವಚೆಯ ಮೇಲೆ ಗುಳ್ಳೆ
- ಮುಖ–ತುಟಿ ಊದಿಕೊಳ್ಳುವುದು
- ಹೊಟ್ಟೆ ನೋವು
- ಡಯೇರಿಯಾ
- ಕೆಮ್ಮು, ಗಂಟಲು ಕೆರೆತ
- ಇಸುಬು
- ಉಸಿರಾಟದಲ್ಲಿ ತೊಂದರೆ
- ಉರ್ಟಿಕೇರಿಯಾ
- ಅಲರ್ಜಿಕ್ ರ್ಹೀನಿಟಿಸ್ (ಸೀನುವಿಕೆ)

ಪರಿಣಿತರ ಮಾತು

ಡಾ. ಪ್ರಶಾಂತ್ ಜೆರಾತ್, (ಎಂಡಿ, ಪಾಥೋಲಜಿಸ್ಟ್) ಇವರ ಪ್ರಕಾರ ಹಿಂದಿನ ದಿನಗಳಲ್ಲಿ, ಅಲರ್ಜಿ ಕಂಡುಹಿಡಿಯಲು ತೋಳಿನ ಮೇಲೆ 98 ಬಾರಿ ಚುಚ್ಚಿ ಪರೀಕ್ಷಿಸುವ ಪದ್ಧತಿ ಜಾರಿಯಲ್ಲಿತ್ತು. ಆದರೆ ಈಗ, ಒಂದೇ ಒಂದು ರಕ್ತ ಪರೀಕ್ಷೆಯಲ್ಲಿ ಅಲರ್ಜಿಯ ಕಾರಣಗಳನ್ನು ಕಂಡುಹಿಡಿಯಬಹುದು. ದೈನಂದಿನ ಜೀವನದಲ್ಲಿ ನಮ್ಮ ಸುತ್ತಮುತ್ತಲಿನ ಯಾವುದೇ ಪದಾರ್ಥದಿಂದಾಗಿ ಅಲರ್ಜಿ ಉಂಟಾಗಬಹುದು. ಗಾಳಿಯಲ್ಲಿ ಹುದುಗಿರುವ ಪರಾಗ, ಪ್ರಾಣಿ ತ್ಯಾಜ್ಯ, ಕೀಟಾಣುಗಳ ಕಚ್ಚುವಿಕೆ ಮತ್ತು ಕಡಲೆಕಾಯಿ, ಮರದ ಕಾಯಿಗಳು, ಗೋದಿ, ಸೊಯಾ, ಮೀನು, ಚಿಪ್ಪುಮೀನು, ಮೊಟ್ಟೆ, ಹಾಲುಗಳಂತಹ ಕೆಲವು ನಿರ್ದಿಷ್ಟ ಆಹಾರ ಪದಾರ್ಥಗಳಿಂದ ಜೇನುನೊಣ, ಕಣಜದಂತಹ ಕೀಟಗಳ ಕಡಿತದಿಂದ ಅಲರ್ಜಿ ಉಂಟಾಗುತ್ತದೆ. ಆದ್ದರಿಂದ, ಕರ್ನಾಟಕದಾದ್ಯಂತ ಅಲರ್ಜಿ ತಪಾಸಣೆ ಕೈಗೊಳ್ಳಲಾಗುತ್ತಿದೆ.

ಡಾ. ನವನೀತ್ ಕೌರ್ (ಎಂಬಿಬಿಎಸ್, ಎಂಎಸ್ ಇ.ಎನ್.ಟಿ.) ಹೇಳುತ್ತಾರೆ, ಅಲರ್ಜಿ ಸಮಸ್ಯೆ ಎಂಬುದು ಸಾಮಾನ್ಯವಾಗಿ ವಿಶ್ವದಾದ್ಯಂತ ಕಂಡುಬರುವ ಒಂದು ಗಂಭೀರ ಅಸ್ವಸ್ಥತೆಯಾಗಿದೆ. ಅಲರ್ಜಿಯ ಲಕ್ಷಣಗಳು ವಿಚಿತ್ರವಾಗಿರುತ್ತವೆ, ಇವು ಕೆಲವೊಮ್ಮೆ ಜೀವಕ್ಕ ಎರವಾಗುವ ಪ್ರತಿಕ್ರಿಯೆಗಳನ್ನು ಕೂಡ ತೋರುತ್ತವೆ. ಸಾಮಾನ್ಯವಾಗಿ ಒಂದು ಅಲರ್ಜಿಯ ಪರಿಣಾಮವು ಶ್ವಾಸಕೋಶ, ಗಂಟಲು, ಸೈನಸ್, ಕಿವಿ, ಹೊಟ್ಟೆ ಪದರು ಅಥವಾ ತ್ವಚೆಯ ಮೇಲ್ಭಾಗದಲ್ಲಿ ಗೋಚರಿಸುತ್ತದೆ. ಕೆಲವು ಜನರಿಗೆ ಅಸ್ಥಮಾ ರೂಪದಲ್ಲೂ ಅಲರ್ಜಿ ಪೀಡಿಸುತ್ತದೆ. ಬಹುತೇಕ ಗಂಭೀರ ಪ್ರಕರಣಗಳಲ್ಲಿ ಅನಾಫಿಲಾಕ್ಸಿಸ್ ಎಂಬ ಮಾರಣಾಂತಿಕ ಅಡ್ಡಪರಿಣಾಮದ ಪ್ರಭಾವ ಕೂಡ ಉಂಟಾಗಬಹುದಾಗಿರುತ್ತದೆ. ಅಲರ್ಜಿ ಎಂಬುದು ಕೂಡ ಒಂದು ರೀತಿಯ ಕಾಯಿಲೆಯಾಗಿದ್ದು, ಒಂದು ವೇಳೆ ಮುಂಚಿತವಾಗಿಯೇ ಇದನ್ನು ತಪಾಸಣೆ ಮಾಡಿ ಕಂಡುಕೊಂಡು ವಿಶೇಷಜ್ಞವೈದ್ಯರಿಂದ ಚಿಕಿತ್ಸೆ ಪಡೆದುಕೊಂಡು ನಿವಾರಿಸಬಹುದಾಗಿದೆ.

ಅಲರ್ಜಿಯ ಕಾರಣಗಳು (ಅಲರ್ಜಿ)

ನಮ್ಮ ದೈನಂದಿನ ಜೀವನದ ಪರಿಸರದಲ್ಲಿರುವ ಸಾಕಷ್ಟು ಅಂಶಗಳು ಅಲರ್ಜಿಗಳಿಗೆ ಕಾರಣವಾಗಿರುತ್ತವೆ. ಗಾಳಿಯ ಮೂಲಕ ಹರಡುವ ಪರಾಗ, ಪ್ರಾಣಿಗಳ ತ್ಯಾಜ್ಯ, ಧೂಳಿನ ಕಣಗಳು, ಕೆಲವು ಆಹಾರ ಪದಾರ್ಥಗಳು, ವಿಶೇಷವಾಗಿ ಕಡಲೆಬೀಜ, ಮರಗಳ ಬೀಜ, ಗೋಧಿ, ಸೋಯಾ, ಮೀನು, ಚಿಪ್ಪು ಮೀನು, ಮೊಟ್ಟೆ ಹಾಲು, ಜೇನು ನೊಣ ಅಥವಾ ಕಣಜದಂತಹ ಕೀಟಗಳ ಕಚ್ಚುವಿಕೆ ಮತ್ತು ನೀವು ಸ್ಪರ್ಶಿಸುವ ಲ್ಯಾಟೆಕ್ಸ್‌ನಿಂದಾಗಿ ಕೂಡ ಚರ್ಮವು ಪ್ರಚೋದನೆಗೆ ಒಳಪಡುತ್ತದೆ. ಒಂದೇ ಒಂದು ರಕ್ತ ಮಾದರಿ ತಪಾಸಣೆ ಮೂಲಕ ಯಾವುದೇ ಅಲರ್ಜಿಯನ್ನು ನಾವು ಕಂಡು ಹಿಡಿಯಬಹುದು ಮತ್ತು ಕೆಲವು ಇಮ್ಯೂನ್ ಬೂಸ್ಟರ್ಸ್, ಆ್ಯಂಟಿ ಅಲರ್ಜಿಕ್ ಔಷಧಿಗಳ ಮುಖಾಂತರ ಹಾಗೂ ಇಮ್ಯುನೊ ಥೆರಪಿ ಮೂಲಕ ಕೂಡ ಅಲರ್ಜಿಗೆ ಚಿಕಿತ್ಸೆ ನೀಡಬಹುದಾಗಿದೆ.

ಉದಾಹರಣೆಗೆ, 12 ವರ್ಷದ ಬಾಲಕಿಯೊಬ್ಬಳು ಅಸ್ತಮಾ ರೋಗಿಯಾಗಿದ್ದಳು ಮತ್ತು ಕೆಮ್ಮು, ಉಬ್ಬಸ ಹಾಗೂ ಉಸಿರಾಟದ ಸಮಸ್ಯೆಗಳಿಂದ ಬಳಲುತ್ತಿದ್ದಳು. ಬಾಲಕಿ ನಮ್ಮನ್ನು ಸಂಪರ್ಕಿಸಿದಾಗ, ಅವಳ ಉಸಿರಾಟದ ಸಮಸ್ಯೆಗಳಿಗೆ ಸ್ಪಷ್ಟ ಕಾರಣಗಳು ತಿಳಿದಿರಲಿಲ್ಲ. ಅವಳ ವೈದ್ಯಕೀಯ ಹಿನ್ನಲೆಯನ್ನು ಪರಿಶೀಲಿಸಿದಾಗ ಅವಳ ಅಸ್ತಮಾ ರೋಗದ ಬಗ್ಗೆ ತಿಳಿದು ಬಂದಿತು. ಇದಕ್ಕಾಗಿ ಅವಳು ಉತ್ತಮ ಚಿಕಿತ್ಸೆಯನ್ನೇ ಪಡೆದಿದ್ದಳಾದರೂ ಗುಣಮುಖ ಆಗಿರಲಿಲ್ಲ. ಅಷ್ಟೆ ಅಲ್ಲದೆ, ಪೀನಟ್ಸ್, ಚಿಕ್‌ಪೀಸ್ ಮತ್ತು ಲೆಂಟಿಲ್ಸ್‌ಗಳಿಂದ ಎದುರಾಗುವ ಡಿಸ್ಪ್ನೋಯಿ ಮತ್ತು ಪ್ರುರಿಟಿಸ್ ಹಿನ್ನಲೆ ಕೂಡ ಹೊಂದಿರುವುದು ಖಚಿತವಾಗಿತ್ತು. ಹಿಂದಿನ ದಿನಗಳಲ್ಲಿ ಆ ಬಾಲಕಿ ನಿರ್ದಿಷ್ಟ ಋತುಮಾನದಲ್ಲಿ ಮಾತ್ರ, ಹುಲ್ಲು ಮತ್ತು ಧೂಳಿನ ಕಣಗಳಿಂದ ಎದುರಾಗುವ ಉಬ್ಬಸದ ಸಮಸ್ಯೆ ಎದುರಿಸುತ್ತಿದ್ದಳು. ಈ ಬಾಲಕಿಯ ರಕ್ತ ಮಾದರಿ ತಪಾಸಣೆ ಮೂಲಕ ಅಲರ್ಜಿ ಪರೀಕ್ಷೆ ಮಾಡಿದ ಬಳಿಕ, ಇಮ್ಯುನೊ ಥೆರಪಿ ಹಾಗೂ ಕೆಲವು ಆ್ಯಂಟಿ ಅಲರ್ಜಿಕ್ ಔಷಧೋಪಚಾರ ನೀಡಿದಾಗ ಅವಳು ಗುಣಮುಖಳಾದಳು. ಯಾರಾದರೂ ಉಸಿರಾಟದಲ್ಲಿ ತೊಂದರೆ ಅನುಭವಿಸುತ್ತಿದ್ದರೆ, ಅಂತಹವರು ಕೂಡ ತಕ್ಷಣವೇ ಅಲರ್ಜಿ ಪರೀಕ್ಷೆ ಮಾಡಿಸಿಕೊಳ್ಳುವುದು ಒಳಿತು. ಒಂದು ಬಾರಿ ಅಲರ್ಜಿ ಪತ್ತೆಯಾದಲ್ಲಿ, ಅರ್ಧ ಸಮಸ್ಯೆಯೇ ನಿವಾರಣೆಗೊಂಡಂತೆ. ಇದು ವಿಶೇಷಜ್ಞ ವೈದ್ಯರ ತಂಡದ ನೆರವಿನಿಂದ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ಮತ್ತು ಸಮರ್ಪಕ ಔಷಧೋಪಚಾರದ ಮೂಲಕ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ನೆರವಾಗುತ್ತದೆ. ನಮ್ಮ ಹೆಮ್ಮೆಯ ವೈದ್ಯರ ತಂಡವು ವಿಶೇಷ ತರಬೇತಿ ಹೊಂದಿದ್ದು, ಯುರೋಬ್ಲಾಟ್ ಮತ್ತು ಫಾಡಿಯಾ ಯಂತ್ರಗಳನ್ನು ಬಳಸಿಕೊಂಡು ಇಂತಹ ಅಲರ್ಜಿಗಳನ್ನು ಪತ್ತೆ ಮಾಡುವಲ್ಲಿ ನಿಪುಣರಾಗಿದ್ದಾರೆ.

ಅಲರ್ಜಿಗಳಿಗೆ ಚಿಕಿತ್ಸೆ

ಅಲರ್ಜಿಯು ವ್ಯಕ್ತಿಯ ದೈನಂದಿನ ಜೀವನದಲ್ಲಿ ಹಲವಾರು ಸಮಸ್ಯೆಗಳನ್ನು ಸೃಷ್ಟಿಸಬಲ್ಲದಾಗಿರುತ್ತದೆ, ಆದ್ದರಿಂದ ಅಲರ್ಜಿಯನ್ನು ನಿರ್ಲಕ್ಷಿಸುವುದು ಒಳಿತಲ್ಲ. ಅಲರ್ಜಿಗಳು ಋತುಮಾನಗಳಿಗೆ ಅನುಗುಣವಾಗಿ ಕೂಡ ತಲೆದೋರುತ್ತವೆ. ವ್ಯಕ್ತಿಯೊಬ್ಬರು ನಿರ್ದಿಷ್ಟವಾದ ಋತುಮಾನ ಆಧಾರಿತ ಅಲರ್ಜಿಯಿಂದ ಬಳಲುತ್ತಿದ್ದರೆ, ಇದು ತುಂಬಾ ಬಾಧಿಸುತ್ತದೆಯಾದ್ದರಿಂದ ತಕ್ಷಣವೇ ವೈದ್ಯರನ್ನು ಸಂಪರ್ಕಿಸುವುದು ಒಳ್ಳೆಯದು. ಅಲರ್ಜಿಕ ಕಾಯಿಲೆಗಳನ್ನು ತಕ್ಷಣವೇ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬಹುದು ಮತ್ತು ಮುಂಜಾಗ್ರತೆಗಳನ್ನು ಕೂಡ ಕೈಗೊಳ್ಳಬಹುದು. ಒಂದು ಬಾರಿ ಅಲರ್ಜಿ ಪರೀಕ್ಷೆ ಮಾಡಿಸಿಕೊಂಡರೆ, ವೈದ್ಯರು ರೋಗಿಗೆ ಸಮರ್ಪಕವಾದ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ.

ಇತ್ತೀಚಿಗಿನ ದಿನಗಳಲ್ಲಿ, ರೋಗಿಯ ರಕ್ತ ಮಾದರಿ ಪಡೆದುಕೊಂಡು ತುಂಬ ಸುಲಭವಾಗಿ ಅಲರ್ಜಿ ಪತ್ತೆ ಮಾಡಬಹುದಾಗಿದೆ. ಅಲರ್ಜಿ ಕಾಯಿಲೆಯ ತಪಾಸಣೆಯ ಬಳಿಕ, ರೋಗಿಯು ವೈದ್ಯರು ಸೂಚಿಸಿದ ಔಷಧಿಯನ್ನು ನಿಗದಿತ ಅವಧಿಯವರೆಗೆ ಸೇವಿಸುತ್ತ, ಅಲರ್ಜಿಯ ಪ್ರಚೋದಕಗಳ ವಿರುದ್ಧ ಹೋರಾಡಲು ತನ್ನ ರೋಗನಿರೋಧಕ ವ್ಯವಸ್ಥೆಯನ್ನು ಆಳದಿಂದ ಬಲಿಷ್ಠಗೊಳಿಸಿಕೊಳ್ಳಬೇಕು. ಇದರಿಂದಾಗಿ ರೋಗಿಯು ಮುಂಜಾಗ್ರತೆ ವಹಿಸಲು ನೆರವಾಗುತ್ತದೆ ಹಾಗೂ ರೋಗಿಯ ಅಲರ್ಜಿ ಕೂಡ ನಿವಾರಣೆಗೊಳ್ಳುತ್ತದೆ.

ಅಲರ್ಜಿಗಳನ್ನು ತಪಾಸಣೆ ಮಾಡಿದ ಬಳಿಕ, ನಿಗದಿತ ಆಹಾರ ಪದಾರ್ಥಗಳನ್ನು ತ್ಯಜಿಸುವ ಮೂಲಕವಾಗಲಿ ಅಥವಾ ಔಷಧೋಪಚಾರದ ಮೂಲಕವಾಗಲಿ ಚಿಕಿತ್ಸೆ ನೀಡಬಹುದಾಗಿದೆ. ಔಷಧೋಪಚಾರ ಎಂದರೆ ಅಲರ್ಜನ್ ಪ್ರತಿರೋಧಕ ಅಥವಾ ಒಬ್ಬ ಪರಿಣಿತ ವೈದ್ಯರು ನೀಡಬಹುದಾದ ಇಮ್ಯುನೋ–ಥೆರಪಿ ಎನ್ನಲಾಗುವ ಒಂದು ವಿಶೇಷ ಚಿಕಿತ್ಸೆ ನೀಡುವ ಮೂಲಕ ಅಲರ್ಜಿ ಸಮಸ್ಯೆಗಳಿಂದ ಮುಕ್ತರಾಗಬಹುದು.

ಜೆರಾತ್ ಪ್ಯಾಥ್ ಲ್ಯಾಬ್ಸ್ & ಅಲರ್ಜಿ ಟೆಸ್ಟಿಂಗ್ ಸೆಂಟರ್ ಸಂಸ್ಥೆಯು, ಎನ್‌ಎಬಿಎಲ್ ಮಾನ್ಯತೆ ಪಡೆದಿರುವ ಭಾರತದ ಮೊದಲ ಅಲರ್ಜಿ ಟೆಸ್ಟಿಂಗ್ ಲ್ಯಾಬ್ ಆಗಿದೆ. ಅಂಜನ್ ಪ್ಯಾಥ್ ಲ್ಯಾಬ್, ಜೆರಾತ್ ಪ್ಯಾಥ್ ಲ್ಯಾಬ್ಸ್‌ನ ಸಹೋದರ ಸಂಸ್ಥೆಯಾಗಿದೆ. ಜೆಪಿಎಲ್ ಸಂಸ್ಥೆಯು ದೇಶದ ಉತ್ತರ, ಪೂರ್ವ, ಪಶ್ಚಿಮ ಭಾಗಗಳಲ್ಲಿನ 24 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ನೆಲೆಗೊಂಡಿದೆ ಮತ್ತು ಇದೀಗ ಎಪಿಎಲ್ ಸಂಸ್ಥೆಯ ಮೂಲಕ ದಕ್ಷಿಣ ಭಾರತದ ತಮಿಳುನಾಡು, ಕೇರಳ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಪ್ರವೇಶಿಸಿದೆ.

ಭಾರತದ ಅತಿದೊಡ್ಡ ಅಲರ್ಜಿ ಪರೀಕ್ಷಾ ಸರಣಿಯ ಭಾಗವಾಗಿರಿ
ಫ್ರಾಂಚೈಸಿಗಾಗಿ ಇಮೇಲ್ ರವಾನಿಸಿ: aanjanpathlabs@gmail.com

ದಯವಿಟ್ಟು ಕೋವಿಡ್–19 ಮಾರ್ಗಸೂಚಿ ಅನುಸರಿಸಿರಿ (ಮಾಸ್ಕ್ ಧರಿಸಿರಿ ಮತ್ತು ಅಂತರ ಕಾಪಾಡಿ)

Aanjan Path Labs & ALLERGY TESTING CENTRE — AFFORDABLE ACCURACY

ಕಾರ್ಪೊರೇಟ್ ಕಚೇರಿ: ಪ್ಲಾಟ್ ನಂ. 29ಎ ಎಆರ್‌ಕೆ ಕಾಲೋನಿ (ಅನಂತ ರಾಮಕೃಷ್ಣ ಅಯ್ಯರ್ ಕಾಲೋನಿ) ಎಲ್ಡಮಾಸ್ ರೋಡ್, ತೆಯ್ನಾಮ್‌ಪೇಟ್ ಚೆನ್ನೈ

BENGALURU — 9035549256, 7795638554 — MARUTI DIAGNOSTICS CENTER, #63, V. Nagenahalli Main Road, (Nr. Nagenahalli Church), R.T. Nagar (P)

BENGALURU (Doddaballapur) — 8088696070 — VASANTHA DIAGNOSTICS, Fort Jamia Masjid Complex, Opp To Rajkamal Theatre, Fort Road, Doddaballapur

BENGALURU — 8431194338, 7012745991 — HOME COLLECTION (9480130408) — DEEPASHRI CLINICAL LAB (UNIT OF SHIFAA LAB), No.728, 3rd Block, Opp. Old Police Station, Rajajinagar, ESI Hospital Road

BENGALURU — 6366537785 — HOME COLLECTION (9480130408) — SAI SAMARTH LAB (UNIT OF SHIFAA CLINICAL LAB), No.44, 1st Main, 7th Cross, Mico Layout, BTM 2nd Stage, Bangalore

BENGALURU — 6366537785 — HOME COLLECTION (9480130408) — RADIAL DIAGNOSTICS (UNIT OF SHIFAA LAB), CA Site, Lions Seva Bhavana, 8th 'A' Cross, 16th 'A' Main Road, Yelahanka New Town

BENGALURU — 8431194338, 7022424960. — HOME COLLECTION (9480130408) — REPUBLIC HOSPITAL, No.5, Langford Road, Near Richmond Circle

BENGALURU — 7022470224 — AARTHI SCANS & LABS, 159, 9th Main Road, 3rd Block, Jayanagar, Near Jos Alukkas Jewellery

BENGALURU — 7022470224 — AARTHI SCANS & LABS, 499, CMH Road, Near Max Showroom, Indiranagar

BENGALURU — 7022470224 — AARTHI SCANS & LABS, No.9, Kamanahalli Main Road, Ramaswamy Palya, IOC Bus Stop (Indian Oil), Maruthi Sevangar Post

BENGALURU — 7022470224 — AARTHI SCANS & LABS, No.22, BBMP New No.24/1, 1st C' Main Road,8th Block, Koramangala, Near Ambedkar Park, Near Lavish Pharma

BENGALURU — 7022470224 — AARTHI SCANS & LABS, No.31, C' 1st Main, Ambedkar Nagar, Nagarbhavi Circle, Near Madhuramma Temple, Nagarbhavi, Bengaluru

BENGALURU — 7022470224 — AARTHI SCANS & LABS, No.142, Amarkrupa, 11th Cross Main Road, Swimming Pool Extension Road, Mahawer Ayurvedha Medical

BENGALURU — 7022470224 — AARTHI SCANS & LABS, No.3, Ground Floor, Jaypee Tower, East End Main Road, Leaf Pharmacy, Jayanagar 9th Block, Leaf Pharma Jp Towers, Bengaluru

BENGALURU — 7022470224 — AARTHI SCANS & LABS, No.968, 2nd Main, 3rd Cross, Near Hoskarahalli Metro Station, MLA Sommanna House, Vijayanagar

BENGALURU — 7022470224 — AARTHI SCANS & LABS, No.1-2, "Ayushri" Nobonagar Mini Park Road, Dixt Ayur Care Clinic, Doddakammanahalli Main Road, Bannerghatta Road

BENGALURU — 7022470224 — AARTHI SCANS & LABS, No.24, Subramani Nilaya, Near Venugopal Swamy Temple, Devasandra Main Road, K.R.PURAM

BENGALURU — 7022470224 — AARTHI SCANS & LABS, No.223/4, Bettaiah Building, Near Old Check Post, Near Dhasarahalli Metro Station, Tumkur Main Road, T.Dhasarahalli

CHINTAMANI — 7259727100, 9900816830 — VITAL CARE DIAGNOSTIC LABORATORY, Near Vasavi Wedding Hall, Church Street, N.R.EXTN.,

KOLAR — 9731449350, 08152401074 — DR. NUKAPUR HOSPITAL, Hruthik Mansion, Sharada Talkies Road, Near KSRTC Bus Stand

KAGGADASAPURA — 8310033911, 080 48653232 — SAKSHI LABS & DIAGNOSTICS, # 56/B.6, Lakshmi Complex, 1st Floor, Main Road, Vignan Nagar, Opp. Poorvika Mobiles

GUBBALALA — 9986035504, 7022594863 — PARKVIEW DIAGNOSTIC CENTRE, Near Shani Temple & Shopwell Supermarket, Thurahalli Main Road, Near Karnataka Bank

TUMKUR — 8296746307 — PRERNA DIAGNOSTICS CENTRE, No 5, Sharada Medicals, Shanthinagar

Contact Us For Test : 90032-22841, 90032-22541

Member of Advertising Standards Council of India (Responsible Advertising)

ತಳವಾರ ಸಮುದಾಯ ಸಮಾವೇಶದಲ್ಲಿ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿಕೆ

‘ತಳವಾರ ಸಮುದಾಯಕ್ಕೆ ಎಸ್‌.ಟಿ ಮೀಸಲಾತಿ’

ಪ್ರಜಾವಾಣಿ ವಾರ್ತೆ

ಸಿಂದಗಿ: ‘ತಳವಾರ ಸಮುದಾಯ ಬಹಳ ವರ್ಷಗಳಿಂದ ಎಸ್‌.ಟಿ ಮೀಸಲಾತಿ ಬೇಡಿಕೆ ಈಡೇರಿಕೆಗಾಗಿ ಹೋರಾಟ ಮಾಡುತ್ತಲೇ ಬಂದಿದ್ದು ಈಗಾಗಲೇ ಮೀಸಲಾತಿ ನೀಡಲು ಸರ್ಕಾರದಲ್ಲಿ ತೀರ್ಮಾನ ಆಗಿದೆ’ ಎಂದು ಸಮಾಜಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಇಲ್ಲಿಯ ಮಾಂಗಲ್ಯ ಭವನದಲ್ಲಿ ಮಂಗಳವಾರ ಬಿಜೆಪಿ ಹಮ್ಮಿಕೊಂಡಿದ್ದ ತಳವಾರ ಸಮುದಾಯದ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಚುನಾವಣೆ ಮುಗಿದ ನಂತರ ಎಸ್‌.ಟಿ ಮೀಸಲಾತಿ ಆದೇಶ ಹೊರಡಿಸಲಾಗುವುದು’ ಎಂದು ಪೂಜಾರಿ ಹೇಳಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ‘ಮೀಸಲಾತಿ ನೀಡಲು ಮುಖ್ಯಮಂತ್ರಿ ಸಿದ್ಧರಿದ್ದಾರೆ’ ಎಂದರು. ಉಪಚುನಾವಣಾ ಉಸ್ತುವಾರಿ ಲಕ್ಷ್ಮಣ ಸವದಿ ಮಾತನಾಡಿ, ‘ಪ್ರಸ್ತುತ ಉಪಚುನಾವಣೆಯಲ್ಲಿ ತಳವಾರ ಸಮುದಾಯ ನಿರ್ಣಾಯಕ ಪಾತ್ರ ವಹಿಸಲಿದೆ’ ಎಂದರು.

‘ಚುನಾವಣೆ ಮುಗಿದ ನಂತರ ಈ ಮೀಸಲಾತಿ ಆದೇಶ ಹೊರಡಿಸಲು ವಿಳಂಬವಾದರೆ ನಾನೇ ಸದನದಲ್ಲಿ ಧರಣಿ ಮಾಡುವೆ’ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ತಳವಾರ ಸಮುದಾಯದ ಮುಖಂಡ, ಮಾಜಿ ಸಚಿವ ಬಾಬುರಾವ್ ಚಿಂಚನಸೂರ ಮಾತನಾಡಿ,‘ನನ್ನ ಕೊನೆಯ ಆಸೆ ನಮ್ಮ ಸಮುದಾಯದ ಜನರಿಗೆ ಎಸ್‌.ಟಿ ಮೀಸಲಾತಿ ದೊರಕಿಸಿಕೊಡುವುದು. ಮೋದಿ ದೇಶದ ಚೌಕಿದಾರನಾದರೆ ನಾನು ತಳವಾರ ಸಮುದಾಯದ ಚೌಕಿದಾರ’ ಎಂದರು.

‘ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ಧರಾಮಯ್ಯ, ರಾಜ್ಯಸಭೆ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಂತೃಪ್ತಿ ಗೊಳಿಸಲು ನನಗೆ ಸಿಗಬೇಕಿದ್ದ ಸಚಿವ ಸ್ಥಾನವನ್ನು ತಪ್ಪಿಸಿ ಖರ್ಗೆ ಪುತ್ರ ಪ್ರಿಯಾಂಕ್ ಅವರಿಗೆ ನೀಡಿದರು. ಕಾಂಗ್ರೆಸ್ ಹೀನಾಯ ಸ್ಥಿತಿಯಲ್ಲಿದೆ. ಡಿ.ಕೆ.ಶಿವಕುಮಾರ-ಸಿದ್ಧರಾಮಯ್ಯ ಇಬ್ಬರೂ ಹಾವು-ಮುಂಗುಸಿ;ಎಂದೂ ಒಂದಾಗಲ್ಲ. ಜೆಡಿಎಸ್ ಪಕ್ಷ ಕಣ್ಣೀರು ಸುರಿಸುವ ಪಕ್ಷ. ಅಪ್ಪ-ಮಕ್ಕಳ ಪಕ್ಷ’ ಎಂದು ಟೀಕಿಸಿದರು.

ಸಿಂದಗಿಯಲ್ಲಿ ಮಂಗಳವಾರ ಬಿಜೆಪಿ ಹಮ್ಮಿಕೊಂಡಿದ್ದ ತಳವಾರ ಸಮುದಾಯದ ಸಮಾವೇಶದಲ್ಲಿ ಸಮಾಜಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ, ತಳವಾರ ಸಮುದಾಯದ ಮುಖಂಡ, ಮಾಜಿ ಸಚಿವ ಬಾಬೂರಾವ್ ಚಿಂಚನಸೂರ, ಸಚಿವ ಗೋವಿಂದ ಕಾರಜೋಳ ಉದ್ಘಾಟಿಸಿದರು. ಶಿವಾಜಿ ಮೆಟಗಾರ, ಅಪ್ಪು ಪಟ್ಟಣಶೆಟ್ಟಿ, ರಮೇಶ ಭೂಸನೂರ, ಶರಣಪ್ಪ ಕಣ್ಮೆಶ್ವರ, ರಮೇಶ ಜಿಗಜಿಣಗಿ, ಭೀಮರಾವ್ ಸುಣಗಾರ, ಸಿ.ಸಿ.ಪಾಟೀಲ, ಡಾ.ಗೌತಮ ಚೌಧರಿ ಇದ್ದಾರೆ –ಪ್ರಜಾವಾಣಿ ಚಿತ್ರ

> **70 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರ ತಳವಾರ ಸಮುದಾಯಕ್ಕೆ ಎಸ್‌.ಟಿ ಮೀಸಲಾತಿ ಏಕೆ ನೀಡಲಿಲ್ಲ? ಅದಕ್ಕಾಗಿಯೇ ನಾನು ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿರುವೆ.**
> **ಬಾಬೂರಾವ್ ಚಿಂಚನಸೂರ,** ತಳವಾರ ಸಮುದಾಯದ ಮುಖಂಡ

ಬಿಜೆಪಿ ಮುಖಂಡ ಸಿ.ಟಿ.ರವಿ ಅಭಿಮತ

‘ಜಮೀರ್ ಅಹಮದ್ ಮತ್ತು ಎಚ್‌.ಡಿ.ಕುಮಾರಸ್ವಾಮಿ ನೈಜ ಸಂಬಂಧ ಹೊರಬಂದರೆ, ಎರಡೂ ಪಕ್ಷಗಳ ಗೌರವ ಉಳಿಯುವುದಿಲ್ಲ. ಬಾಯಿ ಬಿಟ್ಟರೆ ಬಣ್ಣಗೇಡು’

‘ಒನ್ ನೇಷನ್‌, ಒನ್ ಎಲೆಕ್ಷನ್’ ಜಾರಿ ಅಗತ್ಯ

ಹಾವೇರಿ: ಪದೇ ಪದೇ ಚುನಾವಣೆ ನಡೆಯುವುದರಿಂದ ಆಡಳಿತ, ಅಭಿವೃದ್ಧಿ ಕಾರ್ಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ‘ಒನ್ ನೇಷನ್, ಒನ್ ಎಲೆಕ್ಷನ್’ ಜಾರಿಯಾಗುವುದು ಅಗತ್ಯವಿದೆ. ಇದಕ್ಕೆ ಎಲ್ಲ ಪಕ್ಷಗಳ ಸಹಮತ ಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಹಾನಗಲ್‌ನಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿ, ‘ಸ್ವಾತಂತ್ರ್ಯ ಪೂರ್ವದಲ್ಲಿದ್ದ ಕಾಂಗ್ರೆಸ್‌ಗೂ, ಈಗಿರುವ ಕಾಂಗ್ರೆಸ್ ಪಕ್ಷಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಭ್ರಷ್ಟಾಚಾರಿಗಳ, ಜಾತಿವಾದಿಗಳ, ಭಾಷೆ ಹೆಸರಿನಲ್ಲಿ ನಾಡು ಒಡೆಯುವ, ನಕ್ಸಲರನ್ನು ಬೆಂಬಲಿಸುವ, ದೇಶದ್ರೋಹಿಗಳ ಪರ ವಕಾಲತ್ತು ವಹಿಸುವ, ತುಕ್ಡೆ ಗ್ಯಾಂಗ್‌ಗಳ ನೇತೃತ್ವ ವಹಿಸುವ ಕಾಂಗ್ರೆಸ್ ಈಗ ಅಸ್ತಿತ್ವದಲ್ಲಿದೆ’ ಎಂದು ಆರೋಪಿಸಿದರು.

‘ತಾನು ಕಳ್ಳ ಪರರನ್ನು ನಂಬ’ ಎಂಬ ಮಾತಿನಂತೆ ಹಣ ಹಂಚುವ ರಾಜಕಾರಣ ಆರಂಭಿಸಿದ ಅಪಕೀರ್ತಿ ಕಾಂಗ್ರೆಸ್‌ಗೆ ಸಲ್ಲುತ್ತದೆ. ಹಣ ಹಂಚುವಲ್ಲಿ ನಾವು ಪರಿಣತರಲ್ಲ. ಜಮೀರ್ ಅಹಮದ್ ಮತ್ತು ಡಿ.ಕೆ. ಶಿವಕುಮಾರ್ ಅವರಂತೆ ನಾವು ಆ ವಿಷಯದಲ್ಲಿ ಡಿಗ್ರಿ, ಪಿಎಚ್‌.ಡಿ ಪಡೆದಿಲ್ಲ ಎಂದು ಕುಟುಕಿದರು.

ಬೆಲೆ ಏರಿಕೆ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ

ಮತದಾನಕ್ಕೆ ಮುನ್ನ ಸಿಲಿಂಡರ್‌ಗೆ ನಮಸ್ಕರಿಸಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಸಿಂದಗಿ, ಹಾನಗಲ್ ಕ್ಷೇತ್ರಗಳ ಮತದಾರರು ಮತ ಹಾಕುವ ಮುನ್ನ ಗ್ಯಾಸ್ ಸಿಲಿಂಡರ್, ಬೈಕ್, ಕಾರು, ಆಟೊ, ಟ್ರ್ಯಾಕ್ಟರ್‌ಗೆ ನಮಸ್ಕರಿಸಿ ಮತ ಹಾಕಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕರೆ ನೀಡಿದರು.

ಸಿಂದಗಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪ್ರಧಾನಿ ಮೋದಿ ಅವರು ಕಳೆದ ಬಾರಿ ಚುನಾವಣೆ ಸಂದರ್ಭದಲ್ಲಿ ಅಡುಗೆ ಗ್ಯಾಸ್ ಸಿಲಿಂಡರ್‌ಗೆ ನಮಸ್ಕರಿಸಿ, ಮತದಾನ ಮಾಡಿ ಎಂದಿದ್ದರು. ಈಗ ಅದನ್ನೇ ಮತದಾರರಿಗೆ ನೆನಪಿಸುತ್ತೇನೆ’ ಎಂದು ಬಿಜೆಪಿಗೆ ತಿರುಗೇಟು ನೀಡಿದರು.

ಮಾದಿಗ/ದಂಡೋರಾ ಸಮುದಾಯದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಇದು ಸುಳ್ಳು ಹಾಗೂ ಸತ್ಯದ ನಡುವಿನ ಯುದ್ಧ. ಬಿಜೆಪಿಯವರು ಸುಳ್ಳಿನ ಮೇಲೆ ಮನೆ ಕಟ್ಟಲು ಹೊರಟಿದ್ದಾರೆ. ನಾವು ನುಡಿದಂತೆ ನಡೆದಿದ್ದೇವೆ ಎಂದರು.

ವಿವಿಧ ಸಮಾಜಗಳ ಮುಖಂಡರ ಸಭೆ ಮಾಡಿ ನಿಮ್ಮ ಜತೆ ಇದ್ದೇವೆ ಎಂದು ಧೈರ್ಯ ತುಂಬುತ್ತಿದ್ದೇವೆಯೇ ಹೊರತು, ವಿಭಜನೆ ಮಾಡುತ್ತಿಲ್ಲ. ನಾವು ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗುತ್ತೇವೆ ಎಂದು ಸಮರ್ಥಿಸಿಕೊಂಡರು.

ಬಿಜೆಪಿ ಶಕ್ತಿ ಕೇವಲ ನೋಟಿನಲ್ಲಿದೆ. ನಿಮ್ಮನ್ನು ಖರೀದಿಸಲು ಮುಂದಾಗುತ್ತಾರೆ. ಸಿಂದಗಿ ಕ್ಷೇತ್ರದ ಜನತೆ ಸ್ವಾಭಿಮಾನದ ಮತವನ್ನು ಹಣಕ್ಕೆ ಮಾರಿಕೊಳ್ಳಬೇಡಿ ಎಂದು ಮನವಿ ಮಾಡಿದರು.

ಸಿಂದಗಿ ವಿಧಾನಸಭಾ ಉಪ ಚುನಾವಣೆ ಹಿನ್ನೆಲೆಯಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಮಾದಿಗ/ದಂಡೋರಾ ಸಮುದಾಯದ ಮುಖಂಡರ ಸಭೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್ ಸದಸ್ಯ ಆರ್‌.ಬಿ.ತಿಮ್ಮಾಪುರ ಅವರಿಗೆ ಬೃಹತ್ ಹೂವಿನ ಮಾಲೆ ಹಾಕಿ ಸನ್ಮಾನಿಸಲಾಯಿತು –ಪ್ರಜಾವಾಣಿ ಚಿತ್ರ

ಶಿವಕುಮಾರ್ ಸಭೆ ಮೊಟಕು

ಡಿ.ಕೆ.ಶಿವಕುಮಾರ್ ಅವರ ಮಾವ, ಮೈಸೂರಿನ ಆರ್. ತಿಮ್ಮಯ್ಯ ನಿಧನರಾದ ಸುದ್ದಿ ತಿಳಿಯುತ್ತಿದ್ದಂತೆ ಸಿಂದಗಿ ಹಾಗೂ ಹಾನಗಲ್‌ನಲ್ಲಿ ಮಂಗಳವಾರ ಮತ್ತು ಬುಧವಾರ ನಡೆಯಬೇಕಾಗಿದ್ದ ಚುನಾವಣಾ ಸಭೆಗಳನ್ನು ಮೊಟಕುಗೊಳಿಸಿ ಅವರು ಮೈಸೂರಿಗೆ ತೆರಳಿದರು.

ಸಿಂದಗಿಯಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯಲ್ಲಿ ದಿ.ಎಂ.ಸಿ.ಮನಗೂಳಿ ಅವರ ಪತ್ನಿ ಸಿದ್ದಮ್ಮ ಗೌಡತಿ ಸೆರಗೊಡ್ಡಿ ತಮ್ಮ ಪುತ್ರ ಅಶೋಕ ಮನಗೂಳಿಗೆ ಮತ ಹಾಕುವಂತೆ ಮನವಿ ಮಾಡಿದರು –ಪ್ರಜಾವಾಣಿ ಚಿತ್ರ

ಬಿಜೆಪಿಯವರು ಲೂಟಿ ಗಿರಾಕಿಗಳು: ಸಿದ್ದರಾಮಯ್ಯ

ವಿಜಯಪುರ: ‘ಬಿಜೆಪಿಯವರು ಲೂಟಿ ಗಿರಾಕಿಗಳು, ಚುನಾವಣೆ ವೇಳೆ ಬಂದು ದುಡ್ಡು ಕೊಡುತ್ತಾರೆ. ಇದಕ್ಕೆ ಬೆಲೆ ಕೊಡಬೇಡಿ, ಬಿಜೆಪಿಯವರಿಗೆ ತಕ್ಕ ಪಾಠ ಕಲಿಸಿ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸಿಂದಗಿ ಪಟ್ಟಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮಾದಿಗ ಸಮಾಜದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

‘ದಲಿತರ ಅಭಿವೃದ್ಧಿಗೆ ಬಿಜೆಪಿಯವರ ಕೊಡುಗೆ ಏನಿಲ್ಲ. ರಮೇಶ ಜಿಗಜಿಣಗಿ, ಗೋವಿಂದ ಕಾರಜೋಳ ಅವರು ನಿಮಗೆ ನ್ಯಾಯ ಕೊಡಿಸಲು ಬಿಜೆಪಿಗೆ ಹೋಗಿಲ್ಲ, ಹೊಟ್ಟೆ ಪಾಡಿಗಾಗಿ ಹೋಗಿದ್ದಾರೆ’ ಆರೋಪಿಸಿದರು.

‘ವಾಜಪೇಯಿ, ನರೇಂದ್ರ ಮೋದಿ, ಯಡಿಯೂರಪ್ಪ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ ಪರಿಶಿಷ್ಟರಿಗಾಗಿ ಏನು ಮಾಡಿದ್ದಾರೆ? ಪರಿಶಿಷ್ಟರಿಗೆ ಮೀಸಲಾತಿ ಕೊಟ್ಟಿದ್ದು, ಎಸ್‌ಸಿಪಿ, ಟಿಎಸ್‌ಪಿಗೆ ಹಣ ಕೊಟ್ಟಿದ್ದು ಯಾರು? ಗುತ್ತಿಗೆಯಲ್ಲಿ ಮೀಸಲಾತಿ ಕೊಟ್ಟಿದ್ದು ಯಾರು? ಬಿಜೆಪಿಯವರಿಗೆ ನಾಚಿಕೆಯಾಗಬೇಕು. ದಯವಿಟ್ಟು ಈ ಸೋಗಲಾಡಿ, ಡೋಂಗಿಗಳಾದ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಿಗಜಿಣಗಿ, ಕಾರಜೋಳ ಇವರ ಮಾತು ಕೇಳಬೇಡಿ’ ಎಂದರು.

ಬಜೆಟ್ ಗಾತ್ರ ಹೆಚ್ಚಾದಂತೆ ಎಸ್‌ಸಿ, ಎಸ್‌ಟಿ ಸಮಾಜಕ್ಕೆ ಹೆಚ್ಚು ಅನುದಾನ ಮೀಸಲಿಡಬೇಕು. ಆದರೆ, ಈಗ ಬಜೆಟ್ ಹೆಚ್ಚಾದರೂ ಅನುದಾನ ಕಡಿಮೆಯಾಗಿದೆ. ಮಿಸ್ಟರ್ ಕಾರಜೋಳ ನಿಮಗೆ ಕೇಳಲು ದಮ್ ಇಲ್ವಾ ಎಂದು ಪ್ರಶ್ನಿಸಿದರು.

‘ಸ್ವಾತಂತ್ರ್ಯ ಹೋರಾಟದ ವೇಳೆ ಬಿಜೆಪಿ ಇರಲಿಲ್ಲ. 1950 ರಲ್ಲಿ ಜನ ಸಂಘ ಹುಟ್ಟಿತು, ಇದು ಆರ್‌ಎಸ್‌ಎಸ್‌ನ ರಾಜಕೀಯ ಮುಖವಾಡ. 1980ರಲ್ಲಿ ಬಿಜೆಪಿ ಹುಟ್ಟಿತು. ಯಾರಾದರೂ ಬಿಜೆಪಿಗರು ದೇಶಕ್ಕಾಗಿ ಪ್ರಾಣ ತೆತ್ತಿದ್ದಾರಾ? ದೇಶಕ್ಕಾಗಿ ಪ್ರಾಣ ಕೊಟ್ಟಿದ್ದು ಕಾಂಗ್ರೆಸ್‌ನವರು ಮಾತ್ರ, ಬಿಜೆಪಿಗರಲ್ಲ’ ಎಂದರು.

ದೊಡ್ಡಬಳ್ಳಾಪುರ ನಗರಸಭೆ; ಬಿಜೆಪಿ– ಜೆಡಿಎಸ್ ಮೈತ್ರಿ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ರಾಜ್ಯದಲ್ಲಿ ಈಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಹೆಚ್ಚಿನ ಸ್ಥಾನ ಪಡೆದಿದೆ. ದೊಡ್ಡಬಳ್ಳಾಪುರ ನಗರಸಭೆ ಮಾದರಿಯಲ್ಲೇ ಅತಂತ್ರ ಸ್ಥಿತಿ ಇರುವ ಇತರೆಡೆಯೂ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಕಂದಾಯ ಸಚಿವ ಆರ್‌.ಅಶೋಕ ಹೇಳಿದರು.

ಅವರು ಮಂಗಳವಾರ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ಬಿಜೆಪಿ ಸದಸ್ಯೆ ಎಸ್‌.ಸುಧಾರಾಣಿ ಲಕ್ಷ್ಮೀನಾರಾಯಣ, ಉಪಾಧ್ಯಕ್ಷೆ ಫರ್ಹಾನಾ ತಾಜ್ ಅವರನ್ನು ಅಭಿನಂದಿಸಿ ಮಾತನಾಡಿದರು.

‘ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ಮಾತುಕತೆ ಸಂದರ್ಭದಲ್ಲಿ ನೀಡಿದ್ದ ಭರವಸೆಯಂತೆಯೇ ನಡೆದುಕೊಂಡಿದ್ದಾರೆ. ರಾಜ್ಯದ ಇತರ ಕಡೆಯು ಜೆಡಿಎಸ್ ಬೆಂಬಲ ನೀಡುವ ವಿಶ್ವಾಸ ಇದೆ. ಸ್ಥಳೀಯವಾಗಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡರೆ ನಗರದ ಅಭಿವೃದ್ಧಿ ದೃಷ್ಟಿಯಿಂದ ಒಳಿತಾಗಲಿದೆ ಎನ್ನುವ ಅಭಿಪ್ರಾಯ ನೀಡಿದ್ದರಿಂದಲೇ ಬಿಜೆಪಿ-ಜೆಡಿಎಸ್ ಆಡಳಿತಕ್ಕೆ ಬಂದಿದೆ’ ಎಂದರು.

ಆರ್‌. ಅಶೋಕ

‘ಕಾಂಗ್ರೆಸ್‌ನ ನಕಲಿ ಜಾತ್ಯತೀತ ರಾಜ್ಯದ ಮತದಾರರಿಗೆ ಅರ್ಥವಾಗಿದೆ. ರಾಜ್ಯದಲ್ಲಿ ಡಿ.ಕೆ. ಶಿವಕುಮಾರ್ ಕಾಂಗ್ರೆಸ್, ಸಿದ್ದರಾಮಯ್ಯ ಕಾಂಗ್ರೆಸ್ ಎರಡು ಪಕ್ಷಗಳಿವೆ. ದೆಹಲಿಯಲ್ಲಿ ಮೂರು ರೀತಿಯ ಕಾಂಗ್ರೆಸ್ ಪಕ್ಷಗಳಿವೆ. ರಾಜ್ಯ ಕಾಂಗ್ರೆಸ್ ನಾಯಕರು ತಮಗೆ ಬೇಕಾದಾಗೆಲ್ಲ ‘ಬಿ’ ಟೀಂ ಸೃಷ್ಟಿಸಲು ಹೋಗಿ ಈಗ ರಾಜ್ಯದಲ್ಲಿ ‘ಸಿ’ ಟೀಂ ಆಗಿದ್ದಾರೆ’ ಎಂದೂ ಟೀಕಿಸಿದರು.

ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಆರೋಪ

ಎಚ್‌ಡಿಕೆಯದ್ದು ಸೂಟ್‌ಕೇಸ್ ರಾಜಕಾರಣ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಉಪಚುನಾವಣೆ ನಡೆಯಲಿರುವ ಹಾನಗಲ್ ಮತ್ತು ಸಿಂದಗಿ ಕ್ಷೇತ್ರಕ್ಕೆ ಬಿಜೆಪಿಗೆ ಅನುಕೂಲವಾಗಲೆಂದೇ, ಜೆಡಿಎಸ್ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಸೂಟ್‌ಕೇಸ್ ರಾಜಕಾರಣ ಮಾಡುತ್ತಿದೆ’ ಎಂದು ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಎಚ್‌.ಡಿ.ಕುಮಾರಸ್ವಾಮಿ ಎರಡೂ ಕ್ಷೇತ್ರಕ್ಕೆ ಮುಸ್ಲಿಂ ಅಭ್ಯರ್ಥಿಗಳನ್ನು ನಿಲ್ಲಿಸಿ, ಆರ್‌.ಎಸ್‌.ಎಸ್‌.ಗೆ ಬಯ್ಯುವ ಕೆಲಸ ಮಾಡುತ್ತಿದ್ದಾರೆ. ಆರ್‌.ಎಸ್‌.ಎಸ್‌.ಗೆ ಬಯ್ದರೆ ಅಲ್ಪಸಂಖ್ಯಾತರ ಮತಗಳೆಲ್ಲ ಜೆಡಿಎಸ್‌ಗೆ ಬಂದು, ಬಿಜೆಪಿ ಗೆಲುವಿಗೆ ಅನುಕೂಲವಾಗುತ್ತದೆ ಎನ್ನುವುದು ಅವರ ಲೆಕ್ಕಾಚಾರ. ಸೂಟ್‌ಕೇಸ್ ಪಡೆದರೆ ಸಾಲದು, ಆರ್‌.ಎಸ್‌.ಎಸ್‌.ಗೆ ಬಯ್ಯುವ ಕೆಲಸವೂ ಆಗಬೇಕು ಎಂದು ಬಿಜೆಪಿಯೇ ಹೇಳಿರಬಹುದು’ ಎಂದರು.

ಜಮೀರ್

‘ಪ್ರತಿ ಚುನಾವಣೆ ಸಂದರ್ಭದಲ್ಲೂ ಕೆಲವು ಕ್ಷೇತ್ರಗಳಲ್ಲಿ ಜೆಡಿಎಸ್ ಇಂತಹದ್ದೇ ರಾಜಕೀಯ ಮಾಡುತ್ತ, ಮುಸ್ಲಿಂ ಅಭ್ಯರ್ಥಿಯನ್ನು ಬಲಿಕೊಡುತ್ತಿದೆ. ಹಾನಗಲ್‌ನಲ್ಲಿ ಅಭ್ಯರ್ಥಿ ಪರ ಕುಮಾರಸ್ವಾಮಿ ಒಂದು ದಿನ ಪ್ರಚಾರ ನಡೆಸಿ, ಮೈಸೂರಿಗೆ ಹೋದರು. ಗೆಲುವು ಮುಖ್ಯವಾಗಿದ್ದರೆ ಅಲ್ಲೇ ಇದ್ದು ಅ.27ರವರೆಗೆ ಪ್ರಚಾರ ನಡೆಸುತ್ತಿದ್ದರು. ಅವರ ರಾಜಕೀಯದ ಹಿನ್ನೆಲೆ ಇದರಿಂದಲೇ ಅರಿವಾಗುತ್ತದೆ’ ಎಂದು ಟೀಕಿಸಿದರು.

‘ದೇವೇಗೌಡರ ಹಾಗೂ ಕುಮಾರಸ್ವಾಮಿ ಅವರ ರಾಜಕೀಯವೇ ಬೇರೆ ಬೇರೆ. ದೇವೇಗೌಡರು ಪಕ್ಕಾ ಜಾತ್ಯತೀತವಾದಿ. ಅವರಲ್ಲಿಯ ಶೇ 1ರಷ್ಟು ಜಾತ್ಯತೀತ ಮನಸ್ಥಿತಿ ಕುಮಾರಸ್ವಾಮಿ ಅವರಲ್ಲಿ ಇಲ್ಲ. ಮುಸ್ಲಿಮರನ್ನಷ್ಟೇ ಅಲ್ಲ, ಒಕ್ಕಲಿಗರನ್ನೂ ಅವರು ರಾಜಕೀಯವಾಗಿ ಬಲಿಕೊಡುತ್ತ ಬಂದಿದ್ದಾರೆ. ಈವರೆಗೆ ಅವರು ಒಬ್ಬರನ್ನಾದರೂ ರಾಜಕೀಯವಾಗಿ ಬೆಳೆಸಿದ್ದಾರಾ’ ಎಂದು ಪ್ರಶ್ನಿಸಿದರು.

‘ದೇವೇಗೌಡರು ನನ್ನ ರಾಜಕೀಯ ಗುರು. ನಾನು ಈ ಸ್ಥಾನದಲ್ಲಿ ಇರಲು ಅವರೇ ಕಾರಣ’ ಎಂದು ಹೇಳಿದರು.

‘ಬಿಜೆಪಿಯಿಂದ ಹಾನಗಲ್ ಕ್ಷೇತ್ರಕ್ಕೆ ಉದಾಸಿ ಅವರ ಕುಟುಂಬ ಸದಸ್ಯರಿಗೆ ಟಿಕೆಟ್ ಸಿಗಬಹುದು ಎಂದುಕೊಂಡಿದ್ದೆವು. ಅವರ ಕುಟುಂಬದವರಿಗೆ ಟಿಕೆಟ್ ನೀಡದಿರುವುದೇ ಬಿಜೆಪಿ ಸೋಲಿಗೆ ಕಾರಣವಾಗಲಿದೆ’ ಎಂದು ಹೇಳಿದರು.

ಎಚ್‌ಡಿಕೆ ನಾನೇ ಸಾಕಿದ್ದು: ಜಮೀರ್

‘ಜಮೀರ್ ಅಹ್ಮದ್ ಬಸ್ ಚಾಲಕನಾಗಿದ್ದ’ ಎನ್ನುವ ಎಚ್‌.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಜಮೀರ್, ‘ಹೌದು, ನಾನು ಬಸ್ ಚಾಲಕನಾಗಿ, ಮಾಲೀಕನೂ ಆಗಿದ್ದೆ. ಆದರೆ, ಅವರ ಹಾಗೆ ಕಸ ಹೊಡೆಯುತ್ತಿರಲಿಲ್ಲ. ಆಗ ಕುಮಾರಸ್ವಾಮಿ ಟ್ರಾನ್ಸ್‌ಪೋರ್ಟ್ ಲೆಕ್ಕ ನೀಡಲು ನಮ್ಮ ಕಚೇರಿಗೆ ಅಲೆದಾಡುತ್ತಿದ್ದರು. ಅವರಿಗೆ ಕುಳಿತುಕೊಳ್ಳಲು ಜಾಗವಿಲ್ಲದ ಸಂದರ್ಭದಲ್ಲಿ ನಾನು ಜಾಗ ನೀಡಿ ಸಾಕಿದ್ದೇನೆ. ನನ್ನಿಂದಲೇ ಅನುಕೂಲ ಪಡೆದು, ಈಗ ದೊಡ್ಡವರಾಗಿದ್ದಾರೆ. ನಿಮ್ಮನ್ನು ಆನೆ ಮಾಡಿದ್ದು ಯಾರು? ಮುಖ್ಯಮಂತ್ರಿ ಆಗಿದ್ದವರು ಕೀಳಾಗಿ ಮಾತನಾಡಬಾರದು. ನನ್ನ ಪಾಡಿಗೆ ನಾನಿದದೇನೆ. ನಿಮ್ಮ ಪಾಡಿಗೆ ನೀವು ಇರಿ. ಕೆಣಕಿದರೆ ಸುಮ್ಮನಿರುವುದಿಲ್ಲ’ ಎಂದು ಎಚ್ಚರಿಸಿದರು.

ಆರ್‌ಎಸ್‌ಎಸ್ ಕಾರ್ಯಕಾರಿ ಬೈಠಕ್ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಧಾರವಾಡ: ‘ಗರಗ ರಸ್ತೆಯ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿ ಮಂಡಳಿ ಬೈಠಕ್ ಇದೇ 28 ರಿಂದ 30ರವರೆಗೆ ನಡೆಯಲಿದೆ’ ಎಂದು ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನೀಲ ಅಂಬೇಕರ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಂಘದ ಮುಂದಿನ ಯೋಜನೆಗಳು ಹಾಗೂ ಅಭಿವೃದ್ಧಿ, ದೇಶ ಹಾಗೂ ನಮ್ಮ ಸ್ವಾಭಿಮಾನದ ಕುರಿತು ತೆಗೆದುಕೊಳ್ಳಬೇಕಾದ ನಿಲುವುಗಳ ಬಗೆಗೆ ಚರ್ಚೆಗಳು ನಡೆಯಲಿವೆ’ ಎಂದರು.

‘ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲೆ ದಾಳಿ ಹಾಗೂ ದೇವಸ್ಥಾನಗಳನ್ನು ಧ್ವಂಸ ಮಾಡಲಾಗಿದೆ. 2025ಕ್ಕೆ ಆರ್‌ಎಸ್‌ಎಸ್ ಶತಮಾನೋತ್ಸವವಿದೆ. 2021 ರಿಂದ 2024ರ ಅವಧಿಯಲ್ಲಿ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತು ಚರ್ಚಿಸಲಾಗುವುದು’ ಎಂದರು.

> **ಆರ್‌ಎಸ್‌ಎಸ್ ತನ್ನ ಕೆಲಸ ಮಾಡುತ್ತಿದೆ. ಸಾಮಾಜಿಕ ಸೇವೆ ಮಾಡುತ್ತಲೇ ಮುನ್ನಡೆಯುತ್ತಿದೆ. ಟೀಕಾಕಾರರ ಬಗ್ಗೆ ಮಾತನಾಡುವುದಿಲ್ಲ**
> **ಸುನೀಲ ಅಂಬೇಕರ,** ಅಖಿಲ ಭಾರತೀಯ ಪ್ರಚಾರ ಪ್ರಮುಖ

‘ಈ ಬಾರಿ ಪೂರ್ಣ ಪ್ರಮಾಣದ ಬೈಠಕ್ ನಡೆಯಲಿದ್ದು, ಆರ್‌ಎಸ್‌ಎಸ್ ಮುಖ್ಯಸ್ಥ, ಸರಸಂಘಚಾಲಕ ಮೋಹನ ಭಾಗವತ್, ಸರಕಾರ್ಯವಾಹ (ಪ್ರಧಾನ ಕಾರ್ಯದರ್ಶಿ) ದತ್ತಾತ್ರೇಯ ಹೊಸಬಾಳೆ, ಅಖಿಲ ಭಾರತೀಯ ಕ್ಷೇತ್ರೀಯ ಮತ್ತು ಪ್ರಾಂತ ಸ್ತರದ ಕಾರ್ಯಕರ್ತರು ಸೇರಿ ದೇಶದ ಸುಮಾರು 350 ಪ್ರತಿನಿಧಿಗಳು ಭಾಗವಹಿಸುವರು’ ಎಂದರು.

‘ಕೊರೊನಾ ಸಮಯದಲ್ಲಿ ‘ಸೇವಾ ಭಾರತಿ’ಯ ಅನೇಕ ಕಾರ್ಯಕರ್ತರು ಸೇವೆ ಸಲ್ಲಿಸಿದ್ದಾರೆ. 3ನೇ ಅಲೆ ಎದುರಿಸಲು 1.50 ಲಕ್ಷ ಸ್ಥಳಗಳಲ್ಲಿ ಸುಮಾರು 10 ಲಕ್ಷ ಕಾರ್ಯಕರ್ತರಿಗೆ ತರಬೇತಿ ನೀಡಲಾಗಿದೆ’ ಎಂದು ಹೇಳಿದರು.

ಹಾನಗಲ್ ಉಪಚುನಾವಣಾ ಕ್ಷೇತ್ರದ ಚುನಾವಣೆಯ ಚಿತ್ರಣ, ಮತದಾರರ ಅಭಿಮತ ತಿಳಿಯಲು, ಈ ವಿಡಿಯೊ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ....

ಪ್ರಜಾವಾಣಿ ನೋಡಿಯೊ

‘ಲಂಚ ಸ್ವೀಕರಿಸುವುದಿಲ್ಲ’: ಅಧಿಕಾರಿಗಳ ಪ್ರತಿಜ್ಞೆ

ಬೆಂಗಳೂರು: ‘ನಾನು ಲಂಚ ಪಡೆಯುವುದಿಲ್ಲ ಮತ್ತು ನೀಡುವುದೂ ಇಲ್ಲ. ಜೀವನದ ಎಲ್ಲ ಕ್ಷೇತ್ರಗಳಲ್ಲಿ ಪ್ರಾಮಾಣಿಕತೆ ಮತ್ತು ಕಾನೂನಿನ ನಿಯಮಗಳು ಅನುಸರಿಸುತ್ತೇನೆ’ ಎಂದು ವಿಧಾನಸಭೆಯ ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರತಿಜ್ಞೆ ಸ್ವೀಕರಿಸಿದರು.

ವಿಧಾನಸೌಧದಲ್ಲಿ ಮಂಗಳವಾರ ನಡೆದ ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸುವ ‘ಜಾಗೃತಿ ಅರಿವು’ ಕಾರ್ಯಕ್ರಮದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಸಚಿವಾಲಯ ಸಿಬ್ಬಂದಿಗೆ ಪ್ರತಿಜ್ಞೆ ಬೋಧಿಸಿದರು.

ಅಧಿಕಾರಿಗಳ ಪ್ರತಿಜ್ಞೆ: ‘ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಭ್ರಷ್ಟಾಚಾರವು ಒಂದು ಅಡಚಣೆಯಾಗಿದೆ ಎಂದು ನಾನು ನಂಬುತ್ತೇನೆ. ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಸರ್ಕಾರ, ಖಾಸಗಿ ವಲಯದಂತಹ ಎಲ್ಲಾ ಪಾಲುದಾರರು ಒಟ್ಟಾಗಿ ಕೆಲಸ ಮಾಡಬೇಕಾಗುತ್ತದೆ ಎಂದು ನಾನು ನಂಬುತ್ತೇನೆ’.

‘ಎಲ್ಲಾ ಕಾರ್ಯಗಳು ಪ್ರಾಮಾಣಿಕ ಮತ್ತು ಪಾರದರ್ಶಕವಾಗಿ ಹಾಗೂ ಸಾರ್ವಜನಿಕ ಹಿತಾಸಕ್ತಿಯಲ್ಲಿ ನಿರ್ವಹಿಸುತ್ತೇನೆ. ಯಾವುದೇ ಭ್ರಷ್ಟಾಚಾರದ ಘಟನೆಯನ್ನು ಸೂಕ್ತ ಸಂಸ್ಥೆಗೆ ವರದಿ ಮಾಡುತ್ತೇನೆ’.

ಎಇ 660, ಜೆಇ 330 ಹುದ್ದೆಗೆ ನವೆಂಬರ್ 27ರಿಂದ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯಲ್ಲಿನ ಗ್ರೂಪ್ ‘ಬಿ’ ವೃಂದದ ಸಹಾಯಕ ಎಂಜಿನಿಯರ್ (ಎಇ, ಗ್ರೇಡ್- 1, ಸಿವಿಲ್) 660 ಹುದ್ದೆಗಳು ಮತ್ತು ಗ್ರೂಪ್ 'ಸಿ' ವೃಂದದ ಕಿರಿಯ ಎಂಜಿನಿಯರ್ (ಜೆಇ, ಸಿವಿಲ್) 330 ಹುದ್ದೆಗಳಿಗೆ ನೇಮಕಾತಿಗೆ ಕೆಪಿಎಸ್‌ಸಿ ನ. 27ರಿಂದ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದೆ.

ಈ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ಜುಲೈ 30ರಂದು ಅಧಿಸೂಚನೆ ಹೊರಡಿಸಿ, ಸೆ. 27ರಂದು ಪರೀಕ್ಷೆ ನಡೆಸಲು ಮುಂದಾಗಿತ್ತು. ಆದರೆ, ಆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದ ಪರೀಕ್ಷೆಯನ್ನು ಕೆಪಿಎಸ್‌ಸಿ ಮುಂದೂಡಿತ್ತು.

ಇತ್ತೀಚೆಗೆ ತಡೆಯಾಜ್ಞೆ ತೆರವುಗೊಂಡಿತ್ತು. ಹೀಗಾಗಿ, ಪರೀಕ್ಷೆ ದಿನಾಂಕವನ್ನು ಪರಿಷ್ಕರಿಸಿದೆ. ನ. 27ರಂದು ಕಿರಿಯ ಎಂಜಿನಿಯರ್ ಹುದ್ದೆಗಳಿಗೆ ಹಾಗೂ ನ. 28 ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಬೆಳಿಗ್ಗೆ 10ರಿಂದ 11.30ರವರೆಗೆ ಪತ್ರಿಕೆ–1 (ಸಾಮಾನ್ಯ ಪತ್ರಿಕೆ), ಮಧ್ಯಾಹ್ನ 2ರಿಂದ 4ಗಂಟೆವರೆಗೆ ಪತ್ರಿಕೆ–2 (ನಿರ್ದಿಷ್ಟ ಪತ್ರಿಕೆ) ನಡೆಯಲಿದೆ. ಎರಡೂ ಹುದ್ದೆಗಳಿಗೆ 29ರಂದು ಬೆಳಿಗ್ಗೆ 10ರಿಂದ 11.30ರವರೆಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ ಎಂದು ಕೆಪಿಎಸ್‌ಸಿ ತಿಳಿಸಿದೆ.

ಕೆಇಎಯಿಂದ ಕೆಪಿಎಸ್‌ಸಿ: ಈ ಹುದ್ದೆಗಳಿಗೆ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಎಚ್‌.ಡಿ. ರೇವಣ್ಣ ಅವರು ಲೋಕೋಪಯೋಗಿ ಸಚಿವರಾಗಿದ್ದಾಗ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಈ ಉದ್ದೇಶದಿಂದ ‘ಲೋಕೋಪಯೋಗಿ ಇಲಾಖೆಯ ಸೇವಾ ನಿಯಮಗಳು–2019 (ವಿಶೇಷ ನೇಮಕಾತಿ)’ ಸಿದ್ಧಪಡಿಸಲಾಗಿತ್ತು.

ಜೂನ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಕೂಡಾ ನಡೆದಿತ್ತು. ಬಳಿಕ ಸಮ್ಮಿಶ್ರ ಸರ್ಕಾರ ಪತನವಾಗಿತ್ತು. ಬಿ.ಎಸ್‌. ಯಡಿಯೂರಪ್ಪ ನೇತೃತ್ವದ ಸರ್ಕಾರ 2019ರ ಅ. 31ರಂದು ನೇಮಕಾತಿ ಪ್ರಕ್ರಿಯೆ ರದ್ದುಪಡಿಸಿತ್ತು. ಅಲ್ಲದೆ, ಕೆಪಿಎಸ್‌ಸಿ ಮೂಲಕ ನೇಮಕಾತಿಗೆ ಲೋಕೋಪಯೋಗಿ ಇಲಾಖೆ ತೀರ್ಮಾನಿಸಿತ್ತು. ಇಡೀ ನೇಮಕ ಪ್ರಕ್ರಿಯೆಯನ್ನೇ ರದ್ದುಪಡಿಸಿದ್ದನ್ನು ಪ್ರಶ್ನಿಸಿ ಕೆಲವು ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಇಲಾಖೆಯ ತೀರ್ಮಾನಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು.

ವಾರಂಟ್ ರದ್ದುಪಡಿಸಲು ಕೋರಿಕೆ

ಹೈಕೋರ್ಟ್‌ಗೆ ವರವರ ರಾವ್ ಅರ್ಜಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಧುಗಿರಿ ನ್ಯಾಯಾಲಯ ಹೊರಡಿಸಿರುವ ಜಾಮೀನು ರಹಿತ ವಾರಂಟ್ ರದ್ದುಪಡಿಸಲು ಕೋರಿ ತೆಲುಗಿನ ಕವಿ ವರವರ ರಾವ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಪರಿಶೀಲನೆ ಬಳಿಕ ಒಂದೆರಡು ದಿನಗಳಲ್ಲಿ ಅರ್ಜಿ ವಿಚಾರಣೆಗೆ ಬರುವ ಸಾಧ್ಯತೆ ಇದೆ.

ವೆಂಕಟಮ್ಮನಹಳ್ಳಿಯಲ್ಲಿ 2005ರಲ್ಲಿ ನಡೆದಿದ್ದ ನಕ್ಸಲ್ ದಾಳಿ ಪ್ರಕರಣದ ಆರೋಪಿಗಳಲ್ಲಿ ವರವರ ರಾವ್ ಕೂಡ ಒಬ್ಬರು. ನಕ್ಸಲರು ನಡೆಸಿದ ದಾಳಿಯಲ್ಲಿ ಪೊಲೀಸರು ಸೇರಿ ಎಂಟು ಮಂದಿ ಮೃತಪಟ್ಟಿದ್ದರು.

ನ್ಯಾಯಾಲಯಕ್ಕೆ ಹಾಜರಾಗದ ವರವರ ರಾವ್ ಅವರಿಗೆ ಮಧುಗಿರಿಯ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಅ.21ರಂದು ಜಾಮೀನು ರಹಿತ ವಾರಂಟ್ ಹೊರಡಿಸಿತ್ತು.

ಅ.28ರೊಳಗೆ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ನಿರ್ದೇಶನ ನೀಡಿತ್ತು.

2019ರ ನವೆಂಬರ್ 28ರಂದೇ ಜಾಮೀನು ಪಡೆಯಲಾಗಿದೆ ಎಂದು ರಾವ್ ತಮ್ಮ ಅರ್ಜಿಯಲ್ಲಿ ಹೇಳಿಕೊಂಡಿದ್ದಾರೆ.

‘ಬಾಡಿ ವಾರೆಂಟ್ ಹಿಂಪಡೆಯಲು ಕೋರಿದ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ತಿರಸ್ಕರಿಸಿರುವ ನ್ಯಾಯಾಲಯ, ಜಾಮೀನು ರಹಿತ ವಾರಂಟ್ ಹೊರಡಿಸಿದೆ’ ಎಂದು ಅವರು ಹೇಳಿದ್ದಾರೆ.

‘ಭೀಮ ಕೋರೆಗಾಂವ್ ಪ್ರಕರಣದಲ್ಲಿ ಒಂದು ತಿಂಗಳ ಅವಧಿಗೆ ಷರತ್ತುಬದ್ಧ (ವೈದ್ಯಕೀಯ ಕಾರಣಗಳಿಗಾಗಿ) ಜಾಮೀನನ್ನು ಬಾಂಬೆ ಹೈಕೋರ್ಟ್ ನೀಡಿದೆ. ವ್ಯಾಪ್ತಿ ಬಿಟ್ಟು ಹೊರಕ್ಕೆ ಹೋಗದಂತೆ ಮುಂಬೈನ ಎನ್‌ಐಎ ನ್ಯಾಯಾಲಯ ಷರತ್ತು ವಿಧಿಸಿದೆ’ ಎಂದು ಅರ್ಜಿಯಲ್ಲಿ ಅವರು ವಿವರಿಸಿದ್ದಾರೆ.

‘ಮಧುಗಿರಿ ನ್ಯಾಯಾಲಯದ ಮುಂದೆ ಹಾಜರಾಗದಿರುವುದು ಉದ್ದೇಶ ಪೂರ್ವಕವಲ್ಲ. ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಬೇಕು’ ಎಂದು ಕೋರಿದ್ದಾರೆ.

ಪ್ರತೀಕಾರದ ದಾಳಿ ಪ್ರಕರಣ

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ವೆಂಕಟಮ್ಮನಹಳ್ಳಿ ಶಾಲೆಯ ಬಳಿ 2005ರ ಫೆಬ್ರುವರಿ 10ರ ರಾತ್ರಿ ನಕ್ಸಲರು ನಡೆಸಿದ ದಾಳಿಗೆ ಕೆಎಸ್‌ಆರ್‌ಪಿ 7 ಪೊಲೀಸರು ಮತ್ತು ಒಬ್ಬ ನಾಗರಿಕ ಹತರಾಗಿದ್ದರು.

ನಕ್ಸಲ್ ನಾಯಕ ಸಾಕೇತ್ ರಾಜನ್ ಎನ್‌ಕೌಂಟರ್ ಚಿಕ್ಕಮಗಳೂರು ಜಿಲ್ಲೆಯ ಮೆಣಸಿನಹಾಡ್ಯದಲ್ಲಿ 2005ರ ಫೆಬ್ರುವರಿ 5ರಂದು ನಡೆದಿತ್ತು. ಇದಕ್ಕೆ ಪ್ರತೀಕಾರವಾಗಿ ನಕ್ಸಲರು ಈ ದಾಳಿ ನಡೆಸಿದ್ದರು.

‘ಗುಂಡಿ ಮುಚ್ಚಲು ಚಾಕೋಲೇಟ್ ಹಣ ಕೊಡುವೆ’

ತುಮಕೂರು: ರಸ್ತೆ ಗುಂಡಿ ಮುಚ್ಚಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತಿಪಟೂರು ನಗರದ 8 ವರ್ಷದ ಬಾಲಕಿ ಎನ್‌.ಧವನಿ ಮನವಿ ಮಾಡಿದ್ದು, ಉಳಿತಾಯದ ಹಣ ಕೊಡುವುದಾಗಿ ಹೇಳಿಕೊಂಡಿದ್ದಾರೆ.

ರಸ್ತೆಗಳ ಗುಂಡಿ ಮುಚ್ಚಿಸಿ, ಜನರ ಜೀವ ಉಳಿಸುವಂತೆ ಮನವಿ ಮಾಡಿದ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

‘ರಸ್ತೆಗಳ ಗುಂಡಿ ನೋಡಿದರೆ ಭಯವಾಗುತ್ತದೆ.ಹಲವರು ಬಿದ್ದು ಸತ್ತು ಹೋಗಿದ್ದಾರೆ. ಇಂತಹ ರಸ್ತೆಗಳಲ್ಲಿ ಅಪ್ಪ ಮನೆಗೆ ಹೇಗೆ ಬರುತ್ತಾರೆ ಎಂದು ಭಯವಾಗುತ್ತದೆ’ ಎಂದು ಬಾಲಕಿ ವಿಡಿಯೊದಲ್ಲಿ ಆತಂಕ ತೋಡಿಕೊಂಡಿದ್ದಾರೆ.

‘ನಿಮ್ಮ ಬಳಿ ಹಣ ಇಲ್ಲದಿದ್ದರೆ, ನಾನು ಕೊಡುತ್ತೇನೆ. ಚಾಕೋಲೇಟ್‌ಗೆ ಅಪ್ಪ ಕೊಟ್ಟಿದ್ದ ಹಣ ನನ್ನ ಬಳಿ ಇದೆ. ಅದನ್ನೇ ಕೊಡುತ್ತೇನೆ. ಮೊದಲು ಗುಂಡಿ ಮುಚ್ಚಿಸಿ, ಜನರ ಪ್ರಾಣ ಕಾಪಾಡಿ’ ಎಂದು ಕೇಳಿಕೊಂಡಿದ್ದಾರೆ.

ಕರ್ನಾಟಕ– ಆಂಧ್ರ ಗಡಿ ಗುರುತಿಸುವಿಕೆಯಲ್ಲಿ ಲೋಪ: ಟಪಾಲ್ ಗಣೇಶ್

ಡೆಪ್ಯುಟಿ ಸರ್ವೇಯರ್ ಜನರಲ್‌ಗೆ ರಾಜ್ಯದ ಪತ್ರ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಕರ್ನಾಟಕ ಹಾಗೂ ಆಂಧ್ರ ನಡುವಿನ ಅಂತರರಾಜ್ಯ ಗಡಿಯನ್ನು ನಿಖರವಾಗಿ ಗುರುತಿಸಿಲ್ಲ ಎಂದು ಅಕ್ರಮ ಗಣಿಗಾರಿಕೆ ವಿರೋಧಿ ಹೋರಾಟಗಾರ ಟಪಾಲ್ ಗಣೇಶ್ ಆಕ್ಷೇಪ ಎತ್ತಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಜಿಲ್ಲಾಧಿಕಾರಿಗಳ ತಾಂತ್ರಿಕ ಸಲಹೆಗಾರ ಹೈದರಾಬಾದ್‌ನಲ್ಲಿರುವ ಡೆಪ್ಯುಟಿ ಸರ್ವೇಯರ್ ಜನರಲ್‌ಗೆ ಪತ್ರ ಬರೆದಿದ್ದಾರೆ.

‘ಉಭಯ ರಾಜ್ಯಗಳ ಗಡಿಗಳನ್ನು ಗುರುತಿಸುವಾಗ ಮೂಲ ಗಡಿ ಕಲ್ಲುಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. 63ರಿಂದ 67ನೇ ಸಂಖ್ಯೆಯ ಗಡಿ ಕಲ್ಲುಗಳನ್ನು ಪಲ್ಲಟ ಮಾಡಲಾಗಿದ್ದು, ಕರ್ನಾಟಕದ ಕಡೆ 400 ಮೀಟರ್ ವ್ಯತ್ಯಾಸವಾಗಿದೆ. ಇದರಿಂದಾಗಿ ಅಕ್ರಮ ಗಣಿಗಾರಿಕೆ ಸಕ್ರಮಗೊಳ್ಳಲಿದೆ’ ಎಂದು ಟಪಾಲ್ ಗಣೇಶ್ ಎತ್ತಿರುವ ಆಕ್ಷೇಪವನ್ನು ಡೆಪ್ಯುಟಿ ಸರ್ವೇಯರ್‌ಗೆ ಬರೆದಿರುವ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ.



ಆಂಧ್ರ ಮತ್ತು ಕರ್ನಾಟಕದ ಅಂತರರಾಜ್ಯ ಗಡಿ ನಕ್ಷೆ

‘ಕರ್ನಾಟಕ– ಆಂಧ್ರ ಗಡಿ ಗುರುತಿಸುವಲ್ಲಿ ಆಗಿರುವ ಲೋಪ ಕುರಿತು ಟಪಾಲ್ ಗಣೇಶ್, ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದು, ಮುಖ್ಯ ಕಾರ್ಯದರ್ಶಿ ಅವರ ಸೂಚನೆ ಮೇಲೆ ಈ ಪತ್ರ ಬರೆಯಲಾಗುತ್ತಿದೆ. ಸಮೀಕ್ಷೆ ಕುರಿತ ಆಕ್ಷೇಪ ಸಂಬಂಧ ಸೂಕ್ತ ಕ್ರಮ ಕೈಗೊಂಡು ತಮ್ಮ ಕಚೇರಿಗೆ ತಿಳಿಸಬೇಕು’ ಎಂದೂ ಪತ್ರದಲ್ಲಿ ಹೇಳಲಾಗಿದೆ.

‘ಕಳೆದ ಜೂನ್ 24ರಂದು ನಿಮಗೆ ಪತ್ರ ಬರೆಯಲಾಗಿತ್ತು. ಆದರೆ, ಈ ಬಗ್ಗೆ ನಿಮ್ಮಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಇದರಿಂದಾಗಿ ಮತ್ತೊಂದು ಪತ್ರ ಬರೆಯಲಾಗುತ್ತಿದೆ’ ಎಂದೂ ಹೇಳಲಾಗಿದೆ. ರಾಜ್ಯದಲ್ಲಿ ವ್ಯಾಪಕವಾಗಿ ನಡೆದಿದ್ದ ಅಕ್ರಮ ಗಣಿಗಾರಿಕೆ ಸಂದರ್ಭದಲ್ಲಿ ಕರ್ನಾಟಕ ಮತ್ತು ಆಂಧ್ರದ ಅಂತರರಾಜ್ಯ ಗಡಿಯನ್ನೂ ಒತ್ತುವರಿ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಸರ್ವೆ ಆಫ್ ಇಂಡಿಯಾ ಉಭಯ ರಾಜ್ಯಗಳ ಗಡಿ ಸಮೀಕ್ಷೆ ನಡೆಸಿತ್ತು.

> **ಅಂತರರಾಜ್ಯ ಗಡಿ ಸಮೀಕ್ಷೆ ನಿಖರವಾಗಿ ನಡೆದಿಲ್ಲ ಎಂಬ ಸತ್ಯ ರಾಜ್ಯದ ಅಧಿಕಾರಿಗಳಿಗೂ ಗೊತ್ತಿದೆ. ಆದರೆ, ಈ ಲೋಪವನ್ನು ಅವರು ಗಂಭೀರವಾಗಿ ಪರಿಗಣಿಸಿಲ್ಲ**
> **ಟಪಾಲ್ ಗಣೇಶ್,** ಅಕ್ರಮ ಗಣಿಗಾರಿಕೆ ವಿರೋಧಿ ಹೋರಾಟಗಾರ

ಕೋರ್ಟ್‌ಗೆ ಮೊರೆ: ಎರಡೂ ರಾಜ್ಯಗಳ ನಡುವಿನ ಗಡಿ ಗುರುತಿಸುವಿಕೆಗೆ ಸಂಬಂಧಿಸಿದ ವ್ಯಾಜ್ಯ ಸುಪ್ರೀಂ ಕೋರ್ಟ್ ಮುಂದಿದ್ದು, ಗಡಿ ಗುರುತಿಸುವಲ್ಲಿ ಆಗಿರುವ ಲೋಪ ಸರಿಪಡಿಸದಿದ್ದರೆ ನ್ಯಾಯಾಲಯದ ಮೊರೆ ಹೋಗುವುದಾಗಿ ಟಪಾಲ್ ಗಣೇಶ್ ಇತ್ತೀಚೆಗೆ ಬಳ್ಳಾರಿಯಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದ್ದರು.

‘ಸರ್ವೆ ಆಫ್ ಇಂಡಿಯಾದ ಅಧಿಕಾರಿಗಳು ಗಡಿ ಗುರುತಿಸುವಾಗ ಯಾವುದೋ ಒತ್ತಡಕ್ಕೆ ಒಳಗಾಗಿದ್ದಾರೆ. ಅಕ್ರಮ ಗಣಿಗಾರಿಕೆ ₹3,500 ಕೋಟಿ ಹಗರಣವಾಗಿದ್ದು, ಇದನ್ನು ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ. ಅಕ್ರಮ ಗಣಿಗಾರಿಕೆ ಮಟ್ಟ ಹಾಕಲು ಗಡಿಗಳನ್ನು ನಿಖರವಾಗಿ ಗುರುತಿಸಬೇಕು’ ಎಂದೂ ಅವರು ಒತ್ತಾಯಿಸಿದ್ದರು.

ಬುಧವಾರ, ಅಕ್ಟೋಬರ್ 27, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 298 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಆಸ್ಪತ್ರೆಗಳು, ಹೋಟೆಲ್‌ಗಳು, ಮಾಲ್‌ಗಳು – ಹೀಗೆ ವಿವಿಧ ಕ್ಷೇತ್ರಗಳಲ್ಲಿ ಡಿಜಿಟಲ್ ಅಸಿಸ್ಟೆಂಟ್‌ಗಳ ಬಳಕೆ ಹೆಚ್ಚಾಗುತ್ತಿದೆ. ರಾಜ್ಯದಲ್ಲಿ ಇಂಥ ಸೌಲಭ್ಯಗಳನ್ನು ಕನ್ನಡದಲ್ಲಿ ನೀಡುವುದರಿಂದ ಹೆಚ್ಚು ಅನುಕೂಲವಾಗುತ್ತದೆ.

ಆಳ-ಅಗಲ
ಮಹಿಳೆಯರ ಓಲೈಕೆಗೆ ಟಿಕೆಟ್ ಮೀಸಲು
1,753 ಅನಧಿಕೃತ ಕಟ್ಟಡಗಳಿಗೆ ಕುತ್ತು 3A
ವೈದ್ಯ ವಿದ್ಯಾರ್ಥಿಗಳ ವಿರುದ್ಧ 'ಯುಎಪಿಎ' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,350 ▲	18,268 ▲	₹49,540 (ಬೆಂಗಳೂರು) ▼	₹67,000 (ಬೆಂಗಳೂರು) ▼	74.96 ▲

ಗೆಜೆಟೆಡ್ ಪ್ರೊಬೇಷನರಿ: 8 ತಿಂಗಳು ಕಳೆದರೂ ನಡೆಯದ 'ಡಿಜಿಟಲ್ ಮೌಲ್ಯಮಾಪನ'

ಕೆಪಿಎಸ್‌ಸಿ 'ಭದ್ರತೆ'ಯಲ್ಲಿ ಉತ್ತರಪತ್ರಿಕೆ!

• ರಾಜೇಶ್ ರೈ ಚಟ್ಲ

ಬೆಂಗಳೂರು: 2017-18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ (ಗ್ರೂಪ್ 'ಎ' ಮತ್ತು 'ಬಿ') 106 ಹುದ್ದೆಗಳ ನೇಮಕಾತಿಗೆ ಮುಖ್ಯಪರೀಕ್ಷೆ ಬರೆದ 2,120 ಅಭ್ಯರ್ಥಿಗಳ ಉತ್ತರ ಪತ್ರಿಕೆಗಳು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಭದ್ರತಾ ಕೊಠಡಿಯಲ್ಲೇ ಬಿದ್ದಿವೆ!

ಪೂರ್ವಭಾವಿ ಪರೀಕ್ಷೆಯಲ್ಲಿ 1:20 ಅನುಪಾತದಲ್ಲಿ ಆಯ್ಕೆಯಾಗಿದ್ದ ಅಭ್ಯರ್ಥಿಗಳು ಮುಖ್ಯಪರೀಕ್ಷೆ ಬರೆದಿದ್ದರು. ಮುಖ್ಯಪರೀಕ್ಷೆಯ ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನ ನಡೆಯಬೇಕಿದೆ. ಅದಕ್ಕೂ ಮೊದಲು ಈ ಉತ್ತರ ಪತ್ರಿಕೆಗಳನ್ನು ಡಿ–ಕೋಡಿಂಗ್ ಮಾಡಿ ಸ್ಕ್ಯಾನಿಂಗ್ ಮಾಡಬೇಕಿದೆ. ಆದರೆ, ಎಂಟು ತಿಂಗಳು ಕಳೆದರೂ ಈ ಪ್ರಕ್ರಿಯೆ ನಡೆದಿಲ್ಲ. ಮುಖ್ಯಪರೀಕ್ಷೆಯ ಬಳಿಕ 1:3 ಅನುಪಾತದಲ್ಲಿ ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ) ನಡೆಯಬೇಕಿದೆ.

ಡಿಜಿಟಲ್ ಮೌಲ್ಯಮಾಪನ ವಿಳಂಬಕ್ಕೆ ಕೆಪಿಎಸ್‌ಸಿ ಕಾರ್ಯದರ್ಶಿ ಮತ್ತು ಆಯೋಗದ ನಡುವಿನ ಶೀತಲ ಸಮರವೇ ಕಾರಣ. ಆಯೋಗದ ಸಭೆಯಲ್ಲಿ ಮೌಲ್ಯಮಾಪನ ವಿಳಂಬದ ಬಗ್ಗೆ ಸದಸ್ಯರು ಪ್ರಸ್ತಾಪಿಸಿದರೂ, ನಾನಾ ಕಾರಣ ನೀಡಿ ವಿಳಂಬ ಮಾಡಲಾಗುತ್ತಿದೆ ಎಂಬುದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳ ಆರೋಪ.

ಆಯೋಗದ ಕೆಲವು ಸದಸ್ಯರು ಡಿಜಿಟಲ್ ಮೌಲ್ಯ ಮಾಪನದ ಬದಲು ಮ್ಯಾನ್ಯುವಲ್ (ವ್ಯಕ್ತಿಗಳಿಂದ) ಮೌಲ್ಯಮಾಪನ ನಡೆಸಲು ಒಲವು ವ್ಯಕ್ತಪಡಿಸಿದ್ದಾರೆ. ಆದರೆ, ಹೋಟಾ ಸಮಿತಿಯ ಶಿಫಾರಸಿನಂತೆ ಡಿಜಿಟಲ್ ಮೌಲ್ಯಮಾಪನ ಕ್ರಮ ಅಳವಡಿಸಿಕೊಂಡು 2014 ಮತ್ತು 2015 ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯ ಮುಖ್ಯ ಪರೀಕ್ಷೆಯ ಮೌಲ್ಯಮಾಪನ ನಡೆಸಲಾಗಿದೆ. ಹೀಗಾಗಿ, ಅದೇ ಪದ್ಧತಿಯನ್ನು ಮುಂದುವರಿಸಲು ಕೆಪಿಎಸ್‌ಸಿ ಈಗಾಗಲೇ ನಿರ್ಧರಿಸಿದೆ.

ಈ ಮಧ್ಯೆ, 2015ನೇ ಸಾಲಿನ ಮುಖ್ಯಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನ ಪದ್ಧತಿಯ ಬಳಿಕ ಪ್ರಕಟಿಸಿದ ಫಲಿತಾಂಶದಲ್ಲಿ ಅಕ್ರಮ ನಡೆದಿದ್ದು, ಅಂಕಗಳನ್ನು ತಿರುಚಲಾಗಿದೆ ಎಂದು ಆರೋಪಿಸಿ ಆ ಸಾಲಿನಲ್ಲಿ ಹುದ್ದೆ ಆಯ್ಕೆಯ ನಿರೀಕ್ಷೆಯಲ್ಲಿದ್ದ ಕೆಲವು ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯಮಂಡಳಿಯ (ಕೆಎಟಿ) ಮೆಟ್ಟಿಲೇರಿದ್ದಾರೆ. ಮೌಲ್ಯಮಾಪನದಲ್ಲಿನ ಲೋಪಗಳ ಬಗ್ಗೆ ಕೆಎಟಿ ಎತ್ತಿದ ಪ್ರಶ್ನೆಗಳಿಗೆ ಕೆಪಿಎಸ್‌ಸಿ ಪ್ರಮಾಣಪತ್ರ ಸಲ್ಲಿಸಬೇಕಿದೆ.

ಈ ಮಧ್ಯೆ, ಡಿಜಿಟಲ್ ಮೌಲ್ಯಮಾಪನದ ಹೊರಗುತ್ತಿಗೆಯನ್ನು ನೀಡಲಾಗಿದ್ದ ಟಾಟಾ ಕನ್ಸಲ್ಟನ್ಸಿ ಸರ್ವಿಸ್ (ಟಿಸಿಎಸ್) ಜೊತೆ ಮಾಡಿಕೊಂಡಿದ್ದ ಒಪ್ಪಂದದಿಂದ ಕೆಪಿಎಸ್‌ಸಿ ಹಿಂದೆ ಸರಿದಿದೆ. ಅಲ್ಲದೆ, ಸರ್ಕಾರಿ ಸ್ವಾಮ್ಯದ ಎನ್‌ಐಸಿ (ನ್ಯಾಷನಲ್ ಇನ್‌ಫಾರ್ಮಟಿಕ್ ಸೆಂಟರ್) ಮೂಲಕ ಹೊಸ ತಂತ್ರಾಂಶವನ್ನು ಕೆಪಿಎಸ್‌ಸಿ ಅಭಿವೃದ್ಧಿಪಡಿಸಿದೆ. ಅದರ ಮೂಲಕ ಮುಖ್ಯಪರೀಕ್ಷೆಯ ಡಿಜಿಟಲ್ ಮೌಲ್ಯ ಮಾಪನ ನಡೆಸಲು ಕೆಪಿಎಸ್‌ಸಿ ನಿರ್ಧರಿಸಿದೆ.

20 ತಿಂಗಳು ಕಳೆಯಿತು: 106 ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ 2020ರ ಜ. 31ರಂದು ಅಧಿಸೂಚನೆ ಹೊರಡಿಸಿತ್ತು. ಹುದ್ದೆಗೆ 1,65,250 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಗಸ್ಟ್‌ನಲ್ಲಿ ನಡೆದ ಪೂರ್ವಭಾವಿ ಪರೀಕ್ಷೆಯನ್ನು ಕೋವಿಡ್ ದೃಢಪಟ್ಟಿದ್ದ 45 ಅಭ್ಯರ್ಥಿಗಳು ಸೇರಿ 83,716 (ಶೇ 50.5) ಮಂದಿ ಬರೆದಿದ್ದರು. ಒಂದು ವರ್ಷದ ಬಳಿಕ ಇದೇ ಫೆ. 13ರಿಂದ 16ರವರೆಗೆ ಮುಖ್ಯಪರೀಕ್ಷೆ ನಡೆದಿತ್ತು. 20 ತಿಂಗಳು ಕಳೆದರೂ ನೇಮಕಾತಿ ಅಂತಿಮ ಘಟ್ಟ ತಲುಪದಿರುವುದು ಅಭ್ಯರ್ಥಿಗಳ ಹತಾಶೆಗೆ ಕಾರಣವಾಗಿದೆ.

'ನಿರ್ದಿಷ್ಟ ಸಮಯ ಹೇಳಲು ಸಾಧ್ಯ ಇಲ್ಲ'

ಜಿ.ಸತ್ಯವತಿ

'ಮೌಲ್ಯಮಾಪನ ವಿಳಂಬಕ್ಕೆ ಕಾರ್ಯದರ್ಶಿ–ಆಯೋಗದ ಮಧ್ಯೆ ಶೀತಲ ಸಮರ ಕಾರಣ ಎಂಬ ಆರೋಪ ಶುದ್ಧ ಸುಳ್ಳು. ಕೋವಿಡ್, ಪೂರ್ಣಾವಧಿಗೆ ಪರೀಕ್ಷಾ ನಿಯಂತ್ರಕರೊಬ್ಬರು ಇಲ್ಲದಿರುವುದು, ಡಿಜಿಟಲ್ ಮೌಲ್ಯಮಾಪನಕ್ಕೆ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಿದ್ದರಿಂದ ಪ್ರಕ್ರಿಯೆ ವಿಳಂಬವಾಗಿದೆ. ಎಷ್ಟು ಸಮಯದೊಳಗೆ ಮೌಲ್ಯಮಾಪನ ನಡೆಸಿ ಫಲಿತಾಂಶ ಪ್ರಕಟಿಸಬಹುದೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯ ಇಲ್ಲ' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜಿ.ಸತ್ಯವತಿ ತಿಳಿಸಿದರು.

'2015ರ ಸಾಲಿನ ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನದ ಬಗ್ಗೆ ಆರೋಪ, ಪ್ರಕರಣ ಕೋರ್ಟ್‌ನಲ್ಲಿ ಇರುವ ಕಾರಣಕ್ಕೆ ನಮ್ಮದೇ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದೇವೆ. ಈಗಾಗಲೇ ಅದರ ಮೂಲಕ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಹುದ್ದೆಯ ಮೌಲ್ಯಮಾಪನ ನಡೆಸಿ, ಫಲಿತಾಂಶವನ್ನೂ ನೀಡಿದ್ದೇವೆ. ರಾಜ್ಯ ಲೆಕ್ಕ ಪರಿಶೋಧಕ (ಎಸ್‌ಎಡಿ) ಹುದ್ದೆಗೆ ನೇಮಕಾತಿಯ ಡಿಜಿಟಲ್ ಮೌಲ್ಯಮಾಪನದ ಬಳಿಕ ಗೆಜೆಟೆಡ್ ಪ್ರೊಬೇಷನರಿ ಮುಖ್ಯ ಪರೀಕ್ಷೆಯ ಮೌಲ್ಯಮಾಪನ ನಡೆಸಲಾಗುವುದು' ಎಂದೂ ಅವರು ತಿಳಿಸಿದರು.

ಪ್ರಜಾವಾಣಿ ವಿಶೇಷ

ಮೀನು ಶಿಕಾರಿ ಹುಣಸೂರು ತಾಲ್ಲೂಕಿನ ಸಂತೆಕೆರೆ ಗ್ರಾಮದ ಕೆರೆ ಮಂಗಳವಾರ ಕೋಡಿ ಬಿದ್ದಿದ್ದು, ನೀರಿನಲ್ಲಿ ತೇಲಿ ಹೋಗುತ್ತಿದ್ದ ಮೀನುಗಳನ್ನು ಹಿಡಿಯಲು ಸ್ಥಳೀಯರು ಮುಗಿಬಿದ್ದಿದ್ದರು –ಪ್ರಜಾವಾಣಿ ಚಿತ್ರ

ಕೋವಿಡ್: ರಾಜ್ಯದ ಏಳು ಜನರಲ್ಲಿ ಎವೈ 4.2 ವೈರಾಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಿಟನ್, ರಷ್ಯಾ, ಯುರೋಪ್‌ನ ಕೆಲವು ದೇಶಗಳಲ್ಲಿ ಪತ್ತೆಯಾಗಿರುವ ಕೋವಿಡ್‌ನ ಹೊಸ ತಳಿಯ ವೈರಾಣು ಎವೈ 4.2 ರಾಜ್ಯಕ್ಕೂ ಕಾಲಿಟ್ಟಿದ್ದು, ಬೆಂಗಳೂರಿನಲ್ಲಿ 3 ಸೇರಿ ರಾಜ್ಯದಲ್ಲಿ ಒಟ್ಟು ಏಳು ಪ್ರಕರಣಗಳು ದೃಢಪಟ್ಟಿವೆ.

ಸುಧಾಕರ್

ಕೆಲ ದಿನಗಳ ಹಿಂದೆ ಸೋಂಕಿತರ ಮಾದರಿಯನ್ನು ಅನುಕ್ರಮಣಿಕೆ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಎಲ್ಲ ಸೋಂಕಿತರು ಗುಣಮುಖರಾಗಿದ್ದಾರೆ.

ಈ ವಿಚಾರವಾಗಿ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಮತ್ತು ಹಿರಿಯ ಅಧಿಕಾರಿಗಳ ಜತೆಗೆ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸಭೆ ನಡೆಸಿದರು.

'ಬ್ರಿಟನ್ ಮತ್ತು ರಷ್ಯಾದಲ್ಲಿ ಪತ್ತೆಯಾಗಿರುವ ಹೊಸ ತಳಿಯ ಎವೈ 4.2 ವೈರಾಣು ಕುರಿತು ಅಧ್ಯಯನ ನಡೆಸಲಾಗುತ್ತಿದೆ. ಅದು ಎಷ್ಟರ ಮಟ್ಟಿಗೆ ಪರಿಣಾಮಕಾರಿ ಎಂಬುದು ಇನ್ನಷ್ಟೇ ಗೊತ್ತಾಗಬೇಕು. ಕೋವಿಡ್‌ನ ಯಾವುದೇ ಹೊಸ ತಳಿ ಬಂದರೂ ಪ್ರಯೋಗಾಲಯಗಳಲ್ಲಿ ಪರೀಕ್ಷೆ ನಡೆಸಿ, ತಜ್ಞರು ಐಸಿಎಂಆರ್ ಅಭಿಪ್ರಾಯವನ್ನೂ ಕೇಳಲಾಗುವುದು ಎಂದೂ ಸುಧಾಕರ್ ಹೇಳಿದರು.

4ನೇ ಪುಟ ನೋಡಿ

'ಹೊಸ ತಳಿ: ಆತಂಕ ಬೇಡ'

ರಾಜ್ಯದಲ್ಲಿ ಬಹುತೇಕರು ಕೋವಿಡ್ ಲಸಿಕೆ ತೆಗೆದುಕೊಂಡಿರುವುದರಿಂದ ಎವೈ 4.2 ವೈರಾಣು ಬಗ್ಗೆ ಆತಂಕಪಡಬೇಕಾಗಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ವೈರಾಣುಗಳು ರೂಪಾಂತರ ಆಗುವುದು ತಡೆಯಲು ಸಾಧ್ಯವಿಲ್ಲ. ಆದರೆ ರೋಗ ನಿರೋಧಕ ಲಸಿಕೆಯನ್ನು ಪಡೆಯುವ ಮೂಲಕ ಕೋವಿಡ್ ಅನ್ನು ನಿಯಂತ್ರಿಸಬಹುದು. ಪ್ರಕೃತಿಯಲ್ಲಿರುವ ಕೋಟ್ಯಂತರ ವೈರಾಣುಗಳಲ್ಲಿ ಇದೂ ಒಂದು. ಹೊಸ ತಳಿ ವೈರಾಣು ಹಿನ್ನೆಲೆಯಲ್ಲಿ ಪ್ರಯಾಣಿಕರ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ ಎಂದು ಅವರು ತಿಳಿಸಿದರು.

ಕೋವ್ಯಾಕ್ಸಿನ್: 'ಹೆಚ್ಚುವರಿ ಸ್ಪಷ್ಟನೆ' ಕೋರಿದ ಡಬ್ಲ್ಯುಎಚ್‌ಒ



ಜಿನೀವಾ (ಪಿಟಿಐ): ಭಾರತದಲ್ಲಿ ಅಭಿವೃದ್ಧಿಪಡಿಸಲಾದ ಕೋವಿಡ್–19 ಲಸಿಕೆ ಕೋವ್ಯಾಕ್ಸಿನ್‌ಗೆ ಸಂಬಂಧಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ತಾಂತ್ರಿಕ ಸಲಹಾ ಸಮಿತಿಯು 'ಹೆಚ್ಚುವರಿ ಸ್ಪಷ್ಟನೆಗಳನ್ನು' ಕೋರಿದೆ.

ಲಸಿಕೆಯ ತುರ್ತು ಬಳಕೆಗೆ ಮಾನ್ಯತೆ ನೀಡಲು ಅಂತಿಮ ಪರಿಶೀಲನೆಗಾಗಿ ಈ ಸ್ಪಷ್ಟನೆಗಳು ಅಗತ್ಯ ಎಂದೂ ತಿಳಿಸಿದೆ. ಸಮಿತಿಯು ಈಗ ಅಂತಿಮ ಪರಿಶೀಲನೆಗಾಗಿ ನವೆಂಬರ್ 3ರಂದು ಮತ್ತೆ ಸಭೆ ಸೇರಲಿದೆ.

'ದತ್ತಾಂಶಗಳನ್ನು ಸಮಿತಿಯು ಪರಿಶೀಲನೆಗೆ ಒಳಪಡಿಸಿದೆ. ತೃಪ್ತಿಕರ ಎನಿಸಿದಲ್ಲಿ 24 ತಾಸಿನಲ್ಲಿ ತುರ್ತು ಬಳಕೆಗೆ ಮಾನ್ಯತೆ ಸಿಗಲಿದೆ' ಎಂದು ಡಬ್ಲ್ಯುಎಚ್‌ಒ ವಕ್ತಾರರಾದ ಡಾ.ಮಾರ್ಗರೆಟ್ ಹ್ಯಾರಿಸ್ ಇದಕ್ಕೂ ಮೊದಲು ತಿಳಿಸಿದ್ದರು.

ಲಸಿಕೆಯ ತುರ್ತು ಬಳಕೆಗೆ ಮಾನ್ಯತೆ ನೀಡಲು ಕೋರಿ, ಇದನ್ನು ಅಭಿವೃದ್ಧಿಪಡಿಸಿರುವ ಹೈದರಾಬಾದ್ ಮೂಲದ ಭಾರತ್ ಬಯೊಟೆಕ್ ಸಂಸ್ಥೆಯು ಈ ವರ್ಷದ ಏಪ್ರಿಲ್ 19ರಂದು ದತ್ತಾಂಶಗಳನ್ನು ಒದಗಿಸಿತ್ತು.

ತಾಂತ್ರಿಕ ಸಲಹಾ ಸಮಿತಿ ಉತ್ಪಾದಕ ಸಂಸ್ಥೆಯಿಂದ ಹೆಚ್ಚುವರಿ ಸ್ಪಷ್ಟನೆ ಪಡೆಯಲು ನಿರ್ಧರಿಸಿದೆ. ವಾರಾಂತ್ಯದ ವೇಳೆಗೆ ವಿವರ ಸಿಗಬಹುದು. ನ.3ರಂದು ಮತ್ತೆ ಸಮಿತಿ ಸಭೆ ಸೇರಲಿದೆ ಎಂದು ಡಬ್ಲ್ಯುಎಚ್‌ಒ ತಿಳಿಸಿದೆ.

ಮಾನದಂಡಗಳಿಗೆ ಅನುಗುಣವಾಗಿ ಯಾವುದೇ ಕೋವಿಡ್ ಲಸಿಕೆಯನ್ನು ತುರ್ತು ಬಳಕೆಗೆ ಪರಿಗಣಿಸಬಹುದೇ ಎಂದು ಡಬ್ಲ್ಯುಎಚ್‌ಒಗೆ ತಾಂತ್ರಿಕ ಸಲಹಾ ಸಮಿತಿ ಶಿಫಾರಸು ಮಾಡಲಿದ್ದು, ಇದು ಸ್ವಾಯತ್ತ ಸಂಸ್ಥೆಯಾಗಿದೆ.

'ಅನುಗ್ರಹ ಯೋಜನೆ ಮುಂದುವರಿಕೆಗೆ ಸರ್ಕಾರದ ಆದೇಶ'

ಚಿತ್ರದುರ್ಗ: ಆಕಸ್ಮಿಕವಾಗಿ ಮೃತಪಟ್ಟ ಜಾನುವಾರಿಗೆ ಪರಿಹಾರ ನೀಡುವ 'ಅನುಗ್ರಹ' ಯೋಜನೆ ಯನ್ನು ಮುಂದುವರಿಸಲು ಆದೇಶಿಸಲಾಗಿದೆ ಎಂದು ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಮಂಗಳವಾರ ತಿಳಿಸಿದರು.

ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಶುಪಾಲನೆ ಇಲಾಖೆಯ ವರದಿ ಪಡೆಯುವ ವೇಳೆ ಅವರು, ಅನುಗ್ರಹ ಯೋಜನೆ ಮುಂದುವರಿಸಲು ಇಂದು ಬೆಳಿಗ್ಗೆ ಆದೇಶ ಹೊರಡಿಸಲಾಗಿದೆ. ಅಧಿಕಾರಿಗಳು ಅರ್ಜಿ ಸ್ವೀಕರಿಸಲು ಮುಂದಾಗಿ ಎಂದು ಸೂಚಿಸಿದರು.

ಕುರಿಗಳು ಆಕಸ್ಮಿಕವಾಗಿ ಮೃತಪಟ್ಟಿದ್ದಲ್ಲಿ ₹ 5 ಸಾವಿರ, ದನಗಳು ಮೃತಪಟ್ಟಿದ್ದಲ್ಲಿ ₹ 10 ಸಾವಿರ ಹಾಗೂ ಕುರಿಮರಿಗಳಿಗೆ ₹ 2,500 ನೀಡಲು ಆದೇಶದಲ್ಲಿ ತಿಳಿಸಲಾಗಿದೆ.

ಅನುಗ್ರಹ ಯೋಜನೆ ಸ್ಥಗಿತಗೊಳಿಸಲಾಗಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದ್ದರು. ಶಿವಮೊಗ್ಗ ಜಿಲ್ಲೆಯ ಸಾಗರ ಬಳಿ ಮೃತಪಟ್ಟಿದ್ದ 35 ಕುರಿಗಳ ಚಿತ್ರವನ್ನು ಟ್ವೀಟ್ ಮಾಡಿದ್ದ ಸಿದ್ದರಾಮಯ್ಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ನಾಟಕ ನಿಲ್ಲಿಸಿ, ಕುರಿಗಾಹಿಗಳ ಬಗ್ಗೆ ಕಾಳಜಿ ಇದ್ದರೆ ಅನುಗ್ರಹ ಯೋಜನೆಗೆ ಹಣ ಒದಗಿಸಿ ಎಂದು ಆಗ್ರಹಿಸಿದ್ದರು.

ಹಿಂದೂ ಧರ್ಮದ ಸಂಪ್ರದಾಯ ಮುಂದುವರಿಸಲು ಬಲಿಪಾಡ್ಯಮಿ ದಿನ ಪೂಜೆ

ದೇವಸ್ಥಾನಗಳಲ್ಲಿ ಗೋಪೂಜೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿರುವ ಎಲ್ಲ ದೇವಸ್ಥಾನಗಳಲ್ಲಿ ಬಲಿಪಾಡ್ಯಮಿ ದಿನದಂದು ಕಡ್ಡಾಯವಾಗಿ ಶಾಸ್ತ್ರೋಕ್ತವಾಗಿ ಗೋಪೂಜೆ ನೆರವೇರಿಸುವಂತೆ ಧಾರ್ಮಿಕ ದತ್ತಿ ಆಯುಕ್ತರು ಸೂಚಿಸಿದ್ದಾರೆ.

ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಅವರ ಟಿಪ್ಪಣಿ ಆಧರಿಸಿ ಈ ಸಂಬಂಧ ಸೋಮವಾರ ಸುತ್ತೋಲೆ ಹೊರಡಿಸಲಾಗಿದೆ.

'ಬಲಿಪಾಡ್ಯಮಿಯ ದಿನವಾದ ನವೆಂಬರ್ 5ರಂದು ಧಾರ್ಮಿಕ ದತ್ತಿ ಇಲಾಖೆಯ ಅಧೀನದ ಎಲ್ಲ ದೇವಸ್ಥಾನಗಳು ಮತ್ತು ಸಂಸ್ಥೆಗಳಲ್ಲಿ ಸನಾತನ ಹಿಂದೂ ಧರ್ಮದ ವಿಧಿ ವಿಧಾನಗಳ ಪ್ರಕಾರ ಗೋಪೂಜೆ ನೆರವೇರಿಸಬೇಕು' ಎಂದು ಸೂಚಿಸಲಾಗಿದೆ.

'ಪ್ರತಿ ದೇವಾಲಯದಲ್ಲಿ ಒಂದೊಂದು ಗೋಮಾತೆಯನ್ನು ಪೂಜಿಸಬೇಕು. ಗೋವುಗಳಿಗೆ ಸ್ನಾನ ಮಾಡಿಸಿ, ದೇವಾಲಯಕ್ಕೆ ಕರೆತಂದು ಅರಿಸಿನ, ಕುಂಕುಮ, ಹೂವುಗಳಿಂದ ಅಲಂಕರಿಸಿ, ಅಕ್ಕಿ, ಬೆಲ್ಲ, ಬಾಳೆಹಣ್ಣು, ಸಿಹಿ ತಿನಿಸು ಮುಂತಾದ ಗೋಗ್ರಾಸವನ್ನು ಹಸುವಿಗೆ ನೀಡಬೇಕು. ಗೋವುಗಳನ್ನು ಧೂಪ, ದೀಪಗಳಿಂದ ಪೂಜಿಸಿ, ನಮಸ್ಕರಿಸುವ ವ್ಯವಸ್ಥೆ ಮಾಡಬೇಕು. ನ.5ರಂದು ಸಂಜೆ 5.30ರಿಂದ 6.30ರ ಅವಧಿಯಲ್ಲಿ ಗೋಧೂಳಿ ಲಗ್ನದಲ್ಲಿ ದೇವಸ್ಥಾನಗಳಲ್ಲಿ ಗೋಪೂಜೆ ನಡೆಸಬೇಕು' ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

'ಪಟ್ಟಣ, ಮಹಾನಗರಗಳಲ್ಲಿ ವಾಸಿಸುವ ಜನರು ಇತ್ತೀಚಿನ ದಿನಗಳಲ್ಲಿ ಗೋಪೂಜೆಯನ್ನು ಮರೆತುಬಿಡುತ್ತಿದ್ದಾರೆ. ಹಿಂದೂ ಧರ್ಮದಲ್ಲಿ ಗೋವನ್ನು ದೇವತೆ ಎಂದು ತಿಳಿದು ಪೂಜಿಸುವ ಸತ್ಸಂಪ್ರದಾಯವನ್ನು ಮುಂದುವರಿಸುವ ದೃಷ್ಟಿಯಿಂದ ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನಗಳು, ಸಂಸ್ಥೆಗಳಲ್ಲಿ ಬಲಿಪಾಡ್ಯಮಿಯಂದು ಕಡ್ಡಾಯವಾಗಿ ಗೋಪೂಜೆ ನಡೆಸಬೇಕು' ಎಂದು ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

'ಹಿಂದೂ ಧರ್ಮದಲ್ಲಿ ಗೋವುಗಳಿಗೆ ತಾಯಿಯ ಸ್ಥಾನವಿದೆ. ಗೋಮಾತೆ ದೇವತೆ ಎಂದು ಭಾವಿಸಿ ಪೂಜಿಸಲಾಗುತ್ತಿದೆ. ಗೋಮಾತೆ ಪೂಜಿಸಿದರೆ ಅನೇಕ ಸಮಸ್ಯೆಗಳ ಜತೆಗೆ ವಾಸ್ತು ದೋಷವೂ ನಿವಾರಣೆಯಾಗುತ್ತದೆ ಎಂಬ ಬಲವಾದ ನಂಬಿಕೆ ಸಮಾಜದಲ್ಲಿದೆ. ಭಗವದ್ಗೀತೆ, ಭಾಗವತ ಮಹಾಪುರಾಣ ಸೇರಿದಂತೆ ಅನೇಕ ಪುರಾಣಗಳಲ್ಲಿ ಗೋವುಗಳ ಮಹತ್ವವನ್ನು ಉಲ್ಲೇಖಿಸಿರುವುದನ್ನು ಕಾಣಬಹುದು. ಶ್ರೀಕೃಷ್ಣನು ಗೋವುಗಳನ್ನು ಪೂಜಿಸಿ, ರಕ್ಷಿಸಿ ಉತ್ತಮ ಫಲ ಪಡೆದನು ಮತ್ತು ಗೋವುಗಳಲ್ಲಿ ಹಿಂದೂ ದೇವತೆಗಳು ನೆಲೆಸಿರುತ್ತಾರೆ ಎಂಬುದಾಗಿಯೂ ಹಿಂದೂ ಗ್ರಂಥಗಳು ಹೇಳುತ್ತವೆ' ಎಂಬ ಉಲ್ಲೇಖವೂ ಸುತ್ತೋಲೆಯಲ್ಲಿದೆ.

ಪೆಗಾಸಸ್ ತನಿಖೆ: ಇಂದು ತೀರ್ಪು

ಪ್ರಜಾವಾಣಿ ವಾರ್ತೆ

ನವದೆಹಲಿ: ಇಸ್ರೇಲ್‌ನ ಬೇಹುಗಾರಿಕೆ ಕುತಂತ್ರಾಂಶ ಪೆಗಾಸಸ್ ಬಳಸಿ ಬೇಹುಗಾರಿಕೆ ನಡೆಸಿರುವ ಆರೋಪದ ಬಗ್ಗೆ ತನಿಖೆಗೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ಮೇಲಿನ ತೀರ್ಪನ್ನು ಸುಪ್ರೀಂ ಕೋರ್ಟ್ ಬುಧವಾರ ಪ್ರಕಟಿಸಲಿದೆ. ವಿರೋಧ ಪಕ್ಷಗಳ ನಾಯಕರು, ಪತ್ರಕರ್ತರು, ಸಾಮಾಜಿಕ ಹೋರಾಟಗಾರರು ಮುಂತಾದವರ ಮೇಲೆ ಈ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಲಾಗಿದೆ ಎನ್ನಲಾಗಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಮೂವರು ನ್ಯಾಯಮೂರ್ತಿಗಳ ಪೀಠವು ಬುಧವಾರ ತೀರ್ಪು ಪ್ರಕಟಿಸಲಿದೆ ಎಂಬ ಮಾಹಿತಿ ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿದೆ.

ಬೇಹುಗಾರಿಕೆ ನಡೆಸಿದ ಆರೋಪಗಳ ಬಗ್ಗೆ ಸ್ವತಂತ್ರ ತನಿಖೆಗೆ ಆದೇಶಿಸಬೇಕು ಎಂದು ಕೋರಿ ಹಲವು ಅರ್ಜಿಗಳು ಸಲ್ಲಿಕೆ ಆಗಿದ್ದವು. ಈ ಬಗ್ಗೆ, ಮಧ್ಯಂತರ ಆದೇಶ ನೀಡಿಕೆ ಕುರಿತು ತೀರ್ಪನ್ನು ಸೆ.13ರಂದು ನ್ಯಾಯಾಲಯವು ಕಾಯ್ದಿರಿಸಿತ್ತು. ಪ್ರಕರಣದ ಪರಿಶೀಲನೆಗೆ ತಾಂತ್ರಿಕ ಪರಿಣತರ ಸಮಿತಿ ರಚನೆಗೆ ಪೀಠವು ಒಲವು ತೋರಿತ್ತು.

ಮುಖ್ಯಾಂಶಗಳು

- ವಿವರವಾದ ಪ್ರಮಾಣಪತ್ರ ಸಲ್ಲಿಸಲು ಕೇಂದ್ರವು ನಿರಾಕರಿಸಿತ್ತು
- ಬೇಹುಗಾರಿಕೆ ತಂತ್ರಾಂಶದ ಬಗೆಗಿನ ಚರ್ಚೆಯು ದೇಶದ ಭದ್ರತೆಗೆ ಅಪಾಯ ಎಂದಿತ್ತು
- ಸಂಪಾದಕರ ಕೂಟ, ಪತ್ರಕರ್ತರು ಮತ್ತು ಇತರರು ಅರ್ಜಿ ಸಲ್ಲಿಸಿದ್ದರು

ಆರೋಪಗಳ ಬಗ್ಗೆ ಪರಿಶೀಲನೆ ನಡೆಸುವುದಕ್ಕೆ ತಜ್ಞರ ತಂಡ ರಚಿಸುವ ಪ್ರಸ್ತಾವವನ್ನು ಕೇಂದ್ರ ಸರ್ಕಾರವು ಮುಂದಿಟ್ಟಿತ್ತು. ಈ ತಂಡದ ಮುಂದೆ ವಿವರಗಳನ್ನು ಬಹಿರಂಗಪಡಿಸುವುದಾಗಿಯೂ ಹೇಳಿತ್ತು.

ಪೆಗಾಸಸ್ ಕುತಂತ್ರಾಂಶ ಬಳಸಿ 50 ಸಾವಿರಕ್ಕೂ ಹೆಚ್ಚು ಜನರ ಮೇಲೆ ಬೇಹುಗಾರಿಕೆ ನಡೆಸಲಾಗಿದೆ ಎಂಬ ಸುದ್ದಿಯನ್ನು ಅಂತರರಾಷ್ಟ್ರೀಯ ತನಿಖಾ ಪತ್ರಿಕೋದ್ಯಮ ಕೂಟವು ಜುಲೈ 18ರಂದು ಬಹಿರಂಗಪಡಿಸಿತ್ತು. ಭಾರತದ ಸಚಿವರು, ವಿರೋಧ ಪಕ್ಷಗಳ ನಾಯಕರು, ಪತ್ರಕರ್ತರು, ಸಾಮಾಜಿಕ ಹೋರಾಟಗಾರರ ಮೇಲೆಯೂ ಬೇಹುಗಾರಿಕೆ ನಡೆಸಲಾಗಿದೆ ಎಂದು ವರದಿ ಹೇಳಿತ್ತು.

ತುಟ್ಟಿಭತ್ಯೆ ಹೆಚ್ಚಳ ಜು. 1ರಿಂದ ಅನ್ವಯ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ನೌಕರರಿಗೆ ತುಟ್ಟಿಭತ್ಯೆಯನ್ನು ಮೂಲವೇತನದ ಶೇಕಡ 31ರಷ್ಟಕ್ಕೆ ಹೆಚ್ಚಿಸಿರುವುದು 2021ರ ಜುಲೈ 1ರಿಂದ ಅನ್ವಯವಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಹೇಳಿದೆ.

ತುಟ್ಟಿಭತ್ಯೆಯು ಮೂಲವೇತನದ ಶೇ 28ರಷ್ಟರಿಂದ ಶೇ 31ಕ್ಕೆ ಹೆಚ್ಚಳ ಆಗಲಿದೆ. ಸಶಸ್ತ್ರ ಪಡೆಗಳ ಸಿಬ್ಬಂದಿ ಹಾಗೂ ರೈಲ್ವೆ ನೌಕರರಿಗೆ ತುಟ್ಟಿಭತ್ಯೆ ಹೆಚ್ಚಳಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶವನ್ನು ಸಂಬಂಧಪಟ್ಟ ಸಚಿವಾಲಯಗಳು ಹೊರಡಿಸಲಿವೆ.

ತುಟ್ಟಿಭತ್ಯೆಯನ್ನು ಮತ್ತು ಕೇಂದ್ರದ ಪಿಂಚಣಿದಾರರಿಗೆ ನೀಡುವ ಡಿಆರ್‌ಅನ್ನು (ತುಟ್ಟಿ ಪರಿಹಾರ) ಶೇ 3ರಷ್ಟು ಹೆಚ್ಚಿಸಲು ಕೇಂದ್ರ ಸಚಿವ ಸಂಪುಟವು ಕಳೆದ ವಾರ ಒಪ್ಪಿಗೆ ನೀಡಿದೆ.

ಒಳ ಪುಟ

'ಡ್ರಗ್ಸ್ ಪ್ರಕರಣ: ಅಮಾಯಕರನ್ನು ಸಿಲುಕಿಸಲಾಗಿದೆ' 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಾಳೆ ಬೆಳಿಗ್ಗೆ 11 ಗಂಟೆಗೆ ರಾಜ್ಯದಾದ್ಯಂತ ಗಾಯನ

5 ಲಕ್ಷ ಜನರಿಂದ ಕನ್ನಡ ಗೀತ ಗಾಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಕ್ಕಾಗಿ ನಾವು' ಅಭಿಯಾನದ ಅಂಗವಾಗಿ ಇದೇ 28ರಂದು ನಡೆಯಲಿರುವ ಸಾಮೂಹಿಕ ಕನ್ನಡ ಗೀತೆಗಳ ಗಾಯನದಲ್ಲಿ 5 ಲಕ್ಷ ಜನ ಭಾಗವಹಿಸಲಿದ್ದಾರೆ.

ರಾಜ್ಯದ ಎಲ್ಲ 31 ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಒಗಳ ಜತೆ ಚರ್ಚಿಸಿ ಇದಕ್ಕಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸುಮಾರು 1,000 ಕ್ಕೂ ಹೆಚ್ಚು ಸ್ಥಳಗಳಲ್ಲಿ ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 11.00 ಕ್ಕೆ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಸರ್ಕಾರಿ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಮಾತ್ರವಲ್ಲದೇ, ಕನ್ನಡ ನಾಡಿನ ಎಲ್ಲ ವರ್ಗದ ಜನರೂ ಭಾಗವಹಿಸುತ್ತಾರೆ. ದೇಶದ ಇತರ ರಾಜ್ಯಗಳು ಮತ್ತು ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರು, ಕನ್ನಡ ಕೂಟಗಳು ಸಹ ಕನ್ನಡ ಗೀತೆಗಳನ್ನು ಹಾಡಲಿದ್ದಾರೆ. ಇವರಿಗಾಗಿ ಒದಗಿಸಿರುವ ನಿರ್ದಿಷ್ಟ ಜಾಲತಾಣ ಸಂಪರ್ಕದ ಮೂಲಕ ಒಟ್ಟಿಗೆ ಹಾಡುವ ತಾಂತ್ರಿಕ ಸಂಯೋಜನೆ ರೂಪಿಸಲಾಗಿದೆ ಎಂದು ಅವರು ಹೇಳಿದರು.

ನಾಡಿನ ಎಲ್ಲ ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜುಗಳ ಆವರಣ, ವಿಶ್ವವಿದ್ಯಾಲಯಗಳ ಆವರಣ, ತಾಂತ್ರಿಕ ಮತ್ತು ವೈದ್ಯಕೀಯ ವಿಶ್ವವಿದ್ಯಾಲಯಗಳ ಆವರಣ, ಮೈಸೂರು ಅರಮನೆ ಮುಂಭಾಗ, ಹಂಪಿಯ ಕಲ್ಲಿನ ರಥ, ಮಹಾನವಮಿ ದಿಬ್ಬ ಸೇರಿ ವಿವಿಧ ಜಿಲ್ಲೆಗಳ ಪ್ರಸಿದ್ಧ ಸ್ಮಾರಕಗಳ ಮುಂದೆ ಒಟ್ಟಿಗೆ ನಿಂತು ಗಾಯನ ಮಾಡಲಾಗುತ್ತದೆ ಎಂದರು.

ಅಲ್ಲದೆ, ರಾಜ್ಯದ ಎಲ್ಲ ದೊಡ್ಡ ಮಾರುಕಟ್ಟೆಗಳು, ಆಟೋರಿಕ್ಷಾ ನಿಲ್ದಾಣಗಳು, ಕೈಗಾರಿಕಾ ಪ್ರದೇಶಗಳು ಮತ್ತು ಜನನಿಬಿಡ ಸ್ಥಳಗಳಲ್ಲಿ ಗೀತ ಗಾಯನ ನಡೆಯಲಿದೆ. ದೊಡ್ಡ ಸಂಖ್ಯೆಯ ಜನ ಸೇರುವ ಸ್ಥಳಗಳಲ್ಲಿ ಗೀತೆಗಳ ಧಾಟಿಯನ್ನು ಕಲಿಸಲು ಪರಿಣಿತ ಸಂಗೀತ ಗಾಯಕರನ್ನು ನಿಯೋಜಿಸಲಾಗಿದೆ ಎಂದು ಸುನಿಲ್ ಕುಮಾರ್ ಹೇಳಿದರು.

ಇನ್ನು ಎಲ್ಲೆಲ್ಲಿ ಗಾಯನ:

- ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಮಂಗಳೂರು ಮತ್ತು ಹುಬ್ಬಳ್ಳಿ ವಿಮಾನ ನಿಲ್ದಾಣಗಳು

4ನೇ ಪುಟ ನೋಡಿ

ಗೀತೆಗಳ ಆಯ್ಕೆ ಬಗ್ಗೆ ಆಕ್ಷೇಪ?

ಸಾಮೂಹಿಕ ಕನ್ನಡ ಗೀತ ಗಾಯನಕ್ಕಾಗಿ ಆಯ್ಕೆ ಮಾಡಿರುವ ಕನ್ನಡ ಗೀತೆಗಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅಪಸ್ವರಗಳು ಕೇಳಿ ಬಂದಿವೆ.

ದಾಖಲೆ ನಿರ್ಮಾಣ ಮಾಡಲು ಸರ್ಕಾರ ಮುಂದಾಗಿರುವಾಗ ಕರ್ನಾಟಕದ ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ'ಯನ್ನು ಸೇರಿಸದೇ ಇರುವುದು ಸರಿಯಲ್ಲ ಎಂದು ಅನೇಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಡಾ.ರಾಜ್‌ಕುಮಾರ್ ಅಭಿನಯದ 'ಆಕಸ್ಮಿಕ' ಚಿತ್ರದ 'ಹುಟ್ಟಿದರೆ ಕನ್ನಡನಾಡಿನಲ್ಲಿ ಹುಟ್ಟಬೇಕು' ಗೀತೆಯನ್ನು ಆಯ್ಕೆ ಮಾಡಲಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಾಗಾಭರಣ ಈ ಚಿತ್ರದ ನಿರ್ದೇಶಕರು. ಆದ್ದರಿಂದಲೇ ಈ ಗೀತೆಯನ್ನು ಆಯ್ಕೆ ಮಾಡಲಾಗಿದೆ ಎಂಬ ಅಪಸ್ವರವೂ ಹುಟ್ಟಿಕೊಂಡಿದೆ. ಅದರ ಬದಲಿಗೆ ಡಾ.ರಾಜ್ ಅಭಿನಯದ 'ಗಂಧದಗುಡಿ' ಚಿತ್ರದ 'ನಾವಾಡುವ ನುಡಿಯೇ ಕನ್ನಡ ನುಡಿ' ಹಾಡಿಸಬಹುದಲ್ಲ ಎಂಬ ಸಲಹೆಯೂ ಕೇಳಿ ಬಂದಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ಸಚಿವ ವಿ.ಸುನಿಲ್ ಕುಮಾರ್, 'ಈ ಮೂರು ಹಾಡುಗಳ ಗಾಯನ ಪ್ರಾತಿನಿಧಿಕ ಅಷ್ಟೇ, ಕಡ್ಡಾಯವಲ್ಲ. ನಾಡಗೀತೆಯೂ ಸೇರಿದಂತೆ ಕನ್ನಡ ನಾಡು–ನುಡಿ, ಸಂಸ್ಕೃತಿಯ ವೈಭವ ಸಾರುವ ಯಾವುದೇ ಗೀತೆಗಳನ್ನು ಹಾಡಬಹುದು. ಗೀತೆಗಳ ಆಯ್ಕೆಯ ಹಿಂದೆ ಹಿತಾಸಕ್ತಿ ಅಡಗಿಲ್ಲ' ಎಂದರು.

ಗೀತೆಗಳು ಯಾವುವು?

- ರಾಷ್ಟ್ರಕವಿ ಕುವೆಂಪು ರಚನೆಯ 'ಬಾರಿಸು ಕನ್ನಡ ಡಿಂಡಿಮವ'
- ಕೆ.ಎಸ್.ನಿಸಾರ್ ಅಹಮದ್ ರಚನೆಯ 'ಜೋಗದ ಸಿರಿ ಬೆಳಕಿನಲ್ಲಿ'
- ಹಂಸಲೇಖ ರಚನೆಯ 'ಹುಟ್ಟಿದರೆ ಕನ್ನಡನಾಡಿನಲ್ಲಿ ಹುಟ್ಟಬೇಕು'

ಕೊಳವೆ ಮಾರ್ಗ ಕಾಮಗಾರಿಗೆ ಚಾಲನೆ

ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಅವರು ಯೋಜನೆಯ ನೀಲನಕ್ಷೆಯನ್ನು ವೀಕ್ಷಿಸಿದರು. ಜಲಮಂಡಳಿ ಅಧಿಕಾರಿಗಳು ಇದ್ದಾರೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಲ್ಲೇಶ್ವರ ಕ್ಷೇತ್ರದ ವ್ಯಾಪ್ತಿಯಲ್ಲಿ ಡಿಸೆಂಬರ್ ವೇಳೆಗೆ 15 ಸಾವಿರ ಮನೆಗಳಿಗೆ ಹೊಸದಾಗಿ ನಲ್ಲಿ ಸಂಪರ್ಕ ಕೊಡಲಾಗುವುದು. ಜತೆಗೆ ಶಿಥಿಲವಾಗಿರುವ ಒಂದೂವರೆ ಸಾವಿರ ಮ್ಯಾನ್‌ಹೋಲ್‌ಗಳನ್ನು ಬದಲಿಸಲಾಗುವುದು' ಎಂದು ಕ್ಷೇತ್ರದ ಶಾಸಕರೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಹೇಳಿದರು.

ತಮ್ಮ ಕ್ಷೇತ್ರದ ವ್ಯಾಪ್ತಿಯ ನಾಲ್ಕು ಕಡೆಗಳಲ್ಲಿ ಅವರು ನೀರಿನ ಕೊಳವೆ ಮಾರ್ಗ ಬದಲಾವಣೆ ಕಾಮಗಾರಿಗೆ ಮಂಗಳವಾರ ಹಸಿರು ನಿಶಾನೆ ತೋರಿಸಿದರು.

'ಕ್ಷೇತ್ರದಲ್ಲಿ ಈ ಯೋಜನೆಯಡಿಯಲ್ಲಿ ₹30 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದರಡಿಯಲ್ಲಿ ಎಚ್‌ಎಂಟಿ ರಸ್ತೆ, ಸುಬೇದಾರ್ ಪಾಳ್ಯ, ಗಾಯತ್ರಿ ನಗರ ಮತ್ತು ಭುವನೇಶ್ವರಿ ನಗರಗಳ ವ್ಯಾಪ್ತಿಯಲ್ಲಿ ನೀರಿನ ಕೊಳವೆ ಬದಲಾವಣೆ, ಮ್ಯಾನ್‌ಹೋಲ್‌ಗಳ ಬದಲಾವಣೆ ಮಾಡಲಾಗುತ್ತದೆ. ಹಳೆಯ ಕೊಳಾಯಿ ಸಂಪರ್ಕದ ಜಾಗದಲ್ಲಿ ಹೊಸ ಸಂಪರ್ಕಗಳನ್ನು ಪೂರೈಸಲಾಗುವುದು' ಎಂದು ಅವರು ಹೇಳಿದರು.

'ಈಗ ಶೇ 25ರಷ್ಟು ನೀರು ಪೋಲಾಗುತ್ತಿದ್ದು, ಇದನ್ನು ಶೇ 10ಕ್ಕೆ ಇಳಿಸಲಾಗುವುದು. ಇದಕ್ಕಾಗಿ ಕಾಮಗಾರಿಯನ್ನು ವೈಜ್ಞಾನಿಕವಾಗಿ ವಿನ್ಯಾಸ ಮಾಡಲಾಗಿದೆ. ಕ್ಷೇತ್ರದ ವ್ಯಾಪ್ತಿಯಲ್ಲಿ ಈಗಾಗಲೇ ಶೇ 60ರಷ್ಟು ಕೊಳವೆ ಮಾರ್ಗವನ್ನು ಬದಲಿಸಲಾಗಿದೆ ಎಂದು ಅವರು ಹೇಳಿದರು.

ಬಾಕಿ ಉಳಿದಿರುವ ಕೆಲಸಗಳಿಗೆ ಸಂಬಂಧಿಸಿದಂತೆ ಮತ್ತೊಂದು ಯೋಜನೆ ಸಿದ್ಧಪಡಿಸಲಾಗುತ್ತಿದ್ದು, ಇದಕ್ಕೆ ಸದ್ಯದಲ್ಲೇ ಅನುಮೋದನೆ ಸಿಗಲಿದೆ' ಎಂದರು.

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಅ.27ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ವಿಜಯನಗರ, ಹೊಸಹಳ್ಳಿ, ಹಂಪಿನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ಚಂದ್ರಾ ಬಡಾವಣೆ, ಅನ್ನಪೂರ್ಣೇಶ್ವರಿ ನಗರ, ಪಟ್ಟಣಗೆರೆ, ಉಲ್ಲಾಳ ಬಸ್ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಸಂಕ್ಷಿಪ್ತ ಸುದ್ದಿ

ಸಾಕ್ಷ್ಯಚಿತ್ರ ಪ್ರಸಾರಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: 'ವೈಲ್ಡ್ ಕರ್ನಾಟಕ' ಅಥವಾ 'ಇಂಡಿಯಾಸ್ ವೈಲ್ಡ್ ಕರ್ನಾಟಕ' ಸಾಕ್ಷ್ಯಚಿತ್ರ ಪ್ರಸಾರಕ್ಕೆ ನೀಡಿದ್ದ ತಡೆಯಾಜ್ಞೆಯನ್ನು ಹೈಕೋರ್ಟ್ ಮುಂದಿನ ವಿಚಾರಣೆ ತನಕ ವಿಸ್ತರಣೆ ಮಾಡಿದೆ.

ರವೀಂದ್ರ ರೆಡ್ಕರ್ ಮತ್ತು ಆರ್.ಕೆ. ಉಲ್ಲಾಸ್ ಕುಮಾರ್ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ 2021ರ ಜುಲೈನಲ್ಲಿ ಮಧ್ಯಂತರ ಆದೇಶ ನೀಡಿತ್ತು. ಪ್ರಕರಣದ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ತಿ ಮತ್ತು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ವಿಭಾಗೀಯ ಪೀಠ, ವಿಚಾರಣೆಯನ್ನು ನ.17ಕ್ಕೆ ಮುಂದೂಡಿದೆ.

'ಈ ಚಿತ್ರವನ್ನು ಜಗತ್ತಿನಾದ್ಯಂತ ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಚಿತ್ರ ನಿರ್ಮಾಣ ವಿಷಯದಲ್ಲಿ ಖಾಸಗಿ ವ್ಯಕ್ತಿಗಳೊಂದಿಗೆ ಅರಣ್ಯ ಇಲಾಖೆ ಮಾಡಿಕೊಂಡಿರುವ ಒಪ್ಪಂದವು ಕೆಟಿಪಿಪಿ(ಕರ್ನಾಟಕ ಪಾರದರ್ಶಕ) ಕಾಯ್ದೆ ಪ್ರಕಾರ ಇಲ್ಲ. ಅದರಲ್ಲಿರುವ ಷರತ್ತುಗಳು ಖಾಸಗಿ ವ್ಯಕ್ತಿಗಳಿಗೆ ಅನುಕೂಲ ಆಗುವ ರೀತಿಯಲ್ಲಿವೆ. ಹೀಗಾಗಿ, ಸಾಕ್ಷ್ಯಚಿತ್ರದ ಪ್ರಸಾರಕ್ಕೆ ತಡೆ ನೀಡಬೇಕು' ಎಂದು ಕೋರಿದ್ದರು.

ಕಸಾಪ: ಪುಸ್ತಕಗಳಿಗೆ ರಿಯಾಯಿತಿ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತನ್ನ ಪ್ರಕಟಣೆಯ ಎಲ್ಲ ಪುಸ್ತಕಗಳಿಗೆ ಶೇ 10ರಿಂದ ಶೇ 75ರವರೆಗೆ ರಿಯಾಯಿತಿ ಘೋಷಿಸಿದೆ.

ಈ ಕೊಡುಗೆ ನ.1ರಿಂದ ನ.30ರವರೆಗೆ ಇರಲಿದೆ. ರಜಾ ದಿನಗಳು ಸೇರಿದಂತೆ ವಾರದ ಎಲ್ಲಾ ದಿನಗಳು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಪರಿಷತ್ತಿನ ಪುಸ್ತಕ ಮಾರಾಟ ವಿಭಾಗದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತದೆ.

ಕನ್ನಡ ರತ್ನಕೋಶ, ಸಂಕ್ಷಿಪ್ತ ಕನ್ನಡ ನಿಘಂಟು ಹಾಗೂ ಸಂಕ್ಷಿಪ್ತ ಕನ್ನಡ ಇಂಗ್ಲಿಷ್ ನಿಘಂಟುಗಳಿಗೆ ಶೇ 10 ರಷ್ಟು, ಬೃಹತ್ ಕನ್ನಡ-ಕನ್ನಡ ನಿಘಂಟುಗಳಿಗೆ (1-8 ಸಂಪುಟ) ಶೇ 50 ರಷ್ಟು, ದಲಿತ ಸಾಹಿತ್ಯ ಸಂಪುಟಗಳಿಗೆ ಶೇ 50 ರಷ್ಟು, ಗದ್ಯಾನುವಾದ ಪುಸ್ತಕಗಳು, ಶತಮಾನೋತ್ಸವ ಮಾಲಿಕೆ, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು, ಪರೀಕ್ಷೆ ಪುಸ್ತಕಗಳು ಹಾಗೂ ಇತರೆ ಹೊಸ ಪುಸ್ತಕಗಳಿಗೆ ಶೇ 35 ರಷ್ಟು ರಿಯಾಯಿತಿ ಘೋಷಿಸಲಾಗಿದೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಪುಸ್ತಕಗಳು ಹಾಗೂ ಜಿಲ್ಲಾ ಸಾಹಿತ್ಯ ಸಮ್ಮೇಳನ ಪುಸ್ತಕಗಳು, ಪಿಎಚ್‌.ಡಿ ಮತ್ತು ಜೀವನ ಚರಿತ್ರೆ ಪುಸ್ತಕಗಳಿಗೆ ಶೇ 50 ರಷ್ಟು, ಸ್ಮರಣ ಸಂಚಿಕೆಗಳು, ಬೀದರ್ ಸಮ್ಮೇಳನ ಪುಸ್ತಕಗಳಿಗೆ ಶೇ 75 ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಆನ್‌ಲೈನ್‌ನಲ್ಲಿಯೇ ವಾಹನ ನೋಂದಣಿ

ಬೆಂಗಳೂರು: ವಾಹನಗಳನ್ನು ಪ್ರಾದೇಶಿಕ ಸಾರಿಗೆ ಕಚೇರಿಗೆ ಕೊಂಡೊಯ್ಯದೆ ಆನ್‌ಲೈನ್ ಮೂಲಕವೇ ನೋಂದಣಿ ಮಾಡಿಸುವ ವ್ಯವಸ್ಥೆಯನ್ನು ಸಾರಿಗೆ ಇಲಾಖೆ ಜಾರಿಗೆ ತಂದಿದೆ.

ವಾಹನಗಳ ವಿವರಗಳನ್ನು ವಾಹನ್‌–4 ಪೋರ್ಟಲ್‌ನಲ್ಲಿ ಮಾರಾಟಗಾರರು ನಮೂದಿಸಿ ನೋಂದಣಿಗೆ ತಗಲುವ ತೆರಿಗೆ, ಶುಲ್ಕ ಮತ್ತು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ.

'ಅರ್ಜಿಗಳನ್ನು ಆನ್‌ಲೈನ್‌ನಲ್ಲಿಯೇ ಪರಿಶೀಲಿಸಿ ಅನುಮೋದನೆ ನೀಡಿ ನೋಂದಣಿ ಕ್ರಮಾಂಕ ನೀಡಲಾಗುತ್ತದೆ. ಮಾಲೀಕರು ಮತ್ತು ಸಾರ್ವಜನಿಕರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕು' ಎಂದು ಸಾರಿಗೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

BlueLink
3 Years free Blue Link subscription

- Remote - Engine start / stop
- Remote - Climate control (A/C) On / Off
- SOS / Emergency assistance / Impact alert
- Vehicle health report and driving behaviour
- Stolen vehicle tracking & immobilization
- Engine idle alert service

SANTRO Benefits up to ₹40 000* | Grand i10 NIOS Benefits up to ₹50 000* | i20 Benefits up to ₹40 000* | AURA Benefits up to ₹50 000*

Wide transmission choices across Hyundai range: iMT*, DCT, IVT, AT, AMT, MT.*

25 years of Hyundai

HYUNDAI

Hyundai Click to Buy | Lowest cost of maintenance## | Upto 5 Years Wonder Warranty** | Hyundai Mobility Membership | H-Promise Approved Used Car | Give a missed call on 7829150968

*Terms & Conditions apply. Benefits include cash discount, exchange bonus and benefits for government or corporate employees, whichever is applicable. Downpayment offer mentioned is for salaried customers. **3 years/1 00 000 km for SANTRO. 3 Years/unlimited km for VENUE. Wonder warranty with option to choose from 3 years/1 00 000 km or 4 years/50 000 km or 5 years/ 40 000 km for Grand i10 NIOS, i20 and AURA. Wonder warranty with option to choose from 3 years/unlimited km or 4 years/60 000 km or 5 years/ 50 000 km for VERNA, CRETA, ELANTRA and TUCSON. ##Lowest average yearly periodic maintenance service cost starts at ₹2 454 (SANTRO Petrol in Delhi for 5 years), Source: Cardekho.com. HMIL reserves the right to withdraw / modify the scheme without prior notice. Visit your nearest Hyundai dealership for more details. Hyundai urges you to follow traffic rules – these are meant to keep you safe on roads.

Trident Hyundai: Sankey Road: 43433333, 9844266882, Old Airport Road: 43433111, 9743786943, Hosur Road: 43433222, 9844266876, Whitefield (K R Puram): 67879191, 9964187952, Yelahanka: 9844701457, Yeshwanthpur: 9844701452; **Advaith Hyundai:** Residency Road: 9606076450, Marathalli ORR: 9606076452, Vasanth Nagar: 9606076453, Bannerghatta Road: 9606076454, Koramangala: 9606076455, Old Madras Road-Avalahalli: 9606076456, Bilekahalli - BG Road: 9606076457, Sarjapur: 9606076458; **Blue Hyundai:** Magadi Road: 9513200033; New BEL Road: 9513000800, 9513580320, Basavanagudi: 9591211118, 9686115155, Rajajinagar: 9591200001, 9611186804, Mysore Road: 9591100001, 26984000, Nelamangala: 9008917888, 9742245636; **Lakshmi Hyundai:** Hebbal, Bellary Road: 9900037900, Whitefield (Hopefarm Signal): 8884497700, Kalyan Nagar: 8884441111, 8095544666, Devanahalli: 8884499037; **Pavan Hyundai:** Kanakapura Road: Opp Metro Cash and Carry 7483033704, 080-66020266.

ಡಾ.ಶಿವರಾಮ ಕಾರಂತ ಬಡಾವಣೆ • 2018ರ ಆಗಸ್ಟ್ ಬಳಿಕ ನಿರ್ಮಾಣವಾದ ಕಟ್ಟಡಗಳ ತೆರವು

1,753 ಅನಧಿಕೃತ ಕಟ್ಟಡಗಳಿಗೆ ಕುತ್ತು

• ಪ್ರವೀಣ್ ಕುಮಾರ್ ಪಿ.ವಿ.

ಶಿವರಾಮ ಕಾರಂತ ಬಡಾವಣೆಗೆ ಸೋಮಶೆಟ್ಟಿಹಳ್ಳಿಯಲ್ಲಿ ಭೂಸ್ವಾಧೀನ ನಡೆಸಲು ಅಧಿಸೂಚನೆ ಹೊರಡಿಸಲಾದ ಜಾಗದಲ್ಲಿ ನಿರ್ಮಾಣವಾಗಿದ್ದ ಕಟ್ಟಡವನ್ನು ಬಿಡಿಎ ಅಧಿಕಾರಿಗಳು ಸೋಮವಾರ ತೆರವುಗೊಳಿಸಿದರು– ಪ್ರಜಾವಾಣಿ ಚಿತ್ರ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅಭಿವೃದ್ಧಿಪಡಿಸುತ್ತಿರುವ ಡಾ.ಕೆ.ಶಿವರಾಮ ಕಾರಂತ ಬಡಾವಣೆಯ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾದ ಕಡೆ ಬಿಡಿಎ ಅಧಿಕಾರಿಗಳು 2021ರ ಜುಲೈವರೆಗೆ 1,798 ಅನಧಿಕೃತ ಕಟ್ಟಡಗಳನ್ನು ಗುರುತಿಸಿದ್ದಾರೆ.

ಬಿಡಿಎ ಅಧಿಕಾರಿಗಳು ಮೊದಲ ಹಂತದ ತೆರವು ಕಾರ್ಯಾಚರಣೆಯಲ್ಲಿ ಸೋಮಶೆಟ್ಟಿಹಳ್ಳಿ, ಲಕ್ಷ್ಮೀಪುರ ಹಾಗೂ ಮೇಡಿ ಅಗ್ರಹಾರದಲ್ಲಿ ಒಟ್ಟು 22 ಅನಧಿಕೃತ ಕಟ್ಟಡಗಳನ್ನು 2021ರ ಜುಲೈ ಅಂತ್ಯದಲ್ಲಿ ತೆರವುಗೊಳಿಸಿದ್ದರು. ಎರಡನೇ ಹಂತದ ಕಾರ್ಯಾಚರಣೆಯಲ್ಲಿ ದೊಡ್ಡಬೆಟ್ಟಹಳ್ಳಿಯಲ್ಲಿ 16 ಕಟ್ಟಡಗಳನ್ನು ಹಾಗೂ ಮೂರನೇ ಹಂತದಲ್ಲಿ ಸೋಮಶೆಟ್ಟಿಹಳ್ಳಿಯಲ್ಲಿ ಏಳು ಕಟ್ಟಡಗಳನ್ನು ತೆರವುಗೊಳಿಸಿದ್ದಾರೆ. ಇದುವರೆಗೆ 45 ಕಟ್ಟಡಗಳನ್ನು ನೆಲಸಮಗೊಳಿಸಲಾಗಿದೆ. ಇನ್ನೂ 1,753 ಕಟ್ಟಡಗಳು ಹಾಗೆಯೇ ಇವೆ. ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ ಇವೆಲ್ಲವನ್ನೂ ತೆರವುಗೊಳಿಸಬೇಕಾಗುತ್ತದೆ ಎನ್ನುತ್ತಾರೆ ಬಿಡಿಎ ಅಧಿಕಾರಿಗಳು.

ಈ ಬಡಾವಣೆಗೆ ಗೊತ್ತುಪಡಿಸಿದ ಜಾಗದಲ್ಲಿ 2021ರ ಫೆಬ್ರುವರಿವರೆಗೆ ನಡೆಸಲಾದ ಡ್ರೋನ್ ಸರ್ವೆ ಹಾಗೂ ಉಪಗ್ರಹ ಚಿತ್ರ ಆಧರಿತ ಸಮೀಕ್ಷೆಯಲ್ಲಿ 735 ಅನಧಿಕೃತ ಕಟ್ಟಡಗಳನ್ನು ಬಿಡಿಎ ಅಧಿಕಾರಿಗಳು ಪತ್ತೆ ಹಚ್ಚಿದ್ದರು. ಜುಲೈ ವೇಳೆಗೆ ಅನಧಿಕೃತ ಕಟ್ಟಡಗಳ ಸಂಖ್ಯೆ 1798ಕ್ಕೆ ಹೆಚ್ಚಳವಾಗಿದೆ. ಆರ್‌ಸಿಸಿ ಕಟ್ಟಡಗಳನ್ನು ಶಾಶ್ವತ ಕಟ್ಟಡಗಳೆಂದು, ಶೆಡ್‌ಗಳನ್ನು ತಾತ್ಕಾಲಿಕ ಕಟ್ಟಡಗಳೆಂದು ಬಿಡಿಎ ಅಧಿಕಾರಿಗಳು ವರ್ಗೀಕರಿಸಿದ್ದಾರೆ.

ಪ್ರಜಾವಾಣಿ ವಿಶೇಷ

2018ರ ಆಗಸ್ಟ್ 3ರ ಬಳಿ ನಿರ್ಮಾಣವಾದ ಅನಧಿಕೃತ ಕಟ್ಟಡಗಳ ಕುರಿತು ವರದಿ ನೀಡಲೆಂದು ಸುಪ್ರೀಂಕೋರ್ಟ್ ನ್ಯಾ. ಎ. ವಿ. ಚಂದ್ರಶೇಖರ ನೇತೃತ್ವದಲ್ಲಿ ಸಮಿತಿ ರಚಿಸಿದೆ. ಬಿಡಿಎ ಅಧಿಕಾರಿಗಳು ಗುರುತಿಸಿರುವ ಅನಧಿಕೃತ ಕಟ್ಟಡಗಳ ಪಟ್ಟಿಯಲ್ಲಿರುವ ಕಟ್ಟಡಗಳ ಮಾಲೀಕರಲ್ಲಿ ಕೆಲವರು ನ್ಯಾ.ಚಂದ್ರಶೇಖರ ಸಮಿತಿ ಮುಂದೆ ಅರ್ಜಿ ಸಲ್ಲಿಸಿದ್ದಾರೆ. ದಾಖಲೆಗಳನ್ನು ಸಲ್ಲಿಸಿರುವ ಮಾಲೀಕರ ಕಟ್ಟಡಗಳನ್ನು ಉಳಿಸಿಕೊಳ್ಳಬೇಕೇ ಅಥವಾ ಕೆಡವಬೇಕೇ ಎಂಬ ಬಗ್ಗೆ ನ್ಯಾ. ಚಂದ್ರಶೇಖರ ನೇತೃತ್ವದ ಸಮಿತಿಯೇ ಶಿಫಾರಸು ಮಾಡುತ್ತದೆ.

‘ಈ ಬಡಾವಣೆಗೆ ಗೊತ್ತುಪಡಿಸಿದ ಜಾಗದಲ್ಲಿ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿದವರು ನ್ಯಾ. ಚಂದ್ರಶೇಖರ ನೇತೃತ್ವದ ಸಮಿತಿ ಮುಂದೆ ಅರ್ಜಿ ಸಲ್ಲಿಸಿದ್ದರೆ, ಅಂತಹ ಕಟ್ಟಡಗಳನ್ನು ಸದ್ಯ ನಾವು ಕೆಡಹುವುದಿಲ್ಲ. ಅವುಗಳನ್ನು ಕೆಡಹುವ ಬಗ್ಗೆ ಸಮಿತಿಯೇ ಶಿಫಾರಸು ಮಾಡಲಿದೆ. ಆದರೆ, ಸಮಿತಿಗೆ ಅರ್ಜಿ ಸಲ್ಲಿಸದ ಅನಧಿಕೃತ ಕಟ್ಟಡಗಳನ್ನು ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ ನೆಲಸಮಗೊಳಿಸಲೇಬೇಕಾಗುತ್ತದೆ’ ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ವರ್ಷದಿಂದ ಈಚೆಗೆ ಅನೇಕರು ತರಾತುರಿಯಲ್ಲಿ ಕಟ್ಟಡ ನಿರ್ಮಿಸಿದ್ದಾರೆ. ಕೆಲವರು ಈ ಹಿಂದೆ ನಿರ್ಮಾಣ ಕಾರ್ಯ ಆರಂಭಿಸಿದ್ದ ಕಟ್ಟಡಗಳ ಕೆಲಸವನ್ನು ಮುಂದುವರಿಸಿದ್ದಾರೆ. ಹಾಗಾಗಿ ಅನಧಿಕೃತ ಕಟ್ಟಡಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗುತ್ತಲೇ ಸಾಗುತ್ತಿದೆ. ಬಡಾವಣೆಗೆ ಗೊತ್ತುಪಡಿಸಿದ ಜಾಗದಲ್ಲಿ 2018ರ ಆ.3ರ ನಂತರ ನಿರ್ಮಿಸಿದ ಯಾವುದೇ ಕಟ್ಟಡವನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲ ಎಂದು ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ 2021ರ ಜುಲೈ 14ರಂದು ಸ್ಪಷ್ಟಪಡಿಸಿದೆ. ಹಾಗಾಗಿ, ಯಾರದ್ದೋ ಮಾತು ಕೇಳಿ ತರಾತುರಿಯಲ್ಲಿ ಕಟ್ಟಡ ನಿರ್ಮಿಸುವವರು ಅದಕ್ಕೆ ಬೆಲೆ ತೆರಬೇಕಾಗುತ್ತದೆ’ ಎಂದು ಅವರು ತಿಳಿಸಿದರು.

ಈ ಬಡಾವಣೆಗೆ ಬಿಡಿಎ 2008ರ ಡಿಸೆಂಬರ್‌ನಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಭೂಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ಬಿಡಿಎ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ಈ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್‌ನ ಪೀಠವು 2018ರ ಆಗಸ್ಟ್ 3ರಂದು ನಿರ್ದೇಶನ ನೀಡಿತ್ತು. ಪ್ರಾಥಮಿಕ ಅಧಿಸೂಚನೆ ಪ್ರಕಟವಾದ 10 ವರ್ಷದ ಬಳಿಕ 2018ರ ನ.1ರಂದು ಬಿಡಿಎ ಭೂಸ್ವಾಧೀನಪಡಿಸಿಕೊಳ್ಳುವ ಕುರಿತು ಅಂತಿಮ ಅಧಿಸೂಚನೆ ಪ್ರಕಟಿಸಿತ್ತು.

ಅಂಕಿ-ಅಂಶಗಳು

3,546 ಎಕರೆ **12** ಗುಂಟೆ
ಶಿವರಾಮ ಕಾರಂತ ಬಡಾವಣೆಗಾಗಿ ಬಿಡಿಎ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಒಟ್ಟು ಜಾಗ

17
ಗ್ರಾಮಗಳಲ್ಲಿ ಈ ಬಡಾವಣೆಗೆ ಜಾಗ ಬಳಸಿಕೊಳ್ಳಲಾಗುತ್ತಿದೆ

ಸುದ್ದಿ 2 ನಿಮಿಷ

‘ಚರ್ಮ ವಾದ್ಯಗಳ ಹಿಂದೆ ಸಂಘರ್ಷದ ಬದುಕಿದೆ’

ಬೆಂಗಳೂರು: ‘ಚರ್ಮ ವಾದ್ಯಗಳ ತಯಾರಿಕೆಯ ಹಿಂದೆ ಸಂಘರ್ಷದ ಬದುಕಿದೆ. ಸಂಗೀತ ಕ್ಷೇತ್ರದಲ್ಲಿ ವಾದ್ಯ ತಯಾರಿಕರಿಗೆ ಸರಿಯಾದ ಗೌರವ ಸಿಗುತ್ತಿಲ್ಲ’ ಎಂದು ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದ ಟಿ.ಎಂ. ಕೃಷ್ಣ ಹೇಳಿದರು.

‘ಜನಶಕ್ತಿ ಮೀಡಿಯಾ’ ಮಂಗಳವಾರ ಆಯೋಜಿಸಿದ್ದ ತಿಂಗಳ ಪುಸ್ತಕ ಪ್ರೀತಿ ವೆಬಿನಾರ್ ಸರಣಿ ಕಾರ್ಯಕ್ರಮದಲ್ಲಿ ಚರ್ಮ ವಾದ್ಯಗಳ ತಯಾರಕರ ಕುರಿತು ತಾವು ರಚಿಸಿರುವ ‘ಸೆಬಾಸ್ಟಿಯನ್ ಅಂಡ್ ಸನ್ಸ್’ ಕೃತಿ ಕುರಿತು ಅವರು ಮಾತನಾಡಿದರು.

‘ಮೃದಂಗ, ತಬಲ, ಖಂಜಿರಾ, ಚೆಂಡೆ ಮತ್ತಿತರ ಚರ್ಮ ವಾದ್ಯಗಳನ್ನು ನುಡಿಸುವವರಲ್ಲಿ ಮೇಲ್ವರ್ಗದವರೇ ಹೆಚ್ಚು. ಆದರೆ, ಈ ವಾದ್ಯಗಳ ತಯಾರಕರು ದಲಿತರು ಮತ್ತು ಕೆಳಸ್ತರದ ಸಮುದಾಯಗಳ ಜನರು. ಸಂಗೀತ ಕಾರ್ಯಕ್ರಮಗಳಲ್ಲಿ ಕಲಾವಿದ ಮತ್ತು ಆತನ ಗುರುವಿಗೆ ಗೌರವ ದೊರೆಯುತ್ತದೆ. ಆದರೆ, ಇಂಪಾದ ದನಿ ಹೊಮ್ಮಿಸುವ ವಾದ್ಯವನ್ನು ರೂಪಿಸಿದ ವ್ಯಕ್ತಿಗಳು ತೆರೆಯ ಮರೆಯಲ್ಲೇ ಉಳಿದುಬಿಡುತ್ತಾರೆ’ ಎಂದರು.

ಹಸು, ಕೋಣ ಮತ್ತು ಎಮ್ಮೆ, ಕುರಿಯ ಚರ್ಮಗಳನ್ನು ಮೃದಂಗ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಕರ್ನಾಟಕದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾದ ಬಳಿಕ ಚರ್ಮದ ಕೊರತೆ ಉದ್ಭವಿಸಿದೆ. ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈ ಸಮಸ್ಯೆ ಇಲ್ಲ ಎಂದರು.

ಬಿಡಿಎ ಎಇಇ ಮನೆಯಲ್ಲಿ ನಗದು, ದಾಖಲೆ ವಶ

ಬೆಂಗಳೂರು: ಕಟ್ಟಡ ನಿರ್ಮಾಣಕ್ಕೆ ನಿರಾಕ್ಷೇಪಣಾ ಪತ್ರ ನೀಡಲು ಲಂಚ ಪಡೆಯುವಾಗ ಬಂಧಿತರಾಗಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ಉತ್ತರ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಮಂಜುನಾಥ್ ಮನೆಯಲ್ಲಿ ₹ 2.95 ಲಕ್ಷ ನಗದು ಮತ್ತು ಸ್ಥಿರಾಸ್ತಿ ಒಡೆತನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ವಶಪಡಿಸಿಕೊಂಡಿದೆ.

ಎಚ್‌ಆರ್‌ಬಿಆರ್ ಬಡಾವಣೆ ನಿವಾಸಿ ಮರಿಯಪ್ಪ ಎಂಬುವವರ ಹಳೆಯ ಮನೆ ಕೆಡವಿ, ಹೊಸ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲು ₹ 2 ಲಕ್ಷ ಲಂಚ ಪಡೆದ ಆರೋಪದ ಮೇಲೆ ಮಂಜುನಾಥ್ ಮತ್ತು ಬಿಡಿಎ ಭೂಮಾಪಕ ಜಯರಾಂ ಅವರನ್ನು ಎಸಿಬಿ ಸೋಮವಾರ ಬಂಧಿಸಿತ್ತು. ಬಳಿಕ ನಾಗರಭಾವಿಯಲ್ಲಿರುವ ಎಇಇ ಮನೆ ಮೇಲೆ ಎಸಿಬಿ ಅಧಿಕಾರಿಗಳು ದಾಳಿಮಾಡಿ, ಶೋಧ ನಡೆಸಿದ್ದರು.

‘ಮನೆಯಲ್ಲಿ ₹ 2.95 ಲಕ್ಷ ನಗದು, ಸ್ಥಿರಾಸ್ತಿ ಒಡೆತನಕ್ಕೆ ಸಂಬಂಧಿಸಿದ ಹಲವು ದಾಖಲೆ ವಶಪಡಿಸಿಕೊಳ್ಳಲಾಗಿದೆ. ಈ ಕುರಿತು ತನಿಖೆ ಪ್ರಗತಿಯಲ್ಲಿದ್ದು, ಹೆಚ್ಚಿನ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದು ಎಸಿಬಿ ಮೂಲಗಳು ತಿಳಿಸಿವೆ.

ವಂಚನೆ: ಅಣ್ಣ–ತಂಗಿ ಬಂಧನ

ಬೆಂಗಳೂರು: ರಿಯಾಯಿತಿ ದರದಲ್ಲಿ ವಿವಿಧ ಸ್ಥಳಗಳಿಗೆ ಪ್ರವಾಸಕ್ಕೆ ಕರೆದುಕೊಂಡು ಹೋಗುವುದಾಗಿ ಜನರನ್ನು ನಂಬಿಸಿ ಅವರಿಂದ ಹಣ ಪಡೆದು ವಂಚಿಸುತ್ತಿದ್ದ ಅಣ್ಣ–ತಂಗಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬಿ.ಪ್ರಶಾಂತ್ ಹಾಗೂ ಆತನ ಸಹೋದರಿ ಬಂಧಿತರು.

‘ಮುಖ್ಯ ಆರೋಪಿ ಪ್ರಶಾಂತ್ ತನ್ನ ತಾಯಿ ಹಾಗೂ ತಂಗಿಯ ಹೆಸರಿನಲ್ಲಿ ‘ರಾಯಲ್ ಡ್ರೀಮ್ ಟು ಫ್ಲೈ ಪ್ರೈವೇಟ್ ಲಿಮಿಟೆಡ್’ ಎಂಬ ಸಂಸ್ಥೆ ಸ್ಥಾಪಿಸಿದ್ದ. ಗಿರಿನಗರದಲ್ಲಿ ಅದರ ಕಚೇರಿ ಇತ್ತು. ವಿವಿಧೆಡೆ ಪ್ರವಾಸ ಕೈಗೊಳ್ಳಲು ಪ್ಯಾಕೇಜ್‌ಗಳನ್ನು ಪ್ರಕಟಿಸುತ್ತಿದ್ದ ಆತ, ಹಲವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುತ್ತಿದ್ದ. ಮತ್ತಷ್ಟು ಮಂದಿಯನ್ನು ಸದಸ್ಯರನ್ನಾಗಿ ಮಾಡಿದರೆ ಪ್ರವಾಸದ ಜೊತೆಗೆ ಶೇ 25 ಲಾಭಾಂಶ ನೀಡುವುದಾಗಿಯೂ ಆಮಿಷ ಒಡ್ಡುತ್ತಿದ್ದ. ಆತನನ್ನು ನಂಬಿ ಹಲವರು ಹಣ ಪಾವತಿಸುತ್ತಿದ್ದರು. ಆ ಹಣದೊಂದಿಗೆ ಆತ ಪರಾರಿಯಾಗುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮೈಸೂರಿನಲ್ಲಿ ನಟ ಶೇಷಗಿರಿ ಬಂಧನ

ಬೆಂಗಳೂರು: ಅತ್ಯಾಚಾರ, ಹಲ್ಲೆ ಮತ್ತು ವಂಚನೆ ಆರೋಪ ಸಂಬಂಧ ನಟ ಶೇಷಗಿರಿ ಬಸವರಾಜ್ ಅವರನ್ನು ಮೈಸೂರಿನಲ್ಲಿ ಬಂಧಿಸಿರುವ ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ನಗರಕ್ಕೆ ಕರೆತಂದು ವಿಚಾರಣೆ ನಡೆಸುತ್ತಿದ್ದಾರೆ.

‘ಬ್ಯಾಂಕ್‌ನಲ್ಲಿ ಕೆಲಸ ಕೊಡಿಸುವುದಾಗಿ ತನ್ನಿಂದ ಹಣ ಪಡೆದು ವಂಚಿಸಿರುವ ಶೇಷಗಿರಿ, ಅತ್ಯಾಚಾರವನ್ನೂ ಎಸಗಿದ್ದಾರೆ. ಹಲ್ಲೆ ಕೂಡ ನಡೆಸಿದ್ದಾರೆ’ ಎಂದು ಯುವತಿಯೊಬ್ಬರು ಹೋದ ತಿಂಗಳು ದೂರು ನೀಡಿದ್ದರು. ಇದರ ಆಧಾರದಲ್ಲಿ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿಯು ಯುವತಿಗೆ ಲೈಂಗಿಕ ಕಿರುಕುಳ ನೀಡಿದ್ದ. ಕೆಲಸ ಕೊಡಿಸುವುದಾಗಿ ಹೇಳಿ ಹಣವನ್ನು ಪಡೆದುಕೊಂಡಿದ್ದ. ಹಣ ಹಿಂತಿರುಗಿಸುವಂತೆ ಯುವತಿ ಕೇಳಿದಾಗ ಅವರ ಮೇಲೆ ಹಲ್ಲೆಗೂ ಮುಂದಾಗಿದ್ದ. ಹಲವು ದಿನಗಳಿಂದ ತಲೆಮರೆಸಿಕೊಂಡಿದ್ದ. ದೂರವಾಣಿ ಕರೆಗಳ ಮಾಹಿತಿ ಆಧರಿಸಿ ಆತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕೆ–100 ಜಲಮಾರ್ಗ’ ಯೋಜನೆ ಕಾಮಗಾರಿಯ ಪ್ರಗತಿ ಪರಿಶೀಲನೆ

ಸ್ವಚ್ಛಗೊಂಡಿದೆ 6 ಕಿ.ಮೀ. ಉದ್ದದ ರಾಜಕಾಲುವೆ

ಪ್ರಜಾವಾಣಿ ವಾರ್ತೆ

ಕೆ– 100 ಯೋಜನೆಯಡಿ ಶಾಂತಿನಗರ ಬಸ್ ನಿಲ್ದಾಣ ಸಮೀಪದ ರಾಜಕಾಲುವೆಯ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ

ಬೆಂಗಳೂರು: ಕೋರಮಂಗಲ ರಾಜಕಾಲುವೆಯನ್ನು ಕೆ.ಆರ್.ಮಾರುಕಟ್ಟೆಯಿಂದ ಬೆಳ್ಳಂದೂರು ಕೆರೆಯವರೆಗೆ ಅಭಿವೃದ್ಧಿಗೊಳಿಸುವ ‘ಕೆ–100 ಜಲಮಾರ್ಗ’ ಯೋಜನೆಯಡಿ 6 ಕಿ.ಮೀ ಉದ್ದದ ರಾಜಕಾಲುವೆಯನ್ನು ಸ್ವಚ್ಛಗೊಳಿಸಲಾಗಿದೆ.

ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯಡಿ ₹ 175 ಕೋಟಿ ವೆಚ್ಚದಲ್ಲಿ ಒಟ್ಟು 9.2 ಕಿ.ಮೀ ಉದ್ದದ ರಾಜಕಾಲುವೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಅದರಲ್ಲಿ 6. ಕಿ.ಮೀ ಉದ್ದದ ರಾಜಕಾಲುವೆ ಹೂಳೆತ್ತಲಾಗಿದೆ. ಕಾಲುವೆಯ ತಳಭಾಗವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ ನೀರು ಭೂಮಿಗೆ ಇಂಗುವಂತೆ ವಿನ್ಯಾಸಗೊಳಿಸಿ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲಾಗಿದೆ. ಉಳಿದ 3.2 ಕಿ.ಮೀ ಉದ್ದದ ರಾಜಕಾಲುವೆಯಲ್ಲಿ ಹೂಳೆತ್ತುವ ಕಾರ್ಯ ಪ್ರಗತಿಯಲ್ಲಿದೆ.

ರಾಜಕಾಲುವೆ ಪಕ್ಕದಲ್ಲಿರುವ ಮನೆಯವರು ತ್ಯಾಜ್ಯ ನೀರನ್ನು ರಾಜಕಾಲುವೆಗೆ ಹರಿದು ಬಿಡುತ್ತಿದ್ದರು. ಇದನ್ನು ತಡೆಯಲಾಗಿದ್ದು, ಹೊಸದಾಗಿ ಒಳಚರಂಡಿ ಕೊಳವೆ ನಿರ್ಮಿಸಿ ಅದಕ್ಕೆ ಕೊಳಚೆ ನೀರು ಹರಿಯ ಬಿಡಲು ಕ್ರಮ ಕೈಗೊಳ್ಳಲಾಗಿದೆ. ಕುಂಬಾರಗುಂಡಿ ಬಳಿ ರಾಜಕಾಲುವೆಗೆ ಹರಿಬಿಡುವ ನೀರನ್ನು ಶುದ್ಧೀಕರಿಸುವ ಘಟಕದ (ಎಸ್‌ಟಿಪಿ) ಕಾಮಗಾರಿ ಪ್ರಗತಿಯಲ್ಲಿದೆ. ಈ ಘಟಕವು ನಿತ್ಯ 50 ಲಕ್ಷ ಲೀಟರ್ ನೀರು ಶುದ್ಧೀಕರಿಸುವ ಸಾಮರ್ಥ್ಯದ್ದಾಗಿದೆ.

ಜೆ.ಸಿ.ರಸ್ತೆಯಿಂದ ಶಾಂತಿನಗರ ಬಸ್ ನಿಲ್ದಾಣದವರೆಗಿನ 1.5 ಕಿ.ಮೀ ಉದ್ದದ ರಾಜಕಾಲುವೆ ಮಾರ್ಗದಲ್ಲಿ ಎರಡೂ ಬದಿಯ ತಡೆಗೋಡೆ, ತಳಮಟ್ಟದ ಸೇತುವೆಗಳನ್ನು ಈ ಯೋಜನೆಗೆಂದೇ ನಿರ್ದಿಷ್ಟ ವಾಸ್ತುಶಿಲ್ಪದ ಮಾದರಿಯಲ್ಲಿ ವಿನ್ಯಾಸಗೊಳಿಸಲಾಗುತ್ತಿದೆ. ರಾಜಕಾಲುವೆಗಳ ಇಕ್ಕೆಲಗಳಲ್ಲಿ ಗಿಡಗಳನ್ನು ಬೆಳೆಸುವುದು, ರಾತ್ರಿ ಸಮಯದಲ್ಲಿ ಉದ್ಯಾನದ ಮಾದರಿಯಲ್ಲಿ ಅಲಂಕಾರಿಕ ವಿದ್ಯುದ್ದೀಪಗಳಿಂದ ಬೆಳಗಿಸುವುದು, ಪಾದಚಾರಿ ಮಾರ್ಗ ನಿರ್ಮಾಣ, ಗ್ರಾನೈಟ್ ಅಳವಡಿಕೆ, ಗ್ರಿಲ್ ಅಳವಡಿಕೆ ಕಾಮಗಾರಿಗಳೂ ಪ್ರಗತಿಯಲ್ಲಿವೆ.

ರಾಜಕಾಲುವೆಯ ಎರಡೂ ಬದಿ ಸಂಚರಿಸಲು ಮೂರು ಕಡೆಗಳಲ್ಲಿ ನಿರ್ಮಿಸುತ್ತಿರುವ ಸೇತುವೆಗಳಲ್ಲಿ ಎರಡರ ಕಾಮಗಾರಿ ಪೂರ್ಣಗೊಂಡಿದೆ. ಒಂದು ಸೇತುವೆಯ ಕೆಲಸ ಪ್ರಗತಿಯಲ್ಲಿದೆ. ವಿದ್ಯುತ್ ಅಳವಡಿಕೆಗಾಗಿ ಅತ್ಯಾಧುನಿಕ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗಿದೆ. ಜೊತೆಗೆ ರಾಜಕಾಲುವೆಯ ಎರಡೂ ಬದಿಯ ಸರ್ವಿಸ್ ರಸ್ತೆ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ರಾಜಕಾಲುವೆಗೆ ಮಳೆ ನೀರನ್ನು ಹರಿಸುವ ಪ್ರತ್ಯೇಕ ಕೊಳವೆಗಳನ್ನು ಹಾಗೂ ವಿದ್ಯುತ್ ಕೇಬಲ್ ಅಳವಡಿಕೆಗೆ ಚೇಂಬರ್‌ಗಳನ್ನು ನಿರ್ಮಿಸುವ ಕೆಲಸ ನಡೆಯುತ್ತಿದೆ.

ಕೆ–100 ಯೋಜನೆಯ ಕಾಮಗಾರಿಯ ಪ್ರಗತಿಯನ್ನು ಅಭಿವೃದ್ಧಿ ಆಯುಕ್ತರಾದ ವಂದಿತಾ ಶರ್ಮಾ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಮಂಗಳವಾರ ಪರಿಶೀಲನೆ ನಡೆಸಿದರು. ಬಿಬಿಎಂಪಿಯ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್, ಕಾರ್ಯಪಾಲಕ ಎಂಜಿನಿಯರ್ ಶರೀಫ್ ಕಾಮಗಾರಿಯ ಪ್ರಗತಿಯ ಕುರಿತು ವಿವರಿಸಿದರು.

ರೌಡಿ ಸ್ಯಾಮುಯೆಲ್ ಮೇಲೆ ಪೊಲೀಸರಿಂದ ಗುಂಡಿನ ದಾಳಿ

ಬೆಂಗಳೂರು: ತನ್ನನ್ನು ಬಂಧಿಸಲು ಬಂದಿದ್ದ ಸಬ್ ಇನ್‌ಸ್ಪೆಕ್ಟರ್ ಮೇಲೆ ಹಲ್ಲೆಗೆ ಮುಂದಾಗಿದ್ದ ರೌಡಿ ಸ್ಯಾಮುಯೆಲ್ (24) ಮೇಲೆ ಅಮೃತಹಳ್ಳಿ ಠಾಣೆ ಇನ್‌ಸ್ಪೆಕ್ಟರ್ ಗುರುಪ್ರಸಾದ್ ಮಂಗಳವಾರ ಸಂಜೆ ಗುಂಡಿನ ದಾಳಿ ನಡೆಸಿದ್ದಾರೆ.

‘ಸಂಪಿಗೆಹಳ್ಳಿಯ ಕಲ್ಲಿಪಾಳ್ಯದ ಕ್ವಾರಿಯೊಂದರ ಬಳಿ ಸ್ಯಾಮುಯೆಲ್ ಅಡಗಿ ಕುಳಿತಿದ್ದ. ಈ ಕುರಿತು ಖಚಿತ ಮಾಹಿತಿ ಲಭ್ಯವಾಗಿದ್ದರಿಂದ ಸ್ಥಳಕ್ಕೆ ತೆರಳಿದ್ದೆವು. ಈ ವೇಳೆ ಸಬ್ ಇನ್‌ಸ್ಪೆಕ್ಟರ್ ಪ್ರಕಾಶ್ ಅವರು ಆರೋಪಿಯನ್ನು ಬಂಧಿಸಲು ಮುಂದಾಗಿದ್ದರು. ಆಗ ಆರೋಪಿ ಡ್ರ್ಯಾಗರ್‌ನಿಂದ ಪ್ರಕಾಶ್ ಮೇಲೆ ಹಲ್ಲೆಗೆ ಯತ್ನಿಸಿದ್ದ. ಇನ್‌ಸ್ಪೆಕ್ಟರ್ ಗುರುಪ್ರಸಾದ್ ಅವರು ಶರಣಾಗುವಂತೆ ಸ್ಯಾಮುಯೆಲ್‌ಗೆ ಸೂಚಿಸಿದ್ದರು. ಸಿಬ್ಬಂದಿಯ ಮೇಲೆ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಆತ ಪ್ರಯತ್ನಿಸಿದ. ಆತ್ಮರಕ್ಷಣೆಯ ದೃಷ್ಟಿಯಿಂದ ಆತನ ಮೇಲೆ ಒಂದು ಸುತ್ತಿನ ಗುಂಡಿನ ದಾಳಿ ನಡೆಸಲಾಯಿತು’ ಎಂದು ಸ್ಥಳದಲ್ಲಿದ್ದ ಪೊಲೀಸ್ ಸಿಬ್ಬಂದಿ ಹೇಳಿದರು.

ಮಹಿಳೆ ಮೇಲೆ ಹಲ್ಲೆ ನಿರ್ಮಾಪಕನ ಪತ್ನಿ, ಪುತ್ರನ ಬಂಧನಕ್ಕೆ ಆಗ್ರಹ

ಬೆಂಗಳೂರು: ಎದುರು ಮನೆಯಲ್ಲಿ ಕೆಲಸಕ್ಕಿದ್ದ ಮಹಿಳೆ ಹಾಗೂ ಅವರ ತಾಯಿಯ ಮೇಲೆ ಹಲ್ಲೆ ಮಾಡಿದ್ದ ಪ್ರಕರಣದ ಆರೋಪಿಗಳಾಗಿರುವ ನಿರ್ಮಾಪಕ ಸೌಂದರ್ಯ ಜಗದೀಶ್ ಪತ್ನಿ ರೇಖಾ, ಮಗ ಸ್ನೇಹಿತ್ ಹಾಗೂ ಇತರರನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ ಜಗದೀಶ್ ಮನೆ ಎದುರು 50ಕ್ಕೂ ಹೆಚ್ಚು ಮಹಿಳೆಯರು ಮಂಗಳವಾರ ಪ್ರತಿಭಟನೆ ನಡೆಸಿದರು.

‘ಘಟನೆ ನಡೆದು 3 ದಿನವಾದರೂ ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಆರೋಪಿಗಳನ್ನು ಬಂಧಿಸಿಲ್ಲ. ಆರೋಪಿಗಳನ್ನು ಬಂಧಿಸಲು ವಿಳಂಬ ಮಾಡುತ್ತಿರುವುದು ಸರಿಯಲ್ಲ. ಕೂಡಲೇ ಅವರನ್ನು ವಶಕ್ಕೆ ಪಡೆಯಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಕೆಪಿಎಂಇ ಕಾಯ್ದೆ ಅಡಿಯಲ್ಲಿ ನೋಂದಣಿಯಾಗದ ಕೇಂದ್ರ

ನಾರಾಯಣ ಹೆಲ್ತ್ ಕೇರ್ ಸೆಂಟರ್‌ಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಖಾಸಗಿ ಆಸ್ಪತ್ರೆಗಳ ನಿಯಂತ್ರಣ ಕಾಯ್ದೆಯಡಿ (ಕೆಪಿಎಂಇ) ನೋಂದಣಿಯಾಗಿಲ್ಲ ಎಂಬ ಕಾರಣಕ್ಕೆ ರಾಜಗೋಪಾಲನಗರದ ನಾರಾಯಣ ಹೆಲ್ತ್ ಕೇರ್ ಸೆಂಟರ್‌ಗೆ ಬೀಗ ಹಾಕಲಾಗಿದೆ.

ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಿ. ಶ್ರೀನಿವಾಸ್ ನೇತೃತ್ವದಲ್ಲಿ ಬೆಂಗಳೂರು ನಗರ ಜಿಲ್ಲಾ ಸಲಹಾ ಸಮಿತಿ ಹಾಗೂ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿ ಸದಸ್ಯರು ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಆಸ್ಪತ್ರೆಯು ಗರ್ಭಧಾರಣ ಪೂರ್ವ ಮತ್ತು ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಕಾಯ್ದೆ (ಪಿಸಿಪಿಎನ್ ಡಿಟಿ) 1994ರ ಅನ್ವಯ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬಂದಿದೆ.

‘ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಆಯುಷ್ ವೈದ್ಯರು ತಲೆಮರೆಸಿಕೊಂಡಿದ್ದಾರೆ. ಕೇಂದ್ರ ನಡೆಸಲು ಆಸ್ಪತ್ರೆಯು ಕೆಪಿಎಂಇ ಕಾಯ್ದೆ ಅಡಿ ನೋಂದಣಿ ಆಗಿರಲಿಲ್ಲ. ಹಠಾತ್ ಭೇಟಿ ಮೂಲಕ ಸ್ಥಳ ಪರಿಶೀಲನೆ ನಡೆಸಿದಾಗ ಈ ಕೇಂದ್ರದಲ್ಲಿ ವೈದ್ಯಕೀಯ ಗರ್ಭಪಾತ ಸಲಕರಣೆಗಳು, ಪೀಠೋಪಕರಣಗಳು ಪತ್ತೆಯಾಗಿವೆ’ ಎಂದು ಎಂದು ಡಾ.ಜಿ. ಶ್ರೀನಿವಾಸ್ ತಿಳಿಸಿದರು.

‘ಪಿಸಿಪಿಎನ್ ಡಿಟಿ ಕಾಯ್ದೆಯ ವಿರುದ್ಧ ಕೆಲವು ಸ್ಕ್ಯಾನಿಂಗ್ ಕೇಂದ್ರಗಳು ಭ್ರೂಣಲಿಂಗ ಪತ್ತೆಯಲ್ಲಿ ತೊಡಗಿ, ಗರ್ಭಪಾತಕ್ಕೆ ಕಳುಹಿಸಿಕೊಡುವ ಬಗ್ಗೆ ಇಲಾಖೆಗೆ ದೂರುಗಳು ಬಂದಿವೆ. ಹೆಣ್ಣು ಭ್ರೂಣಹತ್ಯೆ ತಡೆಯುವ ಉದ್ದೇಶದಿಂದ ಜಿಲ್ಲಾಧಿಕಾರಿ ಜೆ. ಮಂಜುನಾಥ್ ನಿರ್ದೇಶನದಂತೆ ಜಿಲ್ಲಾ ಸಮಿತಿಗಳು ಕಾಲಕಾಲಕ್ಕೆ ಈ ರೀತಿಯ ತಪಾಸಣಾ ಭೇಟಿಗಳನ್ನು ಕೈಗೊಳ್ಳುತ್ತಿದ್ದೇವೆ. ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ ಸೂಕ್ತ ಕ್ರಮ ಜರುಗಿಸಲಾಗುತ್ತದೆ’ ಎಂದು ವಿವರಿಸಿದರು.

ಇದಕ್ಕೂ ಮೊದಲು ದಾಸರಹಳ್ಳಿಯ ವಿವೇಕ ಸ್ಕ್ಯಾನ್ಸ್ ಕೇಂದ್ರಕ್ಕೆ ತಂಡ ಭೇಟಿ ನೀಡಿತು. ಸ್ಕ್ಯಾನಿಂಗ್ ಕೊಠಡಿಯ ಟಿ.ವಿ ಪರದೆಯಲ್ಲಿ ಭ್ರೂಣದ ಚಿತ್ರವನ್ನು ಬಿತ್ತರಿಸದಂತೆ ಸೂಚಿಸಿದ ಆರೋಗ್ಯಾಧಿಕಾರಿ, ಟಿ.ವಿ ಪರದೆಯನ್ನು ತೆರವುಗೊಳಿಸುವಂತೆ ಸೂಚಿಸಿದರು. ಕಿರಿದಾದ ಸ್ಥಳದಲ್ಲಿ ಕೇಂದ್ರವನ್ನು ನಡೆಸುತ್ತಿರುವುದರ ಬಗ್ಗೆ ಕೇಂದ್ರಕ್ಕೆ ನೋಟಿಸ್ ನೀಡಿದರು.

ತಪಾಸಣಾ ಭೇಟಿಯ ಸಮಿತಿಯಲ್ಲಿ ಕೆ.ಆರ್. ಪುರ ಸಾರ್ವಜನಿಕ ಆಸ್ಪತ್ರೆಯ ಡಾ. ಲೀಲಾ, ಡಾ. ವಿಜಯ್ ಸಾರಥಿ, ಡಾ. ಶಿಲ್ಪಾ, ಬೆಂಗಳೂರು ಉತ್ತರ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ರಮೇಶ್ ಮತ್ತಿತರರು ಇದ್ದರು.

ನಾರಾಯಣ ಹೆಲ್ತ್ ಕೇರ್ ಸೆಂಟರ್‌ನ ವೈದ್ಯಾಧಿಕಾರಿಗಳು ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ಸ್ಪರ್ಶ್ ಆಸ್ಪತ್ರೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಅನುಮತಿ ಪಡೆಯದೆಯೇ ಭ್ರೂಣದ ಔಷಧ ಶಾಸ್ತ್ರ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದ ಯಶವಂತಪುರದ ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬೆಂಗಳೂರು ನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಜಿ. ಶ್ರೀನಿವಾಸ್ ನೋಟಿಸ್ ನೀಡಿದ್ದಾರೆ.

ಗರ್ಭಧಾರಣ ಪೂರ್ವ ಮತ್ತು ಪ್ರಸವಪೂರ್ವ ಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಕಾಯ್ದೆ (ಪಿಸಿಪಿಎನ್ ಡಿಟಿ) 1994ರ ಅನ್ವಯ ಬೆಂಗಳೂರು ನಗರ ಜಿಲ್ಲಾ ಸಲಹಾ ಸಮಿತಿ ಹಾಗೂ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿ ಸದಸ್ಯರು ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿ, ತಪಾಸಣೆ ನಡೆಸಿದರು.

‘ಭ್ರೂಣದ ಔಷಧ ಶಾಸ್ತ್ರ ವಿಭಾಗದಲ್ಲಿ ತರಬೇತಿ ಒದಗಿಸಲು ಕರ್ನಾಟಕ ವೈದ್ಯಕೀಯ ಪರಿಷತ್ತಿನಡಿಯೂ (ಕೆ.ಎಂ.ಸಿ) ಆಸ್ಪತ್ರೆ ನೋಂದಣಿ ಆಗಿರಲಿಲ್ಲ’ ಎಂದು ಸಮಿತಿಯ ಸದಸ್ಯರು ತಿಳಿಸಿದ್ದಾರೆ.

‘ಆಸ್ಪತ್ರೆಯಲ್ಲಿ ಒಟ್ಟು 11 ಸ್ಕ್ಯಾನಿಂಗ್ ಯಂತ್ರಗಳಿಗೆ ಪರವಾನಗಿ ಪಡೆದು ಬಳಸಲಾಗುತ್ತಿದೆ. ಸ್ಕ್ಯಾನಿಂಗ್ ನಡೆಸುವ ಫಾರಂ ಎಫ್ ಅನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಸಲ್ಲಿಸಿ, ಬಳಿಕ ಸ್ಕ್ಯಾನಿಂಗ್ ಮಾಡಬೇಕು. ಆದರೆ, ಇಲ್ಲಿ ಸ್ಕ್ಯಾನಿಂಗ್ ಮಾಡಿದ ನಂತರ ಆನ್‌ಲೈನ್‌ಗೆ ಮಾಹಿತಿ ಅಪ್‌ಲೋಡ್ ಮಾಡುತ್ತಿರುವುದು ಕಂಡುಬಂದಿದೆ’ ಎಂದು ಡಾ.ಜಿ. ಶ್ರೀನಿವಾಸ್ ತಿಳಿಸಿದರು.

‘ಸ್ಕ್ಯಾನಿಂಗ್ ಕೊಠಡಿಯಲ್ಲಿ ಭ್ರೂಣದ ಚಿತ್ರವನ್ನು ದೊಡ್ಡ ಟಿ.ವಿಯಲ್ಲಿ ಬಿತ್ತರಿಸಿ, ವೀಕ್ಷಿಸಲು ವ್ಯವಸ್ಥೆ ಮಾಡಲಾಗಿದೆ. ಇದು ಕಾನೂನು ಬಾಹಿರ. ಈ ಎಲ್ಲ ಅಂಶಗಳನ್ನು ಉಲ್ಲೇಖಿಸಿ, ಆಸ್ಪತ್ರೆಗೆ ನೋಟಿಸ್ ನೀಡಲಾಗಿದೆ’ ಎಂದು ಹೇಳಿದರು.

ಕೆ.ಆರ್. ಪುರ ಸಾರ್ವಜನಿಕ ಆಸ್ಪತ್ರೆಯ ಡಾ. ಲೀಲಾ, ಡಾ. ವಿಜಯ್ ಸಾರಥಿ, ಡಾ. ಶಿಲ್ಪಾ, ಬೆಂಗಳೂರು ಉತ್ತರ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ರಮೇಶ್ ಮತ್ತಿತರರು ಇದ್ದರು.

‘ಶಿಕ್ಷಣಕ್ಕಾಗಿ ಪರದೆ ಅಳವಡಿಕೆ’

‘ಸ್ನಾತಕೋತ್ತರ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸ್ಥಳದಲ್ಲಿ ಪರದೆ (ಸ್ಕ್ರೀನ್) ಅಳವಡಿಸಲಾಗಿತ್ತು. ಅಲ್ಲಿ ರೋಗಿಗಳಿಗೆ ಪ್ರವೇಶ ಇರಲಿಲ್ಲ. ದೇಶದ ವಿವಿಧೆಡೆ ಶಿಕ್ಷಣಕ್ಕಾಗಿ ಇದೇ ರೀತಿ ಪರದೆ ಅಳವಡಿಕೆ ಮಾಡಲಾಗುತ್ತದೆ’ ಎಂದು ಆಸ್ಪತ್ರೆಯ ನಿರ್ದೇಶಕ (ಕಾರ್ಯತಂತ್ರ) ಬಿ.ಆರ್. ಗುರುಪ್ರಸಾದ್ ತಿಳಿಸಿದರು.

ಜೆರಾಕ್ಸ್ ನೋಟು, ₹ 80 ಲಕ್ಷ ಮೊತ್ತದ ಹಳೇ ನೋಟು ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೇಂದ್ರ ಸರ್ಕಾರ ರದ್ದು ಮಾಡಿರುವ ಹಳೇ ನೋಟುಗಳನ್ನು ಬದಲಾವಣೆ ಮಾಡಿಸಿ ಹೊಸ ನೋಟು ನೀಡುವುದಾಗಿ ಹೇಳಿ ವಂಚಿಸುವ ಜಾಲವನ್ನು ಗೋವಿಂದಪುರ ಪೊಲೀಸರು ಭೇದಿಸಿದ್ದಾರೆ.

‘ಎಚ್‌ಬಿಆರ್ ಬಡಾವಣೆ ಬಳಿಯ ಪೆಟ್ರೋಲ್ ಬಂಕ್ ಬಳಿ ಕಾರ್ಯಾಚರಣೆ ನಡೆಸಿ ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ ₹ 80 ಲಕ್ಷ ಮೊತ್ತದ ಹಳೇ ನೋಟುಗಳು ಹಾಗೂ ₹ 5 ಕೋಟಿ ಮೊತ್ತದ ಕಲರ್ ಜೆರಾಕ್ಸ್ ನೋಟುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೂರ್ವ ವಿಭಾಗದ ಡಿಸಿಪಿ ಎಸ್.ಡಿ.ಶರಣಪ್ಪ ಹೇಳಿದರು.

ಬಟ್ಟೆ ವ್ಯಾಪಾರಿಯಾದ ಕೆ.ಆರ್.ಪುರ ನಿವಾಸಿ ಸುರೇಶ್ ಕುಮಾರ್, ರಾಜಾಜಿನಗರದ ರಾಮಕೃಷ್ಣ, ಬಿಬಿಎಂಪಿ ಉಪ ಗುತ್ತಿಗೆದಾರನಾದ ಹೊಂಗಸಂದ್ರದ ವೆಂಕಟೇಶ್, ಆನೇಕಲ್‌ನ ಮಂಜುನಾಥ್,ದೇವಾನಂದ್,ಶಿವಹಾಗೂಪಳನಿ ಸ್ವಾಮಿ ಬಂಧಿತರು’ ಎಂದು ಹೇಳಿದರು.

‘₹ 500 ಹಾಗೂ ₹ 1,000 ಮುಖಬೆಲೆಯ ಹಳೇ ನೋಟುಗಳನ್ನು ಕಲರ್ ಜೆರಾಕ್ಸ್ ಮಾಡಿಸುತ್ತಿದ್ದ ಆರೋಪಿಗಳು, ಕಂತೆಗಳನ್ನಾಗಿ ಮಾಡುತ್ತಿದ್ದರು. ಕಂತೆಯ ಮೇಲೆ ಹಾಗೂ ಕೊನೆಯಲ್ಲಿ ಮಾತ್ರ ಹಳೆ ಅಸಲಿ ನೋಟುಗಳನ್ನು ಇರಿಸಿ, ನಡುವಿನಲ್ಲಿ ಜೆರಾಕ್ಸ್ ನೋಟು ಬಚ್ಚಿಡುತ್ತಿದ್ದರು’.

‘ಹಳೇ ನೋಟು ವರ್ಗಾವಣೆ ದಂಧೆ ಮಾಡುತ್ತಿರುವುದಾಗಿ ಹೇಳಿ ಕೆಲ ಉದ್ಯಮಿಗಳನ್ನು ಸಂಪರ್ಕಿಸುತ್ತಿದ್ದ ಆರೋಪಿಗಳು, ಅವರಿಗೆ ಕಂತೆಗಳನ್ನು ತೋರಿಸುತ್ತಿದ್ದರು. ಹಳೇ ನೋಟುಗಳನ್ನು ತೋರಿಸಿ ಕಮಿಷನ್ ಹೆಸರಿನಲ್ಲಿ ಹೊಸ ನೋಟು ಪಡೆದು ವಂಚಿಸುವುದು ಆರೋಪಿಗಳ ಉದ್ದೇಶವಾಗಿತ್ತು’ ಎಂದೂ ಹೇಳಿದರು.

ದಾರಿ ತಪ್ಪಿದ್ದ ಬಾಲಕನನ್ನು ರಕ್ಷಿಸಿದ ಆಟೊ ಚಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆಯಿಂದ ಮನೆಗೆ ಹೋಗುವ ವೇಳೆ ದಾರಿ ತಪ್ಪಿ ರಸ್ತೆಯಲ್ಲಿ ಅಲೆದಾಡುತ್ತಿದ್ದ ಆರು ವರ್ಷದ ಬಾಲಕ ರೋಹನ್, ಆಟೊ ಚಾಲಕ ಗೋವಿಂದರಾಜ್ ನೆರವಿನಿಂದ ಸುರಕ್ಷಿತವಾಗಿ ಮನೆಗೆ ಸೇರಿದ್ದಾನೆ.

‘ಚಾಮರಾಜಪೇಟೆಯ ವಾರ್ಡ್ ಸಂಖ್ಯೆ 46ರಲ್ಲಿರುವ ಶ್ರೀರಾಮ ಶಿಶು ವಿಹಾರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ರೋಹನ್, ಶಾಲೆ ಪುನರಾರಂಭವಾದ ಮೊದಲ ದಿನ ತರಗತಿಗೆ ಹಾಜರಾಗಿದ್ದ. ಶೌಚಾಲಯಕ್ಕೆ ಹೋಗುವುದಾಗಿ ಹೇಳಿ ಮಧ್ಯಾಹ್ನ 12.30ರ ಸುಮಾರಿಗೆ ಶಾಲೆಯಿಂದ ಹೊರಹೋಗಿದ್ದ ಆತ ಬಳಿಕ ವಾಪಸ್ಸಾಗಿರಲಿಲ್ಲ. ಈ ವಿಷಯವನ್ನು ಶಿಕ್ಷಕರು ಪೋಷಕರಿಗೆ ತಿಳಿಸಿದ್ದರು. ಪೋಷಕರು ಠಾಣೆಗೆ ಬಂದು ದೂರು ನೀಡಿದ್ದರು. ಬಾಲಕ ಕಾಣೆಯಾಗಿರುವ ಮಾಹಿತಿಯನ್ನು ಕೂಡಲೇ ಎಲ್ಲ ಠಾಣೆಗಳಿಗೆ ರವಾನಿಸಲಾಗಿತ್ತು. ವಿ.ವಿ.ಪುರ ಠಾಣೆಯಲ್ಲಿ ಬಾಲಕ ಇರುವುದು ಗೊತ್ತಾಗಿತ್ತು’ ಎಂದು ಚಾಮರಾಜಪೇಟೆ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಬಾಲಕ ರಸ್ತೆಯಲ್ಲಿ ಅಡ್ಡಾಡುತ್ತಿದ್ದುದನ್ನು ಗಮನಿಸಿದ ಆಟೊ ಚಾಲಕ ಗೋವಿಂದರಾಜ್, ಕರೆದು ವಿಚಾರಿಸಿದ್ದಾರೆ. ಆತನಿಗೆ ಕನ್ನಡ ಸರಿಯಾಗಿ ಬರುತ್ತಿರಲಿಲ್ಲ. ತಾನು ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗದಿದ್ದರಿಂದ ಆತನನ್ನು ಆಟೊದಲ್ಲೇ ಕೂರಿಸಿಕೊಂಡು ವಿ.ವಿ.ಪುರ ಠಾಣೆಗೆ ಹೋಗಿದ್ದಾರೆ’ ಎಂದು ಹೇಳಿದರು.

‘ರೋಹನ್ ತಂದೆಯ ಹೆಸರು ಅಜಿತ್. ಬಿಹಾರದವರಾದ ಅವರು ಚಾಮರಾಜಪೇಟೆಯ 5ನೇ ಮುಖ್ಯರಸ್ತೆಯಲ್ಲಿ ಕುಟುಂಬದೊಂದಿಗೆ ವಾಸವಿದ್ದರು. ಅವರಿಗೆ ಮಗುವನ್ನು ಒಪ್ಪಿಸಿದ್ದೇವೆ. ಶಿಕ್ಷಕರಿಗೂ ಎಚ್ಚರಿಕೆ ನೀಡಿದ್ದೇವೆ’ ಎಂದರು.

₹ 20 ಲಕ್ಷ ಸ್ವಂತಕ್ಕೆ ಬಳಕೆ; ಮತ್ತೊಂದು ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ (ಕಿಮ್ಸ್) ವಿದ್ಯಾರ್ಥಿಗಳ ಶುಲ್ಕವನ್ನು ಸ್ವಂತಕ್ಕೆ ಬಳಸಿಕೊಂಡ ಆರೋಪದಡಿ ವಿ.ವಿ.ಪುರ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದ್ದು, ಈ ಬಗ್ಗೆ ಪೊಲೀಸರು ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ.

ಕಿಮ್ಸ್‌ನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಆಂತರಿಕ ತನಿಖೆ ಆರಂಭಿಸಿರುವ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಡಾ. ಸಿ. ಸಿದ್ದರಾಮಯ್ಯ, ದಾಖಲೆಗಳ ಸಮೇತ ದೂರು ನೀಡಿದ್ದಾರೆ. ₹ 20 ಲಕ್ಷವನ್ನು ಸ್ವಂತಕ್ಕೆ ಬಳಸಿಕೊಂಡ ಆರೋಪದಡಿ ರಾಜ್ಯ ಒಕ್ಕಲಿಗರ ಸಂಘದ ಮಾಜಿ ಖಜಾಂಚಿ ಕಾಳೇಗೌಡ ಹಾಗೂ ಮಾಜಿ ಅಧ್ಯಕ್ಷ ಡಿ.ಎನ್. ಬೆಟ್ಟೇಗೌಡ ವಿರುದ್ಧ ಪ್ರಕರಣ ದಾಖಲಾಗಿದೆ.

‘2014–15ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದಿದ್ದ ಡಾ. ಎಸ್. ಮನೋಜ್, ಆಸ್ಪತ್ರೆಯ ಅಭಿವೃದ್ಧಿ ಶುಲ್ಕವೆಂದು ₹55 ಲಕ್ಷ ಪಾವತಿಸಿದ್ದರು. ಅದರಲ್ಲಿ ₹35 ಲಕ್ಷವನ್ನು ಮಾತ್ರ ಸಂಘಕ್ಕೆ ಕಟ್ಟಲಾಗಿತ್ತು. ₹ 20 ಲಕ್ಷ ಬಾಕಿ ಇರುವುದಾಗಿ ಹೇಳಿದ್ದ ಆರೋಪಿಗಳು, ವಿದ್ಯಾರ್ಥಿ ಪ್ರವೇಶಕ್ಕೆ ಎನ್‌ಒಸಿ ಸಹ ನೀಡಿದ್ದರು. ಇದಕ್ಕೆ ಹಲವರು ಸಹಕರಿಸಿದ್ದರು. ಆಂತರಿಕ ತನಿಖೆ ನಡೆಸಿದಾಗ, ಆರೋಪಿಗಳು ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದು ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಿಮ್ಸ್ ವಿದ್ಯಾರ್ಥಿಗಳ ಶುಲ್ಕ ಅಕ್ರಮ ಬಗ್ಗೆ ಆರು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ’ ಎಂದೂ ಮೂಲಗಳು ತಿಳಿಸಿವೆ.

ಮೈಸೂರು ಅನಂತಸ್ವಾಮಿ ಅವರು ರಾಗ ಸಂಯೋಜಿಸಿರುವ ಧಾಟಿಯನ್ನು ನಾಡಗೀತೆಗೆ ಅಳವಡಿಸುವಂತೆ ಆಗ್ರಹಿಸಿ ಸುಗಮ ಸಂಗೀತ ಕ್ಷೇತ್ರದ ಪ್ರಮುಖರು ರವೀಂದ್ರ ಕ್ಷೇತ್ರದ ಆವರಣದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ನಾಡಗೀತೆ: ಧಾಟಿ ನಿಗದಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆಗೆ ಮೈಸೂರು ಅನಂತಸ್ವಾಮಿ ಅವರು ರಾಗ ಸಂಯೋಜಿಸಿರುವ ಧಾಟಿಯನ್ನು ಅಂತಿಮಗೊಳಿಸುವಂತೆ ಸುಗಮ ಸಂಗೀತ ಕಲಾವಿದರ ಬಳಗ ಆಗ್ರಹಿಸಿದೆ.

ಈ ಬಗ್ಗೆ ಕಲಾವಿದರು ಹಾಗೂ ಸುಗಮ ಕ್ಷೇತ್ರದ ಪ್ರಮುಖರು ಮಂಗಳವಾರ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಪ್ರತಿಭಟಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ ಅವರಿಗೆ ಮನವಿ ಸಲ್ಲಿಸಿದರು.

‘ನಾಡಗೀತೆಯ ಧಾಟಿ ನಿರ್ಣಯಕ್ಕೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಚಿಸಿದ ಸಮಿತಿಯು ಸರ್ಕಾರಕ್ಕೆ ಈಗಾಗಲೇ ವರದಿ ಸಲ್ಲಿಸಿದೆ. ಮೈಸೂರು ಅನಂತಸ್ವಾಮಿ ಅವರು ರಾಗ ಸಂಯೋಜಿಸಿರುವ ಧಾಟಿಯನ್ನೇ ನಾಡಗೀತೆಗೆ ಅಳವಡಿಸಿಕೊಳ್ಳಬೇಕೆಂದು ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ಮುಖ್ಯಮಂತ್ರಿ ಅವರು ಅ.2ರೊಳಗೆ ಅಧಿಕೃತಗೊಳಿಸಿ, ಆದೇಶ ಹೊರಡಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಈವರೆಗೂ ಆದೇಶ ಹೊರಡಿಸಿಲ್ಲ’ ಎಂದು ಕಲಾವಿದರು ಬೇಸರ ವ್ಯಕ್ತಪಡಿಸಿದರು.

‘ನವೆಂಬರ್ 1ರ ಒಳಗೆ ನಾಡಗೀತೆಯನ್ನು ಅಧಿಕೃತಗೊಳಿಸಿ, ಆದೇಶ ಹೊರಡಿಸಬೇಕು’ ಎಂದುಆಗ್ರಹಿಸಿದರು.

ಸುಗಮ ಸಂಗೀತ ಕ್ಷೇತ್ರದ ಪ್ರಮುಖರಾದ ಎಚ್.ಆರ್. ಲೀಲಾವತಿ, ಬಿ.ಕೆ. ಸುಮಿತ್ರಾ,ರತ್ನಮಾಲಾಪ್ರಕಾಶ್,ಮಾಲತಿ ಶರ್ಮಾ, ಎಸ್. ಬಾಲಿ, ಬಿ.ಎಸ್.ಮೀರಾ, ಟಿ. ರಾಜಾರಾಮ್, ಕಸ್ತೂರಿಶಂಕರ್, ಆನಂದ ಮಾದಲಗೆರೆ, ಗೀತಾ ಸತ್ಯಮೂರ್ತಿ, ಪಂಚಮ್ ಹಳಿಬಂಡಿಇದ್ದರು.

ಸೈಕಲ್ ಬಳಕೆದಾರರಿಗೆ ಉತ್ತೇಜನ ನೀಡಲು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ವತಿಯಿಂದ ಹಳೆ ವಿಮಾನ ನಿಲ್ದಾಣ ರಸ್ತೆಯ ಪೆಟ್ರೋಲ್ ಬಂಕ್‌ನಲ್ಲಿ 'ಸೈಕಲ್‌ಗೆ ಉಚಿತವಾಗಿ ಗಾಳಿ ತುಂಬುವ ಯಂತ್ರ'ಕ್ಕೆ ಮಂಗಳವಾರ ಚಾಲನೆ ನೀಡಲಾಯಿತು. ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಸೂರಿ ಸಾಯಿಕುಮಾರ್, ಮುಖ್ಯ ಪ್ರಧಾನ ವ್ಯವಸ್ಥಾಪಕ ಸಿ.ಕೆ.ನರಸಿಂಹ, ರಿಟೇಲ್ ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕ ರಾಜೇಂದ್ರ ಕುಮಾರ್, ಸಾಯಿಸುಧಾ, ಉಷಾದೇವಿ ಹಾಗೂ ಇತರರು ಇದ್ದರು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿಕೆ

ಶಿಕ್ಷಕರ ನೇಮಕಕ್ಕೆ ವರ್ಷಕ್ಕೆ 2 ಬಾರಿ ಸಿಇಟಿ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಶಿಕ್ಷಕರ ನೇಮಕಾತಿಗೆ ನಡೆಯುವ ಪರೀಕ್ಷೆಯಲ್ಲಿ ಅರ್ಜಿ ಕರೆದಷ್ಟು ಶಿಕ್ಷಕರು ಪಾಸಾಗುತ್ತಿಲ್ಲ. ಹೀಗಾಗಿ ವರ್ಷಕ್ಕೆ ಎರಡು ಬಾರಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸಲು ತೀರ್ಮಾನಿಸಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಮಂಗಳವಾರ ಇಲ್ಲಿಯ ಆದರ್ಶ ನಗರ ಸರ್ಕಾರಿ ಪ್ರೌಢಶಾಲೆ ಹಾಗೂ ಪಿ.ಯು. ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ಕಳೆದ ಬಾರಿ ನೇಮಕಾತಿ ಪರೀಕ್ಷೆ ನಡೆಸಿದಾಗ 3 ಸಾವಿರ ಶಿಕ್ಷಕರಷ್ಟೇ ಪಾಸಾದರು. ಇನ್ನೂ ಹೆಚ್ಚಿನ ಶಿಕ್ಷಕರ ಅಗತ್ಯವಿತ್ತು. ಇದನ್ನು ಗಮನದಲ್ಲಿರಿಸಿಕೊಂಡು ವರ್ಷದಲ್ಲಿ ಎರಡು ಬಾರಿ ಪರೀಕ್ಷೆ ನಡೆಸಲಾಗುವುದು. ಸದ್ಯದಲ್ಲೇ 5 ಸಾವಿರ ಶಿಕ್ಷಕರ ನೇಮಕಾತಿ ನಡೆಯಲಿದೆ. ಅಷ್ಟೂ ಹುದ್ದೆಗಳಿಗೆ ಅಗತ್ಯವಿರುವಷ್ಟು ಶಿಕ್ಷಕರು ಒಮ್ಮೆಲೇ ಪಾಸಾಗದಿದ್ದರೆ, ಅಷ್ಟು ಹುದ್ದೆಗಳು ಭರ್ತಿಯಾಗುವವರೆಗೆ ವಾರ್ಷಿಕ ಎರಡು ಬಾರಿ ಸಿಇಟಿ ನಡೆಯಲಿದೆ' ಎಂದರು.

'ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಗುಣಮಟ್ಟ ಕುಸಿಯುವ ಭೀತಿಯಿಂದ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಬೇರೆ ವಿಭಾಗಕ್ಕೆ ವರ್ಗಾವಣೆ ಮಾಡಿಲ್ಲ. ಮೂರು ತಿಂಗಳಲ್ಲಿ ಒಬ್ಬ ಶಿಕ್ಷಕರನ್ನೂ ಜನಪ್ರತಿನಿಧಿಗಳ ಶಿಫಾರಸು ಆಧರಿಸಿ ವರ್ಗಾವಣೆ ಮಾಡಿಲ್ಲ. ಮಾಡಿದ್ದರೆ ದಾಖಲೆ ತೋರಿಸಿ' ಎಂದು ಸವಾಲು ಹಾಕಿದರು.

ಕಲಬುರಗಿಯ ಸರ್ಕಾರಿ ಕನ್ಯಾ ಪ್ರೌಢಶಾಲೆಯಲ್ಲಿ ಸಚಿವ ಬಿ.ಸಿ. ನಾಗೇಶ್ ಅವರು ವಿದ್ಯಾರ್ಥಿನಿಯರೊಂದಿಗೆ ಮಧ್ಯಾಹ್ನದ ಬಿಸಿಯೂಟ ಸವಿದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್ ಇದ್ದರು

ಕೋವಿಡ್– 19: ಸಕ್ರಿಯ ಪ್ರಕರಣ 8,510ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 8,510ಕ್ಕೆ ಇಳಿಕೆ ಕಂಡಿದ್ದು, 17 ಜಿಲ್ಲೆಗಳಲ್ಲಿ 50ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ.

ಬಾಗಲಕೋಟೆ ಸೇರಿದಂತೆ 6 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತರೊಳಗೆ ಇದೆ. ಬೆಂಗಳೂರಿನಲ್ಲಿ ಗರಿಷ್ಠ (6,464) ಸಕ್ರಿಯ ಪ್ರಕರಣಗಳಿವೆ. ಒಂದು ದಿನದ ಅವಧಿಯಲ್ಲಿ 75 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 277 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.36 ರಷ್ಟು ವರದಿಯಾಗಿದೆ.

ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲಿ 169 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.86 ಲಕ್ಷ ದಾಟಿದೆ.

ಸೋಂಕಿತರಲ್ಲಿ 343 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.39 ಲಕ್ಷ ದಾಟಿದೆ.

7 ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರಿನಲ್ಲಿ ಮೂವರು, ಹಾಸನದಲ್ಲಿ ಇಬ್ಬರು, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 2.52 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,024ಕ್ಕೆ ಏರಿಕೆಯಾಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,51,013 ಒಟ್ಟು ಸೋಂಕಿತರು
12,50,844 ನಿನ್ನೆಯ ವಿವರ

6,464	12,28,295	16,253
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	169
ಗುಣಮುಖ	123
ಸಾವು	03

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	24.51 ಕೋಟಿ	3.42 ಕೋಟಿ
ಸಕ್ರಿಯ ಪ್ರಕರಣ	1.79 ಕೋಟಿ	1.56 ಲಕ್ಷ
ಗುಣಮುಖ	22.21 ಕೋಟಿ	3.35 ಕೋಟಿ
ಸಾವು	49.75 ಲಕ್ಷ	4.55 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.36 ಲಕ್ಷ	13,472
ಗುಣಮುಖ	4.25 ಲಕ್ಷ	13,984
ಸಾವು	5,315	584

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 48,811 ಅಮೆರಿಕ; 36,567 ಬ್ರಿಟನ್; 37,930 ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 93.88 ಅಮೆರಿಕ; 14.98 ಬ್ರಿಟನ್; 8.61 ರಷ್ಯಾ

* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ

ಎಲ್ಲಿ ಹೆಚ್ಚು ಸಾವು: 1.40 ಲಕ್ಷ ಮಹಾರಾಷ್ಟ್ರ; 36,048 ತಮಿಳುನಾಡು; 29,355 ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.05 ಮಹಾರಾಷ್ಟ್ರ; 49.29 ಕೇರಳ; 26.97 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ಬಂಗಾರಪ್ಪ ನೆನಪು: 100 ಚಾಲಕರಿಗೆ ವಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಂಗತ ಎಸ್. ಬಂಗಾರಪ್ಪ ಅವರ ಜನ್ಮದಿನ ಪ್ರಯುಕ್ತ ನೂರು ಮಂದಿ ವಾಹನ ಚಾಲಕರಿಗೆ ಬ್ರಹ್ಮ ಶ್ರೀ ನಾರಾಯಣಗುರು ಧರ್ಮಪರಿಪಾಲನಾ ಸಂಘ ಉಚಿತ ಜೀವ ವಿಮೆ ವಿತರಣೆ ಹಮ್ಮಿಕೊಂಡಿತ್ತು.

ಬಂಗಾರಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಉದ್ಯಮಿ, ಶ್ರೀ ನಾರಾಯಣಗುರು ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಗೋವಿಂದ ಬಾಬು ಪೂಜಾರಿ, 'ಬಂಗಾರಪ್ಪ ಕೇವಲ ನಮ್ಮ ಜನಾಂಗಕ್ಕೆ ಸೀಮಿತವಲ್ಲ. ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರು ಎಲ್ಲ ಜನಾಂಗದವರಿಗೆ ಉತ್ತಮ ಕಾರ್ಯಕ್ರಮಗಳನ್ನು ಜಾರಿ ತಂದಿದ್ದಾರೆ' ಎಂದರು.

ಆಶೀರ್ವಚನ ನೀಡಿದ ಉಡುಪಿಯ ಶಂಕರಪುರದ ಈಶ್ವರಾನಂದ ಪುರಿ ಸ್ವಾಮೀಜಿ, 'ನನ್ನ ಬಾಲ್ಯದ ದಿನಗಳಲ್ಲಿ ಬಂಗಾರಪ್ಪ ಅವರ ಕಾರ್ಯಗಳನ್ನು ದೂರದಿಂದ ಗಮನಿಸಿದೆ. ಅವರ ಚುನಾವಣಾ ಪ್ರಚಾರ ಭಿತ್ತಿಪತ್ರಗಳ ಟೋಪಿಗಳನ್ನು ಹಾಕಿಕೊಂಡು ಆಟವಾಡಿದ್ದೆವು. ಅವರ ಜನ್ಮದಿನದಂದು ವಾಹನ ಚಾಲಕರಿಗೆ ವಿಮೆ ವಿತರಿಸುವ ಭಾಗ್ಯ ದೊರೆತಿದೆ' ಎಂದರು.

'ಇತೀಚಿನ ದಿನಗಳಲ್ಲಿ ಮತಾಂತರ ನಡೆಯುತ್ತಿದೆ. ಹಿಂದೂ ಹೆಣ್ಣು ಮಕ್ಕಳು ಇಂಥ ಕೃತ್ಯಗಳಿಗೆ ಬಲಿಯಾಗುತ್ತಿರುವುದು ವಿಷಾದನೀಯ. ಹಿಂದೂ ಧರ್ಮ ಉಳಿಸಲು ಎಲ್ಲರೂ ಶ್ರಮಿಸಬೇಕಿದೆ. ಸಂಘಟನೆ ನಾರಾಯಣ ಗುರುಗಳ ತತ್ವ, ಸಿದ್ಧಾಂತ ಪ್ರಚುರಪಡಿಸಬೇಕು' ಎಂದರು.

ಆರ್ಯ ಈಡಿಗ ರಾಜ್ಯ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಮಾತನಾಡಿ, 'ಆಶ್ರಯ ಯೋಜನೆಯನ್ನು ಬಂಗಾರಪ್ಪ ಅವರು ಜಾರಿಗೆ ತಂದಿದ್ದರಿಂದ ಲಕ್ಷಾಂತರ ಬಡವರು ಮನೆ ಹೊಂದುವಂತಾಗಿದೆ' ಎಂದು ತಿಳಿಸಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಸೈದಪ್ಪ ಗುತ್ತೇದಾರ್ ಮಾತನಾಡಿ, 'ಬಂಗಾರಪ್ಪ ಅವರು ಜನಮನಗೆದ್ದ ಅಪರೂಪದ ನಾಯಕ. ಕೊರೊನಾ ಸಂದರ್ಭದಲ್ಲಿ ಸಾಕಷ್ಟು ನೋವು ಅನುಭವಿಸಿದ ನೂರು ವಾಹನ ಚಾಲಕರಿಗೆ ಬಂಗಾರಪ್ಪ ಅವರ ನೆನಪಿಗಾಗಿ ಉಚಿತವಾಗಿ ಜೀವವಿಮಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಪ್ರೀಮಿಯಂ ಮೊತ್ತ ಸಂಘ ಭರಿಸಲಿದೆ' ಎಂದರು.

ಸಂಘದ ಉಪಾಧ್ಯಕ್ಷ ಪ್ರಕಾಶ್ ಕೊಟ್ಯಾನ್, ಖಜಾಂಚಿ ಲೋಹಿತ್ ನಾಯಕ, ರವಿದಾಸ್ ಇದ್ದರು.

ಬಂಗಾರಪ್ಪ ಅವರ ಭಾವಚಿತ್ರಕ್ಕೆ ಗೋವಿಂದ ಬಾಬು ಪೂಜಾರಿ, ಈಶ್ವರಾನಂದ ಪುರಿ ಸ್ವಾಮೀಜಿ, ಚಂದ್ರಶೇಖರ್, ಸೈದಪ್ಪ ಗುತ್ತೇದಾರ್ ಪುಷ್ಪಾರ್ಚನೆ ಮಾಡಿದರು

ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆ ಕಡ್ಡಾಯ

ಮರುಪರಿಶೀಲನೆಗೆ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಭಾಷೆ ಕಲಿಕಾ ಕಾಯ್ದೆ ಮರುಪರಿಶೀಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಕಾಲಾವಕಾಶ ನೀಡಿದೆ. ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸಲು ಸಾಧ್ಯವಿಲ್ಲ ಎಂದು ಮೌಖಿಕವಾಗಿ ಅಭಿಪ್ರಾಯಪಟ್ಟಿದೆ.

ಬೆಂಗಳೂರಿನ ಸಂಸ್ಕೃತ ಭಾರತಿ (ಕರ್ನಾಟಕ) ಟ್ರಸ್ಟ್ ಮತ್ತು ಸಂಸ್ಕೃತ ಪ್ರಚಾರದಲ್ಲಿ ತೊಡಗಿರುವ ಇತರ ಮೂರು ಸಂಸ್ಥೆಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ತಿ ಮತ್ತು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ವಿದ್ಯಾರ್ಥಿಯ ಆಯ್ಕೆಗೆ ನಿರ್ಬಂಧ ಹೇರುವುದಿಲ್ಲ. ಆದ್ದರಿಂದ ಕನ್ನಡ ಕಲಿಕೆ ಕಡ್ಡಾಯದ ಬಗ್ಗೆ ರಾಜ್ಯ ಸರ್ಕಾರ 2021ರ ಆ. 7 ಮತ್ತು ಸೆ.15ರಂದು ಹೊರಡಿಸಿರುವ ಆದೇಶಗಳು ಸಿಂಧು ಅಲ್ಲ' ಅರ್ಜಿದಾರರು ವಾದಿಸಿದ್ದಾರೆ.

'ಸರ್ಕಾರ ಈ ವಿಷಯವನ್ನು ಮರುಪರಿಶೀಲಿಸಲಿ' ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ನ.10ಕ್ಕೆ ಮುಂದೂಡಿತು. 'ಹೊರ ರಾಜ್ಯದಿಂದ ಬಂದಿರುವ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆಯನ್ನು ಸರ್ಕಾರ ಹೇಗೆ ಕಡ್ಡಾಯಗೊಳಿಸಲು ಸಾಧ್ಯ' ಎಂದು ಮೌಖಿಕವಾಗಿ ಪ್ರಶ್ನಿಸಿತು.

'ಕನ್ನಡವನ್ನು ಅವರು ಶಾಸ್ತ್ರೀಯವಾಗಿ ಕಲಿಯಬೇಕಿಲ್ಲ. ಉದ್ಯೋಗ ದೃಷ್ಟಿಯಿಂದ ಕಲಿತರೆ ಸಾಕು' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ ತಿಳಿಸಿದರು.

ಅರ್ಜಿದಾರರ ಪರ ಹಾಜರಾಗಿದ್ದ ವಕೀಲ ಎಸ್.ಎಸ್. ನಾಗಾನಂದ ಅವರು, 'ಈಗಾಗಲೇ ಶೈಕ್ಷಣಿಕ ವರ್ಷ ಆರಂಭವಾಗಿದ್ದು, ವಿದ್ಯಾರ್ಥಿಗಳ ಆಯ್ಕೆಗೆ ಅವಕಾಶ ನೀಡಬೇಕಿದೆ' ಎಂದರು. 'ಎಲ್ಲಾ ಪದವಿ ಪೂರ್ವ ಕೋರ್ಸ್‌ಗಳಿಗೆ ಕನ್ನಡ ಕಲಿಕೆ ಕಡ್ಡಾಯಗೊಳಿಸಿ ಹೊರಡಿಸಿರುವ ಆದೇಶವು ಅಂದಾಜು 1,32,300 ವಿದ್ಯಾರ್ಥಿಗಳು ಮತ್ತು 4 ಸಾವಿರ ಶಿಕ್ಷಕರ ಮೇಲೆ ಪರಿಣಾಮ ಬೀರುತ್ತಿದೆ. 600ಕ್ಕೂ ಹೆಚ್ಚು ಸಂಸ್ಕೃತ ಶಿಕ್ಷಕರು, 3 ಸಾವಿರಕ್ಕೂ ಹೆಚ್ಚು ಹಿಂದಿ, 300ಕ್ಕೂ ಹೆಚ್ಚು ಉರ್ದು ಮತ್ತು ಇತರ ಭಾಷೆಯ 100 ಶಿಕ್ಷಕರಿದ್ದಾರೆ' ಎಂದು ಅರ್ಜಿದಾರರು ವಿವರಿಸಿದ್ದಾರೆ.

ಬೆಂಗಳೂರು ವಿ.ವಿ: ಎನ್‌ಇಪಿ ತರಬೇತಿ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ತನ್ನ ಸಂಯೋಜಿತ ಕಾಲೇಜುಗಳಿಗೆ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕುರಿತು ಇದೇ 28 ಮತ್ತು 29ರಂದು ಕಾರ್ಯಾಗಾರ ಹಮ್ಮಿಕೊಂಡಿದೆ.

'ಪ್ರಸಕ್ತ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯವು ಎನ್‌ಇಪಿ ಅಡಿ ಹೊಸ ಪಠ್ಯಕ್ರಮ ಅಳವಡಿಸಿಕೊಳ್ಳಲಿದೆ. ಹೀಗಾಗಿ, ಎಲ್ಲ ಕಾಲೇಜುಗಳ ಪ್ರಾಂಶುಪಾಲರಿಗೆ ತರಬೇತಿ ನೀಡಲು ಎರಡೂ ದಿನ ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ವಿವಿಧ ಬೋಧನಾ ವಿಷಯಗಳ ಕುರಿತು ತರಬೇತಿ ನಡೆಯಲಿದೆ' ಎಂದು ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ತಿಳಿಸಿದ್ದಾರೆ.

'28ರಂದು ಬೆಳಿಗ್ಗೆ 10 ಗಂಟೆಗೆ ಕಾರ್ಯಾಗಾರದ ಉದ್ಘಾಟನೆ ನಡೆಯಲಿದೆ. 29ರಂದು ದಿಶಾ ಭಾರತ್ ಅಕಾಡೆಮಿ ಆಫ್ ಕ್ರಿಯೇಟಿವ್ ಟೀಚಿಂಗ್, ಗೈಡಿಂಗ್ ಕೌನ್ಸಿಲ್‌ನ ಅಧ್ಯಕ್ಷ ಡಾ. ಗುರುರಾಜ ಕರಜಗಿ ಪ್ರಧಾನ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಪರಿಷತ್‌ನ ಕಾರ್ಯಕಾರಿ ನಿರ್ದೇಶಕ ಪ್ರೊ. ಗೋಪಾಲಕೃಷ್ಣ ಜೋಷಿ, ದಿಶಾ ಭಾರತ್‌ನ ಡಾ. ಸುಷ್ಮಾ ಭಾವ್ಲೆ, ಬೆಂಗಳೂರು ಐಐಎಂನ ಪ್ರೊ. ಬಿ. ಮಹದೇವನ್ ಅವರು ಎನ್‌ಇಪಿ ಕುರಿತು ಮಾತನಾಡಲಿದ್ದಾರೆ. ಎಲ್ಲ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಪ್ರಾಧ್ಯಾಪಕರು ತರಬೇತಿಯ ಪ್ರಯೋಜನ ಪಡೆದುಕೊಳ್ಳಬೇಕು' ಎಂದೂ ಅವರು ಮನವಿ ಮಾಡಿದ್ದಾರೆ.

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಳಿ – ಸಮುದಾಯ ನಿರ್ಮಾಣದತ್ತ
ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ,
ಕರ್ನಾಟಕ ಗೃಹ ಮಂಡಳಿ, ಸೂರ್ಯನಗರ 3ನೇ ಹಂತ, ಬೆಂಗಳೂರು
ಸಂಖ್ಯೆ:ಕಗೃಮ/ಕಾಅ/ಸಕಂಅ/ಸೂನ 3ನೇಹಂತ/ಬೆಂ/849/2021–22 ದಿನಾಂಕ: 22.10.2021

ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಜಿಗಳ, ಗಿಡ್ಡೆನಹಳ್ಳಿ, ಯಡವನಹಳ್ಳಿ ಮತ್ತು ಆದಿಗೊಂಡನಹಳ್ಳಿ ಗ್ರಾಮದಲ್ಲಿ ಬರುವ ಸೂರ್ಯನಗರ 3ನೇ ಹಂತ ಬಡಾವಣೆಯಲ್ಲಿ LIG ವರ್ಗದ ನಿವೇಶನ ಸಂಖ್ಯೆ: 990/B2 ಹಂಚಿಕೆದಾರರಾದ ಶ್ರೀ ಮಹಾಗಾಂವಕರ್. ಬಿ.ಎಸ್ ರವರು ದಿನಾಂಕ: 24/02/2017ರಂದು ಮರಣ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನಿವೇಶನವನ್ನು ದಿವಂಗತರ ವಾರಸುದಾರರಾದ ಶ್ರೀಮತಿ ವರ್ಷಾ. ಎಸ್.ಎಮ್. ಇವರ ಹೆಸರಿಗೆ ವರ್ಗಾವಣೆ ಮಾಡಲು ಪರಿಗಣಿಸಿದ್ದು, ಈ ಸಂಬಂಧ ಯಾವುದೇ ತಕರಾರು/ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆಯು ಪ್ರಕಟಣೆಗೊಂಡ ದಿನಾಂಕದಿಂದ 15 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ತಕರಾರು ಅರ್ಜಿಯನ್ನು **ಕಂದಾಯ ಅಧಿಕಾರಿಗಳು, ಸೂರ್ಯನಗರ 3ನೇ ಹಂತ ನಂ. 001, ಹೆಚ್‌ಸಿಬಿ 3, ಹೆಚ್‌ಐಜಿ ಬಹುಮಹಡಿ ಕಟ್ಟಡ, ಸೂರ್ಯನಗರ 1ನೇ ಹಂತ, ಆನೇಕಲ್ ರಸ್ತೆ, ಚಂದಾಪುರ, ಬೆಂಗಳೂರು–560099** ಇಲ್ಲಿರುವ ಕಛೇರಿಯಲ್ಲಿ ಸಲ್ಲಿಸಬಹುದಾಗಿದೆ. ನಿಗದಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರ ವಾರಸುದಾರರಾದ ಶ್ರೀಮತಿ ವರ್ಷಾ. ಎಸ್.ಎಮ್ ರವರಿಗೆ ವರ್ಗಾವಣೆ ಮಾಡಿಕೊಡಲಾಗುವುದೆಂದು ಹಾಗೂ ನಂತರ ಬರುವ ಯಾವುದೇ ತಕರಾರು / ಮನವಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ತಮ್ಮ ವಿಶ್ವಾಸಿ
ಕಂದಾಯ ಅಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ,
ಸೂರ್ಯನಗರ 3ನೇ ಹಂತ, ಬೆಂಗಳೂರು

ನೈಋತ್ಯ ರೈಲ್ವೆ
Azadi Ka Amrit Mahotsav
ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/43/2021 ದಿನಾಂಕ : 21–10–2021
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರಿನಲ್ಲಿ ಮತ್ತು ಸುತ್ತಮುತ್ತಲಿನಲ್ಲಿ ವಿವಿಧ ಕೆಲಸಗಳಿಗಾಗಿ ವಲಯ ಗುತ್ತಿಗೆ. (ಎಸ್‌ಬಿಸಿ–ಡಬ್ಲ್ಯುಎಫ್‌ಡಿ/04)	ರೂ. 1,74,33,981/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 12–11–2021 ರಂದು 11.00 ಗಂಟೆಯವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು, ಬೆಂಗಳೂರು ದಂಡು
ಪಿಯುಬಿ/246/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22
S.W.Railways SWRRLY SWRRLY

'ಆಕ್ಷೇಪಾರ್ಹ' ಜಾಹೀರಾತು ಹಿಂಪಡೆದ ಡಾಬರ್

ನವದೆಹಲಿ: ಸಲಿಂಗಿ ದಂಪತಿ ಕರ್ವಾ ಚೌತ್ ಆಚರಣೆಯಲ್ಲಿ ತೊಡಗಿದ್ದ ದೃಶ್ಯಗಳು ಇದ್ದ ಜಾಹೀರಾತನ್ನು ಎಫ್‌ಎಂಸಿಜಿ ವಲಯದ ಪ್ರಮುಖ ಕಂಪನಿಯಾದ ಡಾಬರ್ ಹಿಂದಕ್ಕೆ ಪಡೆದಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಬಿಜೆಪಿ ನಾಯಕರೊಬ್ಬರಿಂದ ವಿರೋಧ ವ್ಯಕ್ತವಾದ ನಂತರ ಕಂಪನಿ ಈ ತೀರ್ಮಾನ ಕೈಗೊಂಡಿದೆ. ಕಂಪನಿಯು ಈ ಜಾಹೀರಾತಿಗಾಗಿ ಬೇಷರತ್ ಕ್ಷಮೆ ಯಾಚಿಸಿದೆ.

ಫ್ಯಾಬ್ ಇಂಡಿಯಾ ಕಂಪನಿಯು ತನ್ನದೊಂದು ಜಾಹೀರಾತನ್ನು ಹಿಂದಕ್ಕೆ ಪಡೆದು ಕೆಲವೇ ದಿನಗಳಲ್ಲಿ ಈ ಪ್ರಸಂಗ ನಡೆದಿದೆ. ಈ ಜಾಹೀರಾತಿನಲ್ಲಿ ಇಬ್ಬರು ಯುವತಿಯರು ತಮ್ಮ ಮೊದಲ ಕರ್ವಾ ಚೌತ್ ಆಚರಣೆಗೆ ಸಿದ್ಧರಾಗುವ ಚಿತ್ರಣ ಇತ್ತು. ಯುವತಿಯರ ಪೈಕಿ ಒಬ್ಬಳು, ಫೆಮ್ ಕ್ರೀಮ್‌ಅನ್ನು ಇನ್ನೊಬ್ಬಳ ಮುಖಕ್ಕೆ ಹಚ್ಚುತ್ತಾಳೆ. ಇಬ್ಬರೂ ಕರ್ವಾ ಚೌತ್ ಆಚರಣೆಯ ಮಹತ್ವದ ಬಗ್ಗೆ ಚರ್ಚಿಸುತ್ತಾರೆ. ಆಗ ಅಲ್ಲಿ ಇನ್ನೊಬ್ಬಳು ಮಹಿಳೆ ಬಂದು, ಇಬ್ಬರಿಗೂ ಸೀರೆಯನ್ನು ಉಡುಗೊರೆಯಾಗಿ ನೀಡುತ್ತಾಳೆ. ನಂತರದಲ್ಲಿ ಇಬ್ಬರೂ ಯುವತಿಯರು ಗಂಡ–ಹೆಂಡತಿ ರೀತಿಯಲ್ಲಿ ಪರಸ್ಪರ ಎದುರಾಗಿ ಕುಳಿತುಕೊಂಡಿರುವ ದೃಶ್ಯಗಳೂ ಇದ್ದವು.

'ಆಕ್ಷೇಪಾರ್ಹ' ಜಾಹೀರಾತನ್ನು ಹಿಂದಕ್ಕೆ ಪಡೆಯುವಂತೆ ಡಾಬರ್ ಕಂಪನಿಗೆ ಹೇಳುವಂತೆ ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ ಸೂಚಿಸಿರುವುದಾಗಿ ಮಧ್ಯಪ್ರದೇಶ ಗೃಹ ಸಚಿವ ನರೋತ್ತಮ ಮಿಶ್ರ ಅವರು ಸೋಮವಾರ ಹೇಳಿದ್ದರು.

ಎಸಿಬಿ ದಾಳಿ

ಬಿಡದಿ: ಕಾರ್ಮಿಕ ಇಲಾಖೆಯ ಉಪ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿರುವ ಎ.ಕೆ ಉಮೇಶ್ ಅವರ ಹುಟ್ಟೂರು ಅವರೆಗೆರೆ ಗ್ರಾಮದಲ್ಲಿರುವ ಮನೆಯ ಮೇಲೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿ ದಾಖಲೆಗಳನ್ನು ಪರಿಶೀಲಿಸಿದರು.

ಬೆಂಗಳೂರು, ಬಿಡದಿ ಸೇರಿದಂತೆ ಉಮೇಶ್ ಅವರಿಗೆ ಸೇರಿದ ಆಸ್ತಿಗಳು ಇರುವ ಕಡೆಗಳಲ್ಲಿ ಅಧಿಕಾರಿಗಳು ಏಕಕಾಲಕ್ಕೆ ದಾಳಿ ನಡೆಸಿದರು. ಬೆಳಿಗ್ಗೆ 8.30ರ ಸುಮಾರಿಗೆ ಅವರೆಗೆರೆ ಧಾವಿಸಿದ ಅಧಿಕಾರಿಗಳ ತಂಡವು ಮಧ್ಯಾಹ್ನದವರೆಗೂ ಮನೆಯಲ್ಲಿನ ದಾಖಲೆಗಳನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿತು.

'ಅಕ್ಷರ ಸಂಗಾತ' ಕಥಾ ಸ್ಪರ್ಧೆ ಬಹುಮಾನ ಪ್ರಕಟ

ಧಾರವಾಡ: 'ಅಕ್ಷರ ಸಂಗಾತ' ತ್ರೈಮಾಸಿಕ ಸಾಹಿತ್ಯ ಪತ್ರಿಕೆ ಆಯೋಜಿಸಿದ್ದ 'ಯುವ ಕಥಾ ಸ್ಪರ್ಧೆ'ಯಲ್ಲಿ ಕಥಾ ಬಹುಮಾನವನ್ನು ಇಬ್ಬರು ಸಮನಾಗಿ ಹಂಚಿಕೊಂಡಿದ್ದು, ಕೊಪ್ಪಳ ಜಿಲ್ಲೆ ಕಾರಟಗಿಯ ಸುವರ್ಣ ಚೆಳ್ಳೂರು ಅವರ 'ಕಂಬದ ಹಕ್ಕಿ' ಮತ್ತು ಬೆಂಗಳೂರಿನ ಜಿ. ಪ್ರವೀಣ ಕುಮಾರ್ ಅವರ 'ಗುಟ್ಟು' ಪಡೆದುಕೊಂಡಿವೆ.

ರಾಯಚೂರು ಜಿಲ್ಲೆ ಸಿಂಧನೂರಿನ ನಾಗರಾಜ ಕೋರಿ ಅವರ 'ಮಲ್ಲಯ್ಯನ ಮೈಕು', ದಕ್ಷಿಣ ಕನ್ನಡದ ಬೆಳ್ತಂಗಡಿಯ ಝುಬೈರ್ ಅಹ್ಮದ್ ಪರಪ್ಪು ಅವರ 'ಒಂದು ತಿರುವಿನ ಕರಾಮತ್ತು' ಒಪ್ಪಿತ ಕತೆಗಳಾಗಿ ಆಯ್ಕೆಯಾಗಿವೆ.

ಜಿ. ಪ್ರವೀಣ ಕುಮಾರ್

ಸುವರ್ಣಾ ಚೆಳ್ಳೂರ

ನಾಗರಾಜ ಕೋರಿ

ಝುಬೈರ್ ಅಹ್ಮದ್ ಪರಪ್ಪು

ನಾಲ್ಕೂ ಕಥೆಗಳಿಗೂ ತಲಾ ₹ 5 ಸಾವಿರ ನಗದು ಬಹುಮಾನ ನೀಡಲಾಗುತ್ತಿದೆ. ಕಥೆಗಳು 'ಅಕ್ಷರ ಸಂಗಾತ' ನವೆಂಬರ್ ಸಂಚಿಕೆಯಲ್ಲಿ ಪ್ರಕಟಗೊಳ್ಳಲಿವೆ.

'2022ರ ಜನವರಿಯಲ್ಲಿ ಧಾರವಾಡದಲ್ಲಿ ನಡೆಯುವ ಪತ್ರಿಕೆಯ 4ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು. ಹಿರಿಯ ಕಥೆಗಾರರಾದ ಬಾನು ಮುಷ್ತಾಕ್ ಹಾಗೂ ಜಿ.ವಿ. ಆನಂದಮೂರ್ತಿ ತೀರ್ಪುಗಾರರಾಗಿದ್ದರು' ಎಂದು ಪತ್ರಿಕೆ ಸಂಪಾದಕ ಟಿ.ಎಸ್. ಗೊರವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಜಾನಪದ ಶಿಬಿರದ ಸಮಾರೋಪ: ಅತಿಥಿಗಳು–ಶಾಸಕ ಆರ್.ಮಂಜುನಾಥ್, ಜಾನಪದ ಗಾಯಕರಾದ ಜೋಗಿಲ ಸಿದ್ದರಾಜು ಹಾಗೂ ರಾಮಚಂದ್ರ ಕುಣಿಗಲ್, ಗೌರಮ್ಮ, ಆಯೋಜನೆ–ಕಲಾಸಂಗಮ, ಸ್ಥಳ–ವಿದ್ಯಾಸಂಸ್ಕೃತಿ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆ, ಹೆಗ್ಗನಹಳ್ಳಿ, ಬೆಳಿಗ್ಗೆ 11.30

ಮಂಜುನಾಥೇಶ್ವರ ಸ್ವಾಮಿ ದೇವಾಲಯದ ಸುಸಜ್ಜಿತ ಸಭಾಂಗಣ ಹಾಗೂ ಸಮುದಾಯ ಭವನದ ಉದ್ಘಾಟನೆ: ಸ್ಥಳ–ವಿದ್ಯಾಗಣಪತಿ ದೇವಾಲಯದ ಆವರಣ, ಅಂಚೆ ಕಚೇರಿ ಹತ್ತಿರ, ವಿದ್ಯಾರಣ್ಯಪುರ, ಬೆಳಿಗ್ಗೆ 10

ಜಾಗೃತಿ ಚರ್ಚೆ ಮತ್ತು ಸ್ತನ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ: ಅತಿಥಿಗಳು–ಶಿವಯೋಗಿ ಸಿ.ಕಳಸದ್, ಟಿ.ವೆಂಕಟೇಶ್, ಗೌರಾಂಬ, ಡಾ.ಆರ್.ಪ್ರೇಮಿತಾ, ಆಯೋಜನೆ–ಕೆಎಸ್‌ಆರ್‌ಟಿಸಿ ಹಾಗೂ ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ, ಸ್ಥಳ–ಕೆಎಸ್‌ಆರ್‌ಟಿಸಿ ಡಿಪೊ, ಶಾಂತಿನಗರ, ಬೆಳಿಗ್ಗೆ 11

'ಕಲಿಯುಗ–2.0': ಪರಿಸರ ಸಂರಕ್ಷಣೆಯ ಕುರಿತಾದ ಚಿತ್ರಕಲಾ ಪ್ರದರ್ಶನ ಮತ್ತು ಮಾರಾಟ: ಅತಿಥಿಗಳು–ನಟ ಶಿವರಾಜ್ ಕುಮಾರ್, ಸಂಸದ ತೇಜಸ್ವಿ ಸೂರ್ಯ, ಕಲ್ಯಾಣ್ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಕಲ್ಯಾಣರಾಮನ್, ಚೆನ್ರಾಜ್ ಜೈನ್, ಸ್ಥಳ–ಚಿತ್ರಕಲಾ ಪರಿಷತ್ತು, ಸಂಜೆ 5



ಶಿವರಾಜ್ ಕುಮಾರ್

'ರಾಷ್ಟ್ರೀಯ ಶಿಕ್ಷಣ ನೀತಿ' ಕಾರ್ಯಾಗಾರ, ಪದವಿ ಕೋರ್ಸ್‌ಗಳ ಉದ್ಘಾಟನೆ: ಅತಿಥಿ–ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಅಧ್ಯಕ್ಷತೆ–ಎನ್.ಆರ್.ಪಂಡಿತಾರಾಧ್ಯ, ಭಾಗವಹಿಸುವವರು–ವೂಡೇ ಪಿ.ಕೃಷ್ಣ, ಕೆ.ಎನ್.ಗೋದಾಮಣಿ, ಆಯೋಜನೆ, ಸ್ಥಳ–ಶೇಷಾದ್ರಿಪುರ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ ಸಂಜೆ ಪದವಿ ಕಾಲೇಜು, ಸಂಜೆ 6

ಸಾಂಸ್ಕೃತಿಕ ಕಾರ್ಯಕ್ರಮಗಳು

ಭರತನಾಟ್ಯ ನೃತ್ಯ ರೂಪಕ: ಆಯೋಜನೆ–ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ–ಕರ್ನಾಟಕ ವಿದ್ಯುತ್ ಕಾರ್ಖಾನೆಯ ಕನ್ನಡ ಸಂಘ, ವಿಜಯನಗರ, ಮಧ್ಯಾಹ್ನ 2

ಸ್ವತಂತ್ರ ಸಮರ ಕರುನಾಡು ಅಮರ ನಾಟಕ ಪ್ರದರ್ಶನ: ಆಯೋಜನೆ–ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ–ಅಶ್ವಥ್ ಕಲಾ ಸೌಧ, ಎನ್.ಆರ್. ಕಾಲೊನಿ, ಸಂಜೆ 5.30

'ಮೂಕನ ಮಕ್ಕಳು' ನಾಟಕ ಪ್ರದರ್ಶನ: ಅಧ್ಯಕ್ಷತೆ–ವಸತಿ ಸಚಿವ ವಿ.ಸೋಮಣ್ಣ, ಅತಿಥಿಗಳು–ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಶೈಲಜಾ ಸೋಮಣ್ಣ, ಸಿ.ದಾಸೇಗೌಡ, ಆಯೋಜನೆ–ರಂಗಾಯಣ ಹಾಗೂ ವಿ.ಸೋಮಣ್ಣ ಪ್ರತಿಷ್ಠಾನ, ಸ್ಥಳ–ಜ್ಞಾನಸೌಧ, ವಿವೇಕಾನಂದ ವಾರ್ಡ್, ಬಿಡಿಎ ಬಡಾವಣೆ, ಮೂಡಲಪಾಳ್ಯ, ಸಂಜೆ 6

ಕನ್ನಡ ಕಲಿಯೋಣ ಬಾ ನಾಟಕ ಪ್ರದರ್ಶನ: ಆಯೋಜನೆ–ದಾವಣಗೆರೆ ವೃತಿ ರಂಗಾಯಣ, ಸ್ಥಳ–ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯ, ಸಂಜೆ 6.30

ಕತ್ತಲೆಯ ಕೊರೊನಾ ನಾಟಕ ಪ್ರದರ್ಶನ: ಆಯೋಜನೆ–ಧಾರವಾಡ ರಂಗಾಯಣ, ಸ್ಥಳ–ಕುವೆಂಪು ಸಭಾಂಗಣ, ಮಲ್ಲೇಶ್ವರ, ಸಂಜೆ 6.30

CCRUM

CLINICAL RESEARCH UNIT (UNANI)

NATIONAL INSTITUTE OF UNANI MEDICINE CAMPUS
(An autonomous organization under the Central Council for Research in Unani Medicine, Ministry of Ayush, Government of India, New Delhi)
KOTTIGEPALYA, MAGADI MAIN ROAD, BENGALURU – 560 091
Advertisement No.1/2021

Walk-in-Interview

Eligible candidates are invited for a walk-in-interview for engagement of ONE RESEARCH ASSOCIATE (UNANI) on purely contractual basis as required for SCSP Programme. Candidates should report on the date and time indicated below for Walk-in-interview with filled-in application form (to be provided on spot) along with original testimonials, one set of self attested copies thereof and two recent passport size photographs.

Walk-in-interview on 08-11-2021 at 10.00 a.m.

S.No.	Details	Research Associate (RA)	Senior Research Fellow (SRF)	Junior Research Fellow (JRF)
1.	Name and number of Post	RA - One (if suitable candidate not turned up suitable SRF OR JRF (Unani) will be selected as per criteria given below		
2.	AGE	Not exceeding 40 years	Not exceeding 35 years	Not exceeding 35 years
3.	TENURE	Initially for six months	Initially for six months	Initially for six months
4.	Consolidated Pay	Rs.47,000/- plus HRA	Rs.35,000/- plus HRA	Rs.31,000/- plus HRA
5.	Place of Posting	SCSP PROGRAMME, CRU BENGALURU (KARNATAKA)		
6.	Educational qualifications & experiences	1.Postgraduate Degree in Unani system of Medicine from a recognized statutory board/University included in the 2nd schedule of CCIM act 1970 2.Enrolment on the Central Register of CCIM or State register of AYUSH Desirable: Original Research Publication	BUMS from a recognized Statutory Board/University included in the 2nd schedule of the CCIM Act 1970 with two years experience as JRF/equivalent post in any project or worked under any project of Council or Ministry of AYUSH	BUMS from a recognized Statutory Board/University included in the 2nd schedule of the CCIM Act 1970

Note: NET Qualified Candidates will be given preference.
For details & Application log on : ccrum.res.in

Sd/-
DEPUTY DIRECTOR

‘ರಾಜಕೀಯದಲ್ಲಿ ಕೀಳು ಭಾಷೆಯ ಬಳಕೆ’ ಕುರಿತು ಚರ್ಚೆ

‘ಮೊನಚು ಇರಲಿ: ಸಭ್ಯತೆ ಗೆರೆ ದಾಟದಿರಲಿ’

ಬೆಂಗಳೂರು: ‘ಟೀಕೆಗಳು–ಆರೋಪಗಳು ವ್ಯಂಗ್ಯ, ಹಾಸ್ಯ, ಕುಟುಕುವ ರೀತಿಯಲ್ಲಿ ಇರಲೇಬೇಕು. ಹಾಗೆಂದು, ನಾಲಿಗೆ ಹರಿಬಿಡುವುದು ಆಘಾತಕಾರಿ ಸಂಗತಿ’ ಎಂದು ಬಿಜೆಪಿ ಮುಖಂಡ ಡಿ.ಎಚ್. ಶಂಕರಮೂರ್ತಿ ಅಭಿಪ್ರಾಯಪಟ್ಟರೆ, ‘ಮಾತಿನಲ್ಲಿ ಮೊನಚು, ಪಂಚ್ ಇರಬೇಕು. ವಿಷಯಾಧಾರಿತ, ಜನಪರ, ಪಕ್ಷದ ಹಿತ ಗಮನದಲ್ಲಿಟ್ಟು ನಾಯಕರು ಮಾತನಾಡಬೇಕು’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಸಹ ಅಧ್ಯಕ್ಷ ವಿ.ಆರ್. ಸುದರ್ಶನ್ ದನಿಗೂಡಿಸಿದರು.

‘ಬಲಪಂಥೀಯ ರಾಜಕೀಯ ಮುಖ್ಯವಾಹಿನಿಗೆ ಬಂದ ಬಳಿಕ ಅಸಂವಿಧಾನಿಕ, ಅಸಂಬದ್ಧ ಪದ ಬಳಕೆ ಹೆಚ್ಚಿದೆ’ ಎಂದು ಕಲಬುರಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಮೀನಾಕ್ಷಿ ಬಾಳಿ ಹೇಳಿದರು.

‘ಪ್ರಜಾವಾಣಿ’ ಮಂಗಳವಾರ ಏರ್ಪಡಿಸಿದ್ದ ‘ರಾಜಕೀಯದಲ್ಲಿ ಕೀಳು ಭಾಷೆಯ ಬಳಕೆ’ ವಿಷಯದ ಸಂವಾದದಲ್ಲಿ ಈ ಮೂವರ ಅಭಿಪ್ರಾಯಗಳ ಆಯ್ದ ಅಂಶ ಇಲ್ಲಿದೆ.

ಪ್ರಜಾವಾಣಿ ಸಂವಾದ

ಪೂರ್ಣ ಸಂವಾದ ವೀಕ್ಷಿಸಲು www.facebook.com/prajavani.net

‘ಆಯಾ ಪಕ್ಷಗಳೇ ನಿಯಂತ್ರಿಸಬೇಕು’



ಭಾಷೆಯ ಬಳಕೆ ಮನಸ್ಸಿಗೆ ನೋವಾಗುವಷ್ಟು ಅಧಃಪತನವಾಗಿದೆ. ವಿರೋಧ, ಕೋಪ ವ್ಯಕ್ತಪಡಿಸಲು ನಾಲಿಗೆ ಹರಿಬಿಡುವುದು ಆಘಾತಕಾರಿ ಸಂಗತಿ. ಈ ಮನಸ್ಥಿತಿಗೆ ಕಾರಣ ಹೇಳುವುದು ಕಷ್ಟ. ಅದು ವೈಯಕ್ತಿಕ ಮನಸ್ಥಿತಿ. ಸ್ವಯಂ ನಿಯಂತ್ರಣ ತಪ್ಪಿದರೂ ಹೀಗಾಗುತ್ತದೆ. ರಾಜಕೀಯ ಹತಾಶೆಯೂ ಕಾರಣ ಇರಬಹುದು. ಮಾನಸಿಕ ತಜ್ಞರಷ್ಟೆ ಇದನ್ನು ವಿಶ್ಲೇಷಿಸಲು ಸಾಧ್ಯ. ವ್ಯಂಗ್ಯ, ಹಾಸ್ಯ, ಕುಟುಕುವ ರೀತಿ ಭಾಷೆ ಇರಬೇಕು. ಆದರೆ, ಈ ಮಟ್ಟಕ್ಕೆ ಕುಸಿದು ಮಾತನಾಡುವುದು ಸಲ್ಲದು. ದೌರ್ಭಾಗ್ಯವೆಂದರೆ ಕೀಳುಮಟ್ಟದ ಪ್ರಚಾರ–ಅಪಚಾರ ವಿರೋಧ ಪಕ್ಷಗಳಿಂದ ಆರಂಭವಾಗುತ್ತದೆ. ಪ್ರಧಾನಿ ಅವರನ್ನೇ ಸಿದ್ದರಾಮಯ್ಯ ಏಕವಚನದಲ್ಲಿ ಸಂಬೋಧಿಸುತ್ತಾರೆ. ಅವಶ್ಯಕತೆ ಇಲ್ಲದ ಸಂಗತಿ, ಸುಳ್ಳು ಹೇಳುವುದು, ಆರೆಸ್ಸೆಸ್ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ. ರಾಹುಲ್ ಗಾಂಧಿ ಬಗ್ಗೆ ನಳಿನ್ ಕುಮಾರ್ ಕಟೀಲ್ ಹಾಗೆ (ಡ್ರಗ್ ಪೆಡ್ಲರ್) ಹೇಳಬಾರದಿತ್ತು. ಅವರಿಗೆ ಕರೆ ಮಾಡಿ ಅದನ್ನು ಹೇಳಿದ್ದೇನೆ. ಗೆರೆ ದಾಟಿ ಮಾತನಾಡುವುದು ಯಾವುದೇ ಕಾರಣಕ್ಕೂ ಸರಿಯಲ್ಲ. ಆಯಾ ಪಕ್ಷಗಳೇ ಇದನ್ನು ನಿಯಂತ್ರಿಸಬೇಕು.

ಡಿ.ಎಚ್. ಶಂಕರಮೂರ್ತಿ, ಬಿಜೆಪಿ ಮುಖಂಡ

‘ಮನೋಭೂಮಿಕೆ ಬದಲಾಗಬೇಕು’

ರಾಜಕೀಯ ವಲಯದಲ್ಲಿ ಇತ್ತೀಚೆಗೆ ಎಂಥ ಭಾಷೆ ಬಳಕೆಯಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಮಹಿಳಾ ರಾಜಕಾರಣಿಯೊಬ್ಬರ ವಿರುದ್ಧ ಮಾತನಾಡುವ ವೇಳೆ ಯಾವುದೊ ಪಕ್ಷವೊಂದರ ಮುಖಂಡ, ‘ರಾತ್ರಿ ರಾಜಕಾರಣಿ’ ಎಂಬ ಪದ ಬಳಸಿರುವುದು ನೋಡಿದರೆ ಮಹಿಳೆಯರು ರಾಜಕೀಯಕ್ಕೆ ಬರುವುದೇ ಕಷ್ಟ ಎಂಬಂತಿದೆ. ಖಂಡಿಸುವ ಭರದಲ್ಲಿ ‘ನಾವು ಬಳೆ ತೊಟ್ಟಿಲ್ಲ. ಸೀರೆ ಉಟ್ಟುಕೊಂಡಿಲ್ಲ’ ಎಂದು ಮಹಿಳೆಯರನ್ನು ಅಪಮಾನಿಸುವುದು ಇತ್ತೀಚೆಗೆ ದಿನಗಳಲ್ಲಿ ಜಾಸ್ತಿಯಾಗಿದೆ. ಕೆಟ್ಟದ್ದನ್ನು ಕೆಟ್ಟದ್ದು ಎಂದು ತೋರಿಸಬೇಕು ನಿಜ. ಕ್ರಿಯೆ– ಪ್ರತಿಕ್ರಿಯೆ ಎಂದು ಮುಖ್ಯಮಂತ್ರಿಯೇ ಸಮರ್ಥನೆ ನೀಡಿರುವುದೂ ಭೂಷಣವಲ್ಲ. ಆರೋಗ್ಯಪೂರ್ಣ ಮನೋಭಾವನೆಯನ್ನು ಆಳುವವರು ಸೃಷ್ಟಿಸಬೇಕು. ಬಲಪಂಥೀಯ ರಾಜಕೀಯ ಮುಖ್ಯವಾಹಿನಿಗೆ ಬಂದ ಬಳಿಕ ಕೀಳು ಭಾಷಾ ಪ್ರಯೋಗ ಹೆಚ್ಚಿದೆ. ಮನುವಾದಿಗಳ ಮೌಲ್ಯಗಳ ಸಮರ್ಥನೆ ಹೆಚ್ಚಾಗುತ್ತಿದೆ. ಅಸಂವಿಧಾನಿಕ ಪದ ಬಳಸಿ ಪಡ್ಡೆ ಹುಡುಗರ ಥರ ಹಿರಿಯ ರಾಜಕಾರಣಿಗಳು ಮಾತನಾಡಿದರೆ ಹೇಗೆ? ರಾಜಕಾರಣಿಗಳ ಮನಸ್ಥಿತಿ ಮಹಿಳೆ, ದಲಿತ ವಿರೋಧಿಯಾಗಿದೆ. ಆಂಗಿಕತೆ ಕೂಡಾ ಮುಖ್ಯ. ಭಾಷೆ ಪ್ರಯೋಗದ ವೇಳೆ ಎಚ್ಚರಿಕೆ ವಹಿಸಬೇಕು. ಮನೋಭೂಮಿಕೆಯಲ್ಲಿ ಪರಿವರ್ತನೆ ಆಗಬೇಕು.

ಮೀನಾಕ್ಷಿ ಬಾಳಿ
ಪ್ರಾಧ್ಯಾಪಕಿ, ಕಲಬುರಗಿ

‘ಅಡ್ಡ ದಾರಿಯ ತಂತ್ರ ಸರಿಯಲ್ಲ’

ಚುನಾವಣೆ ಸಂದರ್ಭದಲ್ಲಿ, ಅದರಲ್ಲೂ ಉಪ ಚುನಾವಣೆ ಪ್ರಚಾರದಲ್ಲಿ ಸಭ್ಯತೆ ಮೀರಿದ ಮಾತುಗಳು ಬರುತ್ತಿವೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ರಾಜಕೀಯ ವ್ಯವಸ್ಥೆಯಲ್ಲಿ ಬಹಳ ದೊಡ್ಡ ಸಾಧಕರನ್ನು ನೋಡಿದ್ದೇವೆ. ದೌರ್ಬಲ್ಯಗಳನ್ನೂ ಕಂಡಿದ್ದೇವೆ. ಮಾತಿನಲ್ಲಿ ಮೊನಚು, ಪಂಚ್ ಇರಬೇಕು. ವಿಷಯಾಧಾರಿತ, ಜನಪರ, ಪಕ್ಷದ ಹಿತ ಗಮನದಲ್ಲಿಟ್ಟು ನಾಯಕರು ಮಾತನಾಡಬೇಕು. ಆದರೆ, ಇತ್ತೀಚೆಗೆ ಎಲ್ಲರೂ ಒಂದೇ ರೀತಿ ಆಗಿದ್ದಾರೆ. ಡಿಜಿಟಲ್ ಮಾಧ್ಯಮಗಳೂ ಅಭಿರುಚಿ ಇಲ್ಲದ ಮಾತುಗಳನ್ನು ಪದೇ ಪದೇ ತೋರಿಸುತ್ತಿವೆ. ಹೊಸ ವಾತಾವರಣ ಸೃಷ್ಟಿಸುವ ಪರಂಪರೆಗೆ ಎಲ್ಲ ಪಕ್ಷಗಳ ಮುಖಂಡರು, ಮಾಧ್ಯಮಗಳು ಸೇರಿದಂತೆ ಎಲ್ಲರೂ ಮುಂದಾಗಬೇಕು. ಸಭ್ಯತೆ ಮೀರಿದ ಮಾತುಗಳನ್ನು ನಿಯಂತ್ರಿಸಲು ಚುನಾವಣಾ ಆಯೋಗ ನೀತಿಸಂಹಿತೆ ರೂಪಿಸಬೇಕು. ಸರ್ಕಾರದ ಕೈಗೊಂಬೆಯಂತೆ ಆಯೋಗ ಕೆಲಸ ಮಾಡಬಾರದು. ಮಾಧ್ಯಮಗಳೂ ಸದಭಿರುಚಿಯ ಸುದ್ದಿಗಳಿಗೆ ಆದ್ಯತೆ ನೀಡಬೇಕು. ಆಡಳಿತ ಪಕ್ಷಕ್ಕೆ ಹೆಚ್ಚಿನ ಹೊಣೆಗಾರಿಕೆಯಿದೆ. ಸರ್ಕಾರದ ವಿರುದ್ಧ ಅಪಸ್ವರ ಬಂದಾಗ ದಿಕ್ಕು ತಪ್ಪಿಸಲು, ವೈಫಲ್ಯಗಳನ್ನು ಮುಚ್ಚಿಡಲು ಕೀಳು ಭಾಷೆ ಬಳಸುವ ಅಡ್ಡ ದಾರಿ ಹಿಡಿಯುವುದು ಸರಿಯಲ್ಲ. ಉಪ ಚುನಾವಣೆ ನಡೆಯುತ್ತಿರುವ ಕ್ಷೇತ್ರಗಳಲ್ಲಿ ಇಡೀ ಮಂತ್ರಿ ಮಂಡಲ ಬೀಡುಬಿಟ್ಟಿದೆ. ಹಾಗಿದ್ದರೆ, ರಾಜ್ಯದ ಜನ ಸಾಯಬೇಕೇ?

ವಿ.ಆರ್. ಸುದರ್ಶನ್
ಸಹ ಅಧ್ಯಕ್ಷ, ಕೆಪಿಸಿಸಿ ಮಾಧ್ಯಮ ವಿಭಾಗ

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30 : ದಿನದ ಸೂಕ್ತಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ಸಂಜೆ 4: ಝಣ ಝಣ ಕಾಂಚಾಣ, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್

ಗ್ರೀನ್ ಟಾಕ್

ಕೆಂಪೇಗೌಡ ಕಟ್ಟದ ಕೆರೆಗಳು ಒಂದಕ್ಕೆ ಪೂಜೆ, ಮತ್ತೊಂದಕ್ಕೆ ಕೊಳಕು

ಪ್ರಜಾವಾಣಿ ಪಾಡ್‌ಕಾಸ್ಟ್: ವಚನವಾಣಿಗೆ 300ರ ಸಂಭ್ರಮ

ಕನ್ನಡ ಪತ್ರಿಕಾಲೋಕದಲ್ಲಿಯೇ ವಿನೂತನ ಪ್ರಯೋಗವಾಗಿ ಪ್ರಜಾವಾಣಿಯು 'ಕನ್ನಡ ಧ್ವನಿ' ಹೆಸರಿನಲ್ಲಿ ಪಾಡ್‌ಕಾಸ್ಟ್ ಚಾನೆಲ್ ಆರಂಭಿಸಿದ್ದು, ಇದರಲ್ಲಿ ನಿತ್ಯವೂ ಮೂಡಿಬರುತ್ತಿರುವ ವಚನವಾಣಿ ದೈನಿಕ ಸರಣಿಗೆ ಮಂಗಳವಾರ ದಾಖಲೆಯ 300ನೆಯ ಕಂತಿನ ಸಂಭ್ರಮ. ಅಂತರ್ಜಾಲದ ಮೂಲಕ ದೇಶ-ವಿದೇಶಗಳಿಗೆ ತಲುಪುತ್ತಿರುವ ಈ 'ಕನ್ನಡ ಧ್ವನಿ' ಕಾರ್ಯಕ್ರಮ ಈವರೆಗೆ ಐದು ಲಕ್ಷಕ್ಕೂ ಅಧಿಕ ಪ್ಲೇ ಕಂಡಿದೆ.

ಹಿಂದೆ ವಾರಕ್ಕೊಂದು ಎಂಬಂತಿದ್ದ ಈ ವಚನವಾಣಿ, ಕೇಳುಗರ ಬೇಡಿಕೆಯ ಮೇರೆಗೆ ಪ್ರತಿದಿನವೂ ಪ್ರಸಾರವಾಗುತ್ತಿದೆ. ಡಾ.ಬಸವರಾಜ ಸಾದರ, ಡಾ.ಕುಮಾರ್ ಕಣವಿ, ಕವಿತಾ ಸಾದರ, ಬಸವಕುಮಾರ್ ಅವರು ವಚನವಾಣಿ ಪಾಡ್‌ಕಾಸ್ಟ್ ಪ್ರಸ್ತುತಪಡಿಸುತ್ತಿದ್ದಾರೆ.

ವಚನವಾಣಿಯ ಪ್ರತಿದಿನದ ಸಂಚಿಕೆಯಲ್ಲಿ ನಿತ್ಯವೂ ಒಂದೊಂದು ಹೊಸ ವಚನವನ್ನು ಜಗತ್ತಿಗೇ ತಲುಪಿಸಲಾಗುತ್ತಿದೆ. ಇದರಲ್ಲಿ ಈವರೆಗೆ ಕೇಳಿರದ ಮತ್ತು ಗಮನಿಸಿರದ ವಚನಗಳನ್ನೇ ಆಯ್ಕೆಮಾಡಲಾಗುತ್ತಿರುವುದು ವಿಶೇಷ. ಪ್ರತಿ ಕಾರ್ಯಕ್ರಮದಲ್ಲಿ ಮೊದಲು ಆಯಾ ವಚನದ ವಾಚನ ಇದ್ದು, ನಂತರ, ಒಂದೂವರೆ ನಿಮಿಷದ ಅವಧಿಯಲ್ಲಿ ಆ ವಚನವನ್ನು ವಿಶ್ಲೇಷಿಸಲಾಗುತ್ತದೆ.

‘ಸಿದ್ದರಾಮಯ್ಯ ಬ್ರಿಟಿಷರಿದ್ದಂತೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸಿದ್ದರಾಮಯ್ಯ ಬ್ರಿಟಿಷರಿದ್ದಂತೆ. ಜೆಡಿಎಸ್ ಬೀದಿಗೆ ತಳ್ಳಿದಾಗ ಕಾಂಗ್ರೆಸ್‌ಗೆ ಕರೆ ತಂದವರನ್ನೇ ಅಲ್ಲಿಂದ ಓಡಿಸಿದರು. ಈಗ ಅಹಿಂದ ನಾಯಕರನ್ನು ಮುಗಿಸುತ್ತಿದ್ದಾರೆ’ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಟೀಕಿಸಿದರು.

‘ಕುರುಬರಿಗೆ ಸಿದ್ದರಾಮಯ್ಯ ಕೊಡುಗೆ ಶೂನ್ಯ. ಅಲ್ಲಿ ಯಾರೊಬ್ಬರನ್ನೂ ಬೆಳೆಸದೆ ನಾಯಕತ್ವವನ್ನೇ ನಾಶ ಮಾಡಿದ್ದಾರೆ. ಅಹಂಕಾರಿ. ಕಿಂಚಿತ್ ಕೃತಜ್ಞತೆಯಿಲ್ಲದವ. ಈಗ ಕಾರಣವಿಲ್ಲದೆ ಕುರುಬರ ಹೆಸರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜೊತೆ ಬೀದಿರಂಪ ನಡೆಸಿದ್ದಾರೆ’ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಕಿಡಿಕಾರಿದರು.

ನವೆಂಬರ್ 1ರಿಂದ ಮನೆ ಬಾಗಿಲಿಗೆ ಪಡಿತರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಮಾದರಿಯಲ್ಲಿ ಪಡಿತರ ಚೀಟಿದಾರರಿಗೆ ಮನೆ ಬಾಗಿಲಿಗೆ ಪಡಿತರ ತಲುಪಿಸುವ ಯೋಜನೆಯನ್ನು ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಮುಂದಾಗಿದೆ.

ನವೆಂಬರ್ 1ರಂದು ಯೋಜನೆಗೆ ಚಾಲನೆ ನೀಡುವ ಸಾಧ್ಯತೆ ಇದೆ.

ಈ ಕುರಿತು ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಆಹಾರ ಸಚಿವ ಉಮೇಶ ಕತ್ತಿ, ‘ಮನೆ ಬಾಗಿಲಿಗೆ ಪಡಿತರ’ ಯೋಜನೆಯ ಪ್ರಾಯೋಗಿಕ ಅನುಷ್ಠಾನಕ್ಕೆ ಸಿದ್ಧತೆ ಆರಂಭಿಸುವಂತೆ ನಿರ್ದೇಶನ ನೀಡಿದ್ದಾರೆ. ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು. ಆಂಧ್ರಪ್ರದೇಶದಲ್ಲಿ ಮನೆ ಬಾಗಿಲಿಗೆ ಪಡಿತರ ವಿತರಿಸಲು ಆರಂಭಿಸಿರುವ ಯೋಜನೆಯ ವಿವರ, ರಾಜ್ಯದಲ್ಲಿ ಈ ಯೋಜನೆ ಜಾರಿಗೆ ಬೇಕಿರುವ ಸೌಲಭ್ಯಗಳು, ವೆಚ್ಚ ಮತ್ತಿತರ ವಿವರಗಳನ್ನು ಸಭೆಯಲ್ಲಿ ಹಂಚಿಕೊಂಡಿದ್ದಾರೆ.

‘ಟಾಟಾ ಮತ್ತು ಮಾರುತಿ ಸುಝುಕಿ ಕಂಪನಿ ಅಧಿಕಾರಿಗಳು ತಾವು ಉತ್ಪಾದಿಸುವ ಸಣ್ಣ ಗಾತ್ರದ ಸರಕು ಸಾಗಣೆ ವಾಹನಗಳ ದರ, ಸಾಮರ್ಥ್ಯ, ಪ್ರತಿ ಕಿಲೋಮೀಟರ್ ಸಂಚಾರಕ್ಕೆ ತಗಲಬಹುದಾದ ವೆಚ್ಚ ಮತ್ತಿತರ ಮಾಹಿತಿಗಳನ್ನು ಒಳಗೊಂಡ ವರದಿಯನ್ನು ಸಭೆಯಲ್ಲಿ ಮಂಡಿಸಿದ್ದಾರೆ. ಸಂಪೂರ್ಣ ಮಾಹಿತಿ ಪಡೆದುಕೊಂಡ ಸಚಿವರು, ನ.1ರಿಂದ ಪ್ರಾಯೋಗಿಕ ಅನುಷ್ಠಾನ ಆರಂಭಿಸುವ ಸಾಧ್ಯತೆ ಕುರಿತೂ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

700 ವಾಹನ: ಬಿಬಿಎಂಪಿ ವ್ಯಾಪ್ತಿಯಲ್ಲಿರುವ 28 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಪ್ರತಿ ನ್ಯಾಯಬೆಲೆ ಅಂಗಡಿ ಜತೆಗೆ ಒಂದು ವಾಹನವನ್ನು ಜೋಡಣೆ ಮಾಡುವ ಪ್ರಸ್ತಾವವಿದೆ. ಇದಕ್ಕಾಗಿ 700 ವಾಹನಗಳ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ.

‘ಈಗ ಇರುವ ಪ್ರಸ್ತಾವದ ಪ್ರಕಾರ, ಮನೆ ಬಾಗಿಲಿಗೆ ಪಡಿತರ ಸಾಗಿಸುವುದಕ್ಕೆ ಪ್ರತಿ ನ್ಯಾಯಬೆಲೆ ಅಂಗಡಿಗೆ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಲಾಗುವುದು. ಅವರು ಖರೀದಿಸುವ ವಾಹನಕ್ಕೆ ಸರಕು ಮತ್ತು ಸೇವಾ ತೆರಿಗೆ, ಸಹಾಯಧನ ಸೇರಿದಂತೆ ಶೇಕಡ 30ರಷ್ಟು ನೆರವನ್ನು ಇಲಾಖೆಯಿಂದ ನೀಡಲಾಗುವುದು. ಶೇ 4ರ ಬಡ್ಡಿ ದರದಲ್ಲಿ ಆರು ವರ್ಷಗಳ ಅವಧಿಗೆ ಸಾಲವನ್ನೂ ಕೊಡಿಸುವ ವ್ಯವಸ್ಥೆ ಮಾಡಲಾಗುವುದು’ ಎಂದು ಮೂಲಗಳು ಹೇಳಿವೆ.

ಆಂಧ್ರಪ್ರದೇಶದಲ್ಲಿ ಪಡಿತರ ಸಾಗಿಸುವ ವಾಹನದ ಮಾಲೀಕರಿಗೆ ಪ್ರತಿ ಕೆ.ಜಿ.ಗೆ ₹ 1ರಷ್ಟು ಸಾಗಣೆ ವೆಚ್ಚ ನೀಡಲಾಗುತ್ತದೆ. ಅದೇ ದರವನ್ನು ರಾಜ್ಯದಲ್ಲೂ ನಿಗದಿಪಡಿಸುವ ಪ್ರಸ್ತಾವವಿದೆ.

‘ಅ.28ರ ಸಭೆಯಲ್ಲಿ ಅಂತಿಮ ನಿರ್ಧಾರ’

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಇದೇ 28ರಂದು ಉನ್ನತಮಟ್ಟದ ಸಭೆ ನಡೆಯಲಿದೆ. ಯೋಜನೆ ಅನುಷ್ಠಾನದ ದಿನಾಂಕ ಕುರಿತು ಆ ಸಭೆಯಲ್ಲಿ ನಿರ್ಧರಿಸಲಾಗುವುದು’ ಎಂದು ಸಚಿವ ಉಮೇಶ ಕತ್ತಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇಡೀ ರಾಜ್ಯದಲ್ಲಿ ಯೋಜನೆ ಜಾರಿಗೆ 10,000 ವಾಹನಗಳ ಅಗತ್ಯವಿದೆ. ವಾಹನ ಖರೀದಿ ಸೇರಿದಂತೆ ಹಲವು ಕೆಲಸಗಳು ಬಾಕಿ ಇವೆ. ಯೋಜನೆ ಆರಂಭದ ದಿನಾಂಕವನ್ನು ಈಗಲೇ ಹೇಳುವುದು ಕಷ್ಟ’ ಎಂದು ಅವರು ತಿಳಿಸಿದರು.

5 ಲಕ್ಷ ಜನರಿಂದ ಕನ್ನಡ ಗೀತ ಗಾಯನ

ಒಂದನೇ ಪುಟದಿಂದ...

- ಬೆಂಗಳೂರು ಮೆಟ್ರೊದ ಎಲ್ಲ ರೈಲುಗಳಲ್ಲಿ ಬೆಳಿಗ್ಗೆ 11 ಗಂಟೆಗೆ ಸುಗಮ ಸಂಗೀತ ಗಾಯನ ತಂಡಗಳು ಮೂರು ಗೀತೆಗಳನ್ನು ಹಾಡುತ್ತವೆ. ಮೆಟ್ರೊದ ಎಲ್ಲ 51 ನಿಲ್ದಾಣಗಳಲ್ಲಿ ಕನ್ನಡ ಗೀತೆಗಳ ಗಾಯನ ಧ್ವನಿ ವರ್ಧಕಗಳ ಮೂಲಕ ಪ್ರಸಾರವಾಗಲಿದೆ. ಅಲ್ಲದೆ, ಅತ್ಯಂತ ಜನನಿಬಿಡ 5 ಮೆಟ್ರೊ ನಿಲ್ದಾಣಗಳಲ್ಲಿ ಸಾಮೂಹಿಕ ಗೀತೆಗಾಯನ ನಡೆಯಲಿದೆ.
- ವಿಧಾನಸೌಧದ ಮೆಟ್ಟಿಲುಗಳ ಮೇಲೆ ಮುಖ್ಯಮಂತ್ರಿ, ಸರ್ಕಾರದ ಮುಖ್ಯಕಾರ್ಯದರ್ಶಿ ಮತ್ತು ಸಚಿವ ವಿ.ಸುನಿಲ್ ಕುಮಾರ್, ಅಧಿಕಾರಿಗಳು, ಸಿಬ್ಬಂದಿ ಸೇರಿ 3 ಸಾವಿರ ಮಂದಿ ಭಾಗವಹಿಸುವರು.
- ಜೋಗ ಜಲಪಾತದ ಮುಂದೆ, ಕುಪ್ಪಳಿಯ ಕವಿಶೈಲ, ಚಿತ್ರದುರ್ಗದ ಕೋಟೆ, ಮಂಗಳೂರಿನ ಕಡಲ ಕಿನಾರೆ, ಉಡುಪಿಯ ಶ್ರೀಕೃಷ್ಣ ದೇಗುಲ, ಮೂಡಬಿದಿರೆಯ ಸಾವಿರ ಕಂಬದ ಬಸದಿ, ಮಂಗಳೂರು ಬಂದರಿನ ಮೀನುಗಾರರ ಮಧ್ಯೆ
- ಸಿದ್ಧಗಂಗಾ ಮಠದ ಆವರಣ, ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇಗುಲ, ಭಾಗಮಂಡಲ, ಬೀದರ್‌ನ ಗೋಳ ಗುಮ್ಮಟ, ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಕನ್ನಡದ ಮೊದಲ ಶಾಸನ ದೊರೆತ ಹಲ್ಮಿಡಿ ಗ್ರಾಮ

ಕೋವಿಡ್: ರಾಜ್ಯದ ಏಳು ಜನರಲ್ಲಿ ಎವೈ 4.2 ವೈರಾಣು

ಒಂದನೇ ಪುಟದಿಂದ...

ಎವೈ 4.2 ವೈರಾಣು ಹಲವು ದೇಶಗಳಲ್ಲಿ ಹರಡಿರುವುದರಿಂದ ಹೊರಗಿನಿಂದ ಬರುವವರ ಮೇಲೆ ನಿಗಾ ಇಡಲು ತಾಂತ್ರಿಕ ಸಲಹಾ ಸಮಿತಿಯ ಅಭಿಪ್ರಾಯ ಪಡೆಯಲಾಗುವುದು. ಹೊಸ ವೈರಾಣು ಲಸಿಕೆ ತೆಗೆದುಕೊಂಡವರ ಮೇಲೆ ಪರಿಣಾಮ ಬೀರುತ್ತದೆಯೇ ಎಂಬ ಬಗ್ಗೆ ಅಧ್ಯಯನದಿಂದ ಗೊತ್ತಾಗಬೇಕು. ರಷ್ಯಾದಲ್ಲಿ ಎರಡು ಡೋಸ್ ಲಸಿಕೆ ತೆಗೆದುಕೊಂಡವರಲ್ಲಿ ಈ ವೈರಾಣುವಿನಿಂದ ಹೆಚ್ಚಿನ ಸಮಸ್ಯೆ ಆಗಿಲ್ಲ. ಲಸಿಕೆ ತೆಗೆದುಕೊಳ್ಳದೇ ಇರುವವರನ್ನು ಬಾಧಿಸಿದೆ ಎಂದರು.

ಹಲವು ದೇಶಗಳಲ್ಲಿ ಮೂರನೇ ಅಲೆ ಬಂದಿದೆ. ನಮ್ಮಲ್ಲೂ ಬರುವ ಸಾಧ್ಯತೆ ಅಲ್ಲಗಳೆಯಲು ಆಗುವುದಿಲ್ಲ. ಇದಕ್ಕಾಗಿ ಬಿಬಿಎಂಪಿ ವ್ಯಾಪ್ತಿ ಸೇರಿದಂತೆ ರಾಜ್ಯದ ಎಲ್ಲ ಕಡೆಗಳಲ್ಲಿ ಕಟ್ಟೆಚ್ಚರ ವಹಿಸಲಾಗುವುದು. ಮೂರನೇ ಅಲೆ ಬಂದರೂ ಅದನ್ನು ಎದುರಿಸಲು ಸರ್ಕಾರ ಸಿದ್ಧವಿದೆ. ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯವಿದೆ. ಯಾರೂ ನಿರ್ಲಕ್ಷ್ಯ ತೋರಬಾರದು ಎಂದು ಸುಧಾಕರ್ ಹೇಳಿದರು.

ಇತ್ತೀಚಿನ ದಿನಗಳಲ್ಲಿ ಕೋವಿಡ್ ಪ್ರಕರಣಗಳು ಕಡಿಮೆ ಆಗಿರುವುದರಿಂದ ಸಾರ್ವಜನಿಕರು ಕೋವಿಡ್ ಬಗ್ಗೆ ನಿರ್ಲಕ್ಷ್ಯ ಧೋರಣೆ ತಳೆದಿರುವುದು ಸರಿಯಲ್ಲ. ಕೋವಿಡ್ ಮೊದಲ ಡೋಸ್ ತೆಗೆದುಕೊಂಡವರು ಎರಡನೇ ಡೋಸ್ ತೆಗೆದುಕೊಳ್ಳಬೇಕು. ಒಂದು ಡೋಸ್ ತೆಗೆದುಕೊಳ್ಳದವರು ಈಗಲಾದರೂ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಅಧ್ಯಯನ: ‘ಕೊರೊನಾ ವೈರಸ್ ಡೆಲ್ಟಾದ ಉಪತಳಿ ಎವೈ.4.2 ನ ತೀವ್ರತೆ ಕುರಿತು ತಜ್ಞರ ತಂಡ ಅಧ್ಯಯನ ನಡೆಸುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯಾ ಮಂಗಳವಾರ ಹೇಳಿದ್ದಾರೆ.

ಧಾರಾಕಾರ ಮಳೆ: ರಸ್ತೆಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದಲ್ಲಿ ಧಾರಾಕಾರ ಮಳೆ ಮುಂದುವರಿದಿದ್ದು, 30 ಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿದೆ. 4 ಕಡೆ ಮರಗಳು ಉರುಳಿವೆ. ಮಂಗಳವಾರ ನಸುಕಿನ 2 ಗಂಟೆ ಬಳಿಕ 4 ಸೆಂ.ಮೀ ಮಳೆಯಾಗಿರುವುದು ದಾಖಲಾಗಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ತಿಳಿಸಿವೆ.

ಇಲವಾಲ ಹೋಬಳಿ ಕಲ್ಲೂರು ನಾಗನಹಳ್ಳಿ ಸೇತುವೆ ಕುಸಿದಿದೆ. ಜೆ.ಸಿ.ಬಡಾವಣೆ, ಕೆ.ಸಿ.ಬಡಾವಣೆ, ಜಯನಗರ, ಚಿನ್ನಗಿರಿಕೊಪ್ಪಲು ಬಡಾವಣೆಗಳಲ್ಲಿನ ತಗ್ಗು ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿದೆ. ಪಾಲಿಕೆಯ 3 ಅಭಯ್ ರಕ್ಷಣಾ ತಂಡಗಳು ರಕ್ಷಣಾ ಕಾರ್ಯ ನಡೆಸಿವೆ. ಜೆ.ಸಿ.ನಗರದ 3 ನೇ ಕ್ರಾಸ್‌ನಲ್ಲಿ ಚರಂಡಿಯಲ್ಲಿ ಸಿಲುಕಿದ್ದ ಕರುವನ್ನು ರಕ್ಷಿಸಲಾಗಿದೆ.

ಕೃಷ್ಣಮೂರ್ತಿಪುರಂ, ಚಾಮುಂಡಿಪುರಂ, ಸರಸ್ವತಿಪುರಂ ಹಾಗೂ ಮಿನಿ ವಿಧಾನಸೌಧದ ಎದುರು ಮರಗಳು ಉರುಳಿವೆ. ಬಹುತೇಕ ರಸ್ತೆಗಳು ಜಲಾವೃತವಾಗಿವೆ. ಬೋಗಾದಿಯ ಕೆರೆ ಕೋಡಿ ಬಿದ್ದಿದ್ದು, ರಿಂಗ್ ರಸ್ತೆಯಲ್ಲಿ ನೀರು ಹರಿಯುತ್ತಿದೆ. ಸಂಚಾರಕ್ಕೆ ಅಡ್ಡಿಯಾಗಿದೆ. ಹಲವು ರಸ್ತೆಗಳಲ್ಲಿ ಮಂಡಿಯುದ್ದಕ್ಕೆ ನೀರು ನಿಂತಿದೆ. ಚಾಮುಂಡಿಬೆಟ್ಟದಲ್ಲಿ ಝರಿಗಳು ಸೃಷ್ಟಿಯಾಗಿದ್ದು, ನೀರು ಉಕ್ಕಿ ಹರಿಯುತ್ತಿದೆ.

ಮೈಸೂರಿನಲ್ಲಿ ಬಿರುಸಾದ ಮಳೆಯಿಂದ ಬೋಗಾದಿ ಕೆರೆ ಕೋಡಿ ಬಿದ್ದಿದ್ದು, ರಸ್ತೆಯಲ್ಲಿ ನೀರು ಉಕ್ಕಿ ಹರಿಯುತ್ತಿರುವುದು –ಪ್ರಜಾವಾಣಿ ಚಿತ್ರ

ಕೆಆರ್‌ಎಸ್ ಭರ್ತಿಗೆ 1 ಅಡಿ ಬಾಕಿ: ಕೊಡಗು ಜಿಲ್ಲೆಯಲ್ಲಿ ಉತ್ತಮ ಮಳೆಯಿಂದಾಗಿ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಿದೆ. ಮಂಗಳವಾರ ಸಂಜೆಗೆ ಜಲಾಶಯದ ನೀರಿನ ಮಟ್ಟ 123.75 ಅಡಿಗೆ ತಲುಪಿತ್ತು. ಪೂರ್ಣ ಭರ್ತಿಗೆ ಇನ್ನು 1.05 ಅಡಿಯಷ್ಟೇ ಬಾಕಿ ಉಳಿದಿದೆ.

29ರಿಂದ ಮಳೆ ಹೆಚ್ಚುವ ಸಾಧ್ಯತೆ

ಬೆಂಗಳೂರು: ಮುಂಗಾರು ಮುಕ್ತಾಯವಾಗಿದ್ದರಿಂದ ರಾಜ್ಯದಾದ್ಯಂತ ಮಳೆ ತಗ್ಗಿದ್ದು, ಅ.29ರವರೆಗೆ ಮಳೆಯ ಪ್ರಮಾಣ ಕಡಿಮೆ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ರಾಜ್ಯದ ದಕ್ಷಿಣ ಒಳನಾಡಿನಲ್ಲಿ ಐದು ದಿನಗಳವರೆಗೆ ಮಳೆಯಾಗುವ ಸೂಚನೆ ಇತ್ತು. ಅದರ ಪ್ರಭಾವ ತಗ್ಗಿರುವುದರಿಂದ ಮಳೆ ದಿಢೀರ್ ತಗ್ಗಿದೆ.

ಅ.29ರಿಂದ ದಕ್ಷಿಣ ಒಳನಾಡಿನಲ್ಲಿ ಮತ್ತೆ ಮಳೆ ಹೆಚ್ಚಾಗುವ ಸಾಧ್ಯತೆ ಇದ್ದು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ಚಾಮರಾಜನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಕರಾವಳಿಯ ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇದೇ 30ರಿಂದ ಮಳೆಯಾಗುವ ನಿರೀಕ್ಷೆ ಇದೆ. ಉಳಿದ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣವಾದ ಮಳೆಯಾಗಬಹುದು. ಉತ್ತರ ಒಳನಾಡಿನಲ್ಲಿ ಒಣಹವೆ ಮುಂದುವರಿಯಲಿದೆ.

ಮಳೆ–ಎಲ್ಲಿ, ಎಷ್ಟು?: ಬೆಳಗಾವಿ ಜಿಲ್ಲೆಯ ಲೊಂಡ ಹಾಗೂ ಆಗುಂಬೆಯಲ್ಲಿ ಮಂಗಳವಾರ ತಲಾ 5 ಸೆಂ.ಮೀ ಮಳೆಯಾಗಿದೆ. ಮೈಸೂರು 4, ಪುತ್ತೂರು, ಮಡಿಕೇರಿ 3, ಸುಳ್ಯ, ಪಾಂಡವಪುರ, ಶ್ರೀರಂಗಪಟ್ಟಣ, ಮಂಡ್ಯ 2, ಮೂಡುಬಿದರೆ, ಬೆಳ್ತಂಗಡಿ, ಮದ್ದೂರು, ಭದ್ರಾವತಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	123.75	17,972	3,592
ಹಾರಂಗಿ	2,859	2,858.43	1,663	1,200
ಕಬಿನಿ	2284	2,283.33	3,300	2,000
ಹೇಮಾವತಿ	2,922	2,910.73	3,736	3,681
ಲಿಂಗನಮಕ್ಕಿ	1,819	1,815.20	6,045	-
ಸೂಪಾ (ಮೀ)	564	556.35	1,325	-
ಮಾಣಿ	594.36	587.08	563	-
ತುಂಗಭದ್ರಾ	1,633	1,632.98	29,131	28,771
ಮಲಪ್ರಭಾ	2079.50	2,078.90	-	969
ಘಟಪ್ರಭಾ	2175	2,174.21	59	2,486
ಭದ್ರಾ	186	186	3,552	3,552
ಆಲಮಟ್ಟಿ (ಮೀ)	519.60	519.46	-	11,805
ನಾರಾಯಣಪುರ (ಮೀ)	492.25	491.69	10,200	10,040

*ನೆಲಮಟ್ಟದಿಂದ

₹5 ಕೋಟಿ ಮೌಲ್ಯದ ಆಂಬರ್ ಗ್ರೀಸ್ ವಶಕ್ಕೆ

ಶಿರಸಿ: ನಿಷೇಧಿತ ಆಂಬರ್ ಗ್ರೀಸ್ (ತಿಮಿಂಗಿಲದ ವಾಂತಿ) ಮಾರಾಟಕ್ಕೆ ಯತ್ನಿಸಿದ್ದ ಇಬ್ಬರನ್ನು ಸೋಮವಾರ ರಾತ್ರಿ ಶಿರಸಿ ಹೊಸ ಮಾರುಕಟ್ಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ಅಂದಾಜು ₹5 ಕೋಟಿ ಮೌಲ್ಯದ 5.50 ಕೆ.ಜಿ.ಆಂಬರ್ ಗ್ರೀಸ್ ವಶಕ್ಕೆ ಪಡೆಯಲಾಗಿದೆ. ಸಾಗಣೆಗೆ ಬಳಸಿದ್ದ ಮಹಾರಾಷ್ಟ್ರ ನೋಂದಣಿ ಸಂಖ್ಯೆಯಿದ್ದ ಕಾರು ಜಪ್ತಿ ಮಾಡಲಾಗಿದೆ.

ಅಂಕೋಲಾ ತಾಲ್ಲೂಕು ಅವರ್ಸಾ ಮೂಲದ, ಸದ್ಯ ಬೆಳಗಾವಿಯಲ್ಲಿರುವ ಸಂತೋಷ ಬಾಲಚಂದ್ರ ಕಾಮತ್ (43), ಶಿರಸಿಯ ಮರಾಠಿಕೊಪ್ಪದ ರಾಜೇಶ ಮಂಜುನಾಥ ನಾಯ್ಕ (32) ಬಂಧಿತರು.

ಡಿಕೆಶಿ ಮಾವ ತಿಮ್ಮಯ್ಯ ನಿಧನ

ಮೈಸೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಮಾವ ಹಾಗೂ ಇಲ್ಲಿನ ಇಟ್ಟಿಗೆಗೂಡಿನ ನಿವಾಸಿ ತಿಮ್ಮಯ್ಯ (ಪಾಪಣ್ಣ) (83) ಮಂಗಳವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೈಸೂರಿನ ರಾಜ ಸೋಪ್ ನೆಟ್ ಕಾರ್ಖಾನೆ ಮಾಲೀಕರೂ ಆಗಿದ್ದ ಅವರಿಗೆ ಪತ್ನಿ ಲಕ್ಷ್ಮೀ, ಪುತ್ರ ಸತ್ಯನಾರಾಯಣ್, ಪುತ್ರಿಯರಾದ ಉಷಾ ಶಿವಕುಮಾರ್, ಅನಿತಾ, ಸುಮಾ ರಂಗನಾಥ್ ಇದ್ದಾರೆ. ಅಂತ್ಯಕ್ರಿಯೆ ಅ.27 ರಂದು ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಅವರ ತೋಟದಲ್ಲಿ ನಡೆಯಲಿದೆ.

ಬೀಳುತ್ತಿವೆ ಹೆಂಚುಗಳು, ಬಯಲಿನಲ್ಲೇ ಪಾಠ

130 ವರ್ಷ ಹಳೆಯ ಓಬಳಾಪುರ(ಶಿರಿವಾಳ) ಸರ್ಕಾರಿ ಶಾಲೆಯ ದುಃಸ್ಥಿತಿ

• ತಿಮ್ಮಯ್ಯ ಜೆ. ಪರಶುರಾಂಪುರ

ಪರಶುರಾಂಪುರ (ಚಿತ್ರದುರ್ಗ ಜಿಲ್ಲೆ): ಮೂಲಸೌಲಭ್ಯದ ಕೊರತೆಯಿಂದ ಬಳಲುತ್ತಿದ್ದ ಶತಮಾನ ದಾಟಿದ ಓಬಳಾಪುರ (ಶಿರಿವಾಳ) ಸರ್ಕಾರಿ ಶಾಲೆಯ ಮಕ್ಕಳು ಈಗ ಮರದ ಕೆಳಗೆ ಕುಳಿತು ಪಾಠ ಕೇಳಬೇಕಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ಗಾಳಿ–ಮಳೆಗೆ ಬಹುತೇಕ ಹೆಂಚುಗಳು ಬಿದ್ದಿದ್ದು ಅಪಾಯಕಾರಿ ಸ್ಥಿತಿ ಉಂಟಾಗಿದೆ.

ರಾಜ್ಯದ ಗಡಿ ಭಾಗದಲ್ಲಿರುವ ಈ ಶಾಲೆಯ 8 ಕೊಠಡಿಗಳ ಹೆಂಚುಗಳು ಬಿದ್ದಿದ್ದು, ಮಕ್ಕಳು ಕುಳಿತುಕೊಳ್ಳುವ ಸ್ಥಿತಿ ಇಲ್ಲ. ಶಾಲೆಯಲ್ಲಿ 276 ಮಕ್ಕಳಿದ್ದು, ಈಗ 3 ಕೊಠಡಿಗಳಷ್ಟೇ ಸುಸ್ಥಿತಿಯಲ್ಲಿವೆ. ಪರ್ಯಾಯ ವ್ಯವಸ್ಥೆ ಇಲ್ಲದ ಕಾರಣ ಮಕ್ಕಳು ಮರದ ಕೆಳಗೆ ಮಣ್ಣಿನಲ್ಲೇ ಕುಳಿತು ಪಾಠ ಕೇಳುತ್ತಿದ್ದಾರೆ.

ಚಳ್ಳಕೆರೆ ತಾಲ್ಲೂಕು ಕೇಂದ್ರದಿಂದ 45 ಕಿ.ಮೀ. ದೂರವಿರುವ ಓಬಳಾಪುರ ಗ್ರಾಮ ಮೊಳಕಾಲ್ಮುರು ಮತಕ್ಷೇತ್ರದ ವ್ಯಾಪ್ತಿಗೆ ಬರಲಿದೆ. ಇದು ಚಿತ್ರದುರ್ಗ ಜಿಲ್ಲೆಯ ಉಸ್ತುವಾರಿ ಸಚಿವ ಬಿ.ಶ್ರೀರಾಮುಲು ಈ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ.

ಶಾಲೆಯಲ್ಲಿ ಹೆಂಚುಗಳು ತುಂಡಾಗಿ ಬಿದ್ದಿರುವುದು –ಪ್ರಜಾವಾಣಿ ಚಿತ್ರಗಳು

‘1890ರಲ್ಲಿ ಆರಂಭವಾದ ಈ ಶಾಲೆಗೆ 130 ವರ್ಷವಾಗಿದೆ. 1ರಿಂದ 8ನೇ ತರಗತಿಯವರೆಗಿನ ಈ ಶಾಲೆಯಲ್ಲಿ 8 ಶಿಕ್ಷಕರಿದ್ದಾರೆ. 136 ಹೆಣ್ಣುಮಕ್ಕಳು ಓದುತ್ತಿದ್ದಾರೆ. ಶಾಲೆಯಲ್ಲಿ ಶೌಚಾಲಯ ವ್ಯವಸ್ಥೆಯೇ ಇಲ್ಲ. ಗ್ರಾಮ ಪಂಚಾಯಿತಿಗೆ ಸಾಕಷ್ಟು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ’ ಎಂದು ಎಸ್.ಡಿ.ಎಂ.ಸಿ ಅಧ್ಯಕ್ಷ ನಾಗರಾಜ ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಬಯಲಿನಲ್ಲಿಯೇ ಮರದ ಕೆಳಗೆ ಕುಳಿತು ಪಾಠ ಕೇಳುತ್ತಿರುವುದು

‘ಅಗತ್ಯವಿರುವ ಕೊಠಡಿ, ಶೌಚಾಲಯ, ಕಲಿಕೆಗೆ ಪೂರಕ ವಾತಾವರಣವೇ ಇಲ್ಲಿಲ್ಲ. ಸರ್ಕಾರಿ ಶಾಲೆ ಉಳಿಸಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಎಂದು ಹೇಳುವ ಜನಪ್ರತಿನಿಧಿಗಳು, ಅಧಿಕಾರಿಗಳು ಗಡಿಭಾಗದ ಸರ್ಕಾರಿ ಶಾಲೆಗಳ ಬಗ್ಗೆ ಗಮನಹರಿಸಬೇಕು’ ಎಂದು ಗ್ರಾಮಸ್ಥರಾದ ಪಾತಲಿಂಗಪ್ಪ, ಈಶ್ವರಪ್ಪ, ಪ್ರಕಾಶ, ಆನಂದ, ರಾಜು, ಕುಮಾರ, ದೇವಪುತ್ರ ಆಗ್ರಹಿಸಿದ್ದಾರೆ.

> **ಪಕ್ಕದ ಪ್ರೌಢಶಾಲೆಯ 2 ಕೊಠಡಿಗಳನ್ನು ತಾತ್ಕಾಲಿಕವಾಗಿ ಸ.ಹಿ.ಪ್ರಾ. ಶಾಲೆಗೆ ವ್ಯವಸ್ಥೆ ಮಾಡಲಾಗುವುದು. ಸರ್ಕಾರಕ್ಕೆ ವರದಿ ನೀಡಿ ಕೊಠಡಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು**
> **ಕೆ.ಎಸ್. ಸುರೇಶ**
> ಕ್ಷೇತ್ರ ಶಿಕ್ಷಣಾಧಿಕಾರಿ, ಚಳ್ಳಕೆರೆ

ಬಿರುಕು ಬಿಟ್ಟಿದೆ ಸಾಲಬಾಳು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕೊಠಡಿ

ಭೀತಿಯಿಂದಲೇ ಶಾಲೆಗೆ ಹಾಜರಾದ ಮಕ್ಕಳು

• ಡಿ.ಎಂ. ಹಾಲಾರಾಧ್ಯ

ಸಾಲಬಾಳು (ನ್ಯಾಮತಿ): ರಾಜ್ಯದಾದ್ಯಂತ ಸೋಮವಾರ ಆರಂಭವಾದ 1ರಿಂದ 5ನೇ ತರಗತಿಗಳಿಗೆ ಮಕ್ಕಳು ಸಂಭ್ರಮದಿಂದ ಹಾಜರಾದರು. ಆದರೆ, ತಾಲ್ಲೂಕಿನ ಸಾಲಬಾಳು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮಕ್ಕಳಲ್ಲಿ ಆ ಸಂಭ್ರಮವಿರಲಿಲ್ಲ. ಭೀತಿಯಿಂದಲೇ ಹಾಜರಾಗಬೇಕಾಯಿತು.

ತಾಲ್ಲೂಕಿನ ವಿವಿಧ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಮಕ್ಕಳನ್ನು ಶಾಲೆಗೆ ವಿಶೇಷವಾಗಿ ಬರಮಾಡಿಕೊಂಡರು. ಸಾಲಬಾಳು ಗ್ರಾಮದ ಶಾಲೆಯಲ್ಲಿ ಯಾವುದೇ ಸಿದ್ಧತೆ ಕಂಡುಬರಲಿಲ್ಲ.

ಬಂಜಾರ ಸಮುದಾಯದವರೇ ಹೆಚ್ಚು ವಾಸವಾಗಿರುವ ಗ್ರಾಮದಲ್ಲಿ ಶಾಲೆ ನಿರ್ಮಾಣವಾಗಿ ಆರು ದಶಕ ಕಳೆದಿವೆ. ಕೊಠಡಿಗಳ ಗೋಡೆಗಳು ಮತ್ತು ಚಾವಣಿ ಬಿರುಕು ಬಿಟ್ಟಿದ್ದು, ಮಳೆ ಬಂದಾಗ ಸೋರುತ್ತದೆ. ಈಚೆಗೆ ಸುರಿದ ಮಳೆಯಿಂದ ಗೋಡೆಗಳು ತೊಯ್ದಿದ್ದು, ಯಾವುದೇ ಸಂದರ್ಭದಲ್ಲೂ ಅನಾಹುತ ಸಂಭವಿಸಬಹುದು ಎಂದು ಶಿಕ್ಷಕರು ಆತಂಕ ವ್ಯಕ್ತಪಡಿಸಿದರು.

ನ್ಯಾಮತಿ ತಾಲ್ಲೂಕಿನ ಸಾಲಬಾಳು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ದುಃಸ್ಥಿತಿ –ಪ್ರಜಾವಾಣಿ ಚಿತ್ರ

ಶಾಲೆಯಲ್ಲಿ 1ರಿಂದ 5ನೇ ತರಗತಿವರೆಗೆ 28 ವಿದ್ಯಾರ್ಥಿಗಳಿದ್ದಾರೆ. ಇಬ್ಬರು ಶಿಕ್ಷಕರು ಇದ್ದಾರೆ. 5ನೇ ತರಗತಿಗೆ ಒಬ್ಬನೇ ವಿದ್ಯಾರ್ಥಿ ಇದ್ದ ಕಾರಣ ಪೋಷಕರು ಬೇರೆಡೆ ಸೇರಿಸಿದ್ದಾರೆ. ಬಿಸಿಯೂಟ ತಯಾರಿಸುವ ಕೊಠಡಿಯಲ್ಲಿ ತಾತ್ಕಾಲಿಕವಾಗಿ ಎಲ್ಲಾ ತರಗತಿ ಮಕ್ಕಳಿಗೆ ಪಾಠ ಮಾಡಲಾಗುತ್ತಿದೆ ಎಂದು ಹೇಳಿದರು.

ಶಾಲೆಯಲ್ಲಿ ಶೌಚಾಲಯವಿದ್ದರೂ ನೀರಿಲ್ಲ. ಶಾಲೆಯ ಜಾಗಕ್ಕೆ ಕಾಂಪೌಂಡ್ ನಿರ್ಮಿಸದಿರುವುದರಿಂದ ಸಾರ್ವಜನಿಕರು, ರೈತರ ಎತ್ತಿನಗಾಡಿ, ದನಕರು ಸಂಚರಿಸುವ ಮಾರ್ಗವಾಗಿದೆ. ಎಸ್‌ಡಿಎಂಸಿ ಸಮಿತಿ ಇದ್ದರೂ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಪೋಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮಕ್ಕೆ ಸುಸಜ್ಜಿತ ಶಾಲಾ ಕೊಠಡಿ, ಕಾಂಪೌಂಡ್ ನಿರ್ಮಿಸಲು ಇಲಾಖೆ ಹಾಗೂ ಶಾಸಕರಿಗೆ ಸಾಕಷ್ಟು ಮನವಿ ಮಾಡಿದರೂ ಉಪಯೋಗವಾಗಿಲ್ಲ. ಸಂಬಂಧಿಸಿದವರು ಗಮನಹರಿಸಬೇಕು ಎಂದು ಗ್ರಾಮದ ಹಿರಿಯರಾದ ಎಸ್.ಎನ್. ಗೋಪಾಲನಾಯ್ಕ, ತಾವರೆನಾಯ್ಕ, ಎಸ್.ಎನ್. ಹೂವನಾಯ್ಕ, ಬಿ. ಕುಮಾರನಾಯ್ಕ ಮನವಿ ಮಾಡಿದ್ದಾರೆ.

> **ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಸಾಲಬಾಳು ಶಾಲೆಗೆ ಕೊಠಡಿ ಮರು ನಿರ್ಮಾಣ, ದುರಸ್ತಿಗೆ ಶಿಕ್ಷಣ ಇಲಾಖೆ, ಜಿಲ್ಲಾಧಿಕಾರಿ ಮತ್ತು ನ್ಯಾಮತಿ ತಾಲ್ಲೂಕು ಪಂಚಾಯಿತಿಗೆ ಪ್ರಸ್ತಾವ ಸಲ್ಲಿಸಲಾಗಿದೆ.**
> **ಕೆ.ಇ.ರಾಜೀವ**
> ಕ್ಷೇತ್ರ ಶಿಕ್ಷಣಾಧಿಕಾರಿ, ನ್ಯಾಮತಿ

ಖಾಸಗಿಯವರಿಗೆ ಹುಬ್ಬಳ್ಳಿ ವಿಮಾನ ನಿಲ್ದಾಣ

ವಿಮಾನ ನಿಲ್ದಾಣಗಳು

ವಾರಾಣಸಿ	ಕುಶಿನಗರ ಮತ್ತು ಗಯಾ
ಕಾಂಗ್ರಾ	ಅಮೃತಸರ
ತಿರುಪತಿ	ಭುವನೇಶ್ವರ
ಔರಂಗಾಬಾದ್	ರಾಯಪುರ
ಜಬಲ್‌ಪುರ	ಇಂದೋರ್
ಹುಬ್ಬಳ್ಳಿ	ತಿರುಚ್ಚಿ

ನವದೆಹಲಿ: ಕರ್ನಾಟಕದ ಹುಬ್ಬಳ್ಳಿ ವಿಮಾನ ನಿಲ್ದಾಣ ಸೇರಿದಂತೆ ರಾಷ್ಟ್ರದ 13 ವಿಮಾನ ನಿಲ್ದಾಣಗಳ ಖಾಸಗೀಕರಣ ಪ್ರಕ್ರಿಯೆಯನ್ನು ಮುಂದಿನ ಮಾರ್ಚ್ ತಿಂಗಳೊಳಗೆ ಪೂರ್ಣಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಖಾಸಗಿ ಮತ್ತು ಸಾರ್ವಜನಿಕ ವಲಯದ ಸಹಭಾಗಿತ್ವ (ಪಿಪಿಪಿ) ದ ಆಧಾರದಲ್ಲಿ ನಿರ್ವಹಣೆಗೆ ಒಳಪಡಲಿರುವ ಒಟ್ಟು 13 ವಿಮಾನ ನಿಲ್ದಾಣಗಳ ಪಟ್ಟಿಯನ್ನು ವಿಮಾನಯಾನ ಸಚಿವಾಲಯಕ್ಕೆ ಕಳುಹಿಸಿಕೊಡಲಾಗಿದೆ. ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ವೇಳೆಗೆ ಅವುಗಳ ಖಾಸಗೀಕರಣಕ್ಕಾಗಿ ಹರಾಜು ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಯೋಜನೆ ರೂಪಿಸಲಾಗಿದೆ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ)ದ ಅಧ್ಯಕ್ಷ ಸಂಜೀವ್ ಕುಮಾರ್ ಆಂಗ್ಲ ಪತ್ರಿಕೆಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಪ್ರತಿ ಪ್ರಯಾಣಿಕರಿಂದ ಬರುವ ಆದಾಯವನ್ನು ಆಧರಿಸಿದ ಹರಾಜು ಪ್ರಕ್ರಿಯೆಯ ಮಾದರಿ ಅಡಿ ಈ ಎಲ್ಲ ವಿಮಾನ ನಿಲ್ದಾಣಗಳ ನಿರ್ವಹಣೆಯ ಹೊಣೆಯನ್ನು 50 ವರ್ಷಗಳ ಅವಧಿಗೆ ಖಾಸಗಿಯವರಿಗೆ ವಹಿಸಲು ನಿರ್ಧರಿಸಲಾಗಿದೆ. ಈಗಾಗಲೇ ಉತ್ತರ ಪ್ರದೇಶದ ಗ್ರೇಟರ್ ನೊಯ್ಡಾದಲ್ಲಿನ ಜೆವಾರ್ ವಿಮಾನ ನಿಲ್ದಾಣವನ್ನೂ ಅದೇ ಮಾದರಿಯ ನಿರ್ವಹಣೆಗೆ ವಹಿಸಲಾಗಿದ್ದು, ಯಶಸ್ವಿಯಾಗಿದೆ ಎಂದು ಅವರು ಹೇಳಿದ್ದಾರೆ.

ಈ 13ರ ಪೈಕಿ ಏಳು ಸಣ್ಣ ವಿಮಾನ ನಿಲ್ದಾಣಗಳನ್ನು ದೊಡ್ಡ ವಿಮಾನಗಳೊಂದಿಗೆ ಜೋಡಣೆ ಮಾಡಲು ನಿರ್ಧರಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಅಯೋಧ್ಯೆಯಲ್ಲಿನ ಹನುಮಾನ್‌ಗಡ ದೇವಸ್ಥಾನ ಸಂಕೀರ್ಣಕ್ಕೆ ಮಂಗಳವಾರ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭೇಟಿ ನೀಡಿದರು. ಮಹಾಂತ ಜ್ಞಾನ ದಾಸ್ ಹಾಗೂ ಎಎಪಿಯ ಸಂಸದ ಸಂಜಯ್ ಸಿಂಗ್ ಅವರು ಚಿತ್ರದಲ್ಲಿದ್ದಾರೆ –ಪಿಟಿಐ ಚಿತ್ರ

ಎನ್‌ಸಿಬಿ ಅಧಿಕಾರಿ ಬರೆದಿದ್ದಾರೆ ಎನ್ನಲಾದ ಪತ್ರದಲ್ಲಿ ಉಲ್ಲೇಖ ● ಸಚಿವ ನವಾಬ್ ಮಲಿಕ್‌ರಿಂದ ಬಹಿರಂಗ

‘ಡ್ರಗ್ಸ್ ಪ್ರಕರಣ: ಅಮಾಯಕರನ್ನು ಸಿಲುಕಿಸಲಾಗಿದೆ’

ಪ್ರಜಾವಾಣಿ ವಾರ್ತೆ

ಆರ್ಯನ್ ಖಾನ್ ಬಿಡುಗಡೆಗೆ ಒತ್ತಾಯಿಸಿ ನಟ ಶಾರುಕ್ ಖಾನ್‌ನ ಅಭಿಮಾನಿಗಳು ಬಾಂಬೆ ಹೈಕೋರ್ಟ್ ಎದುರು ಮಂಗಳವಾರ ಪೋಸ್ಟರ್ ಪ್ರದರ್ಶನ ನಡೆಸಿದರು– ಪಿಟಿಐ ಚಿತ್ರ

ಮುಂಬೈ: ‘ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಸೇವನೆ ಪ್ರಕರಣದಲ್ಲಿ ಹಲವಾರು ಅಮಾಯಕರನ್ನು ಸಿಲುಕಿಸಲಾಗುತ್ತಿದೆ. ಈ ಬಗ್ಗೆ ತನಿಖೆ ನಡೆಸಿ’ ಎಂದು ಮಾದಕವಸ್ತು ನಿಯಂತ್ರಣ ಬ್ಯೂರೊ (ಎನ್‌ಸಿಬಿ) ಅಧಿಕಾರಿಯೊಬ್ಬರು ತಮಗೆ ಪತ್ರ ಬರೆದಿದ್ದಾರೆ ಎಂದು ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಅವರು ಮಂಗಳವಾರ ಹೇಳಿದ್ದಾರೆ. ಎನ್‌ಸಿಬಿ ಅಧಿಕಾರಿ ಬರೆದಿದ್ದಾರೆ ಎನ್ನಲಾದ ಪತ್ರವನ್ನು ಅವರು ಬಹಿರಂಗಪಡಿಸಿದ್ದಾರೆ.

ನವಾಬ್ ಮಲಿಕ್ ಅವರ ಅಳಿಯ ಸಮೀರ್ ಖಾನ್ ಅವರನ್ನು ಡ್ರಗ್ಸ್ ಪ್ರಕರಣವೊಂದರಲ್ಲಿ ಎನ್‌ಸಿಬಿ ಬಂಧಿಸಿತ್ತು. ಅವರು ಈಗ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಹಡಗಿನಲ್ಲಿ ಕಾರ್ಯಾಚರಣೆ ನಡೆಸಿದ ಎನ್‌ಸಿಬಿ ಅಧಿಕಾರಿಗಳ ತಂಡದ ಮುಖ್ಯಸ್ಥ ಸಮೀರ್ ವಾಂಖೆಡೆ ಮುಸ್ಲಿಮರಾಗಿದ್ದು, ಜಾತಿ ಪ್ರಮಾಣ ಪತ್ರ ಸೃಷ್ಟಿಸಿ ಕೆಲಸಕ್ಕೆ ಸೇರಿದ್ದಾರೆ ಎಂದು ಮಲಿಕ್ ಸೋಮವಾರವಷ್ಟೇ ಆರೋಪಿಸಿದ್ದರು.

ಈಗ ಈ ಪತ್ರವನ್ನು ಬಿಡುಗಡೆ ಮಾಡುವ ಮೂಲಕ ಎನ್‌ಸಿಬಿ ಮೇಲೆ ಒತ್ತಡ ಹೇರಲು ಮಲಿಕ್ ಯತ್ನಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

‘ಎನ್‌ಸಿಬಿಯ ಅನಾಮಧೇಯ ಅಧಿಕಾರಿಯೊಬ್ಬರು ಈ ಪತ್ರವನ್ನು ನನಗೆ ಕಳುಹಿಸಿದ್ದಾರೆ. ಇದೊಂದು (ಆರ್ಯನ್ ಪ್ರಕರಣ) ಸುಳ್ಳು ಪ್ರಕರಣವಾಗಿದ್ದು, ಹಲವು ಅಮಾಯಕರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಡಲಾಗಿರುವ ಪಂಚನಾಮೆಯನ್ನು ಎನ್‌ಸಿಬಿ ಕಚೇರಿಯಲ್ಲಿ ಸಿದ್ಧಪಡಿಸಲಾಗಿದೆ. ಈ ಬಗ್ಗೆ ತನಿಖೆ ನಡೆಸಿ’ ಎಂದು ನವಾಬ್ ಮಲಿಕ್ ಅವರು ಆಗ್ರಹಿಸಿದ್ದಾರೆ.

> ಪ್ರಚಾರಕ್ಕಾಗಿ ಮತ್ತು ಹಣ ಮಾಡುವ ಉದ್ದೇಶದಿಂದ ಅಮಾಯಕರನ್ನು ಸಿಲುಕಿಸುವ ಈ ಅಧಿಕಾರಿಯ ವಿರುದ್ಧ ತನಿಖೆ ನಡೆಸಬೇಕು, ಕಠಿಣ ಕ್ರಮ ತೆಗೆದುಕೊಳ್ಳಬೇಕು
>
> **ನವಾಬ್ ಮಲಿಕ್,** ಮಹಾರಾಷ್ಟ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ

> ಸಮೀರ್ ವಾಂಖೆಡೆ ಒಬ್ಬ ಪ್ರಾಮಾಣಿಕ ಅಧಿಕಾರಿ ಮತ್ತು ಸತ್ಯವಂತ. ಅದೇ ದೊಡ್ಡ ಸಮಸ್ಯೆಯಾಗಿದೆ. ಹೀಗಾಗಿ ಅವರು ಇಂತಹ ಆರೋಪಗಳನ್ನೆಲ್ಲಾ ಎದುರಿಸಬೇಕಾಗಿದೆ
>
> **ಕ್ರಾಂತಿ ರೇಡ್ಕರ್**, ಸಮೀರ್ ವಾಂಖೆಡೆ ಪತ್ನಿ

‘ನನಗೆ ಪತ್ರ ಬರೆದಿರುವ ಅಧಿಕಾರಿಯು ಎನ್‌ಸಿಬಿಯ ಮುಂಬೈ ವಲಯ ಕಚೇರಿಯಲ್ಲಿ ಎರಡು ವರ್ಷಗಳಿಂದ ಸೇವೆಯಲ್ಲಿದ್ದಾರೆ. ಸಮೀರ್ ವಾಂಖೆಡೆ ಅವರಿಗೆ ಪ್ರಚಾರದ ಹುಚ್ಚು ಎಂದು ಅವರು ಆರೋಪಿಸಿದ್ದಾರೆ’ ಎಂದು ಮಲಿಕ್ ಹೇಳಿದ್ದಾರೆ.

ಈ ಪತ್ರದ ಪ್ರತಿಯನ್ನು ಮಲಿಕ್ ಅವರು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ಎನ್‌ಸಿಬಿ ಪ್ರಧಾನ ನಿರ್ದೇಶಕ ಎನ್.ಎನ್.ಪ್ರಧಾನ್ ಅವರಿಗೆ ಸಲ್ಲಿಸಿದ್ದಾರೆ. ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದ್ದಾರೆ.

ಎನ್‌ಸಿಬಿ ಕೇಂದ್ರ ಕಚೇರಿಯು ಈ ಪತ್ರವನ್ನು ಸ್ವೀಕರಿಸಿದ್ದು, ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದಷ್ಟೇ ಹೇಳಿದೆ.

‘ನಾನು ಎನ್‌ಸಿಬಿ ವಿರುದ್ಧ ಹೋರಾಡುತ್ತಿಲ್ಲ. ಜನರಿಂದ ಹಣ ವಸೂಲಿ ಮಾಡುತ್ತಿರುವ ವ್ಯಕ್ತಿಯ ವಿರುದ್ಧ ಹೋರಾಡುತ್ತಿದ್ದೇನೆ. ನನ್ನ ಅಂದಾಜಿನ ಪ್ರಕಾರ ಆತ ₹1,000 ಕೋಟಿ ವಸೂಲಿ ಮಾಡಿರಬಹುದು. ಎನ್‌ಸಿಬಿ ಈಗಾಗಲೇ ತನಿಖೆ ಆರಂಭಿಸಿದೆ. ಆದರೆ ಈಗಿನ ಆರೋಪದ ಬಗ್ಗೆಯೂ ಗಮನ ನೀಡಬೇಕು. ವಂಚಿಸಿ, ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಕೆಲಸ ಗಿಟ್ಟಿಸಿಕೊಂಡ ವ್ಯಕ್ತಿಯ ವಿರುದ್ಧ ಮಾತ್ರ ಹೋರಾಡುತ್ತಿದ್ದೇನೆ’ ಎಂದು ಮಲಿಕ್ ಹೇಳಿದ್ದಾರೆ.

‘ಸಮೀರ್ ವಾಂಖೆಡೆ ನನ್ನ ಮತ್ತು ನನ್ನ ಕುಟುಂಬದವರ ಫೋನ್‌ಗಳನ್ನು ಕದ್ದಾಲಿಸಿದ್ದಾರೆ. ಇದು ಅಕ್ರಮ. ನನ್ನ ಮಗಳ ಕರೆ ವಿವರ ದಾಖಲೆಯನ್ನು (ಸಿಡಿಆರ್) ನೀಡುವಂತೆ ಮುಂಬೈ ಪೊಲೀಸರಿಗೆ ಸೂಚನೆ ನೀಡಿದ್ದಾರೆ. ಅವರು ನಿರಾಕರಿಸಿದ್ದಾರೆ. ಆದರೆ ಇತರರನ್ನು ಬಳಸಿಕೊಂಡು ಫೋನ್ ಕರೆ ಕದ್ದಾಲಿಸಿದ್ದಾರೆ. ವಾಂಖೆಡೆ ಬಾಲಿವುಡ್‌ನ ಅತಿಗಣ್ಯರ ಫೋನ್‌ಕರೆಗಳನ್ನೂ ಕದ್ದಾಲಿಸಿದ್ದಾರೆ’ ಎಂದು ಮಲಿಕ್ ಆರೋಪಿಸಿದ್ದಾರೆ.

ಜಾಮೀನು ಅರ್ಜಿ ವಿಚಾರಣೆ ಮುಂದೂಡಿಕೆ

ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪಾರ್ಟಿ ನಡೆಸಿದ ಆರೋಪದಲ್ಲಿ ಬಂಧನದಲ್ಲಿರುವ ಆರ್ಯನ್ ಖಾನ್ ಜಾಮೀನು ಅರ್ಜಿ ವಿಚಾರಣೆಯನ್ನು ಬಾಂಬೆ ಹೈಕೋರ್ಟ್ ಬುಧವಾರಕ್ಕೆ ಮುಂದೂಡಿದೆ.

ಇದೇ ಪ್ರಕರಣದಲ್ಲಿ ಬಂಧಿಸಲಾಗಿದ್ದ ಇನ್ನಿಬ್ಬರು ಆರೋಪಿಗಳಾದ ಮನೀಷ್ ರಾಜ್‌ಗರಿಯಾ ಮತ್ತು ಅವಿನ್ ಸಾಹುಗೆ ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯವು ಮಂಗಳವಾರ ಜಾಮೀನು ನೀಡಿದೆ.

ಮಂಗಳವಾರ ನಡೆದ ವಿಚಾರಣೆ ವೇಳೆ ಆರ್ಯನ್ ಖಾನ್ ಪರವಾಗಿ ಹಿರಿಯ ವಕೀಲ ಮುಕುಲ್ ರೋಹಟಗಿ ವಾದ ಮಂಡಿಸಿದರು. ‘ನನ್ನ ಕಕ್ಷಿದಾರರು ಪಾರ್ಟಿಯಲ್ಲಿ ಇದ್ದರು. ಆದರೆ ಅವರು ಡ್ರಗ್ಸ್ ಸೇವಿಸಿರಲಿಲ್ಲ. ಡ್ರಗ್ಸ್ ತೆಗೆದುಕೊಂಡಿದ್ದರೇ ಎಂಬುದನ್ನು ಪತ್ತೆ ಮಾಡಲು ಅವರನ್ನು ಪರೀಕ್ಷೆಗೂ ಒಳಪಡಿಸಿಲ್ಲ. ಅವರ ಬಳಿಯಿಂದ ಡ್ರಗ್ಸ್ ವಶಪಡಿಸಿಕೊಂಡೂ ಇಲ್ಲ. ಹೀಗಿದ್ದೂ ಅವರನ್ನು ಬಂಧನದಲ್ಲಿ ಇರಿಸಲಾಗಿದೆ’ ಎಂದು ರೋಹಟಗಿ ಹೇಳಿದರು.

‘ಹಡಗಿನಲ್ಲಿ ಪಾರ್ಟಿ ನಡೆಯುತ್ತಿರುವ ವೇಳೆ ವಾಟ್ಸ್‌ಆ್ಯಪ್ ಮೂಲಕ ಯಾವುದೇ ಚಾಟ್ ನಡೆದಿಲ್ಲ. 2018ರಲ್ಲಿ ನಡೆಸಲಾಗಿರುವ ಚಾಟ್ ಅನ್ನು ಈಗಿನದ್ದೆಂದು ಎನ್‌ಸಿಬಿ ಅಧಿಕಾರಿಗಳು ಬಿಂಬಿಸುತ್ತಿದ್ದಾರೆ. ಆನ್‌ಲೈನ್ ಪೋಕರ್‌ಗೆ ಸಂಬಂಧಿಸಿದಂತೆ ಕಾಲೇಜು ಹುಡುಗ ಅಚಿತ್ ಕುಮಾರ್ ಜತೆ ಆರ್ಯನ್ ಖಾನ್ ಚಾಟ್ ನಡೆಸಿದ್ದಾರೆ. ಅದನ್ನೇ ಡ್ರಗ್ಸ್‌ಗೆ ಸಂಬಂಧಿಸಿದ ಚಾಟ್ ಎಂದು ಎನ್‌ಸಿಬಿ ಅಧಿಕಾರಿಗಳು ಆರೋಪಿಸುತ್ತಿದ್ದಾರೆ. ಈ ಹುಡುಗರು ಜೈಲಿನಲ್ಲಿ ಇರಬೇಕಾದವರು ಅಲ್ಲ, ಇವರನ್ನು ಪುನರ್ವಸತಿ ಕೇಂದ್ರಗಳಿಗೆ ಕಳುಹಿಸಬೇಕು’ ಎಂದು ಹೇಳಿದರು.

ವಾದವನ್ನು ಆಲಿಸಿದ ಬಾಂಬೆ ಹೈಕೋರ್ಟ್ ಪೀಠವು, ವಿಚಾರಣೆಯನ್ನು ಬುಧವಾರ ಮಧ್ಯಾಹ್ನ 2.30ಕ್ಕೆ ಮುಂದೂಡಿತು. ಹೀಗಾಗಿ ಮಂಗಳವಾರವೂ ಆರ್ಯನ್ ಖಾನ್‌ಗೆ ಜಾಮೀನು ದೊರೆಯಲಿಲ್ಲ. ಆರ್ಯನ್ ಖಾನ್ ಅವರು ಈ ಹಿಂದೆ ಸಲ್ಲಿಸಿದ್ದ ಎರಡು ಜಾಮೀನು ಅರ್ಜಿಗಳನ್ನೂ ಕೋರ್ಟ್ ತಿರಸ್ಕರಿಸಿತ್ತು. ಇದು ಮೂರನೇ ಅರ್ಜಿ.

‘ಇದು ಅಡುಗೆಮನೆ ರಾಜಕಾರಣ’

ಎನ್‌ಸಿಬಿ ಅಧಿಕಾರಿ ಸಮೀರ್ ವಾಂಖೆಡೆ ವಿರುದ್ಧ ಲಂಚ ಮತ್ತು ಜಾತಿ ಪ್ರಮಾಣ ಪತ್ರ ತಿರುಚಿದ ಆರೋಪ ಮಾಡುತ್ತಿರುವ ಸಚಿವ ನವಾಬ್ ಮಲಿಕ್ ವಿರುದ್ಧ, ಸಮೀರ್ ಅವರ ಕುಟುಂಬವು ಕಾನೂನು ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದೆ. ಜತೆಗೆ, ‘ನವಾಬ್ ಮಲಿಕ್ ಮಾಡುತ್ತಿರುವುದು ಅಡುಗೆಮನೆ ರಾಜಕಾರಣ. ಇದರಿಂದ ಏನನ್ನೂ ಸಾಧಿಸಲು ಆಗುವುದಿಲ್ಲ’ ಎಂದು ಸಮೀರ್ ವಾಂಖೆಡೆ ಪತ್ನಿ ಮತ್ತು ತಂಗಿ ಹರಿಹಾಯ್ದಿದ್ದಾರೆ.

ಸಮೀರ್ ವಾಂಖೆಡೆ ಅವರ ಪತ್ನಿ ಕ್ರಾಂತಿ ರೇಡ್ಕರ್ ಮತ್ತು ತಂಗಿ ಯಾಸ್ಮಿನ್ ವಾಂಖೆಡೆ ಅವರು, ‘ಸಮೀರ್ ವಾಂಖೆಡೆ ಹಿಂದೂ ಎಂಬುದನ್ನು ನಾವು ಹೇಳುತ್ತಲೇ ಇದ್ದೇವೆ. ಈಗ ನಮ್ಮ ವಿರುದ್ಧ ಮಾಡಲಾಗುತ್ತಿರುವ ಆರೋಪಗಳೆಲ್ಲವೂ ಅತ್ಯಂತ ಕೀಳು ಮಟ್ಟದವು. ಇದು ಅಡುಗೆಮನೆ ರಾಜಕಾರಣವಲ್ಲದೆ ಮತ್ತೇನಲ್ಲ. ನಮ್ಮ ಕುಟುಂಬದ ಮಹಿಳೆಯರನ್ನೂ ಗುರಿ ಮಾಡಿಕೊಂಡು ಅವಹೇಳನ ಮಾಡಲಾಗುತ್ತಿದೆ’ ಎಂದು ಅವರು ಆರೋಪಿಸಿದ್ದಾರೆ.

‘ನಮಗೆ ಬೆದರಿಕೆ ಕರೆಗಳು ಬರುತ್ತಿವೆ. ಆದರೆ ನಾವು ಹೆದರುವುದಿಲ್ಲ. ಸತ್ಯ ಹೊರಗೆ ಬರಲಿದೆ. ನೀರಿನ ಅಲೆಯ ವಿರುದ್ಧ ಈಜುವಾಗ ಮುಳುಗುವ ಅಪಾಯವಿರುತ್ತದೆ. ಆದರೆ ದೇವರು ನಮ್ಮ ಜತೆಗಿದ್ದರೆ, ಎಂತಹ ದೊಡ್ಡ ಅಲೆಯೂ ನಮ್ಮನ್ನು ಮುಳುಗಿಸುವುದಿಲ್ಲ’ ಎಂದು ಅವರು ಹೇಳಿದ್ದಾರೆ.

ದೆಹಲಿ ನಿವಾಸಿಗಳಿಗೆ ಅಯೋಧ್ಯೆ ರಾಮಮಂದಿರದ ಉಚಿತ ದರ್ಶನ

ಲಖನೌ: ಉತ್ತರಪ್ರದೇಶದಲ್ಲಿ ವಿಧಾನಸಭಾ ಚುನಾವಣೆಗೆ ಇನ್ನೂ ಐದು ತಿಂಗಳು ಬಾಕಿ ಇರುವಾಗಲೇ ತನ್ನ ಅಸ್ತಿತ್ವಕ್ಕಾಗಿ ಶ್ರಮಿಸುತ್ತಿರುವ ಆಮ್ ಆದ್ಮಿ ಪಕ್ಷವು (ಎಎಪಿ), ಬಿಜೆಪಿಯನ್ನು ಎದುರಿಸಲು ಈಗ ಮೃದು ಹಿಂದುತ್ವದತ್ತ ಹೊರಳಿದೆ. ಅದರ ಭಾಗವಾಗಿ ದೆಹಲಿ ನಿವಾಸಿಗಳಿಗೆ ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರದ ಉಚಿತ ದರ್ಶನದ ಭರವಸೆ ನೀಡಿದೆ.

ಅಯೋಧ್ಯೆಯಲ್ಲಿನ ತಾತ್ಕಾಲಿಕ ಶ್ರೀ ರಾಮ ಮಂದಿರಕ್ಕೆ ಮಂಗಳವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರದೊಂದಿಗೆ ಮಾತನಾಡಿದ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ದೆಹಲಿ ನಿವಾಸಿಗಳಿಗೆ ಉಚಿತ ದರ್ಶನದ ಘೋಷಣೆಯನ್ನು ಮಾಡಿದ್ದಾರೆ.

ವೈಷ್ಣೋದೇವಿ, ಶಿರಡಿ, ಹರಿದ್ವಾರ, ಋಷಿಕೇಶ ಮತ್ತು ದೇಶದ ಇತರ ಪ್ರಮುಖ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುವುದನ್ನು ಒಳಗೊಂಡಂತೆ ದೆಹಲಿ ಸರ್ಕಾರವು ರಾಜ್ಯದ ಜನರಿಗೆ ಉಚಿತ ತೀರ್ಥಯಾತ್ರೆಗೆ ಅನುಕೂಲ ಕಲ್ಪಿಸಿದೆ. ದೆಹಲಿ ಸರ್ಕಾರವೇ ಎಲ್ಲಾ ವೆಚ್ಚಗಳನ್ನು ಭರಿಸುತ್ತದೆ ಮತ್ತು ಯಾತ್ರಿಕರು ಏನನ್ನೂ ಪಾವತಿಸಬೇಕಾಗಿಲ್ಲ. ತೀರ್ಥಯಾತ್ರೆ ಪಟ್ಟಿಯಲ್ಲಿ ಶ್ರೀರಾಮ ಮಂದಿರದ ಭೇಟಿಯನ್ನೂ ಸೇರಿಸಲಾಗುವುದು ಎಂದು ಅವರು ಹೇಳಿದರು.

‘ಆಕಸ್ಮಿಕವಾಗಿ ಹಿಂದೂ’ ಕುರಿತ ಸುದ್ದಿಗಾರರ ಪ್ರಶ್ನೆಗೆ ಉತ್ತರ ನೀಡಲು ತಪ್ಪಿಸಿಕೊಂಡ ಕೇಜ್ರಿವಾಲ್ ಅವರು, ಹಿಂದೂ ಅನ್ನುವುದು ನನಗೆ ಮುಖ್ಯವಲ್ಲ. ಧಾರ್ಮಿಕ ಸ್ಥಳಗಳು ಎಲ್ಲರಿಗೂ ತೆರೆದಿರುತ್ತವೆ. ಅಲ್ಲಿಗೆ ಯಾರೂ ಬೇಕಾದರೂ ಹೋಗಬಹುದು ಎಂದರು. ಉತ್ತರಪ್ರದೇಶ ಚುನಾವಣೆಯಲ್ಲಿ ಎಎಪಿ ಸ್ಥಾನದ ಕುರಿತು ಕೇಳಲಾದ ಪ್ರಶ್ನೆಗೂ ಅವರು ಉತ್ತರ ನೀಡಲಿಲ್ಲ.

‘ಕೋವಿಡ್: ಪಶ್ಚಿಮ ಬಂಗಾಳದಲ್ಲಿ ಹೆಚ್ಚಳ’

ನವದೆಹಲಿ: ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳು ಹಾಗೂ ಕೋವಿಡ್‌ನಿಂದಾಗಿ ಸಾವಿನ ಸಂಖ್ಯೆ ಹೆಚ್ಚುತ್ತಿರುವ ಕಾರಣ, ಕೂಡಲೇ ಕಟ್ಟುನಿಟ್ಟಿನ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸೂಚಿಸಿದೆ.

ಅದರಲ್ಲೂ, ಮುಂಬರುವ ಹಬ್ಬಗಳ ವೇಳೆ ಕೋವಿಡ್ ಮಾರ್ಗಸೂಚಿಗಳು ಪಾಲನೆಯಾಗುವುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಪಶ್ಚಿಮ ಬಂಗಾಳ ಆರೋಗ್ಯ ಇಲಾಖೆ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಸೂಚಿಸಿದ್ದಾರೆ.

ಜಮ್ಮು–ಕಾಶ್ಮೀರ: ಭಾರತ ವಿರುದ್ಧ ಪಾಕ್ ಗೆಲುವು ಸಂಭ್ರಮಿಸಿದ ಆರೋಪ

ವೈದ್ಯ ವಿದ್ಯಾರ್ಥಿಗಳ ವಿರುದ್ಧ ‘ಯುಎಪಿಎ’

ಪ್ರಜಾವಾಣಿ ವಾರ್ತೆ

ಶ್ರೀನಗರ: ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಭಾರತದ ವಿರುದ್ಧ ಪಾಕಿಸ್ತಾನ ಜಯಗಳಿಸಿದ್ದಕ್ಕೆ ಸಂಭ್ರಮಾಚರಣೆ ಮಾಡಿದ ಹಾಗೂ ಭಾರತ ವಿರೋಧಿ ಘೋಷಣೆಗಳನ್ನು ಕೂಗಿದ ಆರೋಪಗಳ ಮೇಲೆ ಇಲ್ಲಿನ ಎರಡು ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವಿರುದ್ಧ ಪೊಲೀಸರು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿ ಪ್ರಕರಣ ದಾಖಲಿಸಿದ್ದಾರೆ.

ಸಂಭ್ರಮಾಚರಣೆ ಹಾಗೂ ಘೋಷಣೆಗಳನ್ನು ಕೂಗಿದ್ದು ಎನ್ನಲಾದ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಈ ವಿಡಿಯೊಗಳ ಆಧಾರದ ಮೇಲೆ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಆದರೆ, ಎಫ್‌ಐಆರ್‌ಗಳಲ್ಲಿ ಯಾವ ವಿದ್ಯಾರ್ಥಿಯ ಹೆಸರು ಉಲ್ಲೇಖಿಸಿಲ್ಲ ಎಂದು ಮೂಲಗಳು ಹೇಳಿವೆ

‘ಪೊಲೀಸರು ಈ ವಿಡಿಯೊಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಹಾಗೂ ವಿದ್ಯಾರ್ಥಿಗಳನ್ನು ಗುರುತಿಸುವ ಪ್ರಕ್ರಿಯೆ ಆರಂಭಿಸಿದ್ದಾರೆ’ ಎಂದು ಇವೇ ಮೂಲಗಳು ಹೇಳಿವೆ.

ಆರೋಪಿಗಳ ವಿರುದ್ಧ ಐಪಿಸಿಯ ಸೆಕ್ಷನ್ 105 (ಎ), 505 ಹಾಗೂ ಯುಎಪಿಎ ಸೆಕ್ಷನ್ 13ರ ಅಡಿ ಕರಣ್‌ನಗರ ಹಾಗೂ ಶ್ರೀನಗರದ ಸೌರಾ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಜಮ್ಮು–ಕಾಶ್ಮೀರ ಪೊಲೀಸ್ ಮುಖ್ಯಸ್ಥ ದಿಲ್‌ಬಾಗ್ ಸಿಂಗ್ ಅವರು ಈ ವಿಷಯವನ್ನು ಖಚಿತಪಡಿಸಿದ್ದಾರೆ.

‘ಭಾರತ–ಪಾಕಿಸ್ತಾನ ನಡುವಿನ ಪಂದ್ಯದ ನಂತರ, ಸಂಭ್ರಮಾಚರಣೆಗೆ ಸಂಬಂಧಿಸಿದ ಹಲವಾರು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. 2017ರಷ್ಟು ಹಳೆಯ ವಿಡಿಯೊಗಳು ಸಹ ಹರಿದಾಡುತ್ತಿವೆ’ ಎಂದು ಅವರು ಹೇಳಿದರು.

‘ಆದರೆ, ಸರ್ಕಾರಿ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಡಿಯೊವೊಂದು ಸಹ ವೈರಲ್ ಆಗಿದೆ. ಈ ಸಂಬಂಧ ಎಫ್‌ಐಆರ್ ದಾಖಲಿಸಿದ್ದು, ಕ್ರಮ ಕೈಗೊಳ್ಳಲಾಗುವುದು’ ಎಂದೂ ಅವರು ಸ್ಪಷ್ಟಪಡಿಸಿದರು.

‘ಕಠಿಣ ಕ್ರಮ’: ‘ವಿದ್ಯಾರ್ಥಿಗಳ ವಿರುದ್ಧ ಪೊಲೀಸರ ಕ್ರಮ ಬಹಳ ಕಠಿಣವಾದದ್ದು. ಇದರಿಂದ ಅವರ ಭವಿಷ್ಯ ಹಾಳಾಗುವುದು. ಅಲ್ಲದೇ, ಅವರಲ್ಲಿ ಮತ್ತಷ್ಟೂ ಪರಕೀಯ ಭಾವನೆ ಮೂಡುವುದು’ ಎಂದು ಜಮ್ಮು–ಕಾಶ್ಮೀರ ವಿದ್ಯಾರ್ಥಿಗಳ ಸಂಘದ ರಾಷ್ಟ್ರೀಯ ವಕ್ತಾರ ನಾಸಿರ್ ಖುಹಾಮಿ ಪ್ರತಿಕ್ರಿಯಿಸಿದ್ದಾರೆ.

ಪೊಲೀಸರ ಕ್ರಮವನ್ನು ಟೀಕಿಸಿರುವ ಪೀಪಲ್ಸ್ ಕಾನ್ಫರೆನ್ಸ್ ಪಕ್ಷದ ಮುಖ್ಯಸ್ಥ ಸಜ್ಜಾದ್ ಗನಿ ಲೋನ್ ಅವರು, ‘ಸೈದ್ಧಾಂತಿಕವಾಗಿ ಭಿನ್ನ ನಿಲುವು ಹೊಂದಿರುವವರ ಜೊತೆ ಕಾಶ್ಮೀರದಲ್ಲಿ ನಾವು ಬದುಕಬೇಕಿದೆ’ ಎಂದು ಹೇಳಿದ್ದಾರೆ.

‘ಸಂಭ್ರಮಿಸಿದ್ದಕ್ಕಾಗಿ ಈ ವಿದ್ಯಾರ್ಥಿಗಳು ದೇಶಪ್ರೇಮಿಗಳಲ್ಲ ಎಂಬ ಭಾವನೆ ನಿಮ್ಮದಾಗಿದ್ದರೆ, ಅವರ ಮನಪರಿವರ್ತನೆ ಮಾಡುವ ಧೈರ್ಯ ಮತ್ತು ನಂಬಿಕೆ ನಿಮ್ಮಲ್ಲಿರಬೇಕು. ಈ ರೀತಿಯ ದಂಡನೆಗಳಿಂದ ಯಾವುದೇ ಪ್ರಯೋಜನ ಇಲ್ಲ’ ಎಂದೂ ಅಭಿಪ್ರಾಯಪಟ್ಟರು.

‘ಜೀತ್ ಗಯೀ…’ ಎಂದು ಸ್ಟೇಟಸ್ ಹಾಕಿದ್ದ ಶಿಕ್ಷಕಿ ಕೆಲಸದಿಂದ ವಜಾ

ಜೈಪುರ: ಟಿ–20 ವಿಶ್ವಕಪ್ ಪಂದ್ಯದಲ್ಲಿ ಭಾರತದ ವಿರುದ್ಧ ಪಾಕಿಸ್ತಾನ ಗೆದ್ದದ್ದನ್ನು ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಸಂಭ್ರಮಿಸಿದ್ದ ರಾಜಸ್ಥಾನದ ಉದಯಪುರದ ಖಾಸಗಿ ಶಾಲೆಯ ಶಿಕ್ಷಕಿಯನ್ನು ಕೆಲಸದಿಂದ ವಜಾ ಮಾಡಲಾಗಿದೆ.

ಉದಯಪುರದ ನೀರಜಾ ಮೋದಿ ಶಾಲೆಯ ಶಿಕ್ಷಕಿ ನಫೀಸಾ ಅಟ್ಟಾರಿ ಅವರು ಪಾಕಿಸ್ತಾನಿ ಆಟಗಾರರ ಚಿತ್ರವನ್ನು ಸ್ಟೇಟಸ್‌ನಲ್ಲಿ ಹಾಕಿಕೊಂಡು ‘ಜೀತ್ ಗಯೀ… ನಾವು ಗೆದ್ದಿದ್ದೇವೆ’ಎಂದು ಶೀರ್ಷಿಕೆ ಹಾಕಿದ್ದರು.

ಆಕೆಯ ವಾಟ್ಆ್ಯಪ್ ಸ್ಟೇಟಸ್‌ನ ಸ್ಕ್ರೀನ್‌ಶಾಟ್‌ಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ನಂತರ, ಶಾಲೆಯ ಆಡಳಿತ ಮಂಡಳಿಯು ಅವರನ್ನು ಕೆಲಸದಿಂದ ವಜಾಗೊಳಿಸಿದೆ. ‘ಹೌದು, ನಾವು ಆ ಶಿಕ್ಷಕಿಯನ್ನು ಕೆಲಸದಿಂದ ವಜಾಗೊಳಿಸುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ’ಎಂದು ಶಾಲೆಯನ್ನು ನಡೆಸುತ್ತಿರುವ ಸೋಜಾಟಿಯಾ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಮಹೇಂದ್ರ ಸೋಜಾಟಿಯಾ ಹೇಳಿದ್ದಾರೆ.

ಭಾರತೀಯ ದಂಡ ಸಂಹಿತೆ 153 (ಗಲಭೆ ಉಂಟು ಮಾಡುವ ಉದ್ದೇಶದಿಂದ ಪ್ರಚೋದನೆ) ಅಡಿಯಲ್ಲಿ ಶಿಕ್ಷಕಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅಂಬಾ ಮಾತಾ ಪೊಲೀಸ್ ಠಾಣೆ ಠಾಣಾಧಿಕಾರಿ ನರ್ಪತ್ ಸಿಂಗ್ ಹೇಳಿದ್ದಾರೆ.

‘ನನ್ನ ತಪ್ಪಿನ ಅರಿವಾಗುತ್ತಿದ್ದಂತೆ ಸ್ಟೇಟಸ್ ಅನ್ನು ಅಳಿಸಿದೆ, ಯಾರಿಗಾದರೂ ನೋವಾಗಿದ್ದರೆ ಕ್ಷಮಿಸಿ’ಎಂದು ಶಿಕ್ಷಕಿ ಹೇಳಿದ್ದಾರೆ.

ಪ್ರತ್ಯೇಕ ವರದಿಗೆ ಸೂಚನೆ

ನವದೆಹಲಿ: ಕೃಷಿ ಸುಧಾರಣಾ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ವಾಹನ ಹರಿದು ನಾಲ್ವರು ರೈತರು ಸಾವಿಗೀಡಾದ ಬೆನ್ನಲ್ಲೇ. ಅ. 3ರಂದು ನಡೆದ ಲಖಿಂಪುರ ಖೇರಿ ಹಿಂಸಾಚಾರದಲ್ಲಿ ಪತ್ರಕರ್ತ ಸೇರಿದಂತೆ ನಾಲ್ವರನ್ನು ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದ ಎರಡನೇ ಎಫ್‌ಐಆರ್ ಕುರಿತು ಪ್ರತ್ಯೇಕ ವರದಿಯನ್ನು ಸಲ್ಲಿಸುವಂತೆ ಉತ್ತರಪ್ರದೇಶ ಸರ್ಕಾರಕ್ಕೆ ಮಂಗಳವಾರ ಸುಪ್ರೀಂಕೋರ್ಟ್ ಸೂಚನೆ ನೀಡಿದೆ.

ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಕೈಗೊಂಡ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ನ್ಯಾಯಪೀಠವು ಮೊದಲ ಎಫ್‌ಐಆರ್‌ನ ಸಾಕ್ಷಿಗಳ ರಕ್ಷಣೆ ಮತ್ತು ಅವರ ಹೇಳಿಕೆಗಳನ್ನು ತ್ವರಿತವಾಗಿ ದಾಖಲಿಸುವಂತೆ ಆದೇಶ ನೀಡಿತು.

ಹಿಂಸಾಚಾರದಲ್ಲಿ ಹತ್ಯೆಗೀಡಾದ ಶ್ಯಾಮಸುಂದರ್ ಅವರ ಪತ್ನಿ ರೂಬಿ ದೇವಿ ಅವರ ಪರ ಹಾಜರಾದ ಹಿರಿಯ ವಕೀಲ ಅರುಣ್ ಭಾರದ್ವಾಜ್ ‘ಶ್ಯಾಮಸುಂದರ್ ಅವರ ಹತ್ಯೆಗೆ ಕಾರಣರಾದ ಮೂವರು ಆರೋಪಿಗಳು ಆರಾಮವಾಗಿ ಓಡಾಡಿಕೊಂಡಿದ್ದಾರೆ. ಅವರ ವಿರುದ್ಧ ಪೊಲೀಸರು ಯಾವುದೇ ಕ್ರಮವನ್ನು ಕೈಗೊಂಡಿಲ್ಲ’ ಎಂದು ನ್ಯಾಯಾಲಯದ ಮುಂದೆ ವಾದ ಮಂಡಿಸಿದರು.

ಹತ್ಯೆಗೀಡಾದ ಪತ್ರಕರ್ತ ರಮಣ್ ಕಶ್ಯಪ್ ಅವರ ಕುಟುಂಬದ ಪರ ಹಾಜರಾಗಿ ವಾದ ಮಂಡಿಸಿದ ಹಿರಿಯ ವಕೀಲ ಹರ್ಷವೀರ್ ಪ್ರತಾಪ್ ಶರ್ಮಾ, ಆರೋಪಿಗಳನ್ನು ಬಂಧಿಸುವಂತೆ ಪೊಲೀಸರಿಗೆ ನಿರ್ದೇಶನ ನೀಡಬೇಕೆಂದು ನ್ಯಾಯಾಲಯವನ್ನು ಕೋರಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಉತ್ತರವನ್ನು ಸಲ್ಲಿಸುವಂತೆ ಉತ್ತರಪ್ರದೇಶ ಸರ್ಕಾರದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರಿಗೆ ನ್ಯಾಯಪೀಠವು ಸೂಚಿಸಿದೆ.

ಪ್ರಕರಣದ ಮುಂದಿನ ವಿಚಾರಣೆಯನ್ನು ನ್ಯಾಯಾಲಯವು ನ. 8ಕ್ಕೆ ನಿಗದಿಪಡಿಸಿತು.

ಕೇವಲ 23 ಜನ ಮಾತ್ರ ಪ್ರತ್ಯಕ್ಷದರ್ಶಿಗಳು: ‘ಸುಪ್ರೀಂ’ ಅಚ್ಚರಿ

ನವದೆಹಲಿ: ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ನ್ಯಾಯಪೀಠವು, ‘4ರಿಂದ 5 ಸಾವಿರ ಜನರು ಸೇರಿದ್ದ ಸಭೆಯಲ್ಲಿ ಕೇವಲ 23 ಜನರನ್ನು ಮಾತ್ರ ಘಟನೆಯ ಪ್ರತ್ಯಕ್ಷದರ್ಶಿಗಳೆಂದು ಗುರುತಿಸಲಾಗಿದೆ’ ಎಂದು ಆಶ್ಚರ್ಯ ವ್ಯಕ್ತಪಡಿಸಿತು.

ರುಮೇನಿಯಾದಲ್ಲಿ ಲಸಿಕಾ ಕೇಂದ್ರಗಳ ಮುಂದೆ ಉದ್ದನೆಯ ಸಾಲು

ಐರೋಪ್ಯ ದೇಶಗಳಲ್ಲಿ ಕೋವಿಡ್ ಉಲ್ಬಣ

ಪ್ಯಾರಿಸ್ (ಎಎಫ್‌ಪಿ): ಐರೋಪ್ಯ ರಾಷ್ಟ್ರಗಳಲ್ಲಿ ಕೊರೊನಾ ಸೋಂಕಿನ ಹೊಸ ಪ್ರಕರಣಗಳು ಹಾಗೂ ಕೋವಿಡ್‌ನಿಂದಾಗಿ ಸಾಯುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ.

ಅದರಲ್ಲೂ, ರಷ್ಯಾ, ಉಕ್ರೇನ್ ಹಾಗೂ ರುಮೇನಿಯಾದಲ್ಲಿ ಸಾವಿನ ಪ್ರಮಾಣ ಹೆಚ್ಚು ಕಂಡುಬಂದಿದೆ ಎಂದು ಮಂಗಳವಾರದ ಅಂಕಿ–ಅಂಶಗಳನ್ನು ಉಲ್ಲೇಖಿಸಿ ಎಎಫ್‌ಪಿ ಸುದ್ದಿಸಂಸ್ಥೆ ವರದಿ ಮಾಡಿದೆ.

ಐರೋಪ್ಯ ರಾಷ್ಟ್ರಗಳಲ್ಲಿ ಕಳೆದ ಒಂದು ವಾರದಲ್ಲಿ ಕೋವಿಡ್–19ನ 16,72,000 ಹೊಸ ಪ್ರಕರಣಗಳು ವರದಿಯಾಗಿವೆ. ಪ್ರತಿದಿನ ವರದಿಯಾಗುತ್ತಿರುವ ಪ್ರಕರಣ ಸಂಖ್ಯೆ ಸರಾಸರಿ 2,39,000 ಎಂದೂ ಸುದ್ದಿಸಂಸ್ಥೆ ತಿಳಿಸಿದೆ.

ಕಳೆದ ವಾರಕ್ಕೆ ಹೋಲಿಸಿದರೆ ಪ್ರಕರಣಗಳ ಸಂಖ್ಯೆಯಲ್ಲಿ ಶೇ 18ರಷ್ಟು ಹೆಚ್ಚಳ ಕಂಡುಬಂದಿದೆ. ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ವರದಿಯಾದ ಪ್ರಕರಣಗಳ ಸಂಖ್ಯೆಗೆ ಹೋಲಿಸಿದರೆ, ಇದು ಶೇ 60ರಷ್ಟು ಹೆಚ್ಚಳ ಎಂದೂ ತಿಳಿಸಿದೆ.

42 ದೇಶಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದ್ದು, ಉಕ್ರೇನ್, ಹಂಗೇರಿ ಹಾಗೂ ಪೋಲೆಂಡ್ ದೇಶಗಳು ಹೆಚ್ಚು ಬಾಧಿತವಾಗಿವೆ.

ಯುರೋಪ್ ಖಂಡದಲ್ಲಿ ಕಳೆದ ಏಳು ದಿನಗಳ ಅವಧಿಯಲ್ಲಿ ಕೋವಿಡ್‌ನಿಂದಾಗಿ ಪ್ರತಿನಿತ್ಯ ಸರಾಸರಿ 3,120 ಜನರು ಮೃತಪಟ್ಟಿರುವುದು ಕಂಡುಬಂದಿದೆ. ಸಾವಿನ ಪ್ರಮಾಣದಲ್ಲಿ ಶೇ 16ರಷ್ಟು ಏರಿಕೆಯಾಗಿದೆ ಎಂದು ಅಂಕಿ–ಅಂಶಗಳನ್ನು ಉಲ್ಲೇಖಿಸಿ ಎಎಫ್‌ಪಿ ವರದಿ ಮಾಡಿದೆ.

ರುಮೇನಿಯಾದ ಬುಕಾರೆಸ್ಟ್ ನಗರದ ಲಸಿಕಾ ಕೇಂದ್ರವೊಂದರಲ್ಲಿ ಜನರಿಗೆ ಕೋವಿಡ್ ಲಸಿಕೆ ನೀಡಲಾಯಿತು –ಎಎಫ್‌ಪಿ ಚಿತ್ರ

ಲಸಿಕೆ ಪಡೆಯಲು ಸಾಲು

ಬುಕಾರೆಸ್ಟ್, ರುಮೇನಿಯಾ (ರಾಯಿಟರ್ಸ್): ದೇಶದಲ್ಲಿ ಕೋವಿಡ್–19ನಿಂದಾಗಿ ಸಾಯುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಆಸ್ಪತ್ರೆಗಳಲ್ಲಿನ ಹಾಸಿಗೆಗಳು ಸಹ ಭರ್ತಿಯಾಗಿದ್ದು, ರೋಗಿಗಳು ಚಿಕಿತ್ಸೆಗಾಗಿ ಪರದಾಡುತ್ತಿದ್ದಾರೆ.

ಕೋವಿಡ್–19 ಪ್ರಕರಣಗಳು ಹಾಗೂ ಸಾವಿನ ಸಂಖ್ಯೆಯಲ್ಲಿನ ಈ ದಿಢೀರ್ ಹೆಚ್ಚಳದ ಪರಿಣಾಮ ಜನರು ಕೋವಿಡ್ ಲಸಿಕೆ ಪಡೆಯಲು ಮುಗಿ ಬಿದ್ದಿದ್ದಾರೆ. ಹೀಗಾಗಿ ಲಸಿಕಾ ಕೇಂದ್ರಗಳ ಮುಂದೆ ಉದ್ದನೆಯ ಸಾಲುಗಳು ಈಗ ನಿತ್ಯದ ದೃಶ್ಯಗಳಾಗಿವೆ. ಅತಿ ಕಡಿಮೆ ಪ್ರಮಾಣದ ಲಸಿಕೆ ನೀಡಿರುವ ಯುರೋಪ್‌ನ ಎರಡು ದೇಶಗಳ ಪೈಕಿ ರುಮೇನಿಯಾವೂ ಒಂದು. ಇಲ್ಲಿ ಶೇ 38ರಷ್ಟು ಜನರು ಲಸಿಕೆ ಹಾಕಿಸಿಕೊಂಡಿದ್ದಾರೆ.

ರಷ್ಯಾ : ಒಂದೇ ದಿನ 1,106 ಸಾವು

ಮಾಸ್ಕೊ (ರಾಯಿಟರ್ಸ್): ರಷ್ಯಾದ್ಯಂತ ಕಳೆದ 24 ಗಂಟೆಗಳಲ್ಲಿ ಕೋವಿಡ್ ಸೋಂಕಿನಿಂದ 1,106 ಮಂದಿ ಸಾವನ್ನಪ್ಪಿದ್ದು, ಇದು ಈ ಪಿಡುಗು ಆರಂಭವಾದಾಗಿನಿಂದ ಇದುವರೆಗೆ ದಾಖಲಾಗಿರುವ ಅತಿ ಹೆಚ್ಚಿನ ಸಾವಿನ ಪ್ರಕರಣವಾಗಿದೆ.

ಹೀಗಾಗಿ, ಮಾಸ್ಕೊ ಸೇರಿದಂತೆ ವಿವಿಧ ನಗರಗಳಲ್ಲಿ ಮತ್ತೆ ಲಾಕ್‌ಡೌನ್‌ನಂತಹ ಕಠಿಣ ಕ್ರಮಗಳನ್ನು ಜಾರಿಗೊಳಿಸಲು ಅಧಿಕಾರಿಗಳು ಸಿದ್ಧತೆ ನಡೆಸುತ್ತಿದ್ದಾರೆ. ಕಳೆದ ಆರು ದಿನಗಳಿಂದ ಪ್ರತಿ ನಿತ್ಯ ದಾಖಲೆ ಪ್ರಮಾಣದಲ್ಲಿ ಹೊಸ ಸೋಂಕಿನ ಪ್ರಕರಣಗಳು ವರದಿಯಾಗುತ್ತಿವೆ.

ಬೀಜಿಂಗ್: ಚೀನಾದ ವಾಯವ್ಯ ಭಾಗದ ಗನ್ಸು ಪ್ರಾಂತ್ಯದ ರಾಜಧಾನಿ ಲಾಂಝೌ ನಗರದಲ್ಲಿ ಮಂಗಳವಾರ ಲಾಕ್‌ಡೌನ್ ಘೋಷಣೆಯಾಗಿದ್ದು, ಇಲ್ಲಿನ 40 ಲಕ್ಷ ಜನರು ಮನೆಯೊಳಗೆಯೇ ಇರುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಅಕ್ಟೋಬರ್ 17ರಿಂದೀಚೆಗೆ ಚೀನಾದಲ್ಲಿ 198 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಡೆಲ್ಟಾ ರೂಪಾಂತರದಿಂದಲೇ ಈ ಸೋಂಕು ಹರಡಿತ್ತು. ಈ ಪೈಕಿ ಲಾಂಝೌ ನಗರದಲ್ಲಿ ಗರಿಷ್ಠ ಅಂದರೆ 39 ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಈ ನಗರದಲ್ಲಿ ಇದೀಗ ಲಾಕ್‌ಡೌನ್ ಘೋಷಿಸಲಾಗಿದೆ.

ಅಮೆರಿಕ: ಲಸಿಕೆ ಪಡೆದವರ ಪ್ರಯಾಣ ನಿರ್ಬಂಧ ತೆರವು

ವಾಷಿಂಗ್ಟನ್ (ಪಿಟಿಐ): ಕೋವಿಡ್ ಲಸಿಕೆಯ ಪೂರ್ಣ ಪ್ರಮಾಣದ ಡೋಸ್‌ಗಳನ್ನು ಹಾಕಿಸಿಕೊಂಡಿರುವ ಭಾರತ ಸೇರಿದಂತೆ ಇತರ ದೇಶಗಳ ಪ್ರಜೆಗಳು ಅಮೆರಿಕಕ್ಕೆ ಪ್ರಯಾಣಿಸುವುದರ ಮೇಲೆ ವಿಧಿಸಿದ್ದ ಎಲ್ಲ ನಿರ್ಬಂಧಗಳನ್ನು ನ.8ರಿಂದ ಅನ್ವಯವಾಗುವಂತೆ ತೆಗೆದುಹಾಕಲಾಗಿದೆ ಎಂದು ಶ್ವೇತಭವನ ತಿಳಿಸಿದೆ.

ಅಮೆರಿಕಕ್ಕೆ ಬರುವ ವಿಮಾನ ಏರುವ ಮುನ್ನ, ಪ್ರಯಾಣಿಕರು ಕೋವಿಡ್‌ಗೆ ಸಂಬಂಧಿಸಿ ನೆಗೆಟಿವ್ ವರದಿಯನ್ನು ಹಾಜರುಪಡಿಸುವುದು ಕಡ್ಡಾಯ ಎಂದು ತಿಳಿಸಿದೆ.

ಪ್ರಯಾಣಕ್ಕೆ ಸಂಬಂಧಿಸಿದ ಹೊಸ ಮಾರ್ಗಸೂಚಿಗಳನ್ನು ಶ್ವೇತಭವನ ಬಿಡುಗಡೆ ಮಾಡಿದೆ. ಕೊರೊನಾ ಸೋಂಕಿನಿಂದ ರಕ್ಷಣೆ ಪಡೆಯುವ ಸಲುವಾಗಿ ಕೋವಿಡ್ ಪರೀಕ್ಷೆಗೆ ಸಂಬಂಧಿಸಿ ಮತ್ತಷ್ಟೂ ಬಿಗಿ ಕ್ರಮಗಳನ್ನು ಪ್ರಕಟಿಸಲಾಗಿದೆ.

ದೇಶಕ್ಕೆ ಮರಳಬೇಕೆನ್ನುವ ಅಮೆರಿಕ ಪ್ರಜೆಗಳು, ಕಾನೂನುರೀತ್ಯ ಕಾಯಂ ನಿವಾಸಿಗಳು (ಎಲ್‌ಪಿಆರ್) ಅಥವಾ ಲಸಿಕೆಯನ್ನು ಪಡೆಯದಿದ್ದರೂ ಪ್ರಯಾಣ ಕೈಗೊಳ್ಳಲು ಅನುಮತಿ ನೀಡಲಾದ ವಿದೇಶಿ ಪ್ರಜೆಗಳು, ವಿಮಾನ ನಿರ್ಗಮನಕ್ಕೂ ಒಂದು ದಿನ ಮೊದಲು ಕೋವಿಡ್ ಪರೀಕ್ಷೆಗೆ ಒಳಗಾಗಬೇಕು ಎಂದು ನೂತನ ಮಾರ್ಗಸೂಚಿಗಳಲ್ಲಿ ಹೇಳಲಾಗಿದೆ.

‘ಎರಡು ಸಂಚಾರಿ ಆಸ್ಪತ್ರೆ ಸ್ಥಾಪನೆ’

ನವದೆಹಲಿ (ಪಿಟಿಐ): ಪ್ರಧಾನಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲಸೌಕರ್ಯ ಮಿಷನ್‌ನಡಿ ಕಂಟೇನರ್ ಆಧಾರಿತ ಎರಡು ಸಂಚಾರಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವೀಯಾ ಮಂಗಳವಾರ ತಿಳಿಸಿದರು.

‘ತಲಾ 100 ಹಾಸಿಗೆ ಸಾಮರ್ಥ್ಯದ ಈ ಸಂಚಾರಿ ಆಸ್ಪತ್ರೆಗಳು ಎಲ್ಲ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿರಲಿವೆ. ದೆಹಲಿ ಹಾಗೂ ಚೆನ್ನೈನಲ್ಲಿ ಒಂದೊಂದು ಆಸ್ಪತ್ರೆಯನ್ನಿರಿಸಲಾಗುವುದು. ತುರ್ತು ಸಂದರ್ಭಗಳಲ್ಲಿ ಈ ಆಸ್ಪತ್ರೆಗಳನ್ನು ರೈಲು ಸಾಗಿಸಲು ಅಥವಾ ಏರ್‌ಲಿಫ್ಟ್ ಮಾಡಿ ಅಗತ್ಯ ಕಂಡು ಬಂದ ಪ್ರದೇಶಕ್ಕೆ ಒಯ್ಯಬಹುದು’ ಎಂದು ಅವರು ಹೇಳಿದರು.

‘ಎಲ್ಲ ವೈದ್ಯಕೀಯ ಸೌಲಭ್ಯಗಳಿದ್ದು ಸದಾ ಸನ್ನದ್ಧ ಸ್ಥಿತಿಯಲ್ಲಿರುವ ಕಂಟೇನರ್ ಆಧಾರಿತ ಆಸ್ಪತ್ರೆಗಳನ್ನು ಹೊಂದಿದ ದಕ್ಷಿಣ ಏಷ್ಯಾದ ಎರಡನೇ ರಾಷ್ಟ್ರವೆಂಬ ಹೆಗ್ಗಳಿಕೆ ಭಾರತದ್ದಾಗಲಿದೆ’ ಎಂದೂ ಹೇಳಿದರು.

ನವರಾತ್ರಿಯ –ನವ ಸಂಭ್ರಮ

ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಓದುಗರಿಗೆ ಧನ್ಯವಾದಗಳು. ಪ್ರಶ್ನಾವಳಿ, ಪದಬಂಧ & ಚಿತ್ರಬಂಧ ಸ್ಪರ್ಧೆಗಳ ಸರಿ ಉತ್ತರಗಳು, ಉಳಿದ ಸ್ಪರ್ಧೆಗಳಲ್ಲಿ ಬಂದಿರುವ ಉತ್ತಮ ಚಿತ್ರಗಳು, 9 ಬಂಪರ್ ಬಹುಮಾನ ವಿಜೇತರನ್ನು ಹಾಗೂ 90 ಗಿಫ್ಟ್ ವೌಚರ್ ಬಹುಮಾನ ವಿಜೇತರನ್ನು ಪ್ರಕಟಿಸಲಾಗಿದೆ.

ವಿವರಗಳಿಗೆ www.bit.ly/pvnavaratriwinner ಗೆ ಭೇಟಿ ಕೊಡಿ

ಉದ್ಯೋಗ ವಾಣಿ

ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿ,
ನಂ.71/1, ಗಾಂಧಿಬಜಾರ್ ಮುಖ್ಯರಸ್ತೆ, ಬೆಂಗಳೂರು–560004

ಪ್ರಕಟಣೆ

ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇಲ್ಲಿ ಖಾಲಿ ಇರುವ ಕೆಳಕಂಡ ಹುದ್ದೆಗಳನ್ನು ತುಂಬಲು ಅರ್ಹರಿರುವ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ

ಕ್ರ. ಸಂ.	ಹುದ್ದೆಯ ಹೆಸರು	ವೇತನ ಶ್ರೇಣಿ
1	ಕಿರಿಯ ಸಹಾಯಕ	ರೂ.18000–450–18900–540–22140–630–25920–720–30240–810–32670
2	ವಾಹನ ಚಾಲಕ ಕಮ್ ಜವಾನ	ರೂ.13095–315–14040–360–15480–405–17100–450–18900–540–22140–630–24030

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10–11–2021 ರಂದು ಸಂಜೆ 5.30 ಘಂಟೆಯವರೆಗೆ

ವಿದ್ಯಾರ್ಹತೆ

ಕಿರಿಯ ಸಹಾಯಕ ಹುದ್ದೆಗೆ :– ಕನಿಷ್ಠ ವಿದ್ಯಾರ್ಹತೆ ಪಿ.ಯು.ಸಿ ತೇರ್ಗಡೆ, ಕಂಪ್ಯೂಟರ್ ಬಳಕೆಯ ಜ್ಞಾನ, ಕನ್ನಡ ಭಾಷೆಯಲ್ಲಿ ಓದು, ಬರಹ ಹಾಗೂ ಮಾತನಾಡಲು ಬಲ್ಲವರಾಗಿರಬೇಕು. ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಬಿಎಸ್ಸಿ, (PCM) / ಬಿಬಿಎಂ/ಬಿಕಾಂ/ಬಿಬಿಎ/ಬಿಸಿಎ/ಬಿಇ (ಐಎಸ್/ಸಿಎಸ್) ಪದವೀಧರರಿಗೆ ಪ್ರಥಮ ಆದ್ಯತೆ ನೀಡಲಾಗುವುದು.

ವಾಹನ ಚಾಲಕ ಕಮ್ ಜವಾನ : ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಸಕ್ಷಮ ಪ್ರಾಧಿಕಾರವು ನೀಡಿರುವ ಸಾರಿಗೆ ವಾಹನ ಚಾಲನಾ ಪರವಾನಗಿ ಹೊಂದಿರಬೇಕು. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ವಿಷಯವನ್ನಾಗಿ ಅಭ್ಯಸಿಸಿರಬೇಕು

ವಯೋಮಿತಿ :– ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ
ಅ. ಸಾಮಾನ್ಯ ವರ್ಗದವರು – ಕನಿಷ್ಟ 18 ಗರಿಷ್ಟ 35 ವರ್ಷಗಳು
ಆ. ಹಿಂದುಳಿದ ವರ್ಗದವರು – ಕನಿಷ್ಟ 18 ಗರಿಷ್ಟ 38 ವರ್ಷಗಳು
ಇ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗದಲ್ಲಿನ ಪ್ರವರ್ಗ–1 – ಕನಿಷ್ಟ 18 ಗರಿಷ್ಟ 40 ವರ್ಷಗಳು

ಆಯ್ಕೆ ವಿಧಾನ:
ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ಮತ್ತು ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆಗಳ ಪ್ರಕಾರ ಆಯ್ಕೆ ಮಾಡಲಾಗುವುದು.

ಅರ್ಜಿ ಸಲ್ಲಿಸುವ ವಿಧಾನ
ಅರ್ಹತೆಯುಳ್ಳ ಅಭ್ಯರ್ಥಿಗಳು ಜಾಲತಾಣದಲ್ಲಿ ಪ್ರಕಟಿಸಿರುವ ಅರ್ಜಿ ನಮೂನೆಯನ್ನು ಬಳಸಿ ತುಂಬಿದ ಅರ್ಜಿಗಳನ್ನು ಭಾವಚಿತ್ರ ಹಾಗೂ ಡಿ.ಡಿ ಯೋಂದಿಗೆ ಅಂಚೆ ಮುಖಾಂತರ ಬ್ಯಾಂಕಿನ ವಿಳಾಸಕ್ಕೆ ನಿಗದಿತ ಕಾಲಾವಧಿಯೊಳಗೆ ಸಲ್ಲಿಸಬೇಕು.
ಅ. ಕಿರಿಯ ಸಹಾಯಕ ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ರೂ.1000/– ಮೌಲ್ಯದ ಡಿ.ಡಿ ಯನ್ನು ಹಾಗೂ ಜವಾನ ಕಮ್ ವಾಹನ ಚಾಲಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ರೂ.500/– ಮೌಲ್ಯದ ಡಿ.ಡಿ ಯನ್ನು ವ್ಯವಸ್ಥಾಪಕ ನಿರ್ದೇಶಕರು, ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
ಆ. ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ.
ಇ. ನಿಗದಿತ ಅರ್ಜಿ ನಮೂನೆಯೊಂದಿಗೆ ವಿದ್ಯಾರ್ಹತೆ, ಜನ್ಮ ದಿನಾಂಕ, ಅನುಭವ ಸಂಬಂಧಪಟ್ಟಂತೆ ಸಲ್ಲಿಸುವ ಎಲ್ಲಾ ಪೂರಕ ದಾಖಲೆಗಳಿಗೆ ಪತ್ರಾಂಕಿತ ಅಧಿಕಾರಿ ದೃಢೀಕರಿಸಿರಬೇಕು. (Attested copies of all documents by the gazetted officer)
ಈ. ಸಂದರ್ಭಾನುಸಾರ ಲಕೋಟೆಯ ಮೇಲೆ “ಕಿರಿಯ ಸಹಾಯಕ”/“ವಾಹನ ಚಾಲಕ ಕಮ್ ಜವಾನ” ಹುದ್ದೆಗೆ ಅರ್ಜಿ ಎಂದು ನಮೂದಿಸಿ ಸಲ್ಲಿಸತಕ್ಕದ್ದು.
ಉ. ತಪ್ಪು ಮಾಹಿತಿ ನೀಡಿದಲ್ಲಿ ಅಥವಾ ಅಪೂರ್ಣ ಮಾಹಿತಿ ನೀಡಿದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
ಊ. ಕಾನೂನು ಚೌಕಟ್ಟಿನಲ್ಲಿ ಅರ್ಜಿಗಳನ್ನು ತಿರಸ್ಕರಿಸುವ ಅಧಿಕಾರ ಬ್ಯಾಂಕಿಗೆ ದತ್ತವಾಗಿರುತ್ತದೆ.
ಋ. ನಿಗದಿತ ಕಾಲಾವಧಿಯ ನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ನೇಮಕಾತಿ ಸಮಿತಿಯ ಆದೇಶದ ಮೇರೆಗೆ,
ವ್ಯವಸ್ಥಾಪಕ ನಿರ್ದೇಶಕರು

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕರ್ನಾಟಕ ಲೋಕ ಸೇವಾ ಆಯೋಗ
"ಉದ್ಯೋಗ ಸೌಧ" ಬೆಂಗಳೂರು - 560 001
ಸಂಖ್ಯೆ: ಪಿಎಸ್‌ಸಿ/2415 ಇ(3) 2021-22 ದಿನಾಂಕ: 26.10.2021

ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ ಇ(3)800/2019-20, ದಿನಾಂಕ: 29.02.2021, ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ ಇ(3)801/2019-20, ದಿನಾಂಕ: 29.02.2021 ಹಾಗೂ ಸೇರ್ಪಡೆ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ ಇ(3)4(A)/2020-21, ದಿನಾಂಕ: 14.05.2020 ರಡಿಯಲ್ಲಿ ಅಧಿಸೂಚಿಸಲಾದ 2019-20ನೇ ಸಾಲಿನ ಕಿರಿಯ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ದಿನಾಂಕ: 19.09.2021ರಂದು ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳ ಕೀ ಉತ್ತರಗಳನ್ನು ಆಯೋಗದ ಅಂತರ್ಜಾಲದಲ್ಲಿ ದಿನಾಂಕ: 22.09.2021ರಂದು ಪ್ರಕಟಿಸಲಾಗಿತ್ತು. ಸದರಿ ಕೀ ಉತ್ತರಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಸಲ್ಲಿಸಿದ್ದ ಆಕ್ಷೇಪಣೆಗಳನ್ನು ಪರಿಶೀಲಿಸಿ ಪರಿಷ್ಕೃತ ಕೀ ಉತ್ತರಗಳನ್ನು ಆಯೋಗದ ವೆಬ್‌ಸೈಟ್ "http://kpsc.kar.nic.in" ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಸಹಿ/-
(ಮಾರ್ಗರೇಟ್ ಎ.)
ಸಹಾಯಕ ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂಖ್ಯೆ:32, ಮೊದಲನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001
ದೂರವಾಣಿ ಸಂಖ್ಯೆ : 080–22354737/38 ಇ–ಮೇಲ್:e-mail:kmerc2014@gmail.com
ವೆಬ್: https://miningenvironment.karnataka.gov.in,
ಸಂಖ್ಯೆ: KMERC/Admn/PMU/192/2021-22/978 ದಿನಾಂಕ:25.10.2021

ಟೆಂಡರ್ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮವು "ಪ್ರೋಗ್ರಾಮ್ ಮ್ಯಾನೇಜ್‌ಮೆಂಟ್ ಯೂನಿಟ್ (ಪಿ ಎಂ ಯು)" ಸ್ಥಾಪನೆ ಮತ್ತು ಚಾಲನೆಗೆ ಸಂಬಂಧಿಸಿದಂತೆ ಏಜೆನ್ಸಿ ಆಯ್ಕೆ ಮಾಡುವ ಸಲುವಾಗಿ ಏಜೆನ್ಸಿರವರಿಂದ Request for Proposal (RFP) ಅನ್ನು ಸಲ್ಲಿಸಲು ಟೆಂಡರ್ ಆಹ್ವಾನಿಸಿದೆ. RFP ಡಾಕ್ಯುಮೆಂಟನ್ನು https://eproc.karnataka.gov.inನಲ್ಲಿ ಡೌನ್‌ಲೋಡ್ ಮಾಡಬಹುದು. ಟೆಂಡರ್ ಡಾಕ್ಯುಮೆಂಟನ್ನು ದಿನಾಂಕ: 23.11.2021ರ ಸಂಜೆ 5.00 ರೊಳಗೆ ಅಪ್ಲೋಡ್ ಮಾಡಲು ಕೋರಿದೆ.

ಸಹಿ/– (ಪ್ರಭಾಷ್ ಚಂದ್ರ ರೇ)
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂನ/ಜಿಎ/1954/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು (ಪೂ)ರವರ ಕಛೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು–570024. ಇಮೇಲ್: eeemccmys@gmail.com
ಸಂಖ್ಯೆ:ಮೈ.ನ.ಪಾ/ಕಾ.ಇಂ(ಪೂ&ಪ)/ಟಿ.ಎನ್–50/21–22 ದಿನಾಂಕ:18.10.2021

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿವಿಧ ಅನುದಾನದಡಿ ಒಟ್ಟು 32 ಕಾಮಗಾರಿಗಳಿಗೆ (ಒಟ್ಟು ಮೊತ್ತ ರೂ.390.10 ಲಕ್ಷಗಳು) (ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 103309, 107247, 111357, 84167, 111557, 99102, 111558, 112919, 119709, 119921, 89224, 120918, 119931, 119930, 121096, 115670, 121098, 111502, 114639, 121101, 119925, 114653, 121082, 121085, 90990, 121086, 117011, 122059, 83251, 121088, 119913, 118045) ಮೇಲೆ ಕಾಣಿಸಿದ ಉಲ್ಲೇಖದನ್ವಯ ಟೆಂಡರ್‌ನ್ನು ಅಹ್ವಾನಿಸಲಾಗಿದ್ದು, ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "E-procurement", Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ **ದಿನಾಂಕ: 25.10.2021**ರ ನಂತರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ **https://eproc.karnataka.gov.in** ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ **ದಿನಾಂಕ 10.11.2021** ಹಾಗೂ ಬಿಡ್ಡನ್ನು ತೆರೆಯುವ **ದಿನಾಂಕ: 11.11.2021**. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ) ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು
ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/628/2021-22

ಸವದತ್ತಿ ಯಲ್ಲಮ್ಮಾ ಪುರಸಭೆ ಕಾರ್ಯಾಲಯ
ಸವದತ್ತಿ - 5911 26, ಜಿಲ್ಲೆ ಬೆಳಗಾವಿ.
ದೂರವಾಣಿ: 08330-222226, ಇಮೇಲ್: itstaff_ulb_saundatti@yahoo.co.in
ಸಂಖ್ಯೆ : ಸ.ಯ.ಪು./ಕಿಅ/15ನೇ.ಹ/ಸಾ.ಮೂ./2021–22 ದಿನಾಂಕ : 25–10–2021

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
(ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಮುಖ್ಯಾಧಿಕಾರಿಗಳು ಸವದತ್ತಿ ಯಲ್ಲಮ್ಮಾ ಪುರಸಭೆ ಇವರು ಕರೆಯುತ್ತಿರುವ ವಿವರಸಿದ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆ / ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ / ನೋಂದಾಯಿಸಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಅಧಿಕೃತ ಮಾರಾಟಗಾರರಿಂದ ಕೆ.ಜಿ.–2 ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಿದ ಇಂಡೆಂಟ್ ನಂ. DMA/2020-21/INDENT1316/CALL-2 ಹೆಚ್ಚಿನ ಮಾಹಿತಿ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ : www.saundattitown.mrc.gov.in & www.eproc.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

1) ಟೆಂಡರ್ ಫಾರ್ಮ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ : 26–10–2021, 2) ಭರ್ತಿ ಮಾಡಿದ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ : 10–11–2021 ರ ಸಾಯಂಕಾಲ 4.30 ಗಂಟೆವರೆಗೆ. 3) ತಾಂತ್ರಿಕ ಬಿಡ್ ತೆರೆಯವ ದಿನಾಂಕ : 11–11–2021 ರ ಸಾಯಂಕಾಲ 5.00 ಗಂಟೆಯ ನಂತರ ತೆರೆಯಲಾಗುವುದು. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 15–11–2021 ರ ಸಾಯಂಕಾಲ 5.00 ಗಂಟೆಯ ನಂತರ ತೆರೆಯಲಾಗುವುದು.

ಸಹಿ/– ಮುಖ್ಯಾಧಿಕಾರಿ, ಸವದತ್ತಿ ಯಲ್ಲಮ್ಮಾ ಪುರಸಭೆ, ಸವದತ್ತಿ.
ಸಹಿ/– ಅಧ್ಯಕ್ಷರು, ಸವದತ್ತಿ ಯಲ್ಲಮ್ಮಾ ಪುರಸಭೆ, ಸವದತ್ತಿ.
ಡಿಐಪಿಆರ್/ಬೆಳಗಾವಿ/938/ಮಣಿಪಾಲ್/21–22

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು
ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102
ದೂರವಾಣಿ:0816–2278190
ವೆಬ್‌ಸೈಟ್: www.smartcitytumakuru.in
ಇ–ಮೇಲ್: smartcitytumakuru@gmail.com
ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/07/2021–22 ದಿನಾಂಕ: 25.10.2021

ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಇವರು ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ "ತುಮಕೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ವೇದಿಕೆಯನ್ನು ಮತ್ತು ಸಂಬಂಧಿತ ಮೂಲ ಸೌಕರ್ಯವನ್ನು ಪುನರಾಭಿವೃದ್ಧಿಪಡಿಸುವ ಕಾಮಗಾರಿ"ಗಾಗಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಮೊತ್ತ ರೂ.1.26ಕೋಟಿಗಳು, ಇ.ಎಂ.ಡಿ ಡಿಕ್ಲರೇಷನ್ ಆದೇಶ ಸಂಖ್ಯೆ:ಆಇ 675 ವೆಚ್ಚ – 12/2020, ಬೆಂಗಳೂರು, ದಿನಾಂಕ: 22.12.2020 ಅಪ್‌ಲೋಡ್ ಮಾಡುವುದು.

ಟೆಂಡರ್ ದಾಖಲೆಯನ್ನು ದಿನಾಂಕ: **26.10.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **11.11.2021** 16.00 ಗಂಟೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12.11.2021** 16.00 ಗಂಟೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಖಲೆಗಳನ್ನು ಇ–ಪೋರ್ಟಲ್ www.eproc.karnataka.gov.in – ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.
DIPR/TUM/359/MCA/2021-22

ಕಾಂಗ್ರೆಸ್‌ನಿಂದ ಸದಸ್ಯತ್ವ ಅಭಿಯಾನ

ನವದೆಹಲಿ (ಪಿಟಿಐ): 'ಪಕ್ಷವನ್ನು ಬಲಪಡಿಸುವ ಸಲುವಾಗಿ ನವೆಂಬರ್ 1ರಿಂದ ಮುಂದಿನ ಮಾರ್ಚ್ 31ರ ವರೆಗೆ ದೇಶ ವ್ಯಾಪ್ತಿ ಬೃಹತ್ ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ತಿಳಿಸಿದ್ದಾರೆ. ಪಕ್ಷದ ಪ್ರಧಾನ ಕಾರ್ಯದರ್ಶಿಗಳು, ರಾಜ್ಯಗಳ ಉಸ್ತುವಾರಿಗಳು ಹಾಗೂ ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರ ವಿಶೇಷ ಸಭೆ ನಂತರ ಅವರು ಈ ಮಾಹಿತಿ ನೀಡಿದರು.

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್.,
(ಕರ್ನಾಟಕ ಸರ್ಕಾರದ ಅಧೀನ ಉದ್ಯಮ)
ಹೊಸ ಬನ್ನಿಮಂಟಪ ಬಡಾವಣೆ, ಮೈಸೂರು – 570 015, ಕರ್ನಾಟಕ.
ದೂ.ಸಂ.: 91–821–2493831/2497469/2499340 ಇಮೇಲ್ ವಿಳಾಸ: accts-mpvl@karnataka.gov.in
ಉಲ್ಲೇಖ: ಮೈಪೆವಾಲಿ/2021–22/ಹರಾಜು 24&25 ದಿನಾಂಕ: 25.10.2021

ಸ್ಥಿರ ಠೇವಣಿಗಳಿಗಾಗಿ ಇ– ಬಿಡ್ಡಿಂಗ್ ಆಹ್ವಾನ

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿ., (ಮೈಪೆವಾಲಿ.,) ಸಾರ್ವಜನಿಕ ವಲಯದ ಬ್ಯಾಂಕ್ (PSU)/ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳಲ್ಲಿ (RRB) ಮತ್ತು ಖಾಸಗಿ ವಲಯದ ಬ್ಯಾಂಕ್ ಗಳಲ್ಲಿ (Pvt.SCB) ತನ್ನ ಹೆಚ್ಚುವರಿ ಹಣವನ್ನು 366 ದಿನಗಳಿಗೆ ವಿನಿಯೋಗಿಸಲು ಉದ್ದೇಶಿಸಿದೆ. ನಿಗದಿತ ಮೊತ್ತ ಮತ್ತು ಅವಧಿ ಮತ್ತು ಇತರೇ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ವಿವರಗಳು	ಹೂಡಿಕೆಯ ಮೊತ್ತ	ದಿನಗಳು
01.	ಸಾರ್ವಜನಿಕ ವಲಯದ ಬ್ಯಾಂಕ್/ಪ್ರಾದೇಶಿಕ ಗ್ರಾಮೀಣ ಬ್ಯಾಂಕ್	25.00 ಕೋಟಿ	366 ದಿನಗಳು
02.	ಖಾಸಗಿ ವಲಯದ ಬ್ಯಾಂಕ್	3.60 ಕೋಟಿ	366 ದಿನಗಳು

ಇ ಹರಾಜಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ- ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಹರಾಜಿಗೆ ಸಂಬಂಧಿಸಿದ ವೇಳಾಪಟ್ಟಿ ಈ ಕೆಳಗಿನಂತಿದೆ.
■ ಇ ಹರಾಜು ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿ: 25.10.2021 ■ ಅನುಬಂಧ – ಎ ಮತ್ತು ಬಿ, ಇ– ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡಲು ಕೊನೆಯ ದಿ: 08.11.2021 ಮಧ್ಯಾಹ್ನ 4.00 ಗಂಟೆ ಒಳಗೆ. ■ ನೇರ ಹರಾಜು: 12.11.2021 ಬೆಳಗ್ಗೆ 11.00 ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯಗೊಳ್ಳಲಿದೆ.

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್ ಪರವಾಗಿ
ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ)/ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ (TIA)
DIPR/DDMYS/MCA/625/2021-22

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91–80–26560722 (Dir), 26094000 ಫ್ಯಾಕ್ಸ್: 080–26560723
No.: KMIO/SME(1)/Tender/M.Equip/67/Co 60 Glb/2017-18 Date: 26.10.2021

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ **ದ್ವಿ–ಲಕೋಟೆ ಪದ್ಧತಿಯಲ್ಲಿ** ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Equipment / Works
1	KMIO/SME(1)/Tender/M.Equip/67/Co 60 Glb/ 2017-18, Dated: 09.09.2021 **(Call-6)**	Cobalt 60 High Dose Rate Remote Controlled Branchytherapy System to PCC Kalburgi.
2	KMIO/SME(1)/Tender/E.Equip/133/2019-20, Dated: 20.03.2021 **(Call-4)**	Procurement of of Auto Stainer for Cytology.
3	KMIO/SME(1)/Tender/M.Equip/141/2021-22, Dated: 26.10.2021 **(Call-3)**	Procurement of Liquid Based Cytology with Image Scanner.
4	KMIOM/SME(1)/Tender/Kadapa Slab/265/ 2021-22, Dated:21.09.2021 **(Call-3)**	Disposal of Kadapa Slab on As is where is Basis at KMIO.
5	KMIO/SME(1)/Tender/Laser System/273/ 2021-22, Dated: 21.09.2021 **(Call-2)**	Procurement of Laser System for Telecoobalt Machine to Departmetnt of Radiation Physics.

ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **27.10.2021 ರಿಂದ 08.11.2021.** ಬಿಡ್ ದಾಖಲೆಗಳನ್ನು ವೆಬ್‌ಸೈಟ್ **https://eproc.karnataka.gov.in** ನಿಂದ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪೋರ್ಟಲ್ ಶುಲ್ಕ ರೂ. 500/-ನ್ನು ಪಾವತಿಸಿ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: **08.11.2021** ರಂದು **ಮಧ್ಯಾಹ್ನ 3:00 ಗಂಟೆ**ಯವರೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ / ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/-
ನಿರ್ದೇಶಕರು
DIPR/DDU/1976/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆ: ಕಲಬುರಗಿ.
ಸಂ:ಕಾನಿಇಂ/ಲೋಇ./ಸೇವಿ/ತಾಶಾ–2/2021–22/2212 ದಿನಾಂಕ: 18–10–2021

:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ : 1. ಸೇಡಂ ತಾಲೂಕಿನ 08 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ – 138473, 137245, 137246, 138513 (ಎಸ್.ಸಿ), 142267 (ಎಸ್.ಸಿ) 142425 (ಎಸ್.ಸಿ), 142270 (ಎಸ್.ಟಿ) ಹಾಗೂ 136621 (ಎಸ್.ಟಿ). 2. ಚಿತ್ತಾಪೂರ ತಾಲೂಕಿನ 01 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ – 141637. 3. ಚಿಂಚೋಳಿ ತಾಲೂಕಿನ 02 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ – 142316 ಹಾಗೂ 136869. 2) ಲೆಕ್ಕ ಶೀರ್ಷಿಕೆ : 2019–20 & 2020–21 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆ, ಅಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ : ಕನಿಷ್ಠ ರೂ. 10.00 ಲಕ್ಷಗಳು, ಗರಿಷ್ಠ : ರೂ. 160.00 ಲಕ್ಷಗಳು, 4) ಗುತ್ತಿಗೆದಾರರ ಅರ್ಹತೆ : 2ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ : 06–11–2021 ಬೆಳಿಗ್ಗೆ 11:30 ಗಂಟೆಯವರೆಗೆ, 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ : 08–11–2021 ಸಾಯಂಕಾಲ 5:30 ಗಂಟೆಯವರೆಗೆ, 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ. 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 09–11–2021 ರ ಸಾಯಂಕಾಲ 4:00 ಗಂಟೆಯವರೆಗೆ, 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10–09–2021 ರ ಸಾಯಂಕಾಲ 4:30 ಗಂಟೆಯವರೆಗೆ, 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 12–09–2021 ರ ಸಾಯಂಕಾಲ 4:30 ಗಂಟೆಯವರೆಗೆ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ ಜಿ॥ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.eproc.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.eproc.karnataka.gov.in ಮಾಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ
ವಾ.ಸಾ.ಸಂ.ಇ/ಕಲಬುರಗಿ/721/ಎಂ.ಸಿ&ಎ/2020–21

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ನಂ:ಎಚ್.ಡಿ.ಎಂ.ಸಿ./13/01/2021–22
ಸಾರ್ವಜನಿಕ ಸಂಪರ್ಕಾಧಿಕಾರಿಗಳ ಕಛೇರಿ.
ಹುಬ್ಬಳ್ಳಿ, ದಿ: 25/10/2021

ದರವಾರು ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿನ ಬಡತನ ರೇಖೆಗಿಂತ ಕೆಳಗಿರುವ ಅಂಗವಿಕಲರಿಗೆ ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ, ಎಸ್.ಎಫ್.ಸಿ (ಮುಕ್ತ ನಿಧಿ) ಅನುದಾನದಲ್ಲಿ ವ್ಯಕ್ತಿ ಸಂಬಂಧಿತ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿದ್ದು ಈ ಮೂಲಕ ದರವಾರು ಕೇಳಿ ಕೋಟೇಶನ್ ಆಹ್ವಾನಿಸಲಾಗಿದ್ದು, ಕೆಳಕಂಡ ನಮೂನೆಯಲ್ಲಿ ಪ್ರತ್ಯೇಕವಾಗಿ ನಿಗದಿಪಡಿಸಿದ ನಿರ್ದಿಷ್ಟತೆಗೆ ಅನುಗುಣವಾಗಿ ದಿ : **02/11/2021** ಸಮಯ 04.00 ಘಂಟೆಯೊಳಗೆ ಮೊಹರು ಮಾಡಿ ಮುಚ್ಚಿದ ಲಕೋಟೆಯಲ್ಲಿ ಅಥವಾ ಇ–ಮೇಲ್ ವಿಳಾಸ **prohdmc1@gmail.com** ಈ ಕೆಳಗೆ ಸಹಿ ಮಾಡಿದ ಅಧಿಕಾರಿಯ ಕಛೇರಿಗೆ ಸಲ್ಲಿಸಲು ತಯಾರಕರು/ಗುತ್ತಿಗೆದಾರರು/ ಅಧಿಕೃತ ವಿತರಕರು/ ಸರಬರಾಜುದಾರರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಗಳ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

Sl. No.	Item Details	Technical Specification Description	Rate per Unit (Inclusive of all Taxes)
1	Motorized Two Wheeler-124CC and above (Gear less) (BS-VI) and with retro fitment of additional two wheels attachment for the use of severely affected orthopedically disabled.	1. Two Wheeler-124CC and above (Gear less)(BS-VI) 2. Retro fitment –M.S Tube (Rectangular) 20X 30X 2 mm Length (6mtrs) 3. Tyre-2.75 X 10, 2 Nos. etc	
2	Tool kit for ITI/ Diploma Student	Mechanical, Electrical, Fitter. etc Branch's.	
3	Hearing aid type –Digital BTE (Behind the ear) (Mild to Moderately severe category hearing loss)	1. No. of channels – Minimum of 6 2. Manual controls – Volume control and Program switch 3. Hearing loss fitting range – Up to 80 dB HL 4. No. of Programs/Memory– 3 or more (in addition to Telecoil). etc	
4	Hearing aid type –Digital BTE (Behind the ear) (Severe to Profound category hearing loss)	1. No. of channels – Minimum of 6 2. Manual controls – Volume control and Program switch 3. Hearing loss fitting range – 70 dB HL to 120 dB HL 4. No. of Programs/Memory – 3 or more (in addition to Telecoil).etc	
5	Beautician kit	1. Hair Styling equipment 2. Steamer & Massager equipment. etc	

ಸಹಿ/– ಸಾರ್ವಜನಿಕ ಸಂಪರ್ಕಾಧಿಕಾರಿಗಳು,
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ
ವಾಸಾಸಂಇ/ಧಾರವಾಡ/ಎಂಸಿಎ/633/2021–22

ದ್ವಿಚಕ್ರ ವಾಹನ: ಮಕ್ಕಳ ಸುರಕ್ಷೆಗೆ ಬರಲಿವೆ ಹೊಸ ನಿಯಮ

ಪ್ರಜಾವಾಣಿ ವಾರ್ತೆ

ನವದೆಹಲಿ: ದ್ವಿಚಕ್ರ ವಾಹನಗಳಲ್ಲಿ ಮಕ್ಕಳನ್ನು ಸಹಸವಾರರಾಗಿ ಕರೆದೊಯ್ಯುವಲ್ಲಿ ಇರುವ ಅಪಾಯಗಳನ್ನು ಕಡಿಮೆ ಮಾಡುವ ಸಲುವಾಗಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಕಾನೂನಿಗೆ ತಿದ್ದುಪಡಿ ತರಲು ಮುಂದಾಗಿದೆ. ಇದಕ್ಕಾಗಿ ಕೇಂದ್ರೀಯ ಮೋಟಾರು ವಾಹನ ನಿಯಮಗಳಿಗೆ ತಿದ್ದುಪಡಿ ತರಲು ಕರಡನ್ನು ಸಚಿವಾಲಯವು ಪ್ರಕಟಿಸಿದೆ. ಈ ತಿದ್ದುಪಡಿಯ ಅಡಿ ಪ್ರಸ್ತಾವಿಸಲಾಗಿರುವ ಹೊಸ ನಿಯಮಗಳು ಈ ಮುಂದಿನಂತಿವೆ

- 4 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ದ್ವಿಚಕ್ರ ವಾಹನಗಳಲ್ಲಿ ಕರೆದೊಯ್ಯುವಾಗ ವೇಗವು ಪ್ರತಿ ಗಂಟೆಗೆ 40 ಕಿ.ಮೀ ಮೀರುವಂತಿಲ್ಲ. ಇದನ್ನು ಉಲ್ಲಂಘಿಸಿದರೆ ₹1,000 ದಂಡ ವಿಧಿಸಲಾಗುತ್ತದೆ ಮತ್ತು ಚಾಲನಾ ಪರವಾನಗಿಯನ್ನು ಮೂರು ತಿಂಗಳವರೆಗೆ ಅಮಾನತಿನಲ್ಲಿ ಇಡಲಾಗುತ್ತದೆ
- 4 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ದ್ವಿಚಕ್ರ ವಾಹನಗಳಲ್ಲಿ ಕರೆದೊಯ್ಯುವಾಗ, ಸವಾರರು ಮಕ್ಕಳನ್ನು ತಮ್ಮೊಂದಿಗೆ ಬಂಧಿಸುವ ಸುರಕ್ಷಾ ಬೆಲ್ಟ್ ಅನ್ನು ಕಡ್ಡಾಯವಾಗಿ ಹಾಕಿಕೊಳ್ಳಬೇಕು. ಈ ಬೆಲ್ಟ್ ಅನ್ನು ಮಕ್ಕಳಿಗೆ ಹಾಕಲಾಗುತ್ತದೆ. ಅದರ ಎರಡು ಸ್ಟ್ರಿಪ್‌ಗಳನ್ನು ವಯಸ್ಕ ಸವಾರರು ತಮ್ಮ ಭುಜದ ಮೂಲಕ ಎಳೆದು, ಹಾಕಿಕೊಳ್ಳಬೇಕು
- ಮಕ್ಕಳು ಧರಿಸುವ ಸುರಕ್ಷಾ ಬೆಲ್ಟ್‌ಗಳು ಹಗುರವಾಗಿರಬೇಕು ಮತ್ತು ಗರಿಷ್ಠ 30 ಕೆ.ಜಿ. ತೂಕವನ್ನು ಹೊರುವಷ್ಟು ಸಾಮರ್ಥ್ಯ ಹೊಂದಿರಬೇಕು
- 4 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳನ್ನು ದ್ವಿಚಕ್ರವಾಹನಗಳಲ್ಲಿ ಕರೆದೊಯ್ಯುವಾಗ ಅವರಿಗೆ ಹೆಲ್ಮೆಟ್ ಹಾಕುವುದು ಕಡ್ಡಾಯ

ಸಹಾಯಕ ಆಯುಕ್ತರ ಕಛೇರಿ
ಬೆಂಗಳೂರು ದಕ್ಷಿಣ ಉಪ ವಿಭಾಗ, ಕಂದಾಯ ಭವನ, 2ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು – 560009. ಇ-ಮೇಲ್: acbloresouth@gmail.com
ಸಂಖ್ಯೆ: ಅಗ್ರಿ ಇಂಡಿಯಾ/ಎಆರ್/11/2021-22 ದಿನಾಂಕ: 21–10–2021

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಹಣಕಾಸು ಸಂಸ್ಥೆಗಳ ಠೇವಣಿದಾರರ ಹಿತಾಸಕ್ತಿ ರಕ್ಷಣಾ ಕಾಯ್ದೆ 2004 ರ ಕಲಂ 7(2) ಅನುಸಾರ.

ಮೆ: ಅಟ್ರಿವಂಟ್ ಅಗ್ರಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನ ಠೇವಣಿದಾರರು ಈ ಸೂಚನೆ ಪ್ರಕಟವಾದ ದಿನಾಂಕದಿಂದ ಒಂದು ತಿಂಗಳೊಳಗೆ ಅವರ ಕ್ಲೇಮುಗಳನ್ನು ಸೂಕ್ತ ಪುರಾವೆಯೊಂದಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ಸೂಚನೆ ಪ್ರಕಟವಾದ ದಿನಾಂಕದಿಂದ ಒಂದು ತಿಂಗಳ ಅವಧಿ ಮುಕ್ತಾಯವಾದ ನಂತರ ಸಲ್ಲಿಸಲ್ಪಡುವ ಕ್ಲೇಮುಗಳನ್ನು ಈ ಕಾಯ್ದೆಯನ್ವಯ ಪಾವತಿಸಲು ಅರ್ಹತೆ ಪಡೆಯುವ ಕ್ಲೇಮು ಆಗಿ ಪರಿಗಣಿಸುವುದಿಲ್ಲ.

ಸಹಿ/– (ಡಾ. ಎಂ.ಜಿ. ಶಿವಣ್ಣ, ಕೆ.ಎ.ಎಸ್)
ಸಕ್ಷಮ ಅಧಿಕಾರಿ ಹಾಗೂ ಸಹಾಯಕ ಆಯುಕ್ತರು,
ಬೆಂಗಳೂರು ದಕ್ಷಿಣ ಉಪ ವಿಭಾಗ, ಬೆಂಗಳೂರು.
ವಾಸಾಸಂಇ/ಬೆಂ.ನ/ಅಡ್ವರ್ಟೋರ್/1957/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

HAL Education Committee ®
NOTICE

HAL VIMANAPURA HIGH SCHOOL was declared as **"Zero School"** by the Education Department, Government of Karnataka and the Registration and Recognition of the school was also withdrawn during Mar'2021. Accordingly, all the academic records of the school are handed over to Head Master, Government High School, Doddanakkundi as per government directives.

ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಹೆಚ್.ಎ.ಎಲ್ ವಿಮಾನಪುರ ಪ್ರೌಢಶಾಲೆಯನ್ನು ಶೂನ್ಯ ಶಾಲೆಯೆಂದು ಪರಿಗಣಿಸಿ ಮಾನ್ಯತೆಯನ್ನು ಹಿಂಪಡೆಯಲಾಗಿದೆ. ಆದ್ದರಿಂದ ಸದರಿ ಶಾಲೆಯ ಎಲ್ಲಾ ದಾಖಲಾತಿಗಳನ್ನು ದಕ್ಷಿಣ ವಲಯ–04 ಕ್ಷೇತ್ರ ಶಿಕ್ಷಣಾಧಿಕಾರಿಗಳ ಆದೇಶನುಸಾರ ಸರ್ಕಾರಿ ಪ್ರೌಢ ಶಾಲೆ ದೊಡ್ಡನಕ್ಕುಂದಿ ಶಾಲೆಗೆ ಹಸ್ತಾಂತರಿಸಲಾಗಿದೆ.

Sd/-
Secretary, HAL Education Committee

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029. ಕರ್ನಾಟಕ
ಫೋನ್: 080–29753354/56, ಇ–ಮೇಲ್: karbuildworkerswelfare@gmail.com
ಸಂಖ್ಯೆ: KBOCWWB/ Tenders 23 to25/2021-22 ದಿನಾಂಕ: 26.10.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಅಧಿಸೂಚನೆಯಲ್ಲಿ ವಿವರಿಸಿದ ಉಲ್ಲೇಖದ ನಿಯಮಗಳ ಪ್ರಕಾರ ಟೆಂಡರ್‌ಗಳನ್ನು (ಎರಡು ಬಿಡ್ ವ್ಯವಸ್ಥೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು)ಈ ಕೆಳಗಿನ ಸರಕುಗಳು ಮತ್ತು ನಿಗಧಿಪಡಿಸಿದ ಅವಧಿಗಾಗಿ ಅರ್ಹ ಏಜನ್ಸಿಗಳಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್‌ನ ಸಂಖ್ಯೆ	ಟೆಂಡರ್‌ನ ಹೆಸರು	ಮೊಬಲಗು ರೂ. ಲಕ್ಷ ಗಳಲ್ಲಿ.
1	DOL/2021-22/IND244	ಕಲಬುರಗಿ ಪ್ರಾದೇಶಿಕ ಅಧೀನದ ಸಹಾಯಕ ಕಾರ್ಮಿಕ ಆಯುಕ್ತರು, ದಾವಣಗೆರೆ ವ್ಯಾಪ್ತಿಗೆ "ಬಾರ್ ಬೆಂಡರ್" ಕಿಟ್ ಗಳನ್ನು ಸರಬರಾಜು ಮಾಡುವುದು ಮತ್ತು ವಿತರಿಸುವುದು.	86.07
2	DOL/2021-22/IND271	ಹಾಸನ ಪ್ರಾದೇಶಿಕ ಅಧೀನದ ಸಹಾಯಕ ಕಾರ್ಮಿಕ ಆಯುಕ್ತರು, ದಕ್ಷಿಣ ಕನ್ನಡ ವ್ಯಾಪ್ತಿಗೆ "ಪೈಂಟಿಂಗ್" ಕಿಟ್‌ಗಳನ್ನು ಸರಬರಾಜು ಮಾಡುವುದು ಮತ್ತು ವಿತರಿಸುವುದು.	243.46
3	DOL/2021-22/IND262	ಕಲಬುರಗಿ ಪ್ರಾದೇಶಿಕ ಅಧೀನದ ಸಹಾಯಕ ಕಾರ್ಮಿಕ ಆಯುಕ್ತರು, ದಾವಣಗೆರೆ ವ್ಯಾಪ್ತಿಗೆ "ಪ್ಲಂಬಿಂಗ್"ಕಿಟ್ ಗಳನ್ನು ಸರಬರಾಜು ಮಾಡುವುದು ಮತ್ತು ವಿತರಿಸುವುದು.	118.33

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ www.eproc.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ನ್ನು ಸಲ್ಲಿಸಲು ಕೊನೆಯ **ದಿನಾಂಕ:17.11.2021 ರಂದು ಸಂಜೆ 5:00 ಗಂಟೆಯವರೆಗೆ** ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ. ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿ, ಕ.ಕ.ಇ.ನಿ.ಕಾ.ಕ.ಮಂಡಳಿ
ವಾಸಾಸಂಇ/ಬೆಂ.ನ/ಜಿಎ/1984/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ
ಟೆಂಡರ ಪ್ರಕಟಣೆ ಸಂಖ್ಯೆ.:KNNL/KPD/ PB/TND/ BGM/ RWS/ 2021-22/804, 806, 807, 808, 809 & 810 Date: 25.10.2021

"ಅಲ್ಪಾವಧಿ ಟೆಂಡರ ಪ್ರಕಟಣೆ"
(ಇ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ ಗುತ್ತಿಗೆದಾರರು/ಕರ್ನಾಟಕ ನೀರಾವರಿ ನಿಗಮದಲ್ಲಿ Category III ಮತ್ತು ಅರ್ಹಗುತ್ತಿಗೆದಾರರರಿಂದ ಶೇಕಡಾವಾರು ಟೆಂಡರಗಳನ್ನು ಇ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ ಆಹ್ವಾನಿಸಲಾಗಿದೆ ಕ್ರ. ಸಂ:1:ಕಾಮಗಾರಿಯ ಹೆಸರು:Construction of CC road at Belagundi, Sonoli, Beejagarni, Benakanahalli, Turamri, Sulaga (H), Athavad, Mannur, and Ambevadi Villages in Belagavi Taluka.(W.I. No. 31856),ಟೆಂಡರ್‌ಗೆ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ): 267.66,ಕ್ರ. ಸಂ:2.:ಕಾಮಗಾರಿಯ ಹೆಸರು:Construction of CC road at Kinaye, Ranakunde, Navage, Kuttalavadi, Bhadaravde, Karle, Janevadi and Bamanavadi Villages in Belagavi Taluka. (W.I. No. 31857),ಟೆಂಡರ್‌ಗೆ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ):178.23,ಕ್ರ. ಸಂ:3.:ಕಾಮಗಾರಿಯ ಹೆಸರು:Construction of CC road at Modaga, Balekundri KH, Hulikavi, Badal Ankalagi, KK Koppa, Halagimaradi villages and Vaibhav Nagar in Belagavi Taluka. (W.I. No. 31858),ಟೆಂಡರ್‌ಗೆ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ):267.64,ಕ್ರ. ಸಂ:4.:ಕಾಮಗಾರಿಯ ಹೆಸರು:Construction of CC road at Hirebagewadi village in Belagavi Taluka. (W.I. No. 31872), ಟೆಂಡರ್‌ಗೆ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ):133.58,ಕ್ರ. ಸಂ:5.: ಕಾಮಗಾರಿಯ ಹೆಸರು:Construction of CC road at Nandihalli, Desur, Rajhamsagad, and Yallur (Sulaga) villages in Belagavi Taluka. (W.I. No. 31873),ಟೆಂಡರ್‌ಗೆ ಇಟ್ಟ ಮೊತ್ತ (ರೂ. ಲಕ್ಷಗಳಲ್ಲಿ):178.44, ಕ್ರ. ಸಂ:6.:ಕಾಮಗಾರಿಯ ಹೆಸರು: Construction of CC road in SC colony at Mannur, Kamakaratti and from SC colony to grave yard at Benakanahalli and Hangaraga Village's in Belagavi Taluka (W.I.No.31819), ಟೆಂಡರ್‌ಗೆ ಇಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 66.64

www.eproc.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ಭರ್ತಿಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ:06.11.2021 ರಂದು ಸಂಜೆ 16.00 ವರೆಗೆ ಸಲ್ಲಿಸಬಹುದು. ಪ್ರಿ–ಬಿಡ್ ಸಭೆಯನ್ನು ದಿನಾಂಕ:28.10.2021 ರಂದು ಮುಂಜಾನೆ 11.00 ಘಂ. ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:08.11.2021 ಸಂಜೆ 11.00 ಗಂಟೆಯ ನಂತರ ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಶರತ್ತುಗಳು ಹಾಗೂ ಇತರೆ ವಿವರಗಳನ್ನು ಇ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ www.eproc.karnataka.gov.in ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08336–222163 ಸಂಪರ್ಕಿಸುವದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ,
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ
DIPR/BGM/RO-NO-941/MCA/2021-22

ಸಂಕ್ಷಿಪ್ತ ಸುದ್ದಿ

ನ. 5ರಂದು ಕೇದಾರನಾಥಕ್ಕೆ ಪ್ರಧಾನಿ ಭೇಟಿ

ಡೆಹ್ರಾಡೂನ್ (ಪಿಟಿಐ): ಚಳಿಗಾಲದ ನಿಮಿತ್ತ ಹಿಮಾಲಯದ ದೇವಾಲಯವನ್ನು ಮುಚ್ಚುವ ಒಂದು ದಿನ ಮುಂಚಿತವಾಗಿ ನ. 5ರಂದು ಪ್ರಧಾನಿ ನರೇಂದ್ರ ಮೋದಿ ಅವರು ಕೇದಾರನಾಥಕ್ಕೆ ಭೇಟಿ ನೀಡಲಿದ್ದು, ಸುಮಾರು ₹ 400 ಕೋಟಿಗೂ ಹೆಚ್ಚು ಮೊತ್ತದ ಕೇದಾರಪುರಿ ಪುನರ್ ನಿರ್ಮಾಣ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಪ್ರಧಾನಿ ಅವರ ಭೇಟಿಯನ್ನು ದೃಢಪಡಿಸಿರುವ ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು,'ಹಿಮಾಲಯ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸುವುದರ ಜೊತೆಗೆ, ಮೋದಿ ಅವರು ಆದಿ ಗುರು ಶಂಕರಾಚಾರ್ಯರ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ' ಎಂದು ತಿಳಿಸಿದ್ದಾರೆ.

ಒಂದು ತಿಂಗಳ ಅವಧಿಯಲ್ಲಿ ಮೋದಿ ಅವರು ಎರಡನೇ ಬಾರಿಗೆ ಕೇದಾರನಾಥಕ್ಕೆ ಭೇಟಿ ನೀಡುತ್ತಿದ್ದಾರೆ. ಅ. 7ರಂದು ಹೃಷಿಕೇಶದ ಏಮ್ಸ್‌ನಲ್ಲಿ ಆಮ್ಲಜನಕ ಘಟಕ ಉದ್ಘಾಟನೆಗಾಗಿ ಅವರು ಭೇಟಿ ನೀಡಿದ್ದರು. 2014ರಲ್ಲಿ ಪ್ರಧಾನಿಯಾದ ಬಳಿಕ ಮೋದಿ ಅವರು ಹಲವು ಬಾರಿ ಕೇದಾರನಾಥಕ್ಕೆ ಭೇಟಿ ನೀಡಿದ್ದಾರೆ. ಆದರೆ, ಕಳೆದ ವರ್ಷ ಕೋವಿಡ್ ನಿಮಿತ್ತ ಭೇಟಿ ನೀಡಿರಲಿಲ್ಲ.

ಬಿಎಸ್‌ಎಫ್ ಕಾರ್ಯಾಚರಣೆ ವ್ಯಾಪ್ತಿ ವಿಸ್ತರಣೆ: 'ಸುಪ್ರೀಂ'ಗೆ ಮನವಿ

ಚಂಡೀಗಡ (ಪಿಟಿಐ): ಬಿಎಸ್‌ಎಫ್ (ಗಡಿ ಭದ್ರತಾ ಪಡೆ) ಕಾರ್ಯಾಚರಣೆ ವ್ಯಾಪ್ತಿ ವಿಸ್ತರಣೆ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸುವುದಾಗಿ ಪಂಜಾಬ್ ಸರ್ಕಾರ ಹೇಳಿದೆ.

ಪಂಜಾಬ್ ಪಾಕಿಸ್ತಾನದೊಂದಿಗೆ 545 ಕಿ.ಮೀ ಗಡಿ ಹೊಂದಿದ್ದು, ಬಿಎಸ್‌ಎಫ್ ರಕ್ಷಣೆ ನೀಡುತ್ತಿದೆ.

ಕೇಂದ್ರ ಸರ್ಕಾರದ ನಿರ್ಧಾರವನ್ನು ನಾವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಿದ್ದೇವೆ. ಪಂಜಾಬ್‌ನಲ್ಲಿ ಬಿಎಸ್‌ಎಫ್ ಕಾರ್ಯಾಚರಣೆ ವ್ಯಾಪ್ತಿ ವಿಸ್ತರಣೆ ನಿರ್ಧಾರದ ವಿರುದ್ಧ ವಿಧಾನಸಭೆಯಲ್ಲಿ ನಿಲುವಳಿ ಮಂಡಿಸಲಿದ್ದೇವೆ. ಕೇಂದ್ರ ಈ ನಿರ್ಧಾರ ಒಕ್ಕೂಟ ವ್ಯವಸ್ಥೆಯ ಮೇಲಿನ ಹೊಡೆತ ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹೇಳಿದ್ದಾರೆ.

ಈ ಕುರಿತು ಚರ್ಚಿಸಲು ಸರ್ವಪಕ್ಷ ಸಭೆ ಕರೆಯಲಾಗಿದೆ ಎಂದೂ ಅವರು ಹೇಳಿದ್ದಾರೆ. ಆದರೆ, ಬಿಜೆಪಿ ಸಭೆಯನ್ನು ಬಹಿಷ್ಕರಿಸುವುದಾಗಿ ಹೇಳಿದೆ.

ಮಾಹಿತಿ ಸೋರಿಕೆ ಆರೋಪ: ನೌಕಾಪಡೆ ಅಧಿಕಾರಿ ಬಂಧನ

ನವದೆಹಲಿ (ಪಿಟಿಐ): ಲಂಚಕ್ಕೆ ಪ್ರತಿಯಾಗಿ 'ಸಬ್‌ಮರಿನ್ ಪ್ರಾಜೆಕ್ಟ್' ವೊಂದಕ್ಕೆ ಸಂಬಂಧಿಸಿದ ಗೌಪ್ಯ ಮಾಹಿತಿಯನ್ನು ಸೋರಿಕೆ ಮಾಡಿರುವ ಆರೋಪಗಳ ಮೇಲೆ ನೌಕಾಪಡೆಯ ಕಮಾಂಡರ್ ಶ್ರೇಣಿಯ ಅಧಿಕಾರಿ ಸೇರಿದಂತೆ ಐವರನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಬಂಧಿತರಲ್ಲಿ ನೌಕಾಪಡೆಯ ಇಬ್ಬರು ನಿವೃತ್ತ ಸಿಬ್ಬಂದಿಯೂ ಇದ್ದು, ಆರೋಪಿಗಳ ವಿರುದ್ಧ ಐಪಿಸಿ ಹಾಗೂ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿ, ದೆಹಲಿ, ಮುಂಬೈ, ಹೈದರಾಬಾದ್ ಹಾಗೂ ವಿಶಾಖಪಟ್ಟಣ ನಗರಗಳಲ್ಲಿ ಸಿಬಿಐ ಈ ವರೆಗೆ 16 ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದೂ ಅವರು ತಿಳಿಸಿದ್ದಾರೆ.



ವಿಶ್ವಕನ್ನಡವಾಗಲಿ ಕನ್ನಡ

ಉದಯ ಶಂಕರ ಪುರಾಣಿಕ

ಡಿಜಿಟಲ್ ಯುಗದಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆಯನ್ನು ವಿಶ್ವಮಟ್ಟದಲ್ಲಿ ನೀಡಲು, ನಾವು ಹೊಸ ತಂತ್ರಜ್ಞಾನ ಮತ್ತು ಆವಿಷ್ಕಾರಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕಾಗಿದೆ. ಮುಂದಿನ ಐದು ವರ್ಷಗಳಲ್ಲಿ ಬಳಸುವ ತಂತ್ರಜ್ಞಾನಗಳು ಮತ್ತು ಅದರಲ್ಲಿ ಕನ್ನಡವನ್ನು ನಾವು ಬಳಸಲು ಏನು ಮಾಡಬೇಕು ಮತ್ತು ಹೀಗೆ ಮಾಡುವುದರಿಂದ ಕನ್ನಡಿಗರಿಗೆ ದೊರೆಯುವ ಹೊಸ ಉದ್ಯೋಗ ಅವಕಾಶಗಳು ಹಾಗೂ ನವೋದ್ಯಮ ಅವಕಾಶಗಳು ಯಾವುದು? ಈ ಕುರಿತು ಇದುವರೆಗೂ ರಾಜ್ಯ ಸರ್ಕಾರದ ಮಟ್ಟದಲ್ಲಿ ಸ್ಪಷ್ಟವಾದ ಕ್ರಿಯಾ ಯೋಜನೆ ಇಲ್ಲದಿರುವುದು ಡಿಜಿಟಲ್ ಯುಗದಲ್ಲಿ ಕನ್ನಡ ನಿರೀಕ್ಷಿತ ಪ್ರಗತಿ ಸಾಧಿಸಲು ದೊಡ್ಡ ಕೊರತೆಯಾಗಿದೆ.

ನಾವು ದೂರವಾಣಿಯಲ್ಲಿ ಮಾತನಾಡಿದಂತೆ, ಡಿಜಿಟಲ್ ತಂತ್ರಜ್ಞಾನ ಆಧಾರಿತ ಸೌಲಭ್ಯಗಳಲ್ಲಿ ಮಾತನಾಡಬಹುದಾ? ಹೌದು, ಧ್ವನಿಯಾಧಾರಿತ ತಂತ್ರಜ್ಞಾನ ಮತ್ತು ಸೌಲಭ್ಯಗಳು ಈ ಅವಕಾಶವನ್ನು ನಮಗೆ ನೀಡುತ್ತಿವೆ. ಉದಾಹರಣೆಗೆ, ಗೂಗಲ್, ಸಿರಿ, ಅಲೆಕ್ಸಾದಂತಹ ಸೇವೆಗಳು ನಾವು ಹೇಳಿದ್ದನ್ನು ಗ್ರಹಿಸಿ, ಸೂಚನೆಗಳನ್ನು ಅರ್ಥ ಮಾಡಿಕೊಂಡು ಕೆಲಸ ಮಾಡುತ್ತವೆ. 2023ರ ಹೊತ್ತಿಗೆ ವಿಶ್ವಾದಂತ್ಯ ಎಂಟು ನೂರು ಕೋಟಿಗಳಿಗೂ ಹೆಚ್ಚು ಡಿಜಿಟಲ್ ಅಸಿಸ್ಟೆಂಟ್‌ಗಳು ಬಳಕೆಯಲ್ಲಿರುತ್ತವೆ ಎಂದು ಉದ್ಯಮತಜ್ಞರ ಅಭಿಪ್ರಾಯ.

ಅಂದರೆ, ಮುಂದಿನ ಎರಡು ವರ್ಷಗಳಲ್ಲಿ ಕೇವಲ ಡಿಜಿಟಲ್ ಅಸಿಸ್ಟೆಂಟ್‌ಗಳ ಮೂಲಕ ಕೋಟ್ಯಂತರ ಜನರಿಗೆ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಗಳನ್ನು ಕುರಿತು ತಿಳಿಸಲು ಸಾಧ್ಯವಿದೆ. ಮುದ್ರಿತ ಪುಸ್ತಕಗಳು, ಪ್ರಕಟಣೆಗಳು ಮಾತ್ರವಷ್ಟೇ ಅಲ್ಲ, ಓದುಗರ ಅಭಿರುಚಿಗೆ ತಕ್ಕಂತೆ ಇ-ಪುಸ್ತಕ, ಆಡಿಯೊ ಪುಸ್ತಕ, ಪಾಡ್‌ಕಾಸ್ಟ್, ಮೊಬೈಲ್ ಆ್ಯಪ್ ಇತ್ಯಾದಿಗಳ ರೀತಿಯಲ್ಲಿ ಕನ್ನಡ ಸಾಹಿತ್ಯಕ್ಕೆ ದೇಶವಿದೇಶಗಳಲ್ಲಿ ಹೊಸ ಓದುಗರು ಮತ್ತು ಮಾರುಕಟ್ಟೆಯನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ.

> ಆಸ್ಪತ್ರೆಗಳು, ಹೊಟೇಲ್‌ಗಳು, ಮಾಲ್‌ಗಳು, ಕಚೇರಿಗಳು, ಉದ್ಯಮಗಳು, ಬ್ಯಾಂಕುಗಳು – ಹೀಗೆ ವಿವಿಧ ಕ್ಷೇತ್ರಗಳಲ್ಲಿ ಡಿಜಿಟಲ್ ಅಸಿಸ್ಟೆಂಟ್‌ಗಳ ಬಳಕೆ ಹೆಚ್ಚಾಗುತ್ತಿದೆ. ನಮ್ಮ ರಾಜ್ಯದಲ್ಲಿ ಇಂತಹ ಸೌಲಭ್ಯಗಳನ್ನು ಕನ್ನಡ ಭಾಷೆಯಲ್ಲಿ ನೀಡುವುದರಿಂದ ಕನ್ನಡಿಗರಿಗೆ ಹೆಚ್ಚು ಅನುಕೂಲವಾಗುತ್ತದೆ...

ಡಿಜಿಟಲ್ ಅಸಿಸ್ಟೆಂಟ್‌ಗಳ ಮೂಲಕ ಮಾಧ್ಯಮ ಕ್ಷೇತ್ರಕ್ಕೂ ಅನುಕೂಲವಿದೆ. ಓದುಗರ ಅಭಿರುಚಿಗೆ ತಕ್ಕಂತೆ ಮಾಹಿತಿ ನೀಡುವ ಮತ್ತು ಶುಲ್ಕ ವಿಧಿಸುವ ಅವಕಾಶ ದೊರೆಯಲಿದೆ. ಉದಾಹರಣೆಗೆ, ಕೆಲವು ಓದುಗರಿಗೆ ಪೂರ್ತಿ ಪತ್ರಿಕೆ ಬದಲಾಗಿ ಕರ್ನಾಟಕದಲ್ಲಿ ನಡೆದಿರುವ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯಲ್ಲಿ ಮಾತ್ರ ಆಸಕ್ತಿ ಇದ್ದರೆ, ಅವರಿಗೆ ಅಂತಹ ಮಾಹಿತಿಯನ್ನು ನೀಡಲು ಡಿಜಿಟಲ್ ಅಸಿಸ್ಟೆಂಟ್ ಬಳಸಬಹುದಾಗಿದೆ. ಇಷ್ಟು ಮಾತ್ರವಲ್ಲ, ವರ್ಷ 2022ರಲ್ಲಿ ವಿಶ್ವಾದಂತ್ಯ ಡಿಜಿಟಲ್ ಅಸಿಸ್ಟೆಂಟ್‌ಗಳ ಮೂಲಕ ನೀಡುವ ಜಾಹೀರಾತುಗಳಿಂದ ಒಂದು ಸಾವಿರದ ಒಂಬೈನೂರು ಕೋಟಿ ಡಾಲರ್ ಆದಾಯ ಬರುವ ನಿರೀಕ್ಷೆ ಇದೆ.

ಇಷ್ಟೊಂದು ಸಾಧ್ಯತೆಗಳು ಮತ್ತು ಉಪಯೋಗ ಇರುವ ಡಿಜಿಟಲ್ ಅಸಿಸ್ಟೆಂಟ್‌ಗಳಲ್ಲಿ ಕನ್ನಡ ಭಾಷೆಯ ಸೌಲಭ್ಯವನ್ನು ನೀಡಲು ಕೆಲಸ ಪ್ರಾರಂಭವಾಗಿದೆ. ನಾವು ಕನ್ನಡದಲ್ಲಿ ಮಾತನಾಡಿದ್ದನ್ನು ಗ್ರಹಿಸಿ, ಡಿಜಿಟಲ್ ಅಸಿಸ್ಟೆಂಟ್ ಕನ್ನಡದಲ್ಲಿ ನಮಗೆ ಉತ್ತರಿಸಿದರೆ ಸಾಕಾಗುವುದಿಲ್ಲ. ಕನ್ನಡ ಸಾಹಿತ್ಯ, ಸಂಗೀತ, ಕಲೆ, ಹೀಗೆ ವಿವಿಧ ವಿಷಯಗಳನ್ನು ಕುರಿತು ಸಮಗ್ರವಾದ ಕ್ಯೂರೇಟೆಡ್ ಡೇಟಾವನ್ನು ಮೊದಲು ಸಿದ್ಧಪಡಿಸಬೇಕು ಮತ್ತು ಡಿಜಿಟಲ್ ಅಸಿಸ್ಟೆಂಟ್‌ಗೆ ಈ ಡೇಟಾವನ್ನು ಹೇಗೆ ಬಳಸಬೇಕು ಎಂದು ಕಲಿಸಬೇಕು. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮೊದಲಾದ ತಂತ್ರಜ್ಞಾನಗಳನ್ನು ಈ ಯೋಜನೆಯಲ್ಲಿ ಬಳಸಲಾಗುತ್ತದೆ. ಬಹುರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯೊಂದರ ಮನವೊಲಿಸಿ, ಇಷ್ಟು ದೊಡ್ಡ ಯೋಜನೆಯನ್ನು ಅನುಷ್ಠಾನಗೊಳಿಸುವ ಕೆಲಸ ಮಾಡಲಾಗುತ್ತಿದೆ. ಮುಂದಿನ ವರ್ಷದಲ್ಲಿ ಈ ಸಂಸ್ಥೆಯು ಅಭಿವೃದ್ಧಿ ಪಡಿಸಿ, ಮಾರಾಟ ಮಾಡುತ್ತಿರುವ ಡಿಜಿಟಲ್ ಅಸಿಸ್ಟೆಂಟ್‌ವೊಂದರಲ್ಲಿ ಮೊದಲ ಹಂತದಲ್ಲಿ ಕೆಲವು ಕನ್ನಡ ಸೌಲಭ್ಯಗಳನ್ನು ನೀಡುವ ಉದ್ದೇಶವಿದೆ. ನಂತರದ ದಿನಗಳಲ್ಲಿ ಹಂತ ಹಂತವಾಗಿ ಇಂಗ್ಲಿಷ್ ಭಾಷೆಯಂತೆ ಕನ್ನಡ ಭಾಷೆಯಲ್ಲಿ ಕೂಡ ಸಮಸ್ತ ಸೌಲಭ್ಯಗಳನ್ನು ನೀಡುವುದು ಈ ಯೋಜನೆಯ ಒಟ್ಟು ಉದ್ದೇಶವಾಗಿದೆ.

ಆಸ್ಪತ್ರೆಗಳು, ಹೊಟೇಲ್‌ಗಳು, ಮಾಲ್‌ಗಳು, ಕಚೇರಿಗಳು, ಉದ್ಯಮಗಳು, ಬ್ಯಾಂಕುಗಳು – ಹೀಗೆ ವಿವಿಧ ಕ್ಷೇತ್ರಗಳಲ್ಲಿ ಡಿಜಿಟಲ್ ಅಸಿಸ್ಟೆಂಟ್‌ಗಳ ಬಳಕೆ ಹೆಚ್ಚಾಗುತ್ತಿದೆ. ನಮ್ಮ ರಾಜ್ಯದಲ್ಲಿ ಇಂತಹ ಸೌಲಭ್ಯಗಳನ್ನು ಕನ್ನಡ ಭಾಷೆಯಲ್ಲಿ ನೀಡುವುದರಿಂದ ಕನ್ನಡಿಗರಿಗೆ ಹೆಚ್ಚು ಅನುಕೂಲವಾಗುತ್ತದೆ ಮತ್ತು ಈ ಕೌಶಲವನ್ನು ಕಲಿಯುವ ಕನ್ನಡಿಗರಿಗೆ ಉದ್ಯೋಗ ಅವಕಾಶಗಳು ಕೂಡ ಹೆಚ್ಚಾಗುತ್ತವೆ.

ಡಿಜಿಟಲ್ ಅಸಿಸ್ಟೆಂಟ್ ತಂತ್ರಜ್ಞಾನ ಬಳಕೆಯಲ್ಲಿ ಮಾಹಿತಿ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಲಾಗುತ್ತದೆ. ಬಳಕೆದಾರರ ಮಾಹಿತಿ ಇರಬಹುದು, ಲೇಖಕರು, ಕಲಾವಿದರು ಮತ್ತು ಪ್ರಕಾಶಕರ ಹಕ್ಕು ಸಾಮ್ಯವಿರಬಹುದು, ದುರ್ಬಳಕೆಯಾಗದಂತೆ ಎಚ್ಚರಿಕೆ ವಹಿಸಲಾಗುತ್ತದೆ. ಡಿಜಿಟಲ್ ಹಕ್ಕುಸಾಮ್ಯ ನಿರ್ವಹಣೆ ಕ್ಷೇತ್ರದ ತಜ್ಞರು ಮತ್ತು ಸೈಬರ್ ಸುರಕ್ಷತೆ ತಜ್ಞರು, ಡಿಜಿಟಲ್ ಅಸಿಸ್ಟೆಂಟ್ ಉಪಕರಣ, ಮಾಹಿತಿ ಮತ್ತು ನೆಟವರ್ಕ್ ಸುರಕ್ಷತೆ ವಿಧಾನಗಳನ್ನು ಅನುಷ್ಠಾನಗೊಳಿಸುತ್ತಾರೆ. ಡಿಜಿಟಲ್ ಹಕ್ಕುಸಾಮ್ಯ, ಸೈಬರ್ ಸುರಕ್ಷತೆ ಕೌಶಲಗಳನ್ನು ಗಳಿಸುವ ಕನ್ನಡಿಗರಿಗೆ ಈ ಕ್ಷೇತ್ರಗಳಲ್ಲಿ ಕೂಡ ಉದ್ಯೋಗ ಅವಕಾಶಗಳು ದೊರೆಯುತ್ತವೆ.

ಡಿಜಿಟಲ್ ಅಸಿಸ್ಟೆಂಟ್ ಅನ್ನು ಕನ್ನಡದಲ್ಲಿ ಬಳಸಲು ಬಹುರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯ ಜೊತೆ ಕೆಲಸ ಮಾಡುವುದು ಅನಿವಾರ್ಯವಲ್ಲ. ಸರ್ಕಾರವೂ ಸೇರಿದಂತೆ ಕನ್ನಡ ದಿನಪತ್ರಿಕೆಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ, ಸಾಹಿತ್ಯ ಪರಿಷತ್ತು, ಸಾಹಿತ್ಯ ಅಕಾಡೆಮಿ, ಅಭಿವೃದ್ಧಿ ಪ್ರಾಧಿಕಾರ ಮಾಹಿತಿ ತಂತ್ರಜ್ಞಾನ ಪರಿಣಿತರು – ಹೀಗೆ ಎಲ್ಲರೂ ಸೇರಿ ಕೆಲಸ ಮಾಡಿದರೆ, ಮುಂದಿನ ವರ್ಷಗಳಲ್ಲಿ ಕನ್ನಡವನ್ನು ವಿಶ್ವಕನ್ನಡ ಮಾಡುವಲ್ಲಿ ಡಿಜಿಟಲ್ ಅಸಿಸ್ಟೆಂಟ್ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಸಾಧ್ಯವಿದೆ.

ಆ್ಯಪಲ್ ಫೈಲ್ ವಿನಿಮಯದಲ್ಲಿ 'ಏರ್‌ಡ್ರಾಪ್'

ಅವಿನಾಶ್ ಬಿ.

ಎರಡು ಫೋನ್‌ಗಳು ಅಥವಾ ಬೇರೆ ಗ್ಯಾಜೆಟ್‌ಗಳ ನಡುವೆ ಯಾವುದೇ ಫೋಟೊ, ವಿಡಿಯೊ ಅಥವಾ ಅನ್ಯ ಫೈಲ್‌ಗಳನ್ನು ವಿನಿಮಯ ಮಾಡಿಕೊಳ್ಳಲು ಸಾಕಷ್ಟು ದಾರಿಗಳಿವೆ. ಕೆಲವಕ್ಕೆ ಯುಎಸ್‌ಬಿ ಕೇಬಲ್ ಬಳಸಬಹುದಾಗಿದ್ದರೆ, ಬಹುತೇಕ ಬ್ಲೂಟೂತ್ ಮೂಲಕ ಫೈಲ್ ವಿನಿಮಯ ಮಾಡಿಕೊಳ್ಳಲಾಗುತ್ತಿದೆ. ಜೊತೆಗೆ, ಎಂದಿನಂತೆ ವಾಟ್ಸ್‌ಆ್ಯಪ್, ಇ-ಮೇಲ್ ಮುಂತಾದ ಸಾರ್ವಕಾಲಿಕ ಸ್ವೀಕಾರಾರ್ಹ ವಿಧಾನಗಳೂ ಇವೆ. ಶೇರ್ ಮಾಡಿಕೊಳ್ಳಲು ಕೆಲವು ಆ್ಯಪ್‌ಗಳೂ ಇವೆ. ಆದರೆ, ಇತ್ತೀಚೆಗಷ್ಟೇ ಐಫೋನ್ 13 ಸರಣಿಯ ಫೋನ್‌ಗಳನ್ನು ಬಿಡುಗಡೆ ಮಾಡಿರುವ ಆ್ಯಪಲ್ ಕಂಪನಿಯ ಐಫೋನ್ ಅಥವಾ ಐಪ್ಯಾಡ್ ಅಥವಾ ಮ್ಯಾಕ್ ಕಂಪ್ಯೂಟರುಗಳಲ್ಲಿ ಫೈಲ್‌ಗಳ ವಿನಿಮಯ ತೀರಾ ಕಷ್ಟ ಎಂಬ ಮಾತಿದೆ. ಸುರಕ್ಷತೆಯ ದೃಷ್ಟಿಯಿಂದ ಐಫೋನ್‌ನ ಫೈಲ್‌ಗಳನ್ನು ಬೇರೆಡೆ ವರ್ಗಾಯಿಸುವುದಕ್ಕೆ ವಾಟ್ಸ್‌ಆ್ಯಪ್, ಟೆಲಿಗ್ರಾಂನಂತಹ ಸಂದೇಶ ವಿನಿಮಯ ಆ್ಯಪ್ ಹಾಗೂ ಇ-ಮೇಲ್ ಹೊರತಾಗಿ ಬೇರೆ ಸಾಧ್ಯತೆ ಇಲ್ಲ. ಫೈಲ್‌ಗಳ ಗಾತ್ರ ದೊಡ್ಡದಾದರೆ ಕಳುಹಿಸುವುದಕ್ಕೆ ತೀರಾ ಕಷ್ಟ. ಇದಕ್ಕಾಗಿ ಐಟ್ಯೂನ್ ತಂತ್ರಾಂಶವನ್ನು ಕಂಪ್ಯೂಟರಿಗೆ ಅಳವಡಿಸಿಕೊಂಡು ಫೈಲುಗಳನ್ನು ವರ್ಗಾಯಿಸಬೇಕಾಗುತ್ತದೆ.

ಇದರ ಹೊರತಾಗಿ, ಆ್ಯಪಲ್ ಸಾಧನಗಳ ನಡುವೆ ವೈರ್ ಇಲ್ಲದೆಯೇ ಸುಲಭವಾಗಿ ಫೈಲ್‌ಗಳನ್ನು ವರ್ಗಾಯಿಸಲು ಅವುಗಳಲ್ಲಿರುವ ಏರ್‌ಡ್ರಾಪ್ ಎಂಬ ಆ್ಯಪ್ ನೆರವಾಗುತ್ತದೆ. ಇದು ಐಒಎಸ್ (ಆ್ಯಪಲ್‌ನ ಕಾರ್ಯಾಚರಣಾ ವ್ಯವಸ್ಥೆ) ಇರುವ ಸಾಧನಗಳಿಗಷ್ಟೇ ಲಭ್ಯ. ಇದು ಯಾವುದೇ ಪ್ರತ್ಯೇಕ ತಂತ್ರಾಂಶ ಅಳವಡಿಸದೆಯೇ, ಅತ್ಯಂತ ವೇಗವಾಗಿ ಫೈಲ್ ವರ್ಗಾಯಿಸಲು ಸಹಾಯ ಮಾಡುತ್ತದೆ. ಇದರಲ್ಲಿ ಫೋಟೊ, ಹಾಡು, ವಿಡಿಯೊ ಮಾತ್ರವೇ ಅಲ್ಲ, ವೆಬ್ ವಿಳಾಸ, ಸಂಪರ್ಕ ಸಂಖ್ಯೆ, ಪ್ಲೇಲಿಸ್ಟ್‌ಗಳು, ಲೊಕೇಶನ್, ಟಿಪ್ಪಣಿ ಮಾಡಿಕೊಂಡ ಪಠ್ಯವನ್ನೂ ಬೇರೆ ಆ್ಯಪಲ್ ಸಾಧನಗಳಿಗೆ (ಐಫೋನ್, ಐಪ್ಯಾಡ್, ಮ್ಯಾಕ್ ಕಂಪ್ಯೂಟರ್) ಏರ್‌ಡ್ರಾಪ್ ಮಾಡಬಹುದು.

ಏರ್‌ಡ್ರಾಪ್‌ನ ಶಾರ್ಟ್‌ಕಟ್ ಬಟನ್ ಎಲ್ಲಿದೆ ಎಂಬುದು ಕೆಲವರಿಗೆ ಗೊಂದಲವಾಗಬಹುದು. ಐಫೋನ್ ಅಥವಾ ಐಪ್ಯಾಡ್‌ನ ಬಲ ಮೇಲ್ಭಾಗದ ಮೂಲೆಯಿಂದ ಕೆಳಕ್ಕೆ ಸ್ವೈಪ್ ಮಾಡಿದಾಗ 'ಕಂಟ್ರೋಲ್ ಸೆಂಟರ್' ತೆರೆದುಕೊಳ್ಳುತ್ತದೆ. ಅದರಲ್ಲಿ ವೈಫೈ, ಡೇಟಾ ಸಂಪರ್ಕದ ಬಟನ್‌ಗಳಿರುವ ಚೌಕವನ್ನು ಒತ್ತಿಹಿಡಿದಾಗ 'ಏರ್‌ಡ್ರಾಪ್' ಕಾಣಿಸುತ್ತದೆ. ಅದನ್ನು ಒತ್ತಿದಾಗ ಸ್ವೀಕರಿಸುವುದನ್ನು ಆಫ್ ಮಾಡುವ, ಸಂಪರ್ಕಗಳಿಂದ ಮಾತ್ರ ಸ್ವೀಕರಿಸುವ ಮತ್ತು ಎಲ್ಲರಿಂದಲೂ ಸ್ವೀಕರಿಸುವಂತೆ ಹೊಂದಿಸುವ ಆಯ್ಕೆ ಗೋಚರಿಸುತ್ತದೆ.

ಕಂಟ್ರೋಲ್ ಸೆಂಟರ್‌ನಲ್ಲಿ ಏರ್‌ಡ್ರಾಪ್ ಮತ್ತು ಶೇರ್ ಮಾಡುವಾಗ ಕಾಣಿಸಿಕೊಳ್ಳುವ ಏರ್‌ಡ್ರಾಪ್ ಬಟನ್.

> ಆ್ಯಪಲ್ ಸಾಧನಗಳ ನಡುವೆ ವೈರ್ ಇಲ್ಲದೆಯೇ ಸುಲಭವಾಗಿ ಫೈಲ್‌ಗಳನ್ನು ವರ್ಗಾಯಿಸಲು ಅವುಗಳಲ್ಲಿರುವ ಏರ್‌ಡ್ರಾಪ್ ಎಂಬ ಆ್ಯಪ್ ನೆರವಾಗುತ್ತದೆ.

ಇದು ಹೇಗೆ ಕೆಲಸ ಮಾಡುತ್ತದೆ

ಏರ್‌ಡ್ರಾಪ್ ಕೆಲಸ ಮಾಡುವುದು ಬ್ಲೂಟೂತ್ ಸಂಪರ್ಕವನ್ನು ಬಳಸಿಯೇ. ಎರಡೂ ಸಾಧನಗಳ ಮಧ್ಯೆ ವೈಫೈ ಸಂಪರ್ಕ ಏರ್ಪಡುತ್ತದೆ. ಇದಕ್ಕೆ ಇಂಟರ್ನೆಟ್ ಸಂಪರ್ಕವೇನೂ ಬೇಕಾಗಿಲ್ಲ. ವೈಫೈ ಮತ್ತು ಬ್ಲೂಟೂತ್ ಎರಡೂ ಆನ್ ಆಗಿದ್ದರೆ ಸಾಕಾಗುತ್ತದೆ. ಎರಡೂ ಸಾಧನಗಳಲ್ಲಿ ಏರ್‌ಡ್ರಾಪ್ ಆನ್ ಮಾಡಿದಾಗ, ತಾವಾಗಿಯೇ ಫೈರ್‌ವಾಲ್ ರಚಿಸಿಕೊಂಡು, ಎನ್‌ಕ್ರಿಪ್ಟ್ ಆಗಿಯೇ ಫೈಲ್‌ಗಳು ಉಭಯ ಸಾಧನಗಳ ಮಧ್ಯೆ ವಿನಿಮಯವಾಗುತ್ತವೆ. ಇ-ಮೇಲ್ ಅಥವಾ ಇತರ ಸಂದೇಶವಾಹಕಗಳ ಮೂಲಕ ಕಳುಹಿಸುವುದಕ್ಕಿಂತಲೂ ಇದು ಸುರಕ್ಷಿತ ವಿಧಾನ. ಸುಲಭವಾಗಿ ಹೇಳುವುದಾದರೆ, (ಈಗ ಭಾರತದಲ್ಲಿ ನಿಷೇಧವಾಗಿರುವ) ಶೇರ್ ಇಟ್ ಎಂಬ ಆ್ಯಪ್ ಬಳಸಿದಂತೆಯೇ.

ಕಳುಹಿಸಬೇಕಾದ ಫೈಲ್ ಆಯ್ಕೆ ಮಾಡಿಕೊಂಡು, ಶೇರ್ ಮಾಡುವ ಬಟನ್ ಒತ್ತಿದಾಗ, ಏರ್‌ಡ್ರಾಪ್ ಆಯ್ಕೆ ಕಾಣಿಸುತ್ತದೆ. ಫೈಲ್ ಸ್ವೀಕರಿಸಬೇಕಾದ ಸಾಧನದ ಸೆಟ್ಟಿಂಗ್ಸ್‌ನಲ್ಲಿ 'ಜನರಲ್' ಆಯ್ಕೆ ಮಾಡಿದಾಗ ಏರ್‌ಡ್ರಾಪ್ ತೆರೆದರೆ, ಎಲ್ಲರಿಂದಲೂ (Everyone) ಅಂತ ಆಯ್ಕೆ ಮಾಡಿದಾಗ, ಕಳುಹಿಸುವ ಸಾಧನದಲ್ಲಿ ಈ ಸಾಧನದ ಹೆಸರು ಕಾಣಿಸುತ್ತದೆ. ಅದನ್ನು ಒತ್ತಿದಾಗ, ಫೈಲ್ ಸ್ವೀಕರಿಸುವ ಸಾಧನದಲ್ಲಿ ಈ ಫೈಲನ್ನು ಪಡೆದುಕೊಳ್ಳಬೇಕೇ ಎಂದು ಕೇಳಲಾಗುತ್ತದೆ. 'ಒಕೆ' ಒತ್ತಿದಾಗ ಕ್ಷಿಪ್ರಗತಿಯಲ್ಲಿ ಫೈಲ್ ವರ್ಗಾವಣೆಯಾಗುತ್ತದೆ. ಬ್ಲೂಟೂತ್ ಸಂಪರ್ಕದ ಮೂಲಕ ವೈಫೈ ಕೂಡ ಕೆಲಸ ಮಾಡುವುದರಿಂದ ವೇಗವಾಗಿ ಫೈಲ್ ರವಾನೆಯಾಗುತ್ತದೆ. ಹೀಗಾಗಿ ದೊಡ್ಡ ಗಾತ್ರದ ಫೈಲುಗಳ ವರ್ಗಾವಣೆ ಸುಲಭ.

ನೀವೂ ಆಗಬಹುದು ಪ್ರಿಂಟರ್!

ಆಧುನಿಕ ಜೀವನಕ್ಕೆ ಅನಿವಾರ್ಯವಾಗಿರುವ ಕೆಲಸಗಳನ್ನು ಸುಲಭ ಆಗಿಸಲು ತಂತ್ರಜ್ಞಾನ ನೆರವಾಗುತ್ತಿದೆ. ಇಂಥ ಕೆಲವು ಸಾಧನಗಳ ಬಗ್ಗೆ ಪರಿಚಯ ಇಲ್ಲಿದೆ.

ಪೃಥ್ವಿರಾಜ್

ಎಚ್‌ಪಿಆರ್‌ಟಿ ವೈರ್‌ಲೆಸ್ ಪ್ರಿಂಟರ್

ಯಾವುದಾದರೂ ಮಾಹಿತಿಯನ್ನು ಕಾಗದದ ರೂಪದಲ್ಲಿ ಪಡೆಯಬೇಕೆಂದರೆ ಪ್ರಿಂಟರ್‌ಗಳ ಅವಶ್ಯಕತೆ ಬೇಕಾಗುತ್ತದೆ. ಆದರೆ ಎಲ್ಲ ಕಡೆ ಇವು ಸುಲಭವಾಗಿ ಸಿಗುವುದಿಲ್ಲ. ಪ್ರಿಂಟರ್‌ಗಳ ಬೆಲೆ ದುಬಾರಿ. ಹೀಗಾಗಿ ವೃತ್ತಿಪರ ಮುದ್ರಣಕೇಂದ್ರಗಳಲ್ಲಿ ಮಾತ್ರ ಪ್ರಿಂಟ್‌ಔಟ್ ಪಡೆಯಬೇಕಾದ ಅನಿವಾರ್ಯತೆ. ಎಚ್‌ಪಿಆರ್‌ಟಿ ವೈರ್‌ಲೆಸ್ ಪ್ರಿಂಟರ್ ಇದ್ದರೆ ಬೇಕೆಂದ ಕಡೆ, ಅಗತ್ಯ ಸಂದರ್ಭದಲ್ಲಿ ಸುಲಭವಾಗಿ ಪ್ರಿಂಟ್‌ಔಟ್ ತೆಗೆದುಕೊಳ್ಳಬಹುದು. ಕಿಸೆಯಲ್ಲಿ ಹಿಡಿಸುವಷ್ಟು ಪುಟ್ಟಗಾತ್ರದಲ್ಲಿ ಇದನ್ನು ತಯಾರಿಸಲಾಗಿದ್ದು, ತುರ್ತು ಸಂದರ್ಭಗಳಲ್ಲಿ ಪ್ರಿಂಟ್‌ಔಟ್ ಪಡೆಯಲು ನೆರವಾಗುತ್ತದೆ. ಈ ವೈರ್‌ಲೆಸ್ ಪ್ರಿಂಟರ್ ಅನ್ನು ಅಗತ್ಯಬಿದ್ದರೆ ನಮ್ಮ ಸ್ಮಾರ್ಟ್‌ಫೋನ್ ಅಥವಾ ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳಿಗೆ ಯುಎಸ್‌ಬಿ ಕೇಬಲ್ ಸಹಾಯದಿಂದ ಸುಲಭವಾಗಿ ಜೋಡಿಸಿಕೊಳ್ಳಬಹುದು. ಪ್ರಿಂಟರ್‌ನ ಒಂದು ತುದಿಗೆ ಹಾಳೆ ಇಟ್ಟು ಪ್ರಿಂಟ್ ಕೊಟ್ಟರೆ ಸಾಕು, ಮಾಹಿತಿ ಪ್ರಿಂಟ್ ಆಗಿ ಮತ್ತೊಂದು ತುದಿಗೆ ಬರುತ್ತದೆ. ಪ್ರಿಂಟಿಂಗ್ ಗುಣಮಟ್ಟವೂ ಉತ್ತಮವಾಗಿದ್ದು ಸಾಮಾನ್ಯರು ಸುಲಭವಾಗಿ ಬಳಸಿಕೊಳ್ಳಲು ನೆರವಾಗುವಂತೆ ತಯಾರಿಸಲಾಗಿದೆ.

ಇನ್‌ಸ್ಟಾ ರಿಂಗ್ ಫ್ಲ್ಯಾಶ್

ಗುಣಮಟ್ಟದ ಹಾಗೂ ಆಕರ್ಷಕ ಫೋಟೊಗಳನ್ನು ಸೆರೆಹಿಡಿಯಲು ಫೋಟೊಗ್ರಾಫರ್‌ಗಳು ಫ್ಲ್ಯಾಶ್‌ಲೈಟ್‌ಗಳನ್ನು ಬಳಸುವುದನ್ನು ನೋಡಿರುತ್ತೀರಿ. ಈ ಫ್ಲ್ಯಾಶ್‌ಲೈಟ್‌ಗಳು ದುಬಾರಿ ಹಾಗೂ ಗಾತ್ರದಲ್ಲಿ ದೊಡ್ಡದೂ ಆಗಿರುವುದರಿಂದ ಸಾಮಾನ್ಯರು ಬಳಸುವುದು ಸುಲಭವಲ್ಲ. ಆದರೆ ಪುಟ್ಟ ಗಾತ್ರದ ಇನ್‌ಸ್ಟಾ ರಿಂಗ್ ಫ್ಲ್ಯಾಶ್ ನೆರವಿನಿಂದ ಸಾಮಾನ್ಯರೂ ವೃತ್ತಿಪರರಂತೆ ಗುಣಮಟ್ಟದ ಚಿತ್ರಗಳನ್ನು ಸೆರೆ ಹಿಡಿಯಬಹುದು. ಪ್ರಸ್ತುತ ಮಾರುಕಟ್ಟೆಯಲ್ಲಿರುವ ಕ್ಯಾಮೆರಾಗಳನ್ನು ಈ ಉಪಕರಣಕ್ಕೆ ಸುಲಭವಾಗಿ ಜೋಡಿಸಿ ಬೆಳಕು ಹಾಯಿಸಿ ಸ್ಪಷ್ಟವಾಗಿ ಗುಣಮಟ್ಟದ ಚಿತ್ರಗಳನ್ನು ಸೆರೆಹಿಡಿಯಬಹುದು. ಹಗುರುವಾದ ಈ ಫ್ಲ್ಯಾಶ್‌ಲೈಟ್ ಅನ್ನು ಸುಲಭವಾಗಿ ಮಡಚಿ ಇಡಬಹುದು. ಹೀಗಾಗಿ ಪ್ರವಾಸದ ಸಂದರ್ಭಗಳಲ್ಲೂ ಬಳಸಿಕೊಳ್ಳಬಹುದು.



ನಿಕ್ಸ್ ಮಿನಿ ಕಲರ್ ಸೆನ್ಸರ್

ವೃತ್ತಿಪರರಂತೆ ವಿವಿಧ ರೀತಿಯ ಬಣ್ಣಗಳಲ್ಲಿರುವ ವ್ಯತ್ಯಾಸವನ್ನು ಸಾಮಾನ್ಯರು ಗುರುತಿಸಲು ಆಗದು. ಹಲವರಿಗೆ ಬಣ್ಣಗಳ ಹೆಸರೇ ಗೊತ್ತಿರುವುದಿಲ್ಲ. ಕೆಲವರಿಗಂತೂ ಬಣ್ಣಗಳ ಪರಿಚಯವೇ ಇರುವುದಿಲ್ಲ. ಸುತ್ತಲಿನ ಪರಿಸರದಲ್ಲಿ ಆಕರ್ಷಕ ಬಣ್ಣ ಕಾಣಿಸಿದರೂ ಅದನ್ನು ಗುರುತಿಸಲು ಕಷ್ಟವಾಗುತ್ತದೆ. ಅದೇ ರೀತಿಯ ಬಣ್ಣವನ್ನು ಮನೆಯ ಗೋಡೆಗೊ, ಕಿಟಕಿ, ಬಾಗಿಲಿಗೊ ಬಳಿಯಬೇಕೆಂದರೆ ವೃತ್ತಿಪರರ ನೆರವು ಬೇಡಬೇಕು. ಈ ಸಮಸ್ಯೆಗೆ ಪರಿಹಾರವಾಗಿ ನಿಕ್ಸ್ ಮಿನಿ ಕಲರ್ ಸೆನ್ಸರ್ ತಯಾರಿಸಲಾಗಿದೆ. ಸ್ಮಾರ್ಟ್‌ಫೋನ್‌ನೊಂದಿಗೆ ಜೋಡಿಸಿ ಬಳಸಿಕೊಳ್ಳಬಹುದಾದ, ಸೆನ್ಸರ್‌ಗಳ ನೆರವಿನಿಂದ ಕಾರ್ಯನಿರ್ವಹಿಸುವ ಈ ಉಪಕರಣವನ್ನು ನಿರ್ದಿಷ್ಟ ಬಣ್ಣವಿರುವ ವಸ್ತುವಿನ ಮೇಲೆ ಇಟ್ಟರೆ ಸಾಕು, ಇದಕ್ಕೆಂದೇ ತಯಾರಿಸಲಾಗಿರುವ ಆ್ಯಪ್ ಮೂಲಕ ಸುಲಭವಾಗಿ ಬಣ್ಣ ಪತ್ತೆಮಾಡಬಹುದು. ವಸ್ತುಗಳಷ್ಟೇ ಅಲ್ಲ, ಪತ್ರಿಕೆ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಚಿತ್ರಗಳಲ್ಲಿನ ಬಣ್ಣಗಳನ್ನೂ ಸುಲಭವಾಗಿ ತಿಳಿದುಕೊಳ್ಳಬಹುದು. ಈ ಆ್ಯಪ್‌ನಲ್ಲಿ ಹಲವು ಪೈಂಟಿಂಗ್ ಬ್ರ್ಯಾಂಡ್‌ಗಳ ನೆರವು ಕೂಡ ಸಿಗುತ್ತದೆ. ಇದರಿಂದ ನಿರ್ದಿಷ್ಟ ಬಣ್ಣ ಮಾರುಕಟ್ಟೆಯಲ್ಲಿ ಲಭ್ಯವಿದೆಯೊ ಇಲ್ಲವೊ ಎಂಬ ಮಾಹಿತಿಯೂ ಸಿಗುತ್ತದೆ.

ರಾಯ್ಬಿ ರೆಡ್ ಕ್ರಾಸ್ ಲೈನ್ ಲೇಸರ್

ಮನೆಯ ಅಂದ ಹೆಚ್ಚಿಸಲು, ಖಾಲಿ ಗೋಡೆಗಳನ್ನು ಆಕರ್ಷಕ ವಸ್ತುಗಳಿಂದ ಅಲಂಕರಿಸಿ, ಮನೆಗೆ ಬರುವವರ ಮನಸ್ಸಿಗೂ ಖುಷಿ ನೀಡಬೇಕು ಎಂಬ ಆಸೆ ಬಹುತೇಕರದ್ದು. ಆದರೆ ಯಾವುದಾರೂ ಫೋಟೊ ಅಥವಾ ವಸ್ತುವನ್ನು ಗೋಡೆಗೆ ಸಿಕ್ಕಿಸಬೇಕು ಎಂದರೆ ಮೊಳೆ ಹೊಡೆಯುವುದಕ್ಕೂ ಪ್ರಯಾಸ ಪಡಬೇಕು. ಸಲೀಸಾಗಿ ರಂಧ್ರ ಕೊರೆಯುವ ಯಂತ್ರಗಳು ಲಭ್ಯವಿದ್ದರೂ ನೇರಕೋನದಲ್ಲಿ ಎರಡೂ ತುದಿಗಳಲ್ಲಿ ಸಮಾನವಾಗಿ ರಂಧ್ರ ಕೊರೆಯಬೇಕೆಂದರೆ ರಾಯ್ಬಿ ರೆಡ್ ಕ್ರಾಸ್ ಲೈನ್ ಲೇಸರ್ ಉಪಕರಣ ನೆರವಾಗುತ್ತದೆ. ಅಂಗೈಯಲ್ಲಿ ಹಿಡಿಸುವಷ್ಟು ಗಾತ್ರವಿರುವ ಈ ಉಪಕರಣ ಸಹಾಯದಿಂದ ಗೋಡೆಯ ಮೇಲೆ ನೇರಕೋನದಲ್ಲಿ ಲೇಸರ್ ಗೆರೆ ಎಳೆದು ಗುರುತು ಮಾಡಿಕೊಂಡು, ಪಟ, ಹಲಗೆ ಸಿಕ್ಕಿಸಬಹುದು. ಇದನ್ನು ಬಳಸಿ ಸುಮಾರು 10 ಮೀಟರ್ ವರೆಗೆ ಬೆಳಕು ಹಾಯಿಸಬಹುದು. ವಿಶೇಷವೆಂದರೆ ಗೋಡೆಯ ಮೇಲೆ ಬೆಳಕು ಹಾಯಿಸಿದರೆ ಸಾಕು ಗೋಡೆಯ ಮಧ್ಯ ಭಾಗವನ್ನು ಸುಲಭವಾಗಿ ಗುರುತಿಸಬಹುದು. ಒಮ್ಮೆಗೆ + ಆಕಾರದಲ್ಲಿ ಎರಡು ಗೆರೆಗಳು ಮೂಡಿ ಗುರುತಿಸಲು ನೆರವಾಗುತ್ತದೆ. ಅಲ್ಲದೆ ಕೋಣೆಯ ಗಾತ್ರಕ್ಕೆ ಅನುಗುಣವಾಗಿ ಗೆರೆ ಎಳೆದು ಸುಲಭವಾಗಿ ಗುರುತು ಮಾಡಬಹುದು.

ಸ್ವಾಧ್ಯಾಯದ ಗುರು 'ಮೂಕ್'



> ಸ್ವಾಧ್ಯಾಯ ಮೂಲಕ ನಮ್ಮ ಜ್ಞಾನತೃಷೆಯನ್ನಷ್ಟೇ ತಣಿಸದೆ ಲಕ್ಷಾಂತರ ಜನರಿಗೆ ಮರೀಚಿಕೆಯಾಗಿದ್ದ ಉನ್ನತ ಶಿಕ್ಷಣವನ್ನು ಅವರವರ ಮನೆಗೇ ಪ್ರವೇಶಿಸಿ, ಶಿಕ್ಷಣವನ್ನು ತಲುಪಿಸುತ್ತಿದೆ MOOC...

ನವೀನ್ ಎಚ್.ವಿ.

ಮ್ಯಾಸೀವ್ ಓಪನ್ ಆನ್‌ಲೈನ್ ಕೋರ್ಸ್ – Massive Open Online Course (MOOC) – ಇಂದು ಆನ್‌ಲೈನ್ ಮಾಧ್ಯಮದ ಮುಖಾಂತರ ಹೊಸ ವಿಷಯಗಳನ್ನು, ಕೌಶಲಗಳನ್ನು, ಕಲಿಯುವ ನೂತನ ವಿಧಾನವಾಗಿದೆ. ಇದು ಕೇವಲ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ, ವೃತ್ತಿಪರರಿಗೆ ತಮ್ಮ ಜ್ಞಾನವನ್ನು ಪರಿಷ್ಕಾರ ಮಾಡಿಕೊಳ್ಳಲು, ವೃತ್ತಿಯಲ್ಲಿ ತಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು, ಬದಲಾಗುತ್ತಲೇ ಇರುವ ತಂತ್ರಜ್ಞಾನದ ಆಯಾಮಗಳನ್ನು ಕಲಿಯಲು ಮತ್ತು ವೃತ್ತಿಯಲ್ಲಿ ಉನ್ನತ ಸ್ಥಾನಕ್ಕೇರಲು ಬೇಕಾದ ಮಾರ್ಗದರ್ಶನ ಪಡೆಯಲು ಉತ್ತಮ ಮಾಧ್ಯಮವಾಗಿದೆ.

ಈಗಾಗಲೇ ತಂತ್ರಜ್ಞಾನ ಆವಿಷ್ಕಾರದ ನೆರವಿನಿಂದ ಶಾಲಾ ಕಾಲೇಜುಗಳ ಪಠ್ಯಬೋಧನೆಗಳು ಆನ್‌ಲೈನ್‌ನಲ್ಲಿ ನಡೆಯುತ್ತಿವೆ. ಹೀಗಿರುವಾಗ MOOC ವಿಧಾನವು ಹೇಗೆ ವಿಶಿಷ್ಟವಾಗಿದೆ? MOOC ನಮಗೆ ಡಿಗ್ರಿ/ ಮಾಸ್ಟರ್ ಡಿಗ್ರಿ ನೀಡುವ ಸಂಸ್ಥೆಯೇ? ಇಂಥ ಪ್ರಶ್ನೆಗಳು ಇಲ್ಲಿ ಉದ್ಭವಿಸುವುದಿಲ್ಲ. MOOC ಇದೆಲ್ಲವನ್ನು ಒಳಗೊಂಡಂತೆ ಇನ್ನು ಹೆಚ್ಚಿನ ವೈಶಿಷ್ಟ್ಯವಿರುವ ಕಾರ್ಯಕ್ರಮ. ಇದು ಕೇವಲ ಸಾಂಪ್ರದಾಯಿಕ ಡಿಗ್ರಿ ಹಾಗು ಪಠ್ಯಸಾಮಗ್ರಿಗಳ ಶಿಕ್ಷಣ ನೀಡುವುದಷ್ಟೇ ಅಲ್ಲದೆ, ಇದರಲ್ಲಿ ಪ್ರಾಧ್ಯಾಪಕರು, ವೃತ್ತಿಪರರು, ವಿಷಯ ಅನ್ವೇಷಕರು, ಆವಿಷ್ಕಾರಿ ಸಂಸ್ಥೆಗಳು - ಹೀಗೆ ತತ್ಸಂಬಂಧಿತ ಸಂಸ್ಥೆಗಳು ವಿಷಯಾಧಾರಿತವಾಗಿ ಜ್ಞಾನವನ್ನು ಎಲ್ಲರೊಡನೆ ಮುಕ್ತವಾಗಿ ಹಂಚಿಕೊಳ್ಳಲು ಕೈ ಜೋಡಿಸಿದ್ದು, ಸೋಶಿಯಲ್ ಮೀಡಿಯಾ, ವಿಡಿಯೊ ಕಾನ್ಫರೆನ್ಸ್ ಹಾಗೂ ಇನ್ನಿತರ ಮಾಧ್ಯಮದ ಮೂಲಕವೂ ಕಲಿಯಲು ಅನುವು ಮಾಡಿಕೊಡುತ್ತದೆ. ಈ ಕಲಿಕೆ ಆನ್‌ಲೈನ್ ಮುಖಾಂತರವಾದ್ದರಿಂದ ಯಾವುದೇ ಸಮಯದಲ್ಲೂ ನಾವು ಇದರಲ್ಲಿ ಭಾಗವಹಿಸಿ, ನಮ್ಮ ಅಧ್ಯಯನದಲ್ಲಿ ತೊಡಗಿಕೊಳ್ಳಬಹುದು.

ಮತ್ತೊಂದು ವೈಶಿಷ್ಟ್ಯವೆಂದರೆ ಇದರಲ್ಲಿನ ಬಹುತೇಕ ಕೋರ್ಸ್‌ಗಳು ಉಚಿತವಾಗಿದ್ದು, ಕೆಲವು ವಿಶೇಷ ಕೋರ್ಸಿಗಳಿಗಷ್ಟೇ ನಾವು ಹಣವನ್ನು ಪಾವತಿ ಮಾಡಬೇಕಿರುತ್ತದೆ. ಬಹುತೇಕ ಕೋರ್ಸ್‌ಗಳನ್ನು ಮುಗಿಸಿದ ಮೇಲೆ ಸರ್ಟಿಫಿಕೇಟ್ ಪಡೆಯುವ ಅವಕಾಶವೂ ಇರುತ್ತದೆ. ಆಯಾ ತಂತ್ರಜ್ಞಾನದಲ್ಲಿ ದುಡಿಯುತ್ತಿರುವ ವಿಷಯ ತಜ್ಞರ ಅಥವಾ ಮುಖ್ಯ ಸಂಪನ್ಮೂಲ ವ್ಯಕ್ತಿಗಳೊಡನೆ ನೇರವಾಗಿ ಸಂವಹನ ನಡೆಸಬಹುದಾದ್ದರಿಂದ ಪ್ರಶ್ನೆಗಳನ್ನು, ಅನುಮಾನಗಳನ್ನು ತಕ್ಷಣ ಬಗೆಹರಿಸಿಕೊಳ್ಳಬಹುದಾಗಿದೆ. ಇದರ ಮತ್ತೊಂದು ಹೆಚ್ಚುಗಾರಿಕೆಯೆಂದರೆ ಆಯಾ ವಿಷಯದಲ್ಲಿ ಈಗಾಗಲೇ 'ಪ್ರತಿಷ್ಠಿತ' ಎನಿಸಿರುವ ಅಂತರರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯ ಅಥವಾ ಕಾಲೇಜುಗಳಿಂದಾಗಲಿ, ವೃತ್ತಿಪರ ತರಬೇತಿ ಸಂಸ್ಥೆಗಳಿಂದಾಗಲಿ, ಕಾರ್ಪೊರೇಟ್ ಕಂಪೆನಿಗಳಿಂದಾಗಲಿ ಅಥವಾ ತಜ್ಞರಿಂದಾಗಲಿ ನೇರವಾಗಿ ನಾವು ವಿಷಯಗಳನ್ನು ಕಲಿಯಬಹುದಾಗಿದೆ.

ಹೀಗೆ ಇದು ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ತಮ್ಮ ನೆಚ್ಚಿನ ವಿಷಯಗಳ ಕಲಿಕೆಗೂ ಹವ್ಯಾಸಗಳ ಮುಂದುಬರಿಕೆಗೂ ಜ್ಞಾನಪರಿಷ್ಕಾರಕ್ಕೂ ವೇದಿಕೆಯನ್ನು ಒದಗಿಸುತ್ತದೆ. ಕಂಪ್ಯೂಟರ್ ಡಿಗ್ರಿ ಹೊಂದಿರುವವರು ಮನಃಶಾಸ್ತ್ರಜ್ಞ ವಿಷಯವನ್ನು ಅಧ್ಯಯನ ನಡೆಸಬಹುದಾಗಿದೆ. ಭೂಗರ್ಭ ಶಾಸ್ತ್ರಜ್ಞರು ಹಣಕಾಸಿನ ಪಠ್ಯವನ್ನು ಕಲಿಯಬಹುದಾಗಿದೆ. ಹೀಗೆ ಯಾವುದೇ ವಿಷಯವನ್ನು ಅಭ್ಯಾಸ ಮಾಡಲು ಯಾವುದೇ ಪೂರ್ವ ಮಾಹಿತಿ ಇಲ್ಲದಿದ್ದರೂ ಕೆಲವು ಮೂಲಭೂತವಾದ ಕೋರ್ಸ್‌ಗಳನ್ನು ಅಭ್ಯಾಸ ಮಾಡಬಹುದಾಗಿದೆ.

ಈ ಕಲಿಕಾ ಮಾಧ್ಯಮವು ಇಂದು ಭಾರತದಲ್ಲೂ ಹೆಚ್ಚು ಪ್ರಾಚುರ್ಯ ಪಡೆಯುತ್ತಿದ್ದು, ಅಂತರರಾಷ್ಟ್ರೀಯ ಮಟ್ಟದ https://www.mooc.org/ ಸಂಸ್ಥೆಯಲ್ಲಷ್ಟೇ ಅಲ್ಲದೆ ಸರ್ಕಾರವೇ ಸ್ಥಾಪಿಸಿರುವ https://swayam.gov.in/ ಕಾರ್ಯಕ್ರಮದಡಿ ಗುಣಮಟ್ಟದ ಶಿಕ್ಷಣವನ್ನು ಪ್ರತಿಯೊಬ್ಬರೂ ಪಡೆಯುವ ವ್ಯವಸ್ಥೆಯೊಂದು ಒದಗಿದಂತಾಗಿದೆ. ಸರ್ಕಾರದ ಈ ಕಾರ್ಯಕ್ರಮಕ್ಕೆ ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಷ್ಟೇ ಅಲ್ಲದೆ ಹಲವು ಸಂಘ ಸಂಸ್ಥೆಗಳು, ಸರ್ಕಾರದ ತಾಂತ್ರಿಕ ಇಲಾಖೆಗಳು ಉಚಿತವಾಗಿ ಶಿಕ್ಷಣ ಒದಗಿಸಲು ಮುಂದೆ ಬಂದಿವೆ. ಹೀಗೆ MOOC ಸ್ವಾಧ್ಯಾಯ ಮೂಲಕ ನಮ್ಮ ಜ್ಞಾನತೃಷೆಯನ್ನಷ್ಟೇ ತಣಿಸದೆ ಲಕ್ಷಾಂತರ ಜನರಿಗೆ ಮರೀಚಿಕೆಯಾಗಿದ್ದ ಉನ್ನತ ಶಿಕ್ಷಣವನ್ನು ಅವರವರ ಮನೆಗೇ ಪ್ರವೇಶಿಸಿ, ಶಿಕ್ಷಣವನ್ನು ತಲುಪಿಸುತ್ತಿದೆ. MOOCನಿಂದ ಪ್ರಯೋಜನವನ್ನು ಪಡೆದಿರುವ ಹಲವರು ವ್ಯಕ್ತಿಗಳು ಮತ್ತು ಹಲವು ಸಂಸ್ಥೆಗಳು ಸಮಾಜದ ಬೆಳವಣಿಗೆಗೆ ತಮ್ಮದೇ ರೀತಿಯ ಕೊಡುಗೆಗಳನ್ನು ನೀಡುತ್ತಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಯಶಸ್ಸು ಎರಡು ಬಾರಿ ಸಂಭವಿಸುತ್ತದೆ. ಒಮ್ಮೆ ಮನಸ್ಸಿನಲ್ಲಿ ಮತ್ತು ಎರಡನೇ ಬಾರಿ ಭೌತಿಕ ಪ್ರಪಂಚದಲ್ಲಿ.

–ಅಜೀಂ ಪ್ರೇಮ್‌ಜಿ

ಮಕ್ಕಳ ಪಾಲನಾ ಸಂಸ್ಥೆಗಳ ಆವರಣದಲ್ಲಿ ಕೆಲವು ನಿರ್ಬಂಧ: ಸದುದ್ದೇಶದ ಕ್ರಮ

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹೊರಗಿನವರು ತಮ್ಮ ಮಕ್ಕಳ ಅಥವಾ ತಮ್ಮ ಜನ್ಮದಿನ ಆಚರಣೆ ಕಾರ್ಯಕ್ರಮ ನಡೆಸುವಂತೆ ಇಲ್ಲ ಎಂದು ರಾಜ್ಯ ಸರ್ಕಾರವು ಈಚೆಗೆ ತೀರ್ಮಾನಿಸಿದೆ. ಇದು ಸ್ವಾಗತಾರ್ಹ ತೀರ್ಮಾನ. ಮಾನವೀಯ ಆಲೋಚನೆಯೊಂದು ಇದರ ಹಿಂದಿರುವಂತೆ ಮೇಲ್ನೋಟಕ್ಕೆ ಅನಿಸುತ್ತಿದೆ. ಕೆಲವು ರಾಜಕಾರಣಿಗಳು, ಸೆಲೆಬ್ರಿಟಿಗಳು ಮತ್ತು ಸಾರ್ವಜನಿಕರಲ್ಲಿ ಕೆಲವರಿಗೆ ತಮ್ಮ ಅಥವಾ ತಮ್ಮ ಮಕ್ಕಳ ಜನ್ಮದಿನ ಆಚರಣೆಯನ್ನು ಇಂತಹ ಸಂಸ್ಥೆಗಳ ಆವರಣದಲ್ಲಿ ನಡೆಸುವುದು ಅಭ್ಯಾಸವಾಗಿ ಬಿಟ್ಟಿದೆ. ಆದರೆ, ಹೀಗೆ ಮಾಡಿದಾಗ ಈ ಸಂಸ್ಥೆಗಳಲ್ಲಿಯೇ ನೆಲೆ ಕಂಡುಕೊಂಡಿರುವ ಮಕ್ಕಳಿಗೆ ಏನನ್ನಿಸಬಹುದು ಎಂಬ ಬಗ್ಗೆ ಬಹುತೇಕರು ಆಲೋಚಿಸುತ್ತಿರಲಿಲ್ಲ. ಆ ದಿಸೆಯಲ್ಲಿ ಆಲೋಚನೆ ಮಾಡಿದ್ದಿದ್ದರೆ, ಇಂತಹ ಆಚರಣೆಗಳು ಅಲ್ಲಿ ಮತ್ತೆ ಮತ್ತೆ ನಡೆಯುತ್ತ ಇರಲಿಲ್ಲ. ಲೈಂಗಿಕ ಕಿರುಕುಳ ಅಥವಾ ದೌರ್ಜನ್ಯಕ್ಕೆ ತುತ್ತಾದ ಮಕ್ಕಳಿಗೆ, ಬಾಲಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಮಕ್ಕಳಿಗೆ, ಭಿಕ್ಷೆ ಬೇಡುತ್ತಿದ್ದ ಮಕ್ಕಳಿಗೆ, ತಂದೆ–ತಾಯಿಯಿಂದ ದೂರವಾದ ಮಕ್ಕಳಿಗೆ ಹಾಗೂ ಅನಾಥ ಮಕ್ಕಳಿಗೆ ಇಂತಹ ಸಂಸ್ಥೆಗಳು ಆಶ್ರಯತಾಣ. ಸಹಜವಾಗಿ ಸಿಗಬೇಕಿರುವ ಕೌಟುಂಬಿಕ ಪ್ರೀತಿಯಿಂದ ಈ ಮಕ್ಕಳು ವಂಚಿತರಾಗಿರುತ್ತಾರೆ. ಹೊರಗಿನವರು ಅವರ ನಡುವೆ ಕುಟುಂಬ ಸಮೇತರಾಗಿ ಹುಟ್ಟುಹಬ್ಬ ಆಚರಿಸಿಕೊಂಡರೆ, ಆ ಮಕ್ಕಳು ತಮ್ಮ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳಬಹುದು. ಬೇರೆ ಹಲವು ಮಕ್ಕಳಿಗೆ ಸುಲಭವಾಗಿ ದಕ್ಕುವ ಪ್ರೀತಿ ತಮಗೆ ಸಿಗುತ್ತಿಲ್ಲವಲ್ಲ ಎಂದು ಬೇಸರಪಟ್ಟುಕೊಳ್ಳಬಹುದು. ಕೆಲವು ಪೋಷಕರು ತಮ್ಮ ಮಕ್ಕಳಿಗೆ ಬಡತನದ ಬಗ್ಗೆ ಗೊತ್ತಿರಲಿ ಎಂದೋ, ತಮ್ಮ ಮಕ್ಕಳು ಹುಟ್ಟಿದ ದಿನದ ಸಂಭ್ರಮವು ಭಿನ್ನವಾಗಿ ಇರಲಿ ಎಂದೋ ಈ ಸಂಸ್ಥೆಗಳ ಆವರಣದಲ್ಲಿ ಅಲ್ಲಿನ ಮಕ್ಕಳ ಜೊತೆ ಜನ್ಮದಿನ ಆಚರಿಸುವುದು ಇದೆ. ಇಂತಹ ಪೋಷಕರ ಉದ್ದೇಶ ತಪ್ಪು ಎಂದು ಹೇಳಲಾಗದು. ಆದರೆ, ಅವರು ಮಾಡುವ ಸಂಭ್ರಮಾಚರಣೆಗಳು ಅಲ್ಲಿ ವಾಸ ಮಾಡುತ್ತಿರುವ ಮಕ್ಕಳ ಮನಸ್ಸಿನ ಮೇಲೆ ಒಳ್ಳೆಯ ರೀತಿಯ ಪರಿಣಾಮ ಉಂಟುಮಾಡದೆ ಇರಬಹುದು.

ಈ ಸಂಸ್ಥೆಗಳಲ್ಲಿನ ಮಕ್ಕಳು ಇತರ ಮಕ್ಕಳ ಜೊತೆ ತಮ್ಮನ್ನು ಹೋಲಿಸಿಕೊಂಡು ಕೀಳರಿಮೆ ಬೆಳೆಸಿಕೊಳ್ಳದಂತೆ ಕಾಳಜಿ ವಹಿಸಬೇಕಾಗಿದೆ

ಮನಸ್ಸಿಗೆ ಬೇಸರ ತರಿಸಬಹುದಾದ ಆಚರಣೆಗಳ ಬದಲಾಗಿ ಇಂತಹ ಸಂಸ್ಥೆಗಳ ಆವರಣದಲ್ಲಿ, ಅಲ್ಲಿನ ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿಸುವಂತಹ ಆಚರಣೆಗಳನ್ನು ಆಯೋಜಿಸಬಹುದು ಎಂದು ಮಕ್ಕಳ ರಕ್ಷಣಾ ನಿರ್ದೇಶನಾಲಯ ಹೇಳಿದೆ. ಅಲ್ಲದೆ, ಅಲ್ಲಿನ ಮಕ್ಕಳು ಸಮಾಜದ ಮುಖ್ಯವಾಹಿನಿಯಲ್ಲಿ ಸುಲಭವಾಗಿ ಸೇರಿಕೊಳ್ಳುವುದಕ್ಕೆ ನೆರವಾಗುವಂತಹ ಕಾರ್ಯಕ್ರಮಗಳನ್ನು ಕೂಡ ಆಯೋಜಿಸಲು ಅವಕಾಶ ಇದೆ ಎಂದು ನಿರ್ದೇಶನಾಲಯ ಹೇಳಿದೆ. ಕೆಲವೊಮ್ಮೆ, ಸಂಸ್ಥೆಗಳ ಆವರಣದಲ್ಲಿ ದಿನವೊಂದಕ್ಕೆ ಮೂರರಿಂದ ನಾಲ್ಕು ಕಾರ್ಯಕ್ರಮಗಳು ನಡೆಯುತ್ತಿದ್ದವಂತೆ. ಇದು ಅಲ್ಲಿನ ಮಕ್ಕಳ ಮೇಲೆ ಯಾವ ಬಗೆಯ ಪರಿಣಾಮ ಬೀರುತ್ತಿತ್ತು ಎಂಬುದನ್ನು ಈ ಸಂಖ್ಯೆಯನ್ನು ನೋಡಿಯೇ ಅಂದಾಜಿಸಬಹುದು. ಅಲ್ಲಿ ವಾಸಿಸುವ ಮಕ್ಕಳು ತಮ್ಮ ಜೀವನವನ್ನು, ಯಾವಾಗಲೋ ಒಮ್ಮೆ ಬಂದು ಜನ್ಮದಿನ ಆಚರಿಸಿಕೊಂಡು ಹೋಗುವ ಮಕ್ಕಳ ಜೊತೆ ಹೋಲಿಸಿ ನೋಡಿಕೊಂಡರೆ, ಅವರ ಆತ್ಮಸ್ಥೈರ್ಯಕ್ಕೆ ಪೆಟ್ಟು ಬೀಳುವ ಸಾಧ್ಯತೆ ಹೆಚ್ಚಿರುತ್ತದೆ. ಹಾಗಾಗಿ, ಅಲ್ಲಿನ ಮಕ್ಕಳು ತಮ್ಮನ್ನು ಇತರ ಮಕ್ಕಳ ಜೊತೆ ಹೋಲಿಸಿಕೊಂಡು ಕೀಳರಿಮೆ ಬೆಳೆಸಿಕೊಳ್ಳದಿರಲಿ ಎಂಬ ಉದ್ದೇಶವೂ ಈ ನಿರ್ಬಂಧದ ಹಿಂದೆ ಇರುವಂತೆ ಕಾಣುತ್ತಿದೆ.

ಮಕ್ಕಳ ಪಾಲನಾ ಸಂಸ್ಥೆಗಳ ಆವರಣದಲ್ಲಿ ಇಂತಹ ಆಚರಣೆಗಳಿಗೆ ಅವಕಾಶ ಕೊಡಬಾರದು ಎಂಬ ಬೇಡಿಕೆಯನ್ನು ಮಕ್ಕಳ ಹಕ್ಕುಗಳ ಪರ ಕಾರ್ಯಕರ್ತರು ಬಹಳ ಹಿಂದಿನಿಂದಲೂ ಮಂಡಿಸುತ್ತ ಬಂದಿದ್ದಾರೆ. ಅಲ್ಲಿ ಇರುವ ಮಕ್ಕಳು ಮೃಗಾಲಯದಲ್ಲಿ ಇರುವ ಪ್ರಾಣಿಗಳಂತೆ ಅಲ್ಲ. ಅವರು ಯಾರದೋ ಒಬ್ಬರ ಜನ್ಮದಿನಾಚರಣೆಯ ದಿನ ಒಂದಿಷ್ಟು ಹಾಡಿ, ಒಂದಿಷ್ಟು ಕುಣಿದು, ತುಂಡು ಸಿಹಿತಿನಿಸು ಅಥವಾ ಕೇಕ್ ಪಡೆದುಕೊಂಡು ಹೋಗಲು ಇರುವಂಥವರಲ್ಲ ಎಂದು ಈ ಕಾರ್ಯಕರ್ತರು ಹೇಳುತ್ತ ಬಂದಿದ್ದಾರೆ. ಇಲ್ಲಿನ ಮಕ್ಕಳಿಗೆ ಹಳೆಯ ಬಟ್ಟೆಗಳನ್ನು ಅಥವಾ ಹಳೆಯ ಆಟಿಕೆಗಳನ್ನು ನೀಡುವ ಕ್ರಮ ಕೂಡ ಟೀಕೆಗಳಿಗೆ ಗುರಿಯಾಗಿದೆ. ಇಲ್ಲಿ ನಡೆಯುವ ಜನ್ಮದಿನ ಆಚರಣೆಯ ಫೋಟೊಗಳನ್ನು ಹಲವರು ತಮ್ಮ ಸಾಮಾಜಿಕ ಜಾಲತಾಣ ಖಾತೆಗಳ ಮೂಲಕ ಹಂಚಿಕೊಳ್ಳುತ್ತಿದ್ದರು. ಇದು ಬಾಲನ್ಯಾಯ ಕಾಯ್ದೆಯ ಆಶಯಗಳಿಗೆ ವಿರುದ್ಧವಾದುದು. ಮಕ್ಕಳ ಪಾಲನೆಗೆ ಇರುವ ಎಲ್ಲ ಸಂಸ್ಥೆಗಳಲ್ಲಿ ಮಕ್ಕಳಿಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸುವ ಶಕ್ತಿ ಇಲ್ಲದಿರಬಹುದು. ಇಂತಹ ಕಡೆಗಳಲ್ಲಿ ಮಕ್ಕಳಿಗೆ ಉತ್ತಮ ಸೌಕರ್ಯಗಳನ್ನು ಕಲ್ಪಿಸಿಕೊಡಲು ರಾಜಕಾರಣಿಗಳಿಗೆ, ಶ್ರೀಮಂತ ವ್ಯಕ್ತಿಗಳಿಗೆ, ಸೆಲೆಬ್ರಿಟಿಗಳಿಗೆ ಅವಕಾಶ ಇದ್ದೇ ಇದೆ. ಅವರು ತಮ್ಮ ಇಂತಹ ಕಾರ್ಯವನ್ನು ಸಾರ್ವಜನಿಕ ಪ್ರಚಾರದಿಂದ ದೂರವಿದ್ದು ಮಾಡಬಹುದು. ಹಾಗೆ ಮಾಡುವ ಸಂದರ್ಭದಲ್ಲಿ, 'ಇನ್ನೊಬ್ಬರು ದಾನವಾಗಿ ಕೊಟ್ಟಿದ್ದನ್ನು ನಾವು ಅನುಭವಿಸುತ್ತಿದ್ದೇವೆ' ಎಂಬ ಭಾವನೆಯು ಮಕ್ಕಳಲ್ಲಿ ಮೂಡದಂತೆ ಕಾಳಜಿ ವಹಿಸಬೇಕು. ಈಗ ಸರ್ಕಾರ ಕೈಗೊಂಡಿರುವ ತೀರ್ಮಾನ ಸ್ವಾಗತಾರ್ಹ. ಇದರ ಜೊತೆಯಲ್ಲೇ, ಅಲ್ಲಿನ ಮಕ್ಕಳು ಸಂತಸಮಯ ವಾತಾವರಣದಲ್ಲಿ, ತಮ್ಮನ್ನು ಅರ್ಥ ಮಾಡಿಕೊಳ್ಳುವವರ ನಡುವೆ ಬೆಳೆಯುವಂತೆ ನೋಡಿಕೊಳ್ಳಲು ಸರ್ಕಾರಕ್ಕೆ ಸಾಧ್ಯವಾದರೆ ಚೆನ್ನ.

ದಿನದ ಟ್ವೀಟ್



ಸಾಮಾಜಿಕ ನ್ಯಾಯ?

ಎಂಬಿಬಿಎಸ್ ಪದವಿ ಪಡೆದ ನಂತರವೂ ತಮಗೆ 'ಸಾಮಾಜಿಕ ನ್ಯಾಯ' ಸಾಕಷ್ಟು ಸಿಕ್ಕಿಲ್ಲ ಮತ್ತು ಉನ್ನತ ಪರೀಕ್ಷೆಗಳಲ್ಲಿ ಹೆಚ್ಚಿನ ಮೀಸಲಾತಿಗೆ ತಾವು ಇನ್ನೂ ಅರ್ಹರು ಎಂದು ಭಾವಿಸುವ 'ವೈದ್ಯ'ರಿದ್ದಾರೆ. ಇದನ್ನು ಯಾರೂ ಸಾಮಾಜಿಕ ನ್ಯಾಯ ಎನ್ನಲಾಗದು. ಇದು ಪರಾವಲಂಬಿತನವಷ್ಟೆ. ವೈದ್ಯರಾದ ಮೇಲೆ ರೋಗಿಗಳನ್ನು ಸಹ ನಿಮಗಾಗಿ ಮೀಸಲಿಡಬೇಕೆಂದು ನೀವು ಬಯಸುವಿರಾ?

ಜೋಸೆಫ್ ಟಿ. ನೂನಿ, ವೈದ್ಯ, ಲೇಖಕ

ಕಿಡಿನುಡಿ

'ಭಾರತವು ಒಬ್ಬ ವ್ಯಕ್ತಿ ಹೇಳಿದ್ದಕ್ಕೆಲ್ಲ ಲಕ್ಷಾಂತರ ಜನ ಹೌದೆನ್ನುವ ದೇಶವಾಗುವುದನ್ನು ನಾನು ಬಯಸುವುದಿಲ್ಲ. ಪ್ರಬಲ ವಿರೋಧಪಕ್ಷ ಇರುವುದನ್ನು ನಾನು ಬಯಸುತ್ತೇನೆ'– ಇದು ಜವಾಹರಲಾಲ್ ನೆಹರೂ ಅವರು 1951–52ರ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳಿದ್ದ ಮಾತು. ಭಾರತ ಹೇಗೆ ಬದಲಾಗಿದೆ! 70 ವರ್ಷಗಳ ನಂತರದಲ್ಲಿ ನಾವು, 'ಕಾಂಗ್ರೆಸ್‌ಮುಕ್ತ ಭಾರತ' ಬಯಸುವ, ಲಸಿಕೆ ಪ್ರಮಾಣಪತ್ರಗಳ ಮೇಲೆ ತನ್ನ ಭಾವಚಿತ್ರ ಇರಬೇಕು ಎಂದು ಬಯಸುವ ಪ್ರಧಾನಿಯನ್ನು ಹೊಂದಿದ್ದೇವೆ.

ಶಶಿ ತರೂರ್, ಲೋಕಸಭಾ ಸದಸ್ಯ, ಕಾಂಗ್ರೆಸ್ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 27-10-1996

• ಚಿತ್ರದುರ್ಗ: ಖಾಸಗಿ ಬಸ್ ನಿಲ್ದಾಣ ಸ್ಥಳಾಂತರ

ಚಿತ್ರದುರ್ಗ, ಅ. 26– 61 ಪ್ರಾಣಗಳನ್ನು ಬಲಿ ತೆಗೆದುಕೊಂಡು ಕಲುಷಿತಗೊಂಡಿರುವ ಸಂತೆ ಹೊಂಡದ ನೀರನ್ನು ಭಾನುವಾರ ಮುಂಜಾನೆಯಿಂದ ಸಂಪೂರ್ಣ ಹೊರ ಬಿಡಲಾಗುವುದು ಎಂದು ಜಿಲ್ಲಾಧಿಕಾರಿ ಶ್ರೀಮತಿ ಅಮಿತಾ ಪ್ರಸಾದ ಅವರು ಇಂದು ಇಲ್ಲಿ ಹೇಳಿದರು.

ಸಂತೆ ಹೊಂಡದ ಬಳಿ ವಾಹನಗಳನ್ನು ನಿಲ್ಲಿಸುವುದನ್ನು ತಕ್ಷಣದಿಂದಲೇ ನಿಲ್ಲಿಸಲಾಗಿದೆ. ಈಗ ಸಂತೆಯನ್ನು ಖಾಸಗಿ ಬಸ್ ನಿಲ್ದಾಣದ ಪಕ್ಕದ ಸ್ಥಳದಿಂದ ಎಪಿಎಂಸಿ ಯಾರ್ಡ್‌ಗೆ ಸ್ಥಳಾಂತರಿಸಿರುವುದರಿಂದ ಬಸ್ ಮಾಲೀಕರು ಈಗ ಖಾಲಿ ಉಳಿಯುವ ಸಂತೆ ಜಾಗದಲ್ಲೇ ಎಲ್ಲ ಬಸ್ಸುಗಳನ್ನು ನಿಲ್ಲಿಸಬೇಕು ಎಂದು ಅವರು ಆದೇಶಿಸಿದ್ದಾರೆ.

• ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ನೆರವು

ಹುಬ್ಬಳ್ಳಿ, ಅ. 26– ರಾಜ್ಯದ ನಾಲ್ಕು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಅಗತ್ಯದ ಸೌಲಭ್ಯಗಳನ್ನು ಒದಗಿಸಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಮಿತಿಯನ್ನು ಉಳಿಸಿಕೊಳ್ಳಲು 30 ಕೋಟಿ ರೂಪಾಯಿಗಳನ್ನು ಮೊದಲ ಕಂತಾಗಿ ನೀಡಲು ರಾಜ್ಯದ ಸಚಿವ ಸಂಪುಟ ನಿರ್ಧರಿಸಿದೆ ಎಂದು ವೈದ್ಯಕೀಯ ಶಿಕ್ಷಣ ಖಾತೆ ರಾಜ್ಯ ಸಚಿವ ಡಾ. ಎಂ.ಶಂಕರ ನಾಯ್ಕ ಅವರು ಇಂದು ಇಲ್ಲಿ ತಿಳಿಸಿದರು.

ಇನ್ನೂ 40 ಕೋಟಿ ರೂ.ಗಳನ್ನು ನಂತರ ನೀಡಲಾಗುವುದು ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಬುಧವಾರ, 27-10-1971

• ಗಿರೀಶ್ ಕಾರ್ನಾಡ್, ಹಯಾತ್, ದೇವೇಗೌಡ ಸೇರಿ 14 ಜನಕ್ಕೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ

ಬೆಂಗಳೂರು. ಅ. 26– ಖ್ಯಾತ ನಾಟಕಕಾರ ಶ್ರೀ ಗಿರೀಶ್ ಕಾರ್ನಾಡ್, ವಿದ್ಯುತ್ ಕಾರ್ಪೊರೇಷನ್ ಅಧ್ಯಕ್ಷ ಶ್ರೀ ಮಹಮದ್ ಹಯಾತ್, ಶಾಲಾ ಪುನರ್ವ್ಯವಸ್ಥೆಯ ಮುಖ್ಯಾಧಿಕಾರಿ ಡಾ. ಎ.ಸಿ. ದೇವೇಗೌಡ, ಹೆಸರಾಂತ ಸಂಗೀತಗಾರ ಹಾಗೂ ಕಲಾವಿದರಾದ ಶ್ರೀ ಎನ್. ಚನ್ನಕೇಶವಯ್ಯ ಮತ್ತು ಹನುಮಯ್ಯ ಅವರು ಈ ಬಾರಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಗಳಿಸಿರುವ 14 ಮಂದಿಯಲ್ಲಿ ಸೇರಿದ್ದಾರೆ.

ಡಾ. ಬಿ.ಎಸ್. ಜೀರಿಗೆ ಮತ್ತು ಡಾ. ಎಲ್.ಮಾಂಟೇರಿಯೋ (ಶಿಕ್ಷಣ ಕ್ಷೇತ್ರ), ಸರ್ವಶ್ರೀ ಬಿ.ವಿ. ನಾಗೇಶ ಶೆಟ್ಟಿ, ಗೋವಿಂದ ದಾಸ್ ಮತ್ತು ಶ್ರೀಮತಿ ಷೇರುಪಾಲಿಯಾ (ಸಮಾಜ ಸೇವೆ), ಚಿನ್ನಸ್ವಾಮಿ (ಕ್ರೀಡಾ ರಂಗ), ಆರ್. ನರಸಿಂಹಯ್ಯ (ತೋಟಗಾರಿಕೆ) ಮತ್ತು ಅಪ್ಪಣ ಬೊಮ್ಮಣ (ಕೃಷಿ) ಅವರು ಇತರ ಪ್ರಶಸ್ತಿ ವಿಜೇತರು.

ಮೌಲ್ಯಗಳ ಹೆಸರಿನಲ್ಲಿ ಹಿಂಸೆಯನ್ನೂ ಆಗಾಗ ಉತ್ಪಾದಿಸಿ ದಿಟವನ್ನು ಮರೆಮಾಚಲಾಗುತ್ತದೆ

ಮುಚ್ಚಿಟ್ಟ ಚರಿತ್ರೆಗಳ ಬಿಚ್ಚಿಟ್ಟ ಕಥನ

ವಿಶ್ಲೇಷಣೆ

ಸಬಿತಾ ಬನ್ನಾಡಿ

1919ರ ಏಪ್ರಿಲ್ 13ರಂದು ನಡೆದ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವನ್ನು ಮುಚ್ಚಿಡಲು ಡೈಯರ್, ಪತ್ರಿಕಾ ನಿಷೇಧವೂ ಸೇರಿ ಹಲವು ಶಾಸನ ತಂದ. ಪ್ರಕಟಿಸಿದ ಸಂಪಾದಕರನ್ನು ದೇಶದ್ರೋಹದ ಕಾಯ್ದೆಯಡಿ ಸೆರೆಮನೆಗೆ ತಳ್ಳಿದ. ಹಾಗಿದ್ದೂ ಜೂನ್ ಹೊತ್ತಿಗೆ ದೇಶಕ್ಕೆ ಅದು ತಿಳಿಯಿತು. ಸುದ್ದಿ ತಿಳಿದ ಗಾಂಧಿ, ಪಂಜಾಬ್‌ಗೆ ತೆರಳಲು ಹೊರಟಾಗ ಪ್ರವೇಶ ನಿರಾಕರಿಸಲಾಯಿತು. ಅಂದಿನಂತೆಯೇ ನಡೆದದ್ದನ್ನು ಮುಚ್ಚಿಡುವ, ಅದನ್ನು ಸಮರ್ಥಿಸುವ ಆಟವಿನ್ನೂ ಮುಂದುವರಿದಿದೆ.

ಗುಡ್ಡಕ್ಕೆ ಗುಡ್ಡ ಅಡ್ಡ ಇರುತ್ತೆ ಎನ್ನುವುದು ಲೋಕ ರೂಢಿಯ ಮಾತು. ಆದರೆ ಗುಡ್ಡಕ್ಕೆ ಗುಡ್ಡವನ್ನೇ ಅಡ್ಡ ನಿಲ್ಲಿಸಿ ಹಿಂದಿರುವುದನ್ನೇ ಮರೆ ಮಾಡಲಾಗುತ್ತದೆ ಎನ್ನುವುದು ಕಂಡೂ ಕಾಣದ ಮಾತು. ಬಹುಶಃ ಪ್ರತೀ ದಿನದ 'ಫ್ಯಾಕ್ಟ್ ಚೆಕ್' ಎಂಬ ಪ್ರಕಟಣೆ ಮುಂದೊಂದು ದಿನ ಇವತ್ತಿನ ಕಾಲಮಾನವು ಸುಳ್ಳುಗಳ ನಡುವೆ ಏದುಸಿರು ಬಿಡುತ್ತಿದ್ದುದಕ್ಕೆ, ಹಿಂದಿನ ಶಾಸನಗಳಷ್ಟೇ ಮಹತ್ವದ ದಾಖಲೆಯಾಗಿ ಒದಗಿಬರುತ್ತದೋ ಏನೋ!

ಒಂದೆಡೆ ನೇರ ಹತ್ಯಾಕಾಂಡಗಳು ನಡೆಯುತ್ತವೆ. ಇನ್ನೊಂದೆಡೆ ಮೌಲ್ಯಗಳನ್ನೇ ತಮಗೆ ಬೇಕಾದಂತೆ ತಿರುಚಿ ಎದುರಾಳಿಗಳನ್ನು ಮೌನವಾಗಿಸುವ ಕ್ರೌರ್ಯಗಳು ವ್ಯವಸ್ಥಿತವಾಗಿ ನಡೆಯುತ್ತವೆ. ಅವುಗಳನ್ನು ಮಾಡಿದವರು ಎಲ್ಲ ಸವಲತ್ತುಗಳನ್ನೂ ಮನ್ನಣೆಗಳನ್ನೂ ಶೋಷಿತರ ಕಣ್ಣಮುಂದೆಯೇ ಅನುಭವಿಸುತ್ತಿರುತ್ತಾರೆ. ಎದುರಾಳಿಗಳು ತಮ್ಮದೇ ದೇಶದ ಒಡನಾಡಿಗಳೂ ತಮ್ಮದೇ ಕುಟುಂಬದ ಸಹಜೀವಿಗಳೂ ಆಗಿರಬಹುದಾದುದು ಮನುಷ್ಯನ ಹೀನತೆಯ ಆತ್ಯಂತಿಕ ಸ್ಥಿತಿಯೂ ಆಗಿದೆ. ಇನ್ನು ಎದುರಾಳಿಗಳು ಅನ್ಯದೇಶದವರಾದರೆ ನಡೆಯುವ ಹಿಂಸೆಗೆ ಉನ್ಮಾದದ ಒಮ್ಮತವೂ ಸೇರಿಕೊಳ್ಳುತ್ತದೆ. ಹಿಂಸಾ ಮನಃಸ್ಥಿತಿಯನ್ನು ಆಗಾಗ ಬೇರೆ ಬೇರೆ ಮೌಲ್ಯಗಳ ಹೆಸರಿನಲ್ಲಿ ಉತ್ಪಾದಿಸಲಾಗುತ್ತದೆ. ರಾಜನನ್ನೇ ಪ್ರತ್ಯಕ್ಷ ದೇವತೆಯೆಂಬಂತೆ ನಂಬಿಸಿ, ಅವನಿಗಾಗಿ ಸಾಯುವುದನ್ನು 'ಮೌಲ್ಯ'ವಾಗಿಸಲಾಗಿತ್ತು ಎಂಬುದನ್ನೇ ನೆನಪಿಸಿಕೊಂಡರೂ ಈ ಎಲ್ಲಾ 'ರಾಜಕಾರಣ'ಗಳು ಸ್ಪಷ್ಟಗೊಳ್ಳುತ್ತವೆ.

ಯುದ್ಧವನ್ನೇ ಆದರ್ಶವಾಗಿಸಿದಾಗ, ಯುದ್ಧದ ಭಾಗವಾಗಿ ಶತ್ರುದೇಶದ ಹೆಂಗಸರನ್ನು ಹೊತ್ತೊಯ್ಯುವುದನ್ನು ಸೈನಿಕರ ಹಕ್ಕಾಗಿಸಲಾಗುತ್ತದೆ. ಅಲ್ಲಿ ಹೆಣ್ಣು ಕೇವಲ 'ಮೌನಿ'. ಇದು ಕೆಲವೊಮ್ಮೆ ದೇಶೀಯರ ನಡುವೆಯೂ ಸಂಭವಿಸಬಹುದು. ನಾನು ಹೀಗೆ ಹೇಳುವಾಗಲೇ ಹಲವರ ಮನಸ್ಸಿನ ಪರದೆಯ ಮೇಲೆ ಅಸ್ಸಾಂ ರೈಫಲ್ಸ್‌ನ ಕೆಲವು ಸೈನಿಕರ ಅತ್ಯಾಚಾರದ ವಿರುದ್ಧ ಮಣಿಪುರದ ಹೆಂಗಸರು ಮಾಡಿದ ಪ್ರತಿಭಟನೆ ನೆನಪಿಗೆ ಬರಬಹುದು. ಮನೆಮಂದಿಯ ಕಣ್ಣೆದುರೇ ಎಗ್ಗಿಲ್ಲದೆ ನಡೆಯುತ್ತಿದ್ದ ಅತ್ಯಾಚಾರಗಳಿಂದ ರೋಸಿಹೋದ ಹೆಂಗಸರು ಮೌನ ಮುರಿದರು. 2004ರ ಜುಲೈ 15ರಂದು ಹನ್ನೆರಡು ಜನ ತಾಯಂದಿರು ಬೆತ್ತಲಾಗಿ 'ಇಂಡಿಯನ್ ಆರ್ಮಿ ರೇಪ್ ಅಸ್' ಎಂಬ ಬ್ಯಾನರ್ ಅಡ್ಡ ಹಿಡಿದು ಇಂಫಾಲಾದ ಕಾಂಗ್ಲಾಫೋರ್ಟ್‌ನಲ್ಲಿ ಕಾಣಿಸಿಕೊಂಡರು. ಅಂದೇನೋ ಅದು ದೇಶದ ಜನರ ಗಮನ ಸೆಳೆಯಿತು. ಆದರೆ ಒಂದು ವೇಳೆ ಸೈನಿಕರ ವಿರುದ್ಧ ಮಾತಾಡುವುದೇ ಅಪರಾಧ ಎಂಬ ರೀತಿಯ ವಾತಾವರಣವು ಸೃಷ್ಟಿಯಾಗಿದ್ದಲ್ಲಿ ಇದೆಲ್ಲವನ್ನೂ ಮರೆಯಾಗಿಸಿ, ಪ್ರತಿಭಟಿಸಿದವರನ್ನೇ ಅಪರಾಧಿಗಳನ್ನಾಗಿಸಲಾಗುತ್ತದೆ! ಅಂತಹ ಸಂದರ್ಭದಲ್ಲಿ ಮಾತಾಡಿದರೆ ತಲೆದಂಡ ಆಗುವುದು ಬದಿಗಿರಲಿ, ಆ ಮಾತುಗಳನ್ನು ನಂಬದೇ ಇರುವ ಜನಮಾನಸದ ಜಾಯಮಾನವನ್ನು ಅರಗಿಸಿಕೊಳ್ಳುವುದು ಮಾತ್ರ ಗುಂಡೇಟಿಗಿಂತಲೂ ಕಠಿಣವಾದುದು.

ಇಂತಹ ಹಲವು ಮೌನಗಳು ಬಯಲಾದುದು ಚರಿತ್ರೆಯಲ್ಲಿ ಜಾಗವಿಲ್ಲದವರು ಆತ್ಮಚರಿತ್ರೆ ಬರೆಯಲು ತೊಡಗಿದಾಗ. ಈ ದೃಷ್ಟಿಯಿಂದ ಆತ್ಮಚರಿತ್ರೆಗಳನ್ನು ನಾನು 'ಮಹತ್ವದ ಘಟನೆ' ಎಂದೇ ಭಾವಿಸುತ್ತೇನೆ. ಡಚ್ ಮೂಲದ ಯಾನ್ ರಫ್-ಓ ಹರ್ನ್ ತಮ್ಮ ಆತ್ಮಚರಿತ್ರೆಗೆ 'ಅರೆ ಶತಮಾನದ ಮೌನ' ಎಂದೇ ಹೆಸರಿಟ್ಟಿದ್ದಾರೆ. ಜಪಾನ್ ದೇಶ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಇಂಡೋನೇಷ್ಯಾವನ್ನು ಆಕ್ರಮಿಸಿಕೊಂಡಾಗ ಆ ಸೈನಿಕರು ಡಚ್ ಹೆಂಗಸರ ಮೇಲೆ ಮಾಡಿದ ಆಕ್ರಮಣ ಈಕೆ ಬಾಯಿಬಿಡುವ ತನಕ ಚರಿತ್ರೆಯಲ್ಲಿ ಹುಗಿದುಹೋಗಿತ್ತು.

ಅಣುಬಾಂಬ್ ದಾಳಿಯ ನಂತರ ಜಗತ್ತಿನಲ್ಲಿ ತನ್ನ ಬಿಂಬವನ್ನು ಬದಲಿಸಿಕೊಂಡು ಜಪಾನ್ ಮತ್ತೆ ಬಲಾಢ್ಯ ದೇಶವಾಗಿ ಬೆಳೆದದ್ದನ್ನು ನೋಡುತ್ತಿದ್ದ ಯಾನ್ ಸಂಗಡಿಗರಿಗೆ ಯುದ್ಧ ಮುಗಿದ ಮೇಲೂ ಬಾಯಿ ಬಿಡಲಾಗದ್ದಕ್ಕೆ ಕಾರಣಗಳೇನು? ಇಂತಹ ಸೂಕ್ಷ್ಮಗಳನ್ನು ಅರಿಯದೇ ಜಗತ್ತು ಎಂದೂ ಸುಂದರ ತೋಟವಾಗಿ ಬದಲಾಗಲು ಸಾಧ್ಯವಿಲ್ಲ. ಯಾನ್‌ರಂತೆಯೇ ಮುಗ್ಧ, ಕುಟುಂಬದೊಳಗೆ ಸುರಕ್ಷಿತ ಚಂದದ ಬದುಕು ಬಾಳುತ್ತಿದ್ದ ಡಚ್ ಹೆಂಗಸರು, ಮಕ್ಕಳನ್ನು ಕೈದಿಗಳನ್ನಾಗಿ ಅತ್ಯಂತ ದುಸ್ತರ, ಅವಮಾನಿತ ವಾತಾವರಣದಲ್ಲಿ ಸಾವು ಬದುಕಿನ ನಡುವೆ ದೂಕಲಾಗಿತ್ತು. ಅದನ್ನು ಅರಗಿಸಿಕೊಳ್ಳಲಾಗದೇ ಹೊಟ್ಟೆಗಿಲ್ಲದೇ ಬಡವಾಗಿದ್ದ ಸನ್ನಿವೇಶದಲ್ಲಿ ಬದುಕುತ್ತಿದ್ದವರಲ್ಲಿ, ಹದಿನೆಂಟು– ಮೂವತ್ತರ ಒಳಗಿನ ಹೆಣ್ಣುಮಕ್ಕಳನ್ನು ಪ್ರತ್ಯೇಕಿಸಿ ಜಪಾನ್ ಸೈನಿಕರ ದೈಹಿಕ ತೃಷೆ ನೀಗಿಸಲು ತಳ್ಳಲಾಯಿತು. ದಿನವೊಂದರಲ್ಲಿ ಮೂವತ್ತರಿಂದ ಐವತ್ತು ಜನ ಅತ್ಯಾಚಾರವೆಸಗುವುದಲ್ಲದೆ, ಆ ಹೆಣ್ಣುಮಕ್ಕಳನ್ನು ವೇಶ್ಯೆಯರು ಎಂದು ಕರೆಯಲಾಯಿತು! ಅವರುಗಳಿಗೆ ಬಲವಂತದ ಗರ್ಭಪಾತಗಳನ್ನೂ ಮಾಡಲಾಯಿತು. ಮೂರು ತಿಂಗಳ ನಂತರ ಇದ್ದಕ್ಕಿದ್ದಂತೆ ಇದನ್ನು ನಿಲ್ಲಿಸಿ, ಬಾಯಿಬಿಟ್ಟರೆ ನಿಮ್ಮನ್ನೂ ಕುಟುಂಬದವರನ್ನೂ ಕೊಲ್ಲಲಾಗುವುದು ಎಂಬ ಬೆದರಿಕೆ ಒಡ್ಡಿ ಮತ್ತೆ ಹಳೆಯ ಶಿಬಿರಗಳಿಗೆ ಕಳಿಸಲಾಯಿತು. ಅವರಲ್ಲಿ ಕೆಲವರು ಇದನ್ನು ತಮ್ಮ ತಾಯಂದಿರಿಗೆ ಹೇಳಿದರೂ ಕೇಳಿಸಿಕೊಳ್ಳಲೇ ಹೆದರಿದ ಅವರು ಮತ್ತೆಂದೂ ಆ ವಿಷಯ ಎತ್ತಲೇ ಇಲ್ಲ.



ಯಾನ್ ಇವೆಲ್ಲವನ್ನೂ ತಾವು ಮದುವೆಯಾಗುವ ಮುನ್ನವೇ ಟಾಮ್‌ಗೆ ಹೇಳಿದ್ದರು. ಆತನೂ ಮುಂದೆ ಆ ವಿಷಯ ಎತ್ತದೇ ಅವಳೊಂದಿಗೆ ಅತ್ಯಂತ ಪ್ರೀತಿ, ಆತ್ಮೀಯತೆ, ಘನತೆಯಿಂದ ಬದುಕಿದರು. ತಮ್ಮೊಳಗೆ ಕೊರೆಯುತ್ತಲೇ ಇದ್ದ, ಈ ಅನ್ಯಾಯವನ್ನು ಹೊರ ಹಾಕಲೇಬೇಕು ಎಂಬ ಒತ್ತಡ ತುಡಿಯುತ್ತಲೇ ಇದ್ದು, ತಮ್ಮ ಮಕ್ಕಳು ಇದನ್ನು ಹೇಗೆ ಸ್ವೀಕರಿಸುತ್ತಾರೋ ಎಂಬ ಆತಂಕದಿಂದಲೇ, ಒಂದು ದಿನ ಅದನ್ನು ಬರೆದು ಮಗಳಿಗೆ ಕೊಡುತ್ತಾರೆ. ಮಕ್ಕಳ ಬೆಂಬಲದಿಂದ ಅವರು ಎಲ್ಲವನ್ನೂ ಸಾರ್ವಜನಿಕಗೊಳಿಸಲು ಸಾಧ್ಯವಾಗುತ್ತದೆ. ಜಪಾನ್ ಇಂತಹ ಹೀನ ಕೃತ್ಯಕ್ಕೆ ಆ ಹೆಂಗಸರ ಕ್ಷಮೆ ಯಾಚಿಸಬೇಕು ಎಂಬ ಒತ್ತಾಯವು ಮುನ್ನೆಲೆಗೆ ಬರುತ್ತದೆ. ಹೀಗಿದ್ದೂ ಇಂದಿಗೂ ಆ ಸನ್ನಿವೇಶದಲ್ಲಿ ಸಿಕ್ಕಿದ ಎಷ್ಟೋ ಹೆಂಗಸರು ತಮ್ಮನ್ನು ಮರೆಮಾಚಿಕೊಂಡೇ ಬದುಕಿದ್ದಾರೆ. ಯಾಕೆಂದರೆ, ತಾವು ಮಾಡದ ತಪ್ಪಿಗೆ ಸಾಮಾಜಿಕ ಮತ್ತು ಕೌಟುಂಬಿಕ ಒತ್ತಡಗಳನ್ನು ಎದುರಿಸುವುದು ಇನ್ನೊಂದು ಘೋರ ಹಿಂಸೆ. ಯಾನ್ ಮುಂದೆ ಭೇಟಿ ಮಾಡಿದ ಆ ಕಾಲದ ಸೈನಿಕನೊಬ್ಬ, ತಾನೀಗ ಪಶ್ಚಾತ್ತಾಪದಲ್ಲಿ ಬೇಯುತ್ತಿದ್ದರೂ ಅಂದು ಅದೆಲ್ಲವೂ ಶೌರ್ಯ ಎಂದೇ ತಮ್ಮನ್ನು ನಂಬಿಸಲಾಗಿತ್ತು ಎನ್ನುತ್ತಾನೆ. ಕೇವಲ ನಂಬಿಸುವ ಮೂಲಕ ಎಲ್ಲ ಗುಡ್ಡದಂತಹ ತಪ್ಪುಗಳೂ ಕಡ್ಡಿಯಾಗಿಬಿಡುವ ವೈಚಿತ್ರ್ಯವಿದು.

ಇದು ಕೇವಲ ಹೊರಗಿನವರೊಂದಿಗೆ ನಡೆಯುತ್ತದೆಯೇ? ನಂಬಿ ಕೈಹಿಡಿದ ಗಂಡನೂ ಕ್ರೌರ್ಯದ ಯಾವೆಲ್ಲ ತುದಿಗೂ ಹೋಗಬಲ್ಲ. ಹೆಂಡತಿಯೆಂದರೆ ತಾನು ಎಷ್ಟು ಬೇಕಾದರೂ ಹಿಂಸಿಸಬಲ್ಲ ಸೊತ್ತು ಎಂಬ ನಂಬಿಕೆಯಿಂದ! ಡಾ. ವಿಜಯಾ ಅವರು ಬರೆದ 'ಕುದಿ ಎಸರು' ಕೂಡಾ ಹೀಗೇ ಇನ್ನೊಂದು ರೀತಿಯ ಅರೆಶತಮಾನದ ಮೌನದ ಮುರಿಯುವಿಕೆಯೇ. ದಾಂಪತ್ಯದೊಳಗೆ ಅತ್ಯಾಚಾರ ಎನ್ನುವುದು ನಮ್ಮ ಸಂಸ್ಕೃತಿಯೇ ಅಲ್ಲ ಎಂದು ವಾದಿಸುವ ಎಲ್ಲರಿಗೂ ಓದಿಸಲೇಬೇಕಾದ ಕೃತಿಯಿದು. ಸಂಸ್ಕೃತಿಯೆಂಬ ಕಲ್ಪಿತ ಸಂಗತಿಯನ್ನೇ ದೊಡ್ಡದಾಗಿಸಿ, ಜೀವಗಳು ನಲುಗುವುದನ್ನು ಕ್ಷುಲ್ಲಕಗೊಳಿಸುವ ಅಮಾನುಷತೆಯ ಪ್ರತೀಕವಿದು. ವಿದ್ಯೆ, ಜಾತಿ ಇತ್ಯಾದಿಗಳಲ್ಲಿ ಮೇಲೆನಿಸಿಕೊಂಡವರೆಲ್ಲ ಸುಸಂಸ್ಕೃತರು ಎಂಬ ಇನ್ನೊಂದು ಸ್ಥಾಪಿತ ಸುಳ್ಳು ಇಲ್ಲಿ ಬಯಲಾಗುತ್ತದೆ.

ಚರಿತ್ರೆಯಲ್ಲಿ ಹೂತಿಟ್ಟದ್ದು, ವರ್ತಮಾನದಲ್ಲಿ ಮರೆಯಾಗಿಸಿದ್ದು, ಭವಿಷ್ಯದಲ್ಲಾದರೂ ತೆರೆದುಕೊಳ್ಳದೇ ಇರದು. ತಮ್ಮವರಿಂದಲೇ ಅಟ್ಟಿಸಿಕೊಂಡು ಅವಿತಿದ್ದ ಶರಣರ ವಚನಗಳು ಮುನ್ನೂರು ವರ್ಷಗಳ ನಂತರವಾದರೂ ಮಾತಾಡಿದ ಪವಾಡದಂತೆ! ಮೌನ ಮಾತಾಗಬೇಕಾದ ತುರ್ತು ಎಲ್ಲ ವರ್ತಮಾನದಲ್ಲೂ ಇದೆ.

ಚುರುಮುರಿ

ಬಾಯಿಬಿಟ್ಟರೆ...

• ಮಣ್ಣೆ ರಾಜು

'ಬೈ ಎಲೆಕ್ಷನ್ ಅಂದ್ರೆ ರಾಜಕೀಯ ನಾಯಕರು ಬೈದಾಡುವ ಪಂದ್ಯಾವಳಿಯೇನ್ರೀ?...' ಸುಮಿಗೆ ಸಿಟ್ಟು ಬಂದಿತ್ತು. 'ಹಾಗೇ ಅನ್ನಿಸ್ತಿದೆ. ವೇದಿಕೆ ಮೇಲೆ ಔಟ್‌ಡೋರ್ ಗೇಮ್, ಟ್ವಿಟರ್‌ನಲ್ಲಿ ಇನ್‌ಡೋರ್ ಗೇಮ್ ಬೈದಾಟ. ಎರಡೆರಡು ಆಟ, ಡಬಲ್ ಗೇಮು...' ಎಂದ ಶಂಕ್ರಿ.

'ಜನನಾಯಕರಿಗೆ ಹಳದಿ ಕಣ್ಣು, ಎದುರಾಳಿ ಪಕ್ಷದಲ್ಲಿ ಅವರಿಗೆ ಕಾಣೋದೆಲ್ಲಾ ಹಳದಿ...'

'ಇಂಥಾ ಸಂದರ್ಭದಲ್ಲಿ ಪೊಲೀಸರು ಕೇಸರಿ ಶಾಲು ಧರಿಸಿ ಕಾಂಗ್ರೆಸ್ಸಿಗರನ್ನು ಕೆರಳಿಸಿಬಿಟ್ಟರು'.

'ಆಯುಧಪೂಜೆ ಆಚರಣೆ ವೇಳೆ ಪೊಲೀಸರು ಕಲರ್ ಡ್ರೆಸ್ ಹಾಕೋದು ತಪ್ಪಾಗುತ್ತೇನ್ರೀ?'

'ಪೊಲೀಸರಿಗೆ ಕೇಸರಿ ಒಪ್ಪದು, ಮುಖ್ಯವಾಗಿ ಕಾಂಗ್ರೆಸ್‌ನವರು ಅದನ್ನು ಒಪ್ಪುವುದಿಲ್ಲ. ಹಬ್ಬದ ಆಚರಣೆಯಲ್ಲಿ ಪೊಲೀಸರು ವೀರ ಮದಕರಿ, ಟಿಪ್ಪು ಸುಲ್ತಾನ್, ಸಂಗೊಳ್ಳಿ ರಾಯಣ್ಣ, ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮನ ವೇಷ ಹಾಕಿದ್ದರೆ ಆಕ್ಷೇಪವಿರಲಿಲ್ಲವಂತೆ, ಕೇಸರಿ ವೇಷ ಹಾಕಿದ್ದಕ್ಕೆ ಕಾಂಗ್ರೆಸ್ಸಿನವರು ವೀರ ಕೇಸರಿಗಳಾಗಿ ಗರ್ಜಿಸಿದ್ದಾರೆ'.

'ಕಾಂಗ್ರೆಸ್‌ನವರಿಗೆ ಕಲರ್ ಬ್ಲೈಂಡ್‌ನೆಸ್ ಇದೆ. ಅವರಿಗೆ ಕೇಸರಿ ಬಣ್ಣ ಕಂಡರೆ ಕಣ್ಣುರಿ. ಕೇಸರಿ ತ್ಯಾಗ, ನಮ್ಮ ಸಂಸ್ಕೃತಿಯ ಸಂಕೇತ ಅಂತ ಹೋಂ ಮಿನಿಸ್ಟರ್ ಹೇಳಿದ್ದಾರೆ'.

'ಪೊಲೀಸರದ್ದು ಖಾಕಿ ಬಣ್ಣ, ಅವರು ಬಣ್ಣ ಬದಲಾಯಿಸುವುದು ಅಪಾಯಕಾರಿ ಎಂದು ಠಾಣೆ ಎದುರು ರಾಷ್ಟ್ರಧ್ವಜ ಹಾರಿಸಿ, ಪೊಲೀಸರಿಗೆ ಖಾಕಿ ಬಟ್ಟೆ ವಿತರಿಸುವ ಕಾರ್ಯಕ್ರಮವನ್ನು ಕಾಂಗ್ರೆಸ್ ಅಧ್ಯಕ್ಷರು ಮಾಡ್ತಾರಂತೆ'.

'ಬಿಜೆಪಿಯವರು ಕೇಸರಿ ಬಣ್ಣ, ಗಾಂಧಿ ಟೋಪಿಯ ಕಾಂಗ್ರೆಸ್‌ನವರು ಬಿಳಿ, ಜೆಡಿಎಸ್‌ನವರು ಹಸಿರು ಬಣ್ಣವನ್ನು ಆರಾಧಿಸುತ್ತಾರೆ ಅಲ್ವೇನ್ರೀ?'

'ಹೌದು, ಕೇಸರಿ, ಬಿಳಿ, ಹಸಿರಿನ ತ್ರಿವರ್ಣ ಧ್ವಜದ ಬಣ್ಣಪ್ರೇಮಿಗಳಾದರೂ ನಾಯಕರಲ್ಲಿ ವರ್ಣಭೇದವಿದೆ. ವಿರೋಧಿ ಬಣ್ಣವನ್ನು ಸಹಿಸುವುದಿಲ್ಲ. ಪ್ರತಿಸ್ಪರ್ಧಿಗಳ ಬಣ್ಣ ಬಯಲು ಮಾಡುವ ಭರದಲ್ಲಿ ಬೈದಾಡಿಕೊಂಡು ತಾವೂ ಬಣ್ಣ ಕಳೆದುಕೊಳ್ಳುತ್ತಾರೆ. ನಾಯಕರು ಬಾಯಿಬಿಟ್ಟರೆ ಬಣ್ಣಗೇಡು ಎನ್ನುವಂತಾಗಿದೆ...' ಎಂದ ಶಂಕ್ರಿ.

ಸಂಗತ

ಸೈ-ಹಬ್: ಒಂದು ನೈತಿಕ ಜಿಜ್ಞಾಸೆ

ಯಾವುದು ಅನೈತಿಕ? ಲಾಭಕ್ಕಾಗಿ ಜ್ಞಾನದ ಮುಕ್ತ ಹರಿವಿಗೆ ತಡೆಯೊಡ್ಡುವುದೋ ಅಥವಾ ಕಾಪಿರೈಟ್ ನಿಯಮ ಗಾಳಿಗೆ ತೂರಿ ಜ್ಞಾನದ ಹರಿವಿಗೆ ಇರುವ ಅಡೆತಡೆ ನಿವಾರಿಸುವುದೋ?

• ಎಚ್.ಕೆ.ಶರತ್

ದಶಕದ ಹಿಂದೆ ಶೈಕ್ಷಣಿಕ ಸಂಶೋಧನೆಯಲ್ಲಿ ತೊಡಗಿಕೊಂಡ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ತಮ್ಮ ಸಂಶೋಧನೆಗೆ ಪೂರಕವಾಗಿ ಪರಾಮರ್ಶಿಸಬೇಕಿರುವ ಗುಣಮಟ್ಟದ ಸಂಶೋಧನಾ ಪ್ರಬಂಧಗಳನ್ನು ಪಡೆದುಕೊಳ್ಳಲು ಬಹಳಷ್ಟು ತಿಣುಕಾಡಬೇಕಿತ್ತು.

ಬಹುತೇಕ ಕಾಲೇಜುಗಳು ಸೀಮಿತ ಸಂಖ್ಯೆಯ ಸಂಶೋಧನಾ ಪತ್ರಿಕೆಗಳಿಗೆ ಚಂದಾ ಹೊಂದಿದ್ದರಿಂದ ತಮ್ಮ ಸಂಶೋಧನೆಗೆ ಅಗತ್ಯವಿರುವ ಎಲ್ಲ ಪ್ರಬಂಧಗಳನ್ನೂ ಪಡೆದುಕೊಳ್ಳಲು ಐಐಟಿ, ಐಐಎಸ್‌ಸಿಯಂತಹ ಉತ್ತಮ ಮೂಲಸೌಕರ್ಯ ಹೊಂದಿರುವ ಸಂಸ್ಥೆಗಳಲ್ಲಿ ಓದುತ್ತಿರುವ, ಕಾರ್ಯನಿರ್ವಹಿಸುತ್ತಿರುವ ಪರಿಚಯಸ್ಥರ ಮೊರೆ ಹೋಗಬೇಕಿತ್ತು. ಹಲವು ಪ್ರಬಂಧಗಳ ಪೂರ್ಣ ಪಠ್ಯ ಆಯಾ ಸಂಶೋಧನಾ ಪತ್ರಿಕೆಯ ಚಂದಾ ಹೊಂದಿದ್ದರೆ ಅಥವಾ ಆ ಪ್ರಬಂಧಕ್ಕೆ ನಮೂದಿಸಿರುವ ಬೆಲೆ ಪಾವತಿಸಿದರೆ ಮಾತ್ರ ಓದಿಗೆ ಲಭ್ಯವಾಗುತ್ತಿತ್ತು.

ಹಾಗಾಗಿ ಉಚಿತ ಓದಿಗೆ ಲಭ್ಯವಿದ್ದ ಸಾರಾಂಶವನ್ನಷ್ಟೇ ಗಮನಿಸಿ, ತಮ್ಮ ಸಂಶೋಧನೆಗೆ ಪೂರಕ ಎಂದು ಕಂಡುಬಂದ ಪ್ರಬಂಧದ ಕೊಂಡಿ ಅಥವಾ ಶೀರ್ಷಿಕೆಯನ್ನು ಐಐಟಿ, ಐಐಎಸ್‌ಸಿಯಲ್ಲಿರುವ ಪರಿಚಿತರಿಗೆ ರವಾನಿಸಿ ಡೌನ್‌ಲೋಡ್ ಮಾಡಿಕೊಡಲು ಕೋರಬೇಕಿತ್ತು. ಇದಲ್ಲದೆ ಯಾರಾದರೂ ತರಬೇತಿ ಕಾರ್ಯಾಗಾರ ಅಥವಾ ಇತರ ಕಾರಣಕ್ಕೆ ಐಐಟಿ ಇಲ್ಲ ಐಐಎಸ್‌ಸಿ ಕ್ಯಾಂಪಸ್ಸಿಗೆ ಹೋಗುತ್ತಿರುವರೆಂಬ ಮಾಹಿತಿ ಸಿಕ್ಕರೆ, ಅವರ ಬೆನ್ನಿಗೆ ಬಿದ್ದು ತಮಗೆ ಬೇಕಾದ ಸಂಶೋಧನಾ ಪ್ರಬಂಧಗಳನ್ನು ತರಿಸಿಕೊಳ್ಳುವ ಕಸರತ್ತು ಜಾರಿಯಲ್ಲಿತ್ತು. ಸಂಶೋಧನೆಗೆ ಬಹುಮುಖ್ಯ ತೊಡಕಾಗಿದ್ದ ಸಂಶೋಧನಾ ಪ್ರಬಂಧಗಳ ಮುಕ್ತ ಲಭ್ಯತೆಯ ಅಭಾವವನ್ನು ಇನ್ನಿಲ್ಲದಂತೆ ಹೋಗಲಾಡಿಸಿದ್ದು 'ಸೈ-ಹಬ್' (Sci-Hub) ಜಾಲತಾಣ.

2011ರಲ್ಲಿ ಪ್ರಾರಂಭವಾದ 'ಸೈ-ಹಬ್' ಎಂಬ ಪೈರೆಟ್ ಜಾಲತಾಣ ಕಳ್ಳಮಾರ್ಗಗಳನ್ನು ಬಳಸಿ, ಕೇವಲ ಚಂದಾದಾರರಿಗೆ ಲಭ್ಯವಾಗುತ್ತಿದ್ದ ಸಂಶೋಧನಾ ಪ್ರಬಂಧಗಳು ಉಚಿತವಾಗಿ ಎಲ್ಲರಿಗೂ ಸಿಗುವಂತೆ ಮಾಡಿತು. ಈ ಕಾರಣಕ್ಕೆ ಸಂಶೋಧನಾ ವಲಯದಲ್ಲಿ ಏರುತ್ತಲೇ ಹೋದ 'ಸೈ-ಹಬ್'ನ ಜನಪ್ರಿಯತೆ, ಅದರ ಬಳಕೆ ವ್ಯಾಪಕವಾಗಲು ಕಾರಣವಾಯಿತು. ಕಳೆದ ಹತ್ತು ವರ್ಷಗಳಿಂದ ಜಗತ್ತಿನಾದ್ಯಂತ ಅಸಂಖ್ಯ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ನೆರವಾಗಿದ್ದ 'ಸೈ-ಹಬ್' ಎಂಬ, ಜ್ಞಾನವನ್ನು ಮುಕ್ತವಾಗಿ ಹಂಚುವ ತಾಣ, ಇದೀಗ ಭಾರತದಲ್ಲಿ ನಿಷೇಧದ ತೂಗುಗತ್ತಿಯಡಿ ನಿಂತಿದೆ.

ತಮ್ಮ ಪ್ರಕಾಶನ ಸಂಸ್ಥೆಯಿಂದ ಪ್ರಕಟವಾಗುವ ಸಂಶೋಧನಾ ಪತ್ರಿಕೆಗಳಲ್ಲಿನ ಪ್ರಬಂಧಗಳನ್ನು ಹೀಗೆ ಉಚಿತವಾಗಿ ಕಳ್ಳಮಾರ್ಗದಿಂದ ಹಂಚುತ್ತಿರುವುದರಿಂದ ತಮಗೆ ನಷ್ಟವಾಗುತ್ತಿದೆ, ಕಾಪಿರೈಟ್ ನಿಯಮಗಳನ್ನು ಗಾಳಿಗೆ ತೂರಿರುವ ಸೈ-ಹಬ್ ತಾಣವನ್ನು ನಿಷೇಧಿಸಬೇಕೆಂದು ಕೋರಿ ಕೆಲ ಪ್ರಕಾಶನ ಸಂಸ್ಥೆಗಳು ದೆಹಲಿ ಹೈಕೋರ್ಟ್‌ನಲ್ಲಿ ದಾವೆ ಹೂಡಿವೆ.

ಲಾಭಕ್ಕಾಗಿ ಜ್ಞಾನದ ಮುಕ್ತ ಹರಿವಿಗೆ ತಡೆಯೊಡ್ಡುವುದು ಅನೈತಿಕವೋ ಅಥವಾ ಕಾಪಿರೈಟ್ ನಿಯಮಗಳನ್ನು ಗಾಳಿಗೆ ತೂರಿ ಜ್ಞಾನದ ಹರಿವಿಗೆ ಇರುವ ಅಡೆತಡೆ ನಿವಾರಿಸುವುದು ಅನೈತಿಕವೋ ಎಂಬ ಜಿಜ್ಞಾಸೆಯನ್ನೂ ಈ ಪ್ರಕರಣ ಹುಟ್ಟುಹಾಕಿದೆ.

ಪ್ರಕಾಶನ ಸಂಸ್ಥೆಗಳು ಸೈ-ಹಬ್ ಜೊತೆಗೆ ಅಸಂಖ್ಯ ಪಠ್ಯಪುಸ್ತಕಗಳನ್ನು ಉಚಿತ ಡೌನ್‌ಲೋಡ್‌ಗೆ ಲಭ್ಯವಾಗಿಸುವ ಮೂಲಕ ವಿದ್ಯಾರ್ಥಿ ವಲಯದಲ್ಲಿ ಜನಪ್ರಿಯವಾಗಿರುವ ಲಿಬ್‌ಜೆನ್ (LibGen) ತಾಣವನ್ನೂ ನಿಷೇಧಿಸುವಂತೆ ಕೋರಿವೆ. ದೆಹಲಿ ಹೈಕೋರ್ಟ್‌ನ ತೀರ್ಪು ಯಾರ ಪರವಾಗಿ ಇರಲಿದೆ ಎನ್ನುವ ಕುತೂಹಲ ಇದೀಗ ಶೈಕ್ಷಣಿಕ ವಲಯದಲ್ಲಿ ಮೂಡಿದೆ.



ಒಂದೆಡೆ ಸಂಶೋಧನಾ ಪ್ರಬಂಧಗಳಿಗೆ ಓದುಗರಿಂದ ಹಣ ಪಡೆಯುವ ಪ್ರಕಾಶನ ಸಂಸ್ಥೆಗಳು, ಮತ್ತೊಂದೆಡೆ ಈ ಪ್ರಬಂಧಗಳ ಪ್ರಕಟಣೆಗೂ ಲೇಖಕರಿಂದ ಹಣ ಪಡೆಯುತ್ತಿವೆ. ಲೇಖಕರು ಮತ್ತು ಓದುಗ ವಲಯ ಎರಡರಿಂದಲೂ ದುಬಾರಿ ಮೊತ್ತ ಪಡೆಯುವ ಪ್ರಕಾಶನ ಸಂಸ್ಥೆಗಳು, ತಮ್ಮ ಸಂಶೋಧನಾ ಪತ್ರಿಕೆಗಳಿಗೆ ಸಲ್ಲಿಕೆಯಾಗುವ ಪ್ರಬಂಧಗಳ ಗುಣಮಟ್ಟ ಪರಿಶೀಲಿಸುವ ಆಯಾ ಕ್ಷೇತ್ರದ ತಜ್ಞರಿಗೂ ಗೌರವಧನ ನೀಡುವುದು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ. ಈ ತಾಣಗಳ ಮೂಲಕ ವಿದ್ಯಾರ್ಥಿಗಳು ತಮಗೆ ಬೇಕಿರುವ ಪರಾಮರ್ಶನ ಪುಸ್ತಕಗಳು ಹಾಗೂ ಸಂಶೋಧನಾ ಪ್ರಬಂಧಗಳನ್ನು ದಕ್ಕಿಸಿಕೊಂಡು ತಮ್ಮ ಸಂಶೋಧನೆಯ ಮುಂದಿನ ಹಾದಿಯ ಕುರಿತು ಸ್ಪಷ್ಟತೆ ಹೊಂದುತ್ತಿದ್ದರು. ಈಗ ಅಂತಹ ಮುಕ್ತ ಜ್ಞಾನದ ಬಾಗಿಲು ಮುಚ್ಚುವುದೆಂದರೆ, ಅವರ ಸಂಶೋಧನೆಯ ಬೇರುಗಳನ್ನೇ ಕತ್ತರಿಸಿದಂತೆ ಎಂದು ಭಾವಿಸಲು ಸಕಾರಣಗಳಿವೆ.

ಸೈ-ಹಬ್ ಹಾಗೂ ಲೈಬ್ರರಿ ಜೆನೆಸಿಸ್‌ನಂತಹ (ಲಿಬ್‌ಜೆನ್) ಯೋಜನೆಗಳನ್ನು ಕಾನೂನುಬಾಹಿರ ಮತ್ತು ಅನೈತಿಕವೆಂದು ಪರಿಗಣಿಸುವುದಾದರೆ, ಜ್ಞಾನದ ಮುಕ್ತ ಹರಿವಿಗೆ ತಡೆಯೊಡ್ಡಿ ಗಳಿಸುವ ಲಾಭ ಕಾನೂನುಬಾಹಿರವಲ್ಲದಿದ್ದರೂ ನೈತಿಕವಾದುದೇ? ಕಾನೂನುಬಾಹಿರವಾಗಿ ಕಾರ್ಯನಿರ್ವಹಿಸುವ ಸೈ-ಹಬ್‌ಗೆ ಪರ್ಯಾಯವಾಗಿ ತಮ್ಮ ಖರ್ಚು ವೆಚ್ಚಗಳಿಗೆ ಅನುಗುಣವಾಗಿ ಕಡಿಮೆ ದರ ವಿಧಿಸಿ ಎಲ್ಲ ಸಂಶೋಧನಾ ಪ್ರಬಂಧಗಳೂ ಒಂದೇ ವೇದಿಕೆಯಲ್ಲಿ ದೊರೆಯುವಂತೆ ಮಾಡುವ ಪ್ರಯತ್ನಕ್ಕೆ ಪ್ರಕಾಶನ ಸಂಸ್ಥೆಗಳು ಕೈ ಹಾಕಬೇಕಲ್ಲವೇ?

ಲಾಭಕೇಂದ್ರಿತವಾಗಿ ಚಿಂತಿಸುವ ವ್ಯವಸ್ಥೆಯು ಮಾರುಕಟ್ಟೆಯ ಲೆಕ್ಕಾಚಾರಗಳನ್ನು ಬದಿಗಿರಿಸಿ ಲೋಕದ ಹಿತಕ್ಕಾಗಿ ತುಡಿಯುವುದೆಂದು ನಿರೀಕ್ಷಿಸಬಹುದೇ?

ವಾಚಕರ ವಾಣಿ

ಅರ್ಚಕ ಹುದ್ದೆ: ಲಿಂಗನಿರಪೇಕ್ಷ ನೆಲೆಯಲ್ಲಿರಲಿ

ತಮಿಳುನಾಡಿನ ದೇವಸ್ಥಾನಗಳಲ್ಲಿ ಬ್ರಾಹ್ಮಣೇತರ ಅರ್ಚಕರನ್ನು ನೇಮಿಸಿರುವುದು ಸ್ವಾಗತಾರ್ಹ. ಅದರಂತೆ ದೇಶದ ಎಲ್ಲ ರಾಜ್ಯಗಳಲ್ಲಿಯೂ ಬ್ರಾಹ್ಮಣೇತರ ಅರ್ಚಕರ ನೇಮಕಾತಿ ಮಾಡುವ ಆಗ್ರಹ ಪ್ರಗತಿಪರರಿಂದ ಕೇಳಿಬರುತ್ತಿದೆ. ಜಾತಿ ಸಮಾನತೆ ಎಷ್ಟು ಮುಖ್ಯವೊ ಲಿಂಗ ಸಮಾನತೆಯೂ ಅಷ್ಟೇ ಮುಖ್ಯ. ಮಹಿಳೆಯರನ್ನು ಅರ್ಚಕರನ್ನಾಗಿ ನೇಮಕ ಮಾಡಿಕೊಳ್ಳುತ್ತಿಲ್ಲ. ಕೆಲವು ದೇವಾಲಯಗಳಲ್ಲಿ ಮಹಿಳೆಯರಿಗೆ ಪ್ರವೇಶವನ್ನೇ ನಿಷೇಧಿಸಲಾಗಿದೆ. ಸಂವಿಧಾನ ನಮಗೆ ಲಿಂಗ ಸಮಾನತೆಯನ್ನು ಕೊಡಮಾಡಿದೆ. ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳೆಯರಿಗೆ ಅರ್ಚಕ ಹುದ್ದೆಗಳನ್ನು ನಿರಾಕರಿಸುವುದು ಸಂವಿಧಾನ ವಿರೋಧಿ ನೆಲೆಯಾಗುತ್ತದೆ.

ಈಗಾಗಲೇ ಅನೇಕ ಮಹಿಳೆಯರು ಮದುವೆ-ಮುಂಜಿಗಳಲ್ಲಿ ಪೌರೋಹಿತ್ಯ ಮಾಡುತ್ತಿದ್ದಾರೆ. ಎಲ್ಲ ಕರ್ಮಾದಿಗಳನ್ನು ಮಾಡಿಸುತ್ತಿದ್ದಾರೆ. ವೇದಮಂತ್ರಗಳನ್ನು ಪಠಿಸುತ್ತಿದ್ದಾರೆ. ಹೀಗಾಗಿ ಅರ್ಚಕರಾಗುವ ಅರ್ಹತೆ ಮಹಿಳೆಯರಿಗೂ ಇದೆ. ಸೂಕ್ತ ತರಬೇತಿ ನೀಡಿದರೆ ಅವರೂ ಹೆಚ್ಚಿನ ಸಂಖ್ಯೆಯಲ್ಲಿ ಅರ್ಚಕ ವೃತ್ತಿಗೆ ಬರಬಹುದು. ವೇದಮಂತ್ರಗಳನ್ನು ರಚಿಸಿದವರಲ್ಲಿ ಗಾರ್ಗಿ, ಮೈತ್ರೇಯಿ ಅವರಂತಹ ಮಹಿಳೆಯರೂ ಸೇರಿದ್ದಾರೆ. ರಾಜ್ಯ ಸರ್ಕಾರಗಳು ಲಿಂಗ ಸಮಾನತೆಯನ್ನು ಎತ್ತಿ ಹಿಡಿಯಬೇಕು, ಪೂರ್ವಗ್ರಹವನ್ನು ತೊರೆದು ಪ್ರತಿರೋಧವನ್ನು ಲೆಕ್ಕಿಸದೆ, ಪೌರೋಹಿತ್ಯ ನಿರ್ವಹಣೆಗೆ ಬೇಕಾದ ಆಸಕ್ತಿ ಮತ್ತು ಕೌಶಲವನ್ನು ಹೊಂದಿರುವ ಮಹಿಳೆಯರನ್ನು ಅರ್ಚಕರನ್ನಾಗಿ ನೇಮಿಸಬೇಕು. ಅರ್ಚಕ ಹುದ್ದೆಗಳು ಜಾತ್ಯತೀತ, ಲಿಂಗನಿರಪೇಕ್ಷ ನೆಲೆಯಲ್ಲಿ ನೇಮಕಗೊಳ್ಳಬೇಕು.

ಸಾವಿತ್ರಿ ಮುಜುಮದಾರ, ಕೊಪ್ಪಳ

ಆ ಹೊಂಡದ ಹಿಂದೆ...

ಚಿತ್ರದುರ್ಗದಲ್ಲಿ ಸಂತೆಗೆ ಹೋದಾಗ ಅಲ್ಲಿನ ಹೊಂಡ ತೋರಿಸಿ ನನ್ನ ತಂದೆ ಹೇಳಿದ್ದರು 'ಈ ಹೊಂಡದಲ್ಲಿ ಹಿಂದೆ ಬಸ್ ಉರುಳಿ ದೊಡ್ಡ ದುರಂತ ನಡೆದಿತ್ತು' ಎಂದು. ಆದರೆ ನಾನು ಅದನ್ನು ನಂಬಿರಲಿಲ್ಲ. ಹೊಂಡದ ಹತ್ತಿರ ಹೋಗದಿರಲಿ ಎಂಬ ಕಾರಣಕ್ಕೆ ಕಟ್ಟುಕತೆ ಹೇಳುತ್ತಾರೆ ಎಂದುಕೊಂಡಿದ್ದೆ. ಅದು ತಪ್ಪು ಅಭಿಪ್ರಾಯ ಎಂಬುದು ತಿಳಿಯಲು ಪ್ರಜಾವಾಣಿ ಪತ್ರಿಕೆಯ '25 ವರ್ಷಗಳ ಹಿಂದೆ' ಅಂಕಣ (ಪ್ರ.ವಾ., ಅ. 25) ಕಾರಣವಾಯಿತು.

ಸಂತೆಹೊಂಡಕ್ಕೆ ಬಸ್ ಉರುಳಿ 61 ಜನ ಮೃತಪಟ್ಟ ದಾರುಣ ಘಟನೆಯ ಸುದ್ದಿ ತುಣುಕು ಅದರಲ್ಲಿತ್ತು. ಸತ್ಯಸಂಗತಿಯನ್ನು ಸುಳ್ಳೆಂದು ತಿಳಿದಿದ್ದ ನನಗೆ, ನಿಜ ವಿಚಾರ ಮನದಟ್ಟು ಮಾಡಿಸಿದ ಪತ್ರಿಕೆಗೆ ಅಭಿನಂದನೆ.

ಮೋನಿಕ ಆರ್., ಚಿಕ್ಕಗೊಂಡನಹಳ್ಳಿ, ಚಿತ್ರದುರ್ಗ

ಇಡೀ ಸಂಸ್ಥೆ ಕಳಂಕಿತವಲ್ಲ

ಜಮ್ಮು ಮತ್ತು ಕಾಶ್ಮೀರದಲ್ಲಿ ಅಂಬಾನಿ ಮತ್ತು ಆರ್‌ಎಸ್‌ಎಸ್ ಜೊತೆ ಸಂಪರ್ಕ ಹೊಂದಿರುವ ವ್ಯಕ್ತಿಗಳಿಗೆ ಸೇರಿದ ಕಡತಗಳನ್ನು ವಿಲೇವಾರಿ ಮಾಡಲು ತಮಗೆ ₹ 300 ಕೋಟಿಯ ಆಮಿಷ ಒಡ್ಡಲಾಗಿತ್ತು ಎಂಬ ಜಮ್ಮು ಮತ್ತು ಕಾಶ್ಮೀರದ ಮಾಜಿ ಗವರ್ನರ್ ಹೇಳಿಕೆಯನ್ನು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಉಲ್ಲೇಖಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರವು ಕೇಂದ್ರಾಡಳಿತಕ್ಕೆ ಒಳಪಟ್ಟ ಮೇಲೆ ಈ ಪ್ರಕರಣ ನಡೆದಿದ್ದಲ್ಲಿ, ಲೆಫ್ಟಿನೆಂಟ್ ಗವರ್ನರ್ ಆಗಿದ್ದವರು ಅಂತಹವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ಯಾವ ಅಡಚಣೆಯೂ ಇರಲಿಲ್ಲ. ರಾಜ್ಯಪಾಲರಾಗಿದ್ದವರೇ ಆರೋಪಿಸಲಿ ಅಥವಾ ಒಬ್ಬ ಸಾಮಾನ್ಯ ಪ್ರಜೆಯೇ ಆರೋಪಿಸಲಿ, ಅಂತಹ ಆರೋಪಕ್ಕೆ ಸಾಕ್ಷ್ಯಾಧಾರಗಳು ಇಲ್ಲದಿದ್ದರೆ ಅದರಲ್ಲಿ ಯಾವ ಹುರುಳೂ ಇರುವುದಿಲ್ಲ.

ಒಂದು ವೇಳೆ ಈ ವಿಚಾರ ಸತ್ಯವೇ ಆಗಿದ್ದಲ್ಲಿ, ಲಂಚ ಕೊಡಲು ಬಂದವರು ಕಳಂಕಿತರಾಗುವರೇ ಹೊರತು ಇಡೀ ಆರ್‌ಎಸ್‌ಎಸ್ ಸಂಘಟನೆಯೇ ಕಳಂಕಿತವಾಗಲು ಸಾಧ್ಯವಿಲ್ಲ. ದೇಶದಲ್ಲಿ ಪ್ರವಾಹ ಮತ್ತು ಕ್ಷಾಮಗಳು ಉಂಟಾದಾಗ ಜಾತಿ ಅಥವಾ ಕೋಮನ್ನು ನೋಡದೆ ಆರ್‌ಎಸ್‌ಎಸ್ ಸಹಾಯಕ್ಕೆ ಬಂದಿರುವುದಕ್ಕೆ ಹಲವಾರು ನಿದರ್ಶನಗಳಿವೆ. ಆಧಾರರಹಿತವಾದ ಆಪಾದನೆಯನ್ನು ಯಾರ ಬಗ್ಗೆಯಾಗಲಿ ಮಾಡುವುದೂ ಒಂದೇ ಗಾಳಿಯಲ್ಲಿ ಗುದ್ದಿ ಮೈ ನೋಯಿಸಿಕೊಳ್ಳುವುದೂ ಒಂದೇ. ತಪ್ಪಿತಸ್ಥರನ್ನು ಈಗಲೂ ಕಾನೂನಿನ ಕತ್ತರಿಗೆ ಒಳಪಡಿಸಲು ಯಾವ ಕಷ್ಟವೂ ಇಲ್ಲ.

ಕೆ.ವಿ.ಸೀತಾರಾಮಯ್ಯ, ಬೆಂಗಳೂರು

ಸ್ವಾಸ್ಥ್ಯ ಕೆಡಿಸುವ ಕಿಡಿಗೇಡಿತನ

ಭಾನುವಾರ ರಾತ್ರಿ ನಡೆದ ಟಿ20 ವಿಶ್ವಕಪ್ ಟೂರ್ನಿಯ ಭಾರತ– ಪಾಕಿಸ್ತಾನ ಕ್ರಿಕೆಟ್ ಪಂದ್ಯಾವಳಿಯಲ್ಲಿ ಟೀಂ ಇಂಡಿಯಾ ಸೋತ ಕಾರಣಕ್ಕಾಗಿ, ಹಲವಾರು ವರ್ಷಗಳಿಂದ ತಂಡದ ಪ್ರಮುಖ ಭರವಸೆಯ ಬೌಲರ್ ಆಗಿರುವ ಮೊಹಮ್ಮದ್ ಶಮಿ ಅವರನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಅವರ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಸಭ್ಯವಲ್ಲದ ರೀತಿಯಲ್ಲಿ ನಿರಂತರವಾಗಿ ಟೀಕೆ ಮಾಡುತ್ತಿರುವುದು ಖಂಡನೀಯ. ಸಮಯಕ್ಕೆ ತಕ್ಕಂತೆ ಸರಿಯಾಗಿ ನಿರ್ವಹಣೆ ತೋರದ ತಂಡದ ಹನ್ನೊಂದು ಆಟಗಾರರೂ ಸೋಲಿಗೆ ಜವಾಬ್ದಾರರು ಆಗಿರುತ್ತಾರೆ. ಅದುಬಿಟ್ಟು ತಾವು ಮಾಡಿದ ಓವರ್‌ಗಳಲ್ಲಿ ಸ್ವಲ್ಪ ಜಾಸ್ತಿ ರನ್ ನೀಡಿದ್ದಕ್ಕೆ, ಮುಸಲ್ಮಾನ ಎಂಬ ನೆಪವೊಡ್ಡಿ ಶಮಿ ಅವರನ್ನು ವೈಯಕ್ತಿಕವಾಗಿ ನಿಂದಿಸುವುದು ಯಾರೂ ಒಪ್ಪುವಂತಹದ್ದಲ್ಲ.

ಜಹೀರ್ ಖಾನ್ ನಂತರ ಶಮಿ ಅವರು ಟೀಂ ಇಂಡಿಯಾದ ಅಗ್ರಪಂಕ್ತಿಯ ಬೌಲರ್ ಆಗಿ 2013ರಿಂದ ಮೂರೂ ಮಾದರಿಯ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ತಂಡದ ಪ್ರಮುಖ ಆಧಾರಸ್ತಂಭವಾಗಿ ಸ್ಥಿರ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. 2015ರ ವಿಶ್ವಕಪ್ ಟೂರ್ನಿಯಲ್ಲಿ ಇದೇ ಪಾಕಿಸ್ತಾನ ತಂಡದ ವಿರುದ್ಧ ಅಂದಿನ ಪಂದ್ಯ ಗೆಲ್ಲಲು ಅವರು ಕಾರಣರಾಗಿದ್ದನ್ನು ಕೊಂಕು ಹುಡುಕುವ ಮನಃಸ್ಥಿತಿಯವರು ಮರೆಯಬಾರದು. ಇದೆಲ್ಲವೂ ಕೆಸರನ್ನು ಹೊದ್ದು ಮಲಗಿರುವ ರಾಜಕೀಯಪ್ರೇರಿತ ದಾಳಿಯಾಗಿ ಕಾಣಿಸುತ್ತಿದೆ. ಕ್ರೀಡೆಯನ್ನು ಕ್ರೀಡಾ ಮನೋಭಾವದಿಂದ ನೋಡಬೇಕೇ ವಿನಾ ಅದರಲ್ಲೂ ಧರ್ಮ, ಜಾತಿ ಹುಡುಕುವುದು ಸ್ವಸ್ಥ ಸಮಾಜವನ್ನು ಹದಗೆಡಿಸುವ ಪ್ರಯತ್ನದಂತೆ ಕಾಣುತ್ತದೆ. ಸಮಾಜದ ಸ್ವಾಸ್ಥ್ಯ ಹದಗೆಡಿಸುವ ಕಿಡಿಗೇಡಿಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷಿಸಬೇಕಿದೆ.

ಅನಿಲ್ ಕುಮಾರ್, ನಂಜನಗೂಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ: ಶೇ 40ರಷ್ಟು ಸೀಟು ಸ್ತ್ರೀಯರಿಗೆ ನೀಡುವುದಾಗಿ ಕಾಂಗ್ರೆಸ್ ಘೋಷಣೆ

ಮಹಿಳೆಯರ ಓಲೈಕೆಗೆ ಟಿಕೆಟ್ ಮೀಸಲು

ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಪಕ್ಷದ ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ಮೀಸಲು ಇರಿಸಲಾಗುವುದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಇತ್ತೀಚೆಗೆ ಪ್ರಕಟಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ದೊಡ್ಡ ನೆಲೆಯೇನೂ ಇಲ್ಲ. ಹಾಗಿದ್ದರೂ ಇತರ ಪ್ರಮುಖ ಪಕ್ಷಗಳು ಪ್ರಿಯಾಂಕಾ ಅವರ ಘೋಷಣೆಗೆ ಎದುರೇಟು ನೀಡುವುದು ಹೇಗೆ ಎಂಬ ಬಗ್ಗೆ ಗಂಭೀರವಾಗಿ ಯೋಚಿಸುತ್ತಿವೆ. ಏಕೆಂದರೆ, ಉತ್ತರ ಪ್ರದೇಶದ ಒಟ್ಟು 14.40 ಕೋಟಿ ಮತದಾರರಲ್ಲಿ ಮಹಿಳೆಯರ ಸಂಖ್ಯೆ 6.60 ಕೋಟಿ. ಪ್ರಮಾಣ ಶೇ 45.89ರಷ್ಟು. ಪ್ರಿಯಾಂಕಾ ಮಾಡಿರುವ ಘೋಷಣೆಯು ಮಹಿಳೆಯರ ಮನ ಮುಟ್ಟಿದರೆ, ಫಲಿತಾಂಶದಲ್ಲಿ ದೊಡ್ಡ ಬದಲಾವಣೆಗೆ ಅದು ಕಾರಣವಾಗಬಲ್ಲುದು ಎಂಬುದು ಎಲ್ಲ ರಾಜಕೀಯ ಪಕ್ಷಗಳಿಗೂ ತಿಳಿದಿದೆ.

ಆದರೆ, ರಾಜಕೀಯ ಪಕ್ಷಗಳ ಇಂತಹ ಘೋಷಣೆಯ ಹಿಂದೆ ಪ್ರಾಮಾಣಿಕವಾದ ಕಳಕಳಿ ಇದೆಯೇ ಎಂಬುದು ಪ್ರಶ್ನಾರ್ಹ. ಕೇರಳ ವಿಧಾನಸಭೆಗೆ ಈ ವರ್ಷ ಚುನಾವಣೆ ನಡೆದಿದೆ. ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಲತಿಕಾ ಸುರೇಶ್ ಅವರೂ ಟಿಕೆಟ್ ಆಕಾಂಕ್ಷಿಯಾಗಿದ್ದರು. ತಮಗೆ ಟಿಕೆಟ್ ಸಿಗದಿರುವುದು ಮತ್ತು ಮಹಿಳೆಯರಿಗೆ ಪ್ರಾತಿನಿಧ್ಯ ಕಡಿಮೆ ಇರುವುದನ್ನು ತಮ್ಮ ತಲೆ ಬೋಳಿಸಿ ಅವರು ಪ್ರತಿಭಟಿಸಿದ್ದರು. ಮಹಿಳಾ ಸಬಲೀಕರಣದ ವಿಚಾರದಲ್ಲಿ ರಾಜಕೀಯ ಪಕ್ಷವೊಂದು ರಾಜ್ಯಕ್ಕೊಂದು ನೀತಿ ಅನುಸರಿಸುವುದು ಸಾಧ್ಯವೇ?

ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಕೂಡ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವ ವಿಚಾರದಲ್ಲಿ ಹೆಚ್ಚು ಮಾತನಾಡುತ್ತಿದೆ. ಆದರೆ, ಪಶ್ಚಿಮ ಬಂಗಾಳ ವಿಧಾನಸಭೆಗೆ ಈ ವರ್ಷ ನಡೆದ ಚುನಾವಣೆಯಲ್ಲಿ 292 ಕ್ಷೇತ್ರಗಳ ಪೈಕಿ 50ರಲ್ಲಿ ಮಾತ್ರ ಮಹಿಳೆಯರನ್ನು ಕಣಕ್ಕೆ ಇಳಿಸಿತ್ತು. ರಾಜ್ಯದ 43 ಸಚಿವ ಸ್ಥಾನಗಳ ಪೈಕಿ ಮಹಿಳೆಯರಿಗೆ ಸಿಕ್ಕಿದ್ದು 8 ಸ್ಥಾನಗಳು ಮಾತ್ರ.

ಮಹಿಳಾ ಪ್ರಾತಿನಿಧ್ಯವನ್ನು ರಾಜಕೀಯ ಪಕ್ಷಗಳು ಮತ ಗಳಿಕೆಯ ಅಸ್ತ್ರವಾಗಿ ಮಾತ್ರ ನೋಡುತ್ತಿವೆ ಎಂಬುದಕ್ಕೆ ಇವು ಉದಾಹರಣೆಗಳು. ಆದರೆ, ಜನಪ್ರತಿನಿಧಿಗಳಾಗಿ ಹೆಚ್ಚು ಮಹಿಳೆಯರು ಆಯ್ಕೆ ಆಗಬೇಕಾದ ಅನಿವಾರ್ಯ ಈಗ ಇದೆ. ಸಂಸತ್ತಿನಲ್ಲಿ ಮಹಿಳಾ ಪ್ರಾತಿನಿಧ್ಯ ಶೇ 14.39ರಷ್ಟು ಮಾತ್ರ ಇದೆ. ಈಗ ಇರುವ 540 ಸಂಸದರ ಪೈಕಿ ಮಹಿಳೆಯರ ಸಂಖ್ಯೆ 78. ರಾಜ್ಯ ವಿಧಾನಸಭೆಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ.

ಜಗತ್ತಿನ ಸಣ್ಣ ಮತ್ತು ಹಿಂದುಳಿದ ಹಲವು ದೇಶಗಳು ಮಹಿಳಾ ಪ್ರಾತಿನಿಧ್ಯದ ವಿಚಾರದಲ್ಲಿ ಬಹಳ ಮುಂದೆ ಇವೆ. ರುವಾಂಡದಲ್ಲಿ ಮಹಿಳಾ ಪ್ರಾತಿನಿಧ್ಯ ಗರಿಷ್ಠ ಪ್ರಮಾಣದಲ್ಲಿದೆ. ಅಲ್ಲಿನ ಮಹಿಳಾ ಸಂಸದರ ಪ್ರಮಾಣ ಶೇ 61.3ರಷ್ಟು. ಕ್ಯೂಬಾ ಮತ್ತು ಬೊಲಿವಿಯಾದಲ್ಲಿಯೂ ಶೇ 50ಕ್ಕಿಂತ ಮೇಲೆ ಇದೆ. ಮೆಕ್ಸಿಕೊ, ಸ್ವೀಡನ್, ನಮೀಬಿಯಾದಲ್ಲಿ ಮಹಿಳಾ ಪ್ರಾತಿನಿಧ್ಯವು ಶೇ 50ರ ಸಮೀಪ ಇದೆ.

ಶಾಸನಬದ್ಧವಾದ ಮೀಸಲು ಮತ್ತು ರಾಜಕೀಯ ಪಕ್ಷಗಳ ಸ್ವಇಚ್ಛೆಯ ಮೀಸಲಾತಿ ಮೂಲಕ ಇದು ಸಾಧ್ಯವಾಗಿದೆ. ಶಾಸನಬದ್ಧವಾದ ಮೀಸಲು ಮತ್ತು ರಾಜಕೀಯ ಪಕ್ಷಗಳು ನೀಡುವ ಮೀಸಲಿನ ಮೂಲಕ ಭಾರತದಲ್ಲಿಯೂ ಮಹಿಳಾ ಜನಪ್ರತಿನಿಧಿಗಳ ಪ್ರಮಾಣ ಹೆಚ್ಚಳ ಸಾಧ್ಯ ಇದೆ.

ಸಂಸತ್ತು ಮತ್ತು ವಿಧಾನಸಭೆಯಲ್ಲಿ ಮಹಿಳಾ ಮೀಸಲಿಗೆ ಆಗ್ರಹಿಸಿ ದೆಹಲಿಯಲ್ಲಿ 2018ರಲ್ಲಿ ನಡೆದ ಪ್ರತಿಭಟನೆ

ಕಾಯ್ದೆಗೆ ಇಚ್ಛಾಶಕ್ತಿಯ ಕೊರತೆ

ವಿಧಾನಸಭೆಗಳು, ಸಂಸತ್ತಿನ ಉಭಯ ಸದನಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸೀಟುಗಳನ್ನು ಮೀಸಲಿಡುವ ಪ್ರಯತ್ನಕ್ಕೆ 26 ವರ್ಷಗಳ ಇತಿಹಾಸವಿದೆ. ಸರಪಂಚ ಸ್ಥಾನಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಸ್ಥಾನಗಳನ್ನು ಮೀಸಲಿರಿಸುವ ಸಂಬಂಧ ಸಂವಿಧಾನಕ್ಕೆ 1993ರಲ್ಲಿ ತಿದ್ದುಪಡಿ ತರಲಾಗಿತ್ತು.

ಅದೇ ನೆಲೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಸಲುವಾಗಿ 1996ರಲ್ಲಿ ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸಲಾಗಿತ್ತು. ಆದರೆ ಮಸೂದೆಗೆ ಅನುಮೋದನೆ ದೊರೆಯಲೇ ಇಲ್ಲ. ಈ ಮಸೂದೆಗೆ ಆಡಳಿತ ಮತ್ತು ವಿರೋಧ ಪಕ್ಷಗಳ ಮಹಿಳೆಯರೆಲ್ಲರೂ ಬೆಂಬಲ ಸೂಚಿಸಿದರೆ, ಪಕ್ಷಾತೀತವಾಗಿ ಈ ಮಸೂದೆಯನ್ನು ವಿರೋಧಿಸಿದ ಪುರುಷರ ಸಂಖ್ಯೆಯೇ ಹೆಚ್ಚು. 1996ರಿಂದ 2010ರವರೆಗೆ ಅಧಿಕಾರ ನಡೆಸಿದ ಎಲ್ಲಾ ಪಕ್ಷಗಳೂ ಈ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಯತ್ನಿಸಿವೆ.

1996, 1998, 1999 ಮತ್ತು 2008ರಲ್ಲಿ ಈ ಮಸೂದೆಯ ಸುಧಾರಿತ ರೂಪಗಳನ್ನು ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಆದರೆ ಒಂದು ಬಾರಿಯೂ ಮಸೂದೆಗೆ ಅನುಮೋದನೆ ದೊರೆತಿಲ್ಲ. 2008ರಲ್ಲಂತೂ ರಾಜ್ಯಸಭೆಯಲ್ಲಿ ಮಸೂದೆಯ ಪ್ರತಿಯನ್ನು ಹರಿದುಹಾಕುವ ಯತ್ನವೂ ನಡೆದಿತ್ತು. ಮಹಿಳಾ ಸದಸ್ಯರೇ ಮಸೂದೆಯ ಪ್ರತಿಗೆ ರಕ್ಷಣೆ ನೀಡಿದ್ದರು. 2008ರಲ್ಲಿ ಮಸೂದೆಯನ್ನು ಸಂಸತ್ತಿನ ಸ್ಥಾಯಿ ಸಮಿತಿ ಪರಿಶೀಲನೆಗೆ ಕಳುಹಿಸಲಾಯಿತು. 2010ರಲ್ಲಿ ಮತ್ತೆ ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದುಕೊಳ್ಳಲಾಯಿತು. ಆದರೆ ಲೋಕಸಭೆಯಲ್ಲಿ ಚರ್ಚೆಗೆ ಬರದೇ ಇರುವ ಕಾರಣ, ಮಸೂದೆ ಮಾನ್ಯತೆ ಕಳೆದುಕೊಂಡಿತು.

ಪ್ರತಿ ಬಾರಿ ಈ ಮಸೂದೆ ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ, ಮಹಿಳೆಯರಿಗೆ ಮೀಸಲಾತಿಯನ್ನು ವಿರೋಧಿಸುವವರ ಸಂಖ್ಯೆಯೇ ಹೆಚ್ಚು ಇತ್ತು. 'ಮೀಸಲಾತಿ ಅಡಿ ಆಯ್ಕೆಯಾಗುವ ಮಹಿಳೆಯರಿಗೆ, ಸಂಸದೀಯ ಪಟುವಿನ ಸಾಮರ್ಥ್ಯವಿರುವುದಿಲ್ಲ. ಅವರು ಸಂಸದೆಯ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ' ಎಂಬ ನೆಪವನ್ನು ಮೀಸಲಾತಿ ವಿರೋಧಕ್ಕೆ ಆಧಾರ ಮಾಡಿಕೊಳ್ಳಲಾಗುತ್ತಿತ್ತು. 2014ರ ನಂತರ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ಈ ಮಸೂದೆಯನ್ನು ಮತ್ತೆ ಮಂಡಿಸುವ ಪ್ರಯತ್ನವನ್ನೂ ಮಾಡಿಲ್ಲ.



ಪ್ರಿಯಾಂಕಾ

ಟಿಕೆಟ್ ಕಣ್ಣಾಮುಚ್ಚಾಲೆ

ಮಹಿಳಾ ಪ್ರಾತಿನಿಧ್ಯದ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳೂ ಚುನಾವಣೆಯ ಸಂದರ್ಭದಲ್ಲಿ ದನಿ ಎತ್ತುತ್ತವೆ. ಆದರೆ, ಗೆಲ್ಲುವ ಸಾಧ್ಯತೆ ಇರುವಲ್ಲಿ ಹಾಗೂ ಅನುಕಂಪ ಕೆಲಸ ಮಾಡುವಲ್ಲಿ ಮಾತ್ರ ಮಹಿಳಾ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ಅವಕಾಶವಾದವನ್ನಷ್ಟೇ ಬಹುತೇಕ ಪಕ್ಷಗಳು ರೂಢಿಸಿಕೊಂಡು ಬಂದಿವೆ.

2014ರ ಲೋಕಸಭಾ ಚುನಾವಣೆಗಿಂತ 2019ರಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿದೆ. 2014ರಲ್ಲಿ, ಕಣದಲ್ಲಿದ್ದ 665 ಮಹಿಳೆಯರ ಪೈಕಿ 62 ಮಂದಿ ಆಯ್ಕೆಯಾದರು; 2019ರಲ್ಲಿ 716 ಮಹಿಳೆಯರ ಪೈಕಿ 78 ಮಂದಿ ಆಯ್ಕೆಯಾಗಿದ್ದಾರೆ.

2014ರ ಲೋಕಸಭಾ ಚುನಾವಣೆಯಲ್ಲಿ, ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ 41 ಹಾಗೂ ಬಿಜೆಪಿ 30 ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡಿದ್ದರೆ, ಆಮ್ ಆದ್ಮಿ ಪಾರ್ಟಿ 47 ಟಿಕೆಟ್‌ಗಳನ್ನು ನೀಡಿತ್ತು. 2020ರಲ್ಲಿ ನಡೆದ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಆಮ್ ಆದ್ಮಿ ಪಾರ್ಟಿಯ ಒಂಬತ್ತು ಮಹಿಳೆಯರ ಪೈಕಿ ಎಂಟು ಜನ ಗೆಲುವು ಸಾಧಿಸಿದ್ದರು.

2019ರಲ್ಲಿ ನಡೆದ ಆಂಧ್ರಪ್ರದೇಶ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಟಿಕೆಟ್ ನೀಡುವುದಾಗಿ ರಾಜಕೀಯ ಪಕ್ಷಗಳು ಹೇಳಿದ್ದವು. ಆದರೆ, ವಿಧಾನಸಭೆಯ 175 ಸ್ಥಾನಗಳ ಪೈಕಿ 138ರಲ್ಲಿ ಮಹಿಳೆಯರು ನಿರ್ಣಾಯಕ ಆಗಿದ್ದರೂ ಯಾವ ಪಕ್ಷವೂ ಶೇ 33ರಷ್ಟು ಟಿಕೆಟ್ ನೀಡಲಿಲ್ಲ.

ಕರ್ನಾಟಕದ ವಿಧಾನಸಭೆಗೆ 2018ರಲ್ಲಿ ನಡೆದ ಚುನಾವಣೆಯಲ್ಲಿ 216 ಮಹಿಳೆಯರು ಕಣದಲ್ಲಿದ್ದರು. ಅವರಲ್ಲಿ ಏಳು ಜನರು ಮಾತ್ರ ಗೆದ್ದಿದ್ದಾರೆ.

2021ರಲ್ಲಿ ನಡೆದ ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗಳ ಪೈಕಿ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಪಕ್ಷವು ತಾನು ಸ್ಪರ್ಧಿಸಿದ್ದ 291ರ ಸ್ಥಾನಗಳ ಪೈಕಿ 50 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಟ್ಟಿತ್ತು . ಇದು ಉಳಿದ ರಾಜ್ಯಗಳಲ್ಲಿ ಬೇರೆ ಪಕ್ಷಗಳು ನೀಡಿದ್ದಕ್ಕಿಂತ ಹೆಚ್ಚು. ಆದರೆ, 2019ರ ಲೋಕಸಭಾ ಚುನಾವಣೆ (ಶೇ 41) ಸಂದರ್ಭದಲ್ಲಿ ಕಣಕ್ಕಿಳಿಸಿದ ಅದೇ ಪಕ್ಷದ ಮಹಿಳಾ ಅಭ್ಯರ್ಥಿಗಳಿಗೆ ಹೋಲಿಸಿದರೆ ಕಡಿಮೆ.

ಪ್ರಣಾಳಿಕೆಯಲ್ಲೂ ಮಹಿಳಾ ಆದ್ಯತೆ

ಕಳೆದ ಕೆಲ ವರ್ಷಗಳಲ್ಲಿನ ವಿಧಾನಸಭೆ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಮಹಿಳಾ ಮತದಾರರ ಕಡೆಗೆ ವಿಶೇಷ ಗಮನ ಹರಿಸಿವೆ. ಪ್ರಣಾಳಿಕೆಗಳಲ್ಲಿ ಮಹಿಳಾ ಪರ ಯೋಜನೆಗಳನ್ನು ರಾಜಕೀಯ ಪಕ್ಷಗಳು ಸೇರಿಸಿರುವುದೇ ಇದಕ್ಕೆ ಸಾಕ್ಷಿ.

ಪಶ್ಚಿಮ ಬಂಗಾಳ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆ ವೇಳೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 'ಲೋಕ್ಖಿರ್ ಬಂಡಾರ' ಎಂಬ ಯೋಜನೆ ಅನುಷ್ಠಾನದ ಭರವಸೆ ನೀಡಿದ್ದರು. 1.6 ಕೋಟಿ ಕುಟುಂಬಗಳ ಹೆಣ್ಣುಮಕ್ಕಳಿಗೆ ಪ್ರತಿ ತಿಂಗಳು ಹಣ ನೀಡುವ ಯೋಜನೆ ಇದು. ಅಧಿಕಾರಕ್ಕೆ ಬರುತ್ತಿದ್ದಂತೆ ಆ ಯೋಜನೆ ಜಾರಿ ಮಾಡಿದರು. ಇದು ಮಹಿಳೆಯರನ್ನು ಸಬಲರಾಗಿ ಮಾಡುವ ಯೋಜನೆಯಲ್ಲ ಬದಲಾಗಿ ಪಾಕೆಟ್ ಮನಿ ನೀಡುವ ಯೋಜನೆ ಎಂದು ವಿಪಕ್ಷಗಳು ಟೀಕೆ ಮಾಡಿದ್ದವು. ಈ ವಿಷಯದಲ್ಲಿ ಬಿಜೆಪಿ ಕೂಡಾ ಹಿಂದೆ ಬಿದ್ದಿರಲಿಲ್ಲ. ದಲಿತ ಮತ್ತು ಬುಡಕಟ್ಟು ಹೆಣ್ಣು ಮಕ್ಕಳಿಗೆ ಸ್ನಾತಕೋತ್ತರ ಪದವಿ ವರೆಗೆ ಉಚಿತ ಶಿಕ್ಷಣ ನೀಡುವ ಭರವಸೆ ಸೇರಿ ಹಲವಾರು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಸೇರಿಸಿತ್ತು.

2020ರ ಬಿಹಾರ ವಿಧಾನಸಭೆ ಚುನಾವಣೆ ವೇಳೆ ಬಿಜೆಪಿ, ಆರ್‌ಜೆಡಿ ಮತ್ತು ಜೆಡಿಯು ಮಹಿಳೆಯರಿಗಾಗಿ ಹಲವು ಭರವಸೆಗಳನ್ನು ನೀಡಿದ್ದವು. ಗುತ್ತಿಗೆ ಆಧಾರಿತ 1.5 ಕೋಟಿ ಜೀವಿಕಾ ಕಾರ್ಯಕರ್ತೆಯರ ಉದ್ಯೋಗಗಳನ್ನು ಕಾಯಂಗೊಳಿಸುವುದಾಗಿ ಮತ್ತು ಅವರ ವೇತನವನ್ನು ದುಪ್ಪಟ್ಟು ಮಾಡುವುದಾಗಿ ಆರ್‌ಜೆಡಿ ಹೇಳಿತ್ತು. ಜೆಡಿಯು ಮಹಿಳಾ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಣಕ್ಕಿಳಿಸಿತ್ತು. ಆಡಳಿತದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಇರುವಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿತ್ತು.

ಅಸ್ಸಾಂ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿ ಮಹಿಳೆಯರನ್ನೇ ಕೇಂದ್ರವಾಗಿ ಇರಿಸಿಕೊಂಡು ಪ್ರಣಾಳಿಕೆ ರಚಿಸಿದ್ದವು. ತಮಿಳುನಾಡಿನಲ್ಲಿ ಉಚಿತ ವಾಷಿಂಗ್ ಮಷಿನ್, ಉಚಿತ ಸೋಲಾರ್ ಒಲೆ, ಉಚಿತ ಕೇಬಲ್ ಸಂಪರ್ಕ, ಮನೆ ಬಾಗಿಲಿಗೆ ಪಡಿತರ ನೀಡುವಂಥ ಭರವಸೆಗಳನ್ನು ಎಐಡಿಎಂಕೆ ಮಹಿಳಾ ಮತದಾರರಿಗೆ ನೀಡಿತ್ತು. ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ 40ರಷ್ಟು ಮೀಸಲಾತಿ ನೀಡುವುದು ಸೇರಿ ಮತ್ತಿತರ ಯೋಜನೆಗಳನ್ನು ಡಿಎಂಕೆ ಘೋಷಿಸಿತ್ತು.

ಮಹಿಳೆಯ ಪಾತ್ರ: ಹಲವಾರು ರಾಜ್ಯಗಳಲ್ಲಿ ಮಹಿಳಾ ಮತದಾರರ ಸಂಖ್ಯೆ ಪುರುಷ ಮತದಾರರ ಸಂಖ್ಯೆಯಷ್ಟೇ ಇದೆ. ಕೆಲವೆಡೆ ಸ್ವಲ್ಪ ಕಡಿಮೆ ಇದೆ. ಮಹಿಳಾ ಮತದಾರರು ಮತದಾನದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿರುವುದನ್ನು ಅಂಕಿಅಂಶಗಳು ಹೇಳುತ್ತವೆ.

ಪಶ್ಚಿಮ ಬಂಗಾಳದ ಒಟ್ಟು ಮತದಾರರ ಸಂಖ್ಯೆ 6.99 ಕೋಟಿ ಅವರಲ್ಲಿ ಮಹಿಳಾ ಮತದಾರರ ಸಂಖ್ಯೆ 3.4 ಕೋಟಿ. ತಮಿಳುನಾಡಿನ ಒಟ್ಟು 6.28 ಕೋಟಿ ಮತದಾರರಲ್ಲಿ 3.18 ಕೋಟಿ ಮತದಾರರು ಮಹಿಳೆಯರೇ. ಕೇರಳದ ಒಟ್ಟು 2.74 ಕೋಟಿ ಮತದಾರರ ಪೈಕಿ 1.42 ಕೋಟಿ ಮತದಾರರು ಮಹಿಳೆಯರು.

ಸ್ಟಾಲಿನ್‌ಗೆ ಇಕ್ಕಟ್ಟು: ಕಾಂಗ್ರೆಸ್ ಕಿಡಿ

ಅಭಿವೃದ್ಧಿ ಯೋಜನೆ ರಾಜ್ಯಪಾಲರ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಸ್ಟಾಲಿನ್

ಚೆನ್ನೈ: ತಮಿಳುನಾಡಿನ ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾಹಿತಿ ನೀಡುವಂತೆ ರಾಜ್ಯಪಾಲ ಆರ್.ಎನ್. ರವಿ ಕೇಳಿದ್ದು, ಇದು ರಾಜಕೀಯ ಕೋಲಾಹಲಕ್ಕೆ ಕಾರಣವಾಗಿದೆ.

ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ವಿ. ಇರೈ, ಕೆಲವು ಇಲಾಖೆಗಳ ಕಾರ್ಯದರ್ಶಿಗಳಿಗೆ ಅ.18ರಂದು ಪತ್ರ ಬರೆದಿದ್ದಾರೆ. ತಮ್ಮ ತಮ್ಮ ಇಲಾಖೆಯಡಿ ಅನುಷ್ಠಾನಗೊಳಿಸಲಾದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಲ್ಯಾಣ ಯೋಜನೆಗಳ ಮೌಲ್ಯಮಾಪನದ ವರದಿಯನ್ನು ಪಿಪಿಟಿ ಮೂಲಕ ರಾಜ್ಯಪಾಲರ ಎದುರು ಪ್ರಸ್ತುತಪಡಿಸಲು ಸಜ್ಜಾಗುವಂತೆ ತಿಳಿಸಿದ್ದಾರೆ.

ಆರ್.ಎನ್. ರವಿ, ನಾಗಾಲ್ಯಾಂಡ್‌ನಿಂದ ವರ್ಗಾವಣೆ ಯಾಗಿ ಸೆಪ್ಟೆಂಬರ್‌ನಲ್ಲಿ ತಮಿಳುನಾಡಿನ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಅಧಿಕಾರ ಸ್ವೀಕರಿಸಿದ ತಿಂಗಳಲ್ಲಿ ಅವರ ನಡೆಯು, ಆಡಳಿತಾರೂಢ ಡಿಎಂಕೆಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ತಮಿಳುನಾಡು ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆಯಿಂದ ವಿನಾಯಿತಿ ನೀಡುವ ಕುರಿತು, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ರಾಜ್ಯಪಾಲರನ್ನು ಭೇಟಿಯಾದ ನಂತರದಲ್ಲಿ ಈ ಬೆಳವಣಿಗೆ ನಡೆದಿದೆ.

ಚುನಾಯಿತ ಸರ್ಕಾರದ ಕಾರ್ಯನಿರ್ವಹಣೆಯಲ್ಲಿ 'ರಾಜ್ಯಪಾಲರ ಹಸ್ತಕ್ಷೇಪ'ವನ್ನು ಆಕ್ಷೇಪಿಸುತ್ತಲೆ ಬಂದಿದ್ದ ಡಿಎಂಕೆ, ಇದೀಗ ರಾಜ್ಯಪಾಲರ ಕೋರಿಕೆ ಹಾಗೂ ಅದಕ್ಕೆ ಸರ್ಕಾರದಿಂದ ಸಿಕ್ಕಿರುವ ಸಕಾರಾತ್ಮಕ ಸ್ಪಂದನೆಯಿಂದ ಮುಜುಗರ ಎದುರಿಸುವಂತಾಗಿದೆ.

2017ರಲ್ಲಿ ರಾಜ್ಯಪಾಲರಾಗಿದ್ದ ಬನ್ವರಿಲಾಲ್ ಪುರೋಹಿತ್ ಅವರು ತಮ್ಮ ಜಿಲ್ಲಾ ಪ್ರವಾಸದ ವೇಳೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದರು. ಆಗ, ರಾಜ್ಯಪಾಲರ ನಡೆಯನ್ನು ಟೀಕಿಸಿದ್ದ ಡಿಎಂಕೆ, ಅದನ್ನು 'ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಸ್ಪಷ್ಟ ಹಸ್ತಕ್ಷೇಪ' ಎಂದು ಹೇಳಿತ್ತು. ಜೊತೆಗೆ, ಪ್ರತಿಭಟನೆಯನ್ನೂ ನಡೆಸಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿರುವ ತಮಿಳುನಾಡು ಕಾಂಗ್ರೆಸ್ ಘಟಕದ ಮುಖ್ಯಸ್ಥ ಕೆ.ಎಸ್. ಅಳಗಿರಿ, 'ರಾಜ್ಯಪಾಲರು ಕಲ್ಯಾಣ ಯೋಜನೆಗಳ ಮಾಹಿತಿ ಕೇಳಿದ್ದಾರೆ ಎಂಬುದೇ ಅಚ್ಚರಿಯ ವಿಷಯ. ಸರ್ಕಾರದ ವಿವಿಧ ಇಲಾಖೆಗಳ ಕಾರ್ಯವೈಖರಿಯ ಮೇಲೆ ನಿಗಾ ಇಡುವುದು ರಾಜ್ಯಪಾಲರ ಕೆಲಸವಲ್ಲ. ಅವರು ರಾಷ್ಟ್ರಪತಿಗಳಿಂದ ನೇಮಕವಾದವರು. ಜನರಿಂದ ಚುನಾಯಿತರಾದವರಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾಜಿ ರಾಜ್ಯಪಾಲರಿಂದ ಆಪಾದನೆ

ಭ್ರಷ್ಟಾಚಾರ: ಸಾವಂತ್ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಪಣಜಿ: ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಅವರ ಸಂಪೂರ್ಣ ಸಂಪುಟ ರಾಜೀನಾಮೆ ನೀಡಬೇಕೆಂದು ಗೋವಾದ ವಿಪಕ್ಷಗಳು ಆಗ್ರಹಿಸಿವೆ. ಅಧಿಕಾರರೂಢ ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರದ ವಿರುದ್ಧ ಗೋವಾದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರು ಭ್ರಷ್ಟಾಚಾರದ ಗಂಭೀರ ಆರೋಪ ಹೊರಿಸಿದ ಕಾರಣ ಈ ಬೆಳವಣಿಗೆ ನಡೆದಿದೆ.

ವಿಪಕ್ಷಗಳಾದ ಟಿಎಂಸಿ ಮತ್ತು ಗೋವಾ ಫಾರ್ವರ್ಡ್‌ನ ಮುಖಂಡರು ಈಗಿನ ರಾಜ್ಯಪಾಲರಾದ ಪಿ.ಎಸ್. ಶ್ರೀಧರನ್ ಪಿಳ್ಳೈ ಅವರನ್ನು ಭೇಟಿಯಾಗಿ ಸಾವಂತ್ ರಾಜೀನಾಮೆ ಪಡೆಯುವಂತೆ ಮನವಿ ಮಾಡಿದರು. ಇದೇ ವೇಳೆ, ಸಾವಂತ್‌ರ ರಾಜೀನಾಮೆ ಆಗ್ರಹಿಸಿ ಪಣಜಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಆಮ್ ಆದ್ಮಿ ಪಕ್ಷದ 10ಕ್ಕಿಂತಲೂ ಹೆಚ್ಚು ಕಾರ್ಯಕರ್ತರನ್ನು ಬಂಧಿಸಲಾಗಿದೆ.

ಗೋವಾದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ನಡೆಯುತ್ತಿದೆ. ಮೊದಲ ಲಾಕ್‌ಡೌನ್ ವೇಳೆಯಲ್ಲಿ ಜನರಿಗೆ ಹಂಚಬೇಕಿದ್ದ ಅಗತ್ಯ ವಸ್ತುಗಳಲ್ಲೂ ಸರ್ಕಾರ ಭ್ರಷ್ಟಾಚಾರ ನಡೆಸಿದೆ ಎಂದು ಈಗ ಮೇಘಾಲಯ ರಾಜ್ಯಪಾಲರಾಗಿರುವ ಮಲಿಕ್ ಅವರು ಸುದ್ದಿ ವಾಹಿನಿಯೊಂದಕ್ಕೆ ಸೋಮವಾರ ಹೇಳಿದ್ದರು.

ಗೋವಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ದಾಮು ನಾಯಕ್ ಅವರು ಈ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ. 'ಸಾಂವಿಧಾನಿಕ ಹುದ್ದೆಯಲ್ಲಿ ಇದ್ದು ನಮ್ಮ ಸರ್ಕಾರವನ್ನು ದೂಷಿಸಬೇಡಿ. ಮೊದಲು ನಿಮ್ಮ ಹುದ್ದೆಗೆ ರಾಜೀನಾಮೆ ನೀಡಿ, ನಂತರ ಏನು ಹೇಳಬೇಕು ಎಂದಿರುವಿರೋ ಅದನ್ನು ಹೇಳಿ' ಎಂದು ಮಲಿಕ್ ಅವರಿಗೆ ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ರೈಲ್ವೆ ಇಲಾಖೆಯ ಉದ್ಯೋಗ ಆಕಾಂಕ್ಷಿಗಳಿಗೆ ಉದ್ಯೋಗ ನೇಮಕಾತಿ ಪತ್ರ ಬಂದಿದೆ. ರೈಲ್ವೆ ಇಲಾಖೆಯ ವಿವಿಧ ಉದ್ಯೋಗಗಳಿಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳಿಗೆ 'ಗುಮಾಸ್ತ' ಹುದ್ದೆಯನ್ನು ನೀಡಲಾಗಿದೆ. ಈ ಕುರಿತು ಆದೇಶ ಪತ್ರವನ್ನು ಕೂಡಾ ನೀಡಲಾಗಿದೆ. 'ನಿಮ್ಮ ಕೌಶಲ ಮತ್ತು ಹಿನ್ನೆಲೆ ನಮ್ಮ ತಂಡಕ್ಕೆ ಆಸ್ತಿ ಆಗಬಲ್ಲದು ಎಂಬ ನಂಬಿಕೆ ನಮಗಿದೆ' ಎಂದು ಪತ್ರದ ಆರಂಭದಲ್ಲಿ ಹೇಳಲಾಗಿದೆ. ಈ ಪ್ರತದ ಒಂದು ಬದಿಗೆ 'ರೈಲ್ವೆ ಸಚಿವಾಲಯ, ಭಾರತ ಸರ್ಕಾರ, ಬೆಂಗಳೂರು' ಎಂದು ಅಚ್ಚು ಮಾಡಲಾಗಿದೆ'.

ಇದು ನಕಲಿ ಪ್ರಕಟಣೆ ಎಂದು 'ಪಿಐಬಿ ಫ್ಯಾಕ್ಟ್‌ಚೆಕ್' ವಿಭಾಗ ಟ್ವೀಟ್ ಮಾಡಿದೆ. ರೈಲ್ವೆ ಇಲಾಖೆಯ ನೇಮಕಾತಿಗಾಗಿ 'ರೈಲ್ವೆಎಂಇನ್‌ಇಂಡಿಯ' ವಿವಿಧ ಹಂತಗಳಲ್ಲಿ ಪರೀಕ್ಷೆ ಆಯೋಜಿಸುತ್ತದೆ. ಪರೀಕ್ಷೆ ನಡೆದ ಬಳಿಕ ಫಲಿತಾಂಶಕ್ಕೆ ಅನುಗುಣವಾಗಿ ನೇಮಕಾತಿ ಮಾಡಲಾಗುತ್ತದೆ. ನೇಮಕಾತಿ ಕುರಿತ ಸೂಚನೆಗಳನ್ನು ರೈಲ್ವೆ ನೇಮಕಾತಿ ಮಂಡಳಿ (ಆರ್‌ಆರ್‌ಬಿಎಸ್) ಮತ್ತು ರೈಲ್ವೆ ನೇಮಕಾತಿ ಘಟಕದ (ಆರ್‌ಆರ್‌ಸಿಎಸ್) ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗುವುದು. ಈಗ ಬಂದಿರುವ ಆದೇಶ ಪತ್ರ ನಕಲಿ ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಹೇಳಿದೆ.

ಗುಂಡಣ್ಣ

ದಿನ ಭವಿಷ್ಯ

ಬುಧವಾರ ಅಕ್ಟೋಬರ್ 27, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಸ್ವಾತಿ ಸಪ್ತಮೀ ಗಂ. 60-00 (ದಿನಪೂರ್ತಿ) ಬುಧವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 59-0 (ಬೆ.ಝಾ 5-54) ಸಿದ್ಧ ನಾಮ ಯೋಗ ಗಂ. 43-31 ಭದ್ರೆ ಕರಣ ಗಂ. 31-14 ವಿಷ ಗಂ. 26-14 ಅಮೃತ ಗಂ. 52-14 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-14 ಸೂರ್ಯಾಸ್ತ: 5-53 ಅದೃಷ್ಟ ಸಂಖ್ಯೆ 3

ಮೇಷ: ಸಂಬಂಧಿಗಳಿಂದಲೇ ಬರಬಹುದಾದ ನಿಷ್ಠೂರದ ಮಾತುಗಳಿಗೆ ತಲೆ ಕೆಡಿಸಿಕೊಳ್ಳದೆ ಶಾಂತಚಿತ್ತರಾಗಿರಿ. ನಿಮ್ಮ ಆಶೋತ್ತರಗಳು ಸಮಾಧಾನದಿಂದಲೇ ನೆರವೇರಲಿದೆ.

ವೃಷಭ: ಮೊದಲು ಸೋಲಾಗಿ ಕಂಡರೂ ಗೆಲುವಿನ ಹಾದಿಯಲ್ಲಿದ್ದೀರಿ. ತಾಳ್ಮೆ, ಸಹನೆಯಿಂದ ವ್ಯವಹರಿಸಿದಲ್ಲಿ ನಿಧಾನವಾಗಿ ನಿಮ್ಮ ಇಷ್ಟಾರ್ಥಗಳು ನೆರವೇರಲಿವೆ. ವಾಹನ ಚಾಲನೆಯಲ್ಲಿ ಎಚ್ಚರಿಕೆ ವಹಿಸಿ.

ಮಿಥುನ: ನಿಮ್ಮ ಗುರಿಸಾಧನೆಯಲ್ಲಿ ಸ್ನೇಹಿತ ವರ್ಗದ ಬೆಂಬಲ ಲಭ್ಯವಾಗಲಿದೆ. ವಿವಿಧ ಮೂಲಗಳಿಂದ ಆದಾಯವು ಬಂದು ಕಾರ್ಯ ಸಾಧನೆಗೆ ಸಹಕಾರಿಯಾಗಲಿದೆ.

ಕರ್ಕಾಟಕ: ಕಲಾವಿದರು, ಪ್ರತಿಭಾವಂತರುಗಳಿಗೆ ವಿಶೇಷವಾದ ಗೌರವ ಮಾನ್ಯತೆಗಳು ಕಂಡುಬರುತ್ತಿದೆ. ಹಿತ ಶತ್ರುಗಳ ಬಗ್ಗೆ ಜಾಗರೂಕರಾಗಿರುವುದು ಉತ್ತಮ.

ಸಿಂಹ: ಯಶಸ್ಸಿನ ಹಾದಿಯಲ್ಲಿ ಅಡೆತಡೆಗಳು ಕಂಡುಬರಲಿದೆ. ಎಚ್ಚರಿಕೆಯ ನಡೆಯಿಂದ ಎಲ್ಲವೂ ನಿಮ್ಮಿಚ್ಛೆಯಂತೆ ನಡೆಯಲಿದೆ. ಶತ್ರುಗಳೂ ನಿಮ್ಮ ಉನ್ನತಿಯನ್ನು ಕಂಡು ಬೆರಗಾಗುವಂತಹ ದಿನವಾಗಲಿದೆ.

ಕನ್ಯಾ: ಇಂದು ಅತ್ಯಂತ ಹೆಚ್ಚಿನ ಕಾರ್ಯಗಳನ್ನು ನಿಭಾಯಿಸುವ ಅನಿವಾರ್ಯತೆ ತಲೆದೋರಲಿದೆ. ದಿನವಿಡೀ ಬಿಡುವಿಲ್ಲದ ಕಾರ್ಯಬಾಹುಳ್ಯದಿಂದಾಗಿ ದೇಹಾಯಾಸದಿಂದ ಬಳಲುವಿರಿ.

ತುಲಾ: ವಿನಾಕಾರಣ ಗೊಂದಲದ ಮಾನಸಿಕ ಸ್ಥಿತಿಯಲ್ಲಿ ವ್ಯವಹರಿಸುವ ಸಾಧ್ಯತೆ ಮನೆಯವರೊಡನೆ ಚರ್ಚಿಸಿ ನಿರ್ಧಾರಕ್ಕೆ ಬರುವುದು ಉತ್ತಮ ಫಲ ನೀಡುವುದು.

ವೃಶ್ಚಿಕ: ಎಲ್ಲ ದಿಕ್ಕುಗಳಿಂದಲೂ ಸಹಾಯ ಹಸ್ತ ದೊರೆತು ಕೆಲಸ ಕಾರ್ಯಗಳು ತ್ವರಿತಗತಿಯಲ್ಲಿ ಸಾಗುವವು. ಯಾವುದೇ ಉದ್ವೇಗಕ್ಕೆ ಒಳಗಾಗದೇ ಶಾಂತತೆ ಕಾಪಾಡಿಕೊಳ್ಳಿ.

ಧನು: ಪರಿಸರದ ಒಪ್ಪ ಓರಣಕ್ಕಾಗಿ ಶ್ರಮವಹಿಸುವಿರಿ. ಹೊಸ ಪರಿಸರವನ್ನು ಸೃಷ್ಟಿಸಿ ಸಂತಸ ಕಾಣಲಿದ್ದೀರಿ. ಆರ್ಥಿಕ ಚಿಂತೆಯಿಂದ ದೂರವಾಗಿ ಸುಖದ ದಾರಿಯತ್ತ ಮೊಗಮಾಡುವಿರಿ.

ಮಕರ: ಮಾನಸಿಕ ಸ್ಥೈರ್ಯದಿಂದಾಗಿ ಮುನ್ನುಗ್ಗಿ ಕೆಲಸ ಕಾರ್ಯಗಳಲ್ಲಿ ಭಾಗಿಯಾಗುವಿರಿ. ಹಿರಿಯರಿಂದ ಅನುಕೂಲಕರ ಸಹಕಾರ ದೊರಕುವುದು.

ಕುಂಭ: ಹಣಕಾಸಿನ ವಿಚಾರದಲ್ಲಿ ಸ್ವಲ್ಪಮಟ್ಟಿನ ಜಾಗೃತೆ ವಹಿಸಿ. ಖರ್ಚಿನ ವಿಷಯದಲ್ಲಿ ಹಿಡಿತ ಅನಿವಾರ್ಯ. ಸಣ್ಣಪುಟ್ಟ ತೊಂದರೆಗಳು ಎದುರಾಗುವ ಸಾಧ್ಯತೆ ಇದ್ದರೂ ಚಿಂತೆ ಇಲ್ಲ.

ಮೀನ: ಸಲ್ಲದ ಆರೋಪಗಳಿಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ನಿಮ್ಮ ನಿಲುವಿಗೆ ಬದ್ಧರಾಗಿ ಪ್ರಾಮಾಣಿಕವಾಗಿ ವ್ಯವಹರಿಸಿ ಜಯ ನಿಮ್ಮದಾಗಿಸಿಕೊಳ್ಳುವಿರಿ.

ನಿಮ್ಮ ಜನ್ಮದಿನ 27-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಹೊಸ ಚಿಂತನೆಯನ್ನು ಮಾಡುವ ನೀವು ಸಮಾಜದಲ್ಲಿ ಭಿನ್ನ ರೀತಿಯಲ್ಲಿ ಕಾಣಿಸಿಕೊಳ್ಳುವಿರಿ. ಎಲ್ಲ ರೀತಿಯಲ್ಲಿಯೂ ನೀವೊಬ್ಬ ಗುರುತಿಸಿಕೊಳ್ಳುವ ವ್ಯಕ್ತಿಯಾಗಿ, ಜನಮಾನಸದಲ್ಲಿ ಬೆಳಗುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಭಯಮೂಲವಾದ ಭಕ್ತಿ

ಕತ್ತಲೆಯೊಳೇನನೋ ಕಂಡು ಬೆದರಿದ ನಾಯಿ|
ಎತ್ತಲೋ ಸಖನೋರ್ವನಿಹನೆಂದು ನಂಬಿ||
ಕತ್ತೆತ್ತಿ ಮೋಳಿಡುತ ಬೊಗಳಿ ಹಾರಾಡುವುದು|
ಭಕ್ತಿಯಂತೆಯೆ ನಮದು – ಮಂಕುತಿಮ್ಮ ||484||

ಪದ-ಅರ್ಥ: ಕತ್ತಲೆಯೊಳೇನನೋ = ಕತ್ತಲೆಯೊಳು + ಏನನೋ, ಸಖನೋರ್ವನಿಹನೆಂದು = ಸಖನು + ಓರ್ವನು (ಒಬ್ಬನು) + ಇಹನೆಂದು (ಇದ್ದಾನೆಂದು), ಮೋಳಿಡುತ = ಊಳಿಡುತ್ತ, ಕೂಗುತ್ತ.

ವಾಚ್ಯಾರ್ಥ: ಕತ್ತಲೆಯಲ್ಲಿ ಏನನ್ನೋ ಕಂಡು ಹೆದರಿದ ನಾಯಿ, ತನ್ನ ಸ್ನೇಹಿತ ಹತ್ತಿರದಲ್ಲಿಯೇ ಎಲ್ಲೋ ಇದ್ದಾನೆ ಎಂದು ನಂಬಿಕೊಂಡು, ಕತ್ತನ್ನು ಮೇಲಕ್ಕೆತ್ತಿ, ಊಳಿಡುತ್ತಾ, ಬೊಗಳಿ ಹಾರಾಡುತ್ತದೆ, ಧೈರ್ಯ ತಂದುಕೊಳ್ಳುತ್ತದೆ. ನಮ್ಮ ಭಕ್ತಿಯೂ ಅದೇ ತೆರನಾದದ್ದು.

ವಿವರಣೆ: ಭಕ್ತರಲ್ಲಿ ನಾಲ್ಕು ತರಹ. 1. ಆರ್ತಭಕ್ತರು 2. ಅರ್ಥಾರ್ಥಿ ಭಕ್ತರು, 3. ಜಿಜ್ಞಾಸು ಭಕ್ತರು ಮತ್ತು 4. ಜ್ಞಾನಿ ಭಕ್ತರು. ಸದಾಕಾಲ ತಮ್ಮ ಕಷ್ಟ, ನಷ್ಟ, ಕಾರ್ಪಣ್ಯಗಳನ್ನು ಹೇಳಿಕೊಂಡು ಭಯದಿಂದ ಅವುಗಳ ನಿವಾರಣೆಗೆ ದೇವರ ಮೊರೆ ಹೋಗುವವರು ಆರ್ತಭಕ್ತರು. ಲೌಕಿಕ ಸುಖಕ್ಕಾಗಿ ಹಣಪ್ರಾಪ್ತಿಗಾಗಿ ದೇವರನ್ನು ಬೇಡುವವರು ಅರ್ಥಾರ್ಥಿಗಳು. ಜೀವನಗುರಿಯನ್ನು ಅರಸಲು ದೇವರನ್ನು ಬೇಡುವವರು ಜಿಜ್ಞಾಸುಗಳು. ಜೀವ-ಜಗತ್ತು-ಭಗವಂತ ಇವುಗಳ ಸಂಬಂಧಿತವಾದ ಜ್ಞಾನಕ್ಕಾಗಿ, ಸರ್ವವಸ್ತುಗಳಲ್ಲಿ ಭಗವಂತನನ್ನೇ ಕಾಣುತ್ತ ಪ್ರಾರ್ಥಿಸುವವರು ಜ್ಞಾನಿಗಳು. ಈ ನಾಲ್ಕು ಬಗೆಗಳಲ್ಲಿ ಮೊದಲನೆಯವರೆ ಹೆಚ್ಚಿನವರು. ಭಕ್ತಿ ಮೊದಲಿಗೆ ಭಯದಿಂದ ಪ್ರಾರಂಭವಾಗುತ್ತದೆ. ಈ ಅದ್ಭುತ ಪ್ರಪಂಚವನ್ನು, ವಿಶ್ವಜೀವನದಲ್ಲಿ ಬಿರುಮಳೆ, ಬಿರುಗಾಳಿ, ಬಿರುಬಿಸಿಲು, ಸಿಡಿಲು, ಭೂಕಂಪ, ಪ್ರಳಯದ ಪ್ರವಾಹ, ಸಾಂಕ್ರಾಮಿಕ ರೋಗಗಳಿಂದ ಜನರು ಹುಳಗಳಂತೆ ಸಾಯುವುದು, ಇವುಗಳನ್ನು ಕಂಡ ಮನುಷ್ಯ ತನ್ನ ಅಸಹಾಯಕತೆಯನ್ನು ಮನಗಂಡು ಭಯಭೀತನಾಗುತ್ತಾನೆ. ಯಾವ ಶಕ್ತಿ ಇದನ್ನು ಮಾಡುತ್ತಿದೆಯೋ, ಆ ಶಕ್ತಿಯನ್ನೇ ಪ್ರಾರ್ಥಿಸಿ ಆಪತ್ತುಗಳಿಂದ ಪಾರಾಗಲು ಯೋಚಿಸುತ್ತಾನೆ. ಆದ್ದರಿಂದ ನಾವು ಭಕ್ತಿ ಎನ್ನುವ ವಿಷಯದಲ್ಲಿ ಭಯದ ಪಾತ್ರವೆ ದೊಡ್ಡದು. ನಮ್ಮ ಬಹುಮಂದಿಯ ದೈವಭಕ್ತಿ ಕೇವಲ ದೈವಭೀತಿಯೇ. ಅದಕ್ಕಾಗಿಯೇ ಜನರು ದೇವರೊಂದಿಗೆ ವ್ಯಾಪಾರಕ್ಕಿಳಿಯುತ್ತಾರೆ.

'ದೇವರೆ, ನನ್ನ ಮಗನಿಗೆ ಮೆಡಿಕಲ್ ಸೀಟು ಸಿಕ್ಕಿದರೆ ನಿನಗೆ ಬೆಳ್ಳಿಯ ತೊಟ್ಟಿಲು ಕೊಡಿಸುತ್ತೇನೆ'. 'ನನ್ನ ಮಗ ಡ್ರಗ್ ಹಗರಣದಿಂದ ಪಾರಾಗಿಬಂದರೆ ಸರ್ವಸೇವೆ ಮಾಡುತ್ತೇನೆ'. 'ನಾನೀಗ ಸಿಕ್ಕುಹಾಕಿಕೊಂಡಿರುವ ಅತ್ಯಾಚಾರದ ಪ್ರಕರಣದಿಂದ ಸುಸೂತ್ರವಾಗಿ ಹೊರಗೆ ಬಂದರೆ ನಿನಗೊಂದು ದೇವಸ್ಥಾನ ಕಟ್ಟಿಸುತ್ತೇನೆ'. ಇದು ಮುಯ್ಯಿಗೆ ಮುಯ್ಯಿ. ಸರಕಿಗೆ ಪ್ರತಿಸರಕು, ಬಹುಮಂದಿಯ ಭಕ್ತಿ. ಒಬ್ಬ ದೇವರಿಂದ ಪ್ರತಿಫಲ ದೊರಕದಿದ್ದರೆ ಮತ್ತೊಬ್ಬ ದೇವರ ಮೊರೆ. ಇದು ಭೀತಿಮೂಲವಾದ ಭಕ್ತಿ. ದೇವರು ಎಲ್ಲಿ ತೊಂದರೆ ಮಾಡಿಯಾನೋ ಎಂದು ಹೆದರಿ ಮಾಡುವ ಕ್ರಿಯೆ. ಕಗ್ಗ ಈ ಭೀತಿ ಮೂಲವಾದ ಭಕ್ತಿಯನ್ನು ಸುಂದರವಾದ ಉಪಮೆಯೊಂದಿಗೆ ತಿಳಿಸುತ್ತದೆ. ದಟ್ಟ ಗಾಢಾಂಧಕಾರದ ರಾತ್ರಿ. ಮಲಗಿದ್ದ ನಾಯಿಗೆ ಏನೋ ಅಲುಗಾಡಿದಂತೆ ಕಂಡಿತು. ಭಯವಾಯಿತು. ಜೊತೆಗಾರರು ಯಾರೂ ಹತ್ತಿರದಲ್ಲಿಲ್ಲ. ಪಕ್ಕದ ಬೀದಿಯಲ್ಲಾದರೂ ಸ್ನೇಹಿತನೊಬ್ಬನಿರಬಹುದೆಂದು ನಂಬಿ, ಕತ್ತೆತ್ತಿ ಊಳಿಟ್ಟು, ಬೊಗಳಿ ಹಾರಾಡುವುದು. ಹತ್ತಿರದ ಬೀದಿಯ ನಾಯಿಯ ಮರುಧ್ವನಿ ಬಂದರೆ ಅದಕ್ಕೆ ಧೈರ್ಯ. ಅದು ಕೂಗುವುದು ಮತ್ತೊಬ್ಬರನ್ನು ಎಚ್ಚರಿಸಲಿಕ್ಕಲ್ಲ. ತನ್ನ ಭಯ ಕಳೆದುಕೊಳ್ಳಲು! ನಮ್ಮ ಭಕ್ತಿಯೂ ಹಾಗೆಯೇ.

❖

ಪದಬಂಧ 4760

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಿಳಿಗೇಡಿ ಇಲ್ಲಿದ್ದಾನೆ (3)
4.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
6.ನೂರು ವರ್ಷಗಳ ಕಾಲ ಬದುಕುವವನು (4)
8.ತಿರುಗಿಸಿ ನೋಡಿದರೂ ಇದು ಹೊಸತು (3)
11.ಬಣ್ಣದ ದಾರಗಳಿಂದ ಬಟ್ಟೆ ಮೇಲೆ ಮಾಡಿದ ಹೆಣಿಗೆ (3)
13.ಹಸುವಿನ ಬಳಿಯಿರುವ ಎಳೆಮಗು (4)
17.ಇದು ಕೊಬ್ಬಿದ ಆನೆ (4)
18.ಲೀಲಾಜಾಲವಾಗಿ ಹಾಕಿದ ಹರಾಜು (3)

ಮೇಲಿಂದ ಕೆಳಕ್ಕೆ
1.ಸುಲಭವಾಗಿ ಬಿಡಿಸಲಾರದ ಗಂಟು (3)
2.ಮಾವನವರ ಆದಾಯ! (4)
3.ಕಡಿಮೆ ಆಯುಸ್ಸುಳ್ಳವನು (3)
5.ಪರವಶನಾಗಿರುವಾಗ ಆಧೀನತೆ (2)
7.ಕಾರಿನಲ್ಲಿ ಕುಳಿತು ಆಡಿದ ಬೇಟೆ (3)
9.ನಡುವೆಯೇ ಆರಂಭವಾಗಿರುವ ಕಂಪನ (3)
10.ವಿವಾದವಿಲ್ಲದೇ ನಡೆದಿರುವ ಮದುವೆ (3)
12.ಎಳ್ಳು ನೀರು ಬಿಡುವಿಕೆ (4)
14.ಮಪ್ತಿಯಲ್ಲಿದ್ದಾಗ ಅವರಿಸಿದ ಗಾಢನಿದ್ರೆ (3)
15.ಸುಗಮವಾಗಿ ಕಿತ್ತು ತಂದಿರುವ ಹೂ (2)
16.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ (3)



4759ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಜಗಜಾಂತರ 4.ಸತ್ಯಾಗ್ರಹಿ 5.ಗಗನ 7.ಕಡಿತ 10.ನೆನಪು 12.ರಿಪೇರಿ 13.ಬಾಲರವಿ 15.ಪ್ರವಾಸಿಮಂದಿರ

ಮೇಲಿಂದ ಕೆಳಕ್ಕೆ: 1.ಅಜಗರ 2.ರಸ 3.ಬಹಿಷ್ಕಾರ 6.ನಡುಮನೆ 7.ಕದಪು 8.ತರಕಾರಿ 9.ಆಜೂಬಾಜು 11.ಹರಿಕಾರ 14.ವಿಪ್ರ

ಸುಡೊಕು 5146

6		4				7		8
	9	5		7	1			
1				4	8			6
		1				9		
			3	9	7		5	4
7		9				8		
5				6		4		
4					3		2	
	6				4		7	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5145 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

₹ 1,200 ಕೋಟಿ ಬಂಡವಾಳ ಸಂಗ್ರಹಿಸಲಿದೆ ಫಿನೊ ಬ್ಯಾಂಕ್

ಮುಂಬೈ (ಪಿಟಿಐ): ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಒಟ್ಟು ₹ 1,200 ಕೋಟಿ ಬಂಡವಾಳ ಸಂಗ್ರಹ ಮಾಡುವುದಾಗಿ ಫಿನೊ ಪೇಮೆಂಟ್ಸ್ ಬ್ಯಾಂಕ್ ಮಂಗಳವಾರ ಪ್ರಕಟಿಸಿದೆ. ಇದರಲ್ಲಿ ಹೊಸದಾಗಿ ಬಿಡುಗಡೆ ಮಾಡಲಾಗುವ ₹ 300 ಕೋಟಿ ಮೌಲ್ಯದ ಷೇರುಗಳೂ ಸೇರಿವೆ.

ದೇಶದ ಷೇರು ಮಾರುಕಟ್ಟೆಗಳಲ್ಲಿ ನೋಂದಾಯಿತ ಆಗಲಿರುವ ಮೊದಲ ಪೇಮೆಂಟ್ಸ್ ಬ್ಯಾಂಕ್ ಇದಾಗಲಿದೆ. ಕಂಪನಿಯು ಪ್ರತಿ ಷೇರಿಗೆ ₹ 560 – 570 ಬೆಲೆ ನಿಗದಿ ಮಾಡಿದೆ. ಐಪಿಒಗೆ ಅರ್ಜಿ ಸಲ್ಲಿಸಲು ಹೂಡಿಕೆದಾರರಿಗೆ ಅಕ್ಟೋಬರ್ 29ರಿಂದ ನವೆಂಬರ್ 2ರವರೆಗೆ ಅವಕಾಶ ಇರಲಿದೆ.

ಗ್ರಾಹಕರಿಗೆ ಉಚಿತವಾಗಿ ಏನನ್ನಾದರೂ ನೀಡುವ ವಿಚಾರದಲ್ಲಿ, ಅದಕ್ಕಾಗಿ ಹಣವನ್ನು ವಿಪರೀತವಾಗಿ ಖರ್ಚು ಮಾಡುವುದರಲ್ಲಿ ಕಂಪನಿಗೆ ನಂಬಿಕೆ ಇಲ್ಲ ಎಂದು ಫಿನೊ ಪೇಮೆಂಟ್ಸ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ರಿಷಿ ಗುಪ್ತ ಹೇಳಿದ್ದಾರೆ.

ತಮ್ಮ ಬ್ಯಾಂಕ್ ಒಂದು ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಲಾಭದಲ್ಲಿ ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಭಾರತ್ ಪೆಟ್ರೋಲಿಯಂ, ಐಸಿಐಸಿಐ ಸಮೂಹ, ಬ್ಲಾಕ್‌ಸ್ಟೋನ್ ಈ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಿವೆ. ಈ ಬ್ಯಾಂಕ್ ಪ್ರತಿದಿನ 6,200 ಹೊಸ ಖಾತೆಗಳನ್ನು ತೆರೆಯುತ್ತಿದೆ. ಇಲ್ಲಿ ಖಾತೆ ಹೊಂದಿರುವವರು ವಾರ್ಷಿಕ ₹ 499 ನಿರ್ವಹಣಾ ಶುಲ್ಕ ಪಾವತಿಸಬೇಕು.

ಐಪಿಒ ಮೂಲಕ ಷೇರು ಖರೀದಿಸುವವರು ಕನಿಷ್ಠ 25 ಷೇರುಗಳಿಗೆ ಬಿಡ್ ಸಲ್ಲಿಸಬೇಕು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,125
ಇಂದಿನ ಅಂತ್ಯ	18,268
▲	143
ದಿನದ ಗರಿಷ್ಠ	18,310

ವಿನಿಮಯ ದರ

$ ಡಾಲರ್	74.96
£ ಪೌಂಡ್	103.37
€ ಯುರೊ	87.05
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1415 (1430)
ಸೋಯಾ (ರಿಫೈನ್ಡ್)	₹1300 (1303)
ಸೂರ್ಯಕಾಂತಿ (ರಿಫೈನ್ಡ್)	₹1345 (1360)
ಪಾಮೋಲಿನ್	₹1200 (1200)

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸಂಕ್ಷಿಪ್ತ ಸುದ್ದಿ

ಕೋಟಕ್ ಮಹೀಂದ್ರ ಬ್ಯಾಂಕ್ ಲಾಭ ಶೇ 7 ಇಳಿಕೆ

ನವದೆಹಲಿ (ಪಿಟಿಐ): ಕೋಟಕ್ ಮಹೀಂದ್ರ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 2,032 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭವು ಶೇಕಡ 7ರಷ್ಟು ಇಳಿಕೆ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ₹ 2,184 ಕೋಟಿ ಇತ್ತು.

ಒಟ್ಟು ವರಮಾನವು ₹ 8,252 ಕೋಟಿಯಿಂದ ₹ 8,408 ಕೋಟಿಗೆ ಏರಿಕೆ ಆಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ. ವಸೂಲಾಗದ ಸಾಲದ ಸರಾಸರಿ (ಜಿಎನ್‌ಪಿಎ) ಪ್ರಮಾಣವು ಶೇ 2.55ರಿಂದ ಶೇ 3.19ಕ್ಕೆ ಏರಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 0.64 ರಿಂದ ಶೇ 10.6ಕ್ಕೆ ಏರಿಕೆ ಕಂಡಿದೆ.

ಐಪಿಪಿಬಿ, ಎಚ್‌ಡಿಎಫ್‌ಸಿ ಒಪ್ಪಂದ

ನವದೆಹಲಿ (ಪಿಟಿಐ): ಗೃಹ ಸಾಲ ನೀಡುವ ಉದ್ದೇಶದಿಂದ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (ಐಪಿಪಿಬಿ) ಮತ್ತು ಎಚ್‌ಡಿಎಫ್‌ಸಿ ಲಿಮಿಟೆಡ್ ಒಪ್ಪಂದ ಮಾಡಿಕೊಂಡಿವೆ.

ಎಚ್‌ಡಿಎಫ್‌ಸಿ ಲಿಮಿಟೆಡ್‌ನ ಗೃಹಸಾಲ ಉತ್ಪನ್ನಗಳು ಮತ್ತು ಅದರ ಪರಿಣತಿಯನ್ನು ಐಪಿಪಿಬಿ ದೇಶದಾದ್ಯಂತ ಇರುವ ತನ್ನ ಗ್ರಾಹಕರಿಗೆ ನೀಡುವ ಗುರಿಯನ್ನು ಹೊಂದಿದೆ ಎಂದು ಎಚ್‌ಡಿಎಫ್‌ಸಿ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಸಾಲ ನೀಡುವುದಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಮತ್ತು ಕಾನೂನು ಮೌಲ್ಯಮಾಪನಗಳು, ಪ್ರಕ್ರಿಯೆ ಮತ್ತು ವಿತರಣೆ ಕಾರ್ಯಗಳನ್ನು ಎಚ್‌ಡಿಎಫ್‌ಸಿ ಲಿಮಿಟೆಡ್ ನಿರ್ವಹಣೆ ಮಾಡಲಿದೆ.

ಬಹಳಷ್ಟು ಗ್ರಾಹಕರಿಗೆ ತಮ್ಮ ಪ್ರದೇಶದಲ್ಲಿ ಗೃಹಸಾಲ ಒದಗಿಸುವ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆ ಇಲ್ಲ. ಹೀಗಾಗಿ, ಗ್ರಾಹಕರ ಎಲ್ಲ ರೀತಿಯ ಬ್ಯಾಂಕಿಂಗ್ ಅಗತ್ಯಗಳಿಗೆ ಐಪಿಪಿಬಿ ವೇದಿಕೆಯಾಗಲಿದೆ ಎಂದು ಐಪಿಪಿಬಿನ ವ್ಯವಸ್ಥಾಪಕ ನಿರ್ದೇಶಕ ಜೆ. ವೆಂಕಟರಾಮು ಹೇಳಿದ್ದಾರೆ.

ಕಲಬುರಗಿ ಎಫ್‌ಪಿಒ ಜೊತೆ ಫ್ಲಿಪ್‌ಕಾರ್ಟ್ ಒಪ್ಪಂದ

ಬೆಂಗಳೂರು: ಇ–ವಾಣಿಜ್ಯ ವಲಯದ ಪ್ರಮುಖ ಕಂಪನಿಯಾಗಿರುವ ಫ್ಲಿಪ್‌ಕಾರ್ಟ್, ಕಲಬುರಗಿಯ ಕೃಷಿ ಉತ್ಪಾದಕ ಸಂಸ್ಥೆಯಾಗಿರುವ (ಎಫ್‌ಪಿಒ) 'ನಿಸರ್ಗ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್' ಜೊತೆ ಒಪ್ಪಂದ ಮಾಡಿಕೊಂಡಿದೆ.

ಈ ಪಾಲುದಾರಿಕೆಯ ಕಾರಣದಿಂದಾಗಿ ಫ್ಲಿಪ್‌ಕಾರ್ಟ್ ಕಂಪನಿಗೆ, ಈ ಎಫ್‌ಪಿಒದ ಸದಸ್ಯ ರೈತರು ಬೆಳೆಯು ಬೆಳೆಗಳನ್ನು ನೇರವಾಗಿ ಖರೀದಿಸಲು ಸಾಧ್ಯವಾಗುತ್ತದೆ. ಅಲ್ಲದೆ, ಈ ಎಫ್‌ಪಿಒದ ರೈತರಿಗೆ ತನ್ನ ಇ–ವಾಣಿಜ್ಯ ವೇದಿಕೆ ಮೂಲಕ ಮಾರುಕಟ್ಟೆ ಕಲ್ಪಿಸಲು ಸಾಧ್ಯವಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

'ಹಲವು ವರ್ಷಗಳಿಂದ ರೈತ ಉತ್ಪಾದಕ ಸಂಸ್ಥೆಗಳ (ಎಫ್‌ಪಿಒ) ಜೊತೆಗಿನ ಸಹಭಾಗಿತ್ವಕ್ಕೆ ಚುರುಕು ನೀಡಲು ನಾವು ಆದ್ಯತೆ ನೀಡಿದ್ದೇವೆ. ಇದು ಕೃಷಿಕರಿಗೆ ಇ-ವಾಣಿಜ್ಯ ವೇದಿಕೆಗಳನ್ನು ಬಳಸಿಕೊಂಡು ತಮ್ಮ ಲಾಭ ಹೆಚ್ಚಿಸಿಕೊಳ್ಳಲು ಸಹಾಯ ಮಾಡುತ್ತದೆ. ರೈತರಿಗೆ ಇದು ದೊಡ್ಡ ಮಾರುಕಟ್ಟೆ ಅವಕಾಶವನ್ನು ಒದಗಿಸುತ್ತದೆ' ಎಂದು ಫ್ಲಿಪ್‌ಕಾರ್ಟ್ ಕಂಪನಿಯ ದಿನಸಿ ವಿಭಾಗದ ಉಪಾಧ್ಯಕ್ಷೆ ಸ್ಮೃತಿ ರವಿಚಂದ್ರನ್ ಅವರು ಹೇಳಿದ್ದಾರೆ.

ಮುಂದಿನ ತಿಂಗಳುಗಳಲ್ಲಿ ಫ್ಲಿಪ್‌ಕಾರ್ಟ್ ತನ್ನ ವೇದಿಕೆ ಮೂಲಕ ಕಲಬುರಗಿಯ ತೊಗರಿ, ಕೊಪ್ಪಳದ ಭತ್ತ ಹಾಗೂ ಅಕ್ಕಿಯನ್ನು ಗ್ರಾಹಕರಿಗೆ ಲಭ್ಯವಾಗುವಂತೆ ಮಾಡುವ ಉದ್ದೇಶ ಇರಿಸಿಕೊಂಡಿದೆ.

'ಕುಶಾಕ್' ಸಂಭ್ರಮ

ಬೆಂಗಳೂರು: ಸ್ಕೋಡಾ ಆಟೊ ಇಂಡಿಯಾ ಕಂಪನಿಯು ವಿಶೇಷ ಗ್ರಾಹಕ ಡ್ರೈವ್ ಮೂಲಕ ತನ್ನ ಕುಶಾಕ್ ವಾಹನದ ಯಶಸ್ಸಿನ ಸಂಭ್ರಮವನ್ನು ಬೆಂಗಳೂರಿನಲ್ಲಿ ಆಚರಿಸಿತು. ಕುಶಾಕ್ ಬಿಡುಗಡೆ ಆದಾಗಿನಿಂದ ಈವರೆಗೆ 10 ಸಾವಿರಕ್ಕೂ ಅಧಿಕ ಬುಕಿಂಗ್ ಆಗಿದೆ.

ನಗರದ ಎಂ.ಜಿ. ರಸ್ತೆಯಲ್ಲಿರುವ ತಾಜ್ ಹೋಟೆಲ್‌ನಿಂದ ಶಿಲ್ಪಾಂದರ ರೆಸಾರ್ಟ್‌ವರೆಗೆ ಈ ವಿಶೇಷ ಡ್ರೈವ್ ಆಯೋಜಿಸಲಾಗಿತ್ತು. 10 ಕಾರುಗಳಲ್ಲಿ, ಪ್ರತಿ ಕಾರುಗಳಲ್ಲಿ ತಲಾ ನಾಲ್ವರು ಪ್ರಯಾಣಿಕರು ಹಾಗೂ ಸ್ಕೋಡಾ ಮತ್ತು ಡೀಲರ್‌ಶಿಪ್‌ನ 10 ಸದಸ್ಯರು ಪ್ರಯಾಣಿಸಿದರು.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಶಂಕರೇಗೌಡ, ಕನಕಪುರ

- **ಪ್ರಶ್ನೆ:** ನನ್ನೊಡನೆ ಇರುವ 21 ಎಕರೆ ಕೃಷಿ ಜಮೀನಲ್ಲಿ 12 ಎಕರೆ ಜಮೀನನ್ನು ಒಂದು ಕಂಪನಿಗೆ ಮಾರಾಟ ಮಾಡಬೇಕೆಂದಿದ್ದೇನೆ. ಇದರಿಂದ ಸುಮಾರು ₹ 3 ಕೋಟಿ ಬರಬಹುದು. ಇದು ಪಿತ್ರಾರ್ಜಿತ ಆಸ್ತಿ. ನನಗೆ ನಾಲ್ಕು ಜನ ಮಕ್ಕಳಿದ್ದಾರೆ. ಕೃಷಿ ಜಮೀನು ಮಾರಾಟ ಮಾಡಿದಾಗ ಬಂಡವಾಳ ವೃದ್ಧಿ ತೆರಿಗೆ ಬರುವುದಿಲ್ಲ ಅಂತ ಕೇಳಿದ್ದೇನೆ. ತೆರಿಗೆ ಬರುತ್ತದೆ ಎಂದಾದರೆ, ತೆರಿಗೆ ಉಳಿಸಲು ಮಾರ್ಗದರ್ಶನ ಮಾಡಿ. ಹೀಗೆ ಮಾರಾಟ ಮಾಡಿ ಬರುವ ಹಣ ಮಕ್ಕಳ ಮದುವೆಗೆ ವಿನಿಯೋಗಿಸಬಹುದೇ?

ಉತ್ತರ: ನಿಮ್ಮ ಕೃಷಿ ಜಮೀನು ಕನಕಪುರಕ್ಕೆ ಸಮೀಪ ಇರುವುದರಿಂದ ಮಾರಾಟ ಮಾಡಿ ಬರುವ ಹಣಕ್ಕೆ ಬಂಡವಾಳ ವೃದ್ಧಿ ತೆರಿಗೆ ಬಂದೇ ಬರುತ್ತದೆ. ಇದೇ ವೇಳೆ, 2001ರ ಏಪ್ರಿಲ್ 1ರಂದು ನಿಮ್ಮ ಜಮೀನಿನ ಸರ್ಕಾರಿ ಬೆಲೆ ತಿಳಿದು ಮಾರಾಟ ಮಾಡುವ ವರ್ಷದವರೆಗಿನ ಹಣದುಬ್ಬರದ ಲೆಕ್ಕಾಚಾರ ಮಾಡಿ. ಈ ಹಣದುಬ್ಬರದಿಂದ ಬರುವ ಹಣಕ್ಕೆ ಬಂಡವಾಳ ವೃದ್ಧಿ ತೆರಿಗೆ ಕೊಡದೆ, ನಿಮ್ಮ ಮಕ್ಕಳ ಮದುವೆ ಅಥವಾ ಇತರ ಖರ್ಚುಗಳಿಗೆ ವಿನಿಯೋಗಿಸಬಹುದು. ನಿಮ್ಮದು ಪಿತ್ರಾರ್ಜಿತ ಆಸ್ತಿ ಆಗಿರುವುದರಿಂದ ಕುಟುಂಬದ ಎಲ್ಲ ವ್ಯಕ್ತಿಗಳಿಗೆ ಈ ಆಸ್ತಿಯಲ್ಲಿ ಹಕ್ಕು ಬರುತ್ತದೆ. ಆಸ್ತಿ ಮಾರಾಟ ಮಾಡುವಾಗ ಬರುವ ಹಣವನ್ನು ಕುಟುಂಬದ ಎಲ್ಲರ ಹೆಸರಿನಲ್ಲಿ ಪ್ರತ್ಯೇಕವಾಗಿ ಚೆಕ್ ಮುಖಾಂತರ ಪಡೆಯಿರಿ. ಹೀಗೆ ಮಾಡಿದಲ್ಲಿ ತೆರಿಗೆ ಉಳಿಸಲು ಸೆಕ್ಷನ್ 54ಇಸಿ ಆಧಾರದ ಮೇಲೆ ಎನ್‌ಎಚ್‌ಎಐ–ಆರ್‌ಇಸಿ ಬಾಂಡ್‌ಗಳಲ್ಲಿ ಪ್ರತ್ಯೇಕವಾಗಿ ಎಲ್ಲರ ಹೆಸರಿನಲ್ಲಿ ಹಣ ತೊಡಗಿಸಬಹುದು. ಜಮೀನು ಮಾರಾಟ ಮಾಡಿ ಬರುವ ಹಣದಿಂದ ಬೇರೊಂದು ಮನೆ ಕೂಡಾ ಕೊಳ್ಳಬಹುದು.

ಶಂಕರಪ್ಪ, ಮೈಸೂರು

- **ಪ್ರಶ್ನೆ:** ನಾನು ನಿವೃತ್ತ ಸರ್ಕಾರಿ ಅಧಿಕಾರಿ. ವಯಸ್ಸು 82 ವರ್ಷ. ಸ್ವಂತ ಮನೆ ಇದೆ. ತಿಂಗಳ ಪಿಂಚಣಿ ₹ 36 ಸಾವಿರ. ಠೇವಣಿ ಮೇಲಿನ ವಾರ್ಷಿಕ ಬಡ್ಡಿ ₹ 1,75,352. ನನ್ನ ಹೆಂಡತಿ ಮೃತಳಾಗಿದ್ದಾಳೆ. ನನ್ನ ಆದಾಯಕ್ಕೆ ತೆರಿಗೆ ಬರುವಲ್ಲಿ ತೆರಿಗೆ ಉಳಿಸಲು ಆದಾಯ ತೆರಿಗೆ ಸೆಕ್ಷನ್ ಹಾಗೂ ಉಳಿಸಬಹುದಾದ ಮೊತ್ತ ತಿಳಿಸಿರಿ. ನನ್ನ ಆರೋಗ್ಯ ಹದಗೆಡುತ್ತಿದೆ. ನನ್ನ ಸಹಾಯಕ್ಕೆ ನಂಬಿಕೆಗೆ ಅರ್ಹರಾದ ನರ್ಸ್ ತರಹದ ವ್ಯಕ್ತಿ ಬೇಕಾಗಿದ್ದಾರೆ. ಈ ವಿಚಾರದಲ್ಲಿ ಯೋಗ್ಯ ಕಂಪನಿ ಅಥವಾ ಸಂಸ್ಥೆ ಗೊತ್ತಿದ್ದರೆ ತಿಳಿಸಿರಿ.

ಉತ್ತರ: ನಿಮ್ಮ ವಾರ್ಷಿಕ ಆದಾಯ ₹ 4.32 ಲಕ್ಷ. ವಾರ್ಷಿಕ ಬಡ್ಡಿ ಆದಾಯ ₹ 1,75,352. ಇವೆರಡರಿಂದ ಬರುವ ಮೊತ್ತ ₹ 6,07,352. ಇದರಲ್ಲಿ ಸೆಕ್ಷನ್ 16 (1ಎ) ಸ್ಟ್ಯಾಂಡರ್ಡ್ ಡಿಡಕ್ಷನ್ ₹ 50 ಸಾವಿರ ಹಾಗೂ ಸೆಕ್ಷನ್ 80ಟಿಟಿಬಿ ಬಡ್ಡಿ ಆದಾಯ ₹ 50 ಸಾವಿರ ಕಳೆದರೆ ನಿವ್ವಳ ಆದಾಯ ₹ 5,07,352 ಆಗುತ್ತದೆ. ನೀವು ಅತೀ ಹಿರಿಯ ನಾಗರಿಕರಾದ್ದರಿಂದ ₹ 7,352ಕ್ಕೆ ಮಾತ್ರ ಆದಾಯ ತೆರಿಗೆ ಕೊಡಬೇಕಾಗುತ್ತದೆ. ಸಂಪೂರ್ಣ ತೆರಿಗೆ ಉಳಿಸಲು ಸೆಕ್ಷನ್ 80ಸಿ ಆಧಾರದ ಮೇಲೆ ₹ 10 ಸಾವಿರ ಮೊತ್ತವನ್ನು 5 ವರ್ಷಗಳ ಅವಧಿಗೆ ಬ್ಯಾಂಕ್ ಠೇವಣಿ ಮಾಡಬಹುದು. ನಿಮ್ಮ ಆರೋಗ್ಯ ನೋಡಿಕೊಳ್ಳಲು 'Carewise Support and services (P) LTD Mysore', (ದೂರವಾಣಿ: 7090632797) ಇಲ್ಲಿ ವಿಚಾರಿಸಿ. ನೀವು ಇನ್ನುಮುಂದೆ ಪ್ರಶ್ನೆ ಕಳಿಸುವುದು ಬೇಡ. ನನಗೆ ನೇರವಾಗಿ ಕರೆ ಮಾಡಿ.

ರಾಮಣ್ಣ, ತರೀಕೆರೆ

- **ಪ್ರಶ್ನೆ:** ನಾನು ಕೃಷಿಕ. ಕೃಷಿ ಆದಾಯ ಹೊರತುಪಡಿಸಿ ಬೇರೆ ಆದಾಯ ಇಲ್ಲ. ನಾನು ಬ್ಯಾಂಕ್‌ನಲ್ಲಿ ₹ 20 ಲಕ್ಷ ಠೇವಣಿ ಇರಿಸಿದ್ದೇನೆ. ಈ ಠೇವಣಿಗೆ ನನ್ನ ಹೆಂಡತಿಯನ್ನು ನಾಮನಿರ್ದೇಶನ ಮಾಡಿದ್ದೇನೆ. ಕೆಲವು ತಿಂಗಳಿಂದ ನನ್ನ ಹೆಂಡತಿಯ ಆರೋಗ್ಯ ಹದಗೆಡುತ್ತಿದೆ. ಒಂದು ವೇಳೆ ನನ್ನ ಹೆಂಡತಿ ಮೃತಪಟ್ಟಲ್ಲಿ, ಬ್ಯಾಂಕ್‌ನಿಂದ ಹಣ ಪಡೆಯಲು ತೊಂದರೆ ಆಗಬಹುದು ಎನ್ನುವ ಭಯ ಕಾಡುತ್ತಿದೆ. ಹೆಂಡತಿಯ ನಾಮ ನಿರ್ದೇಶನ ತೆಗೆದು ಮಗನ ಹೆಸರಿನಲ್ಲಿ ನಾಮ ನಿರ್ದೇಶನ ಮಾಡಲು ನಿಮ್ಮ ಸಲಹೆ ಬೇಕಾಗಿದೆ.

ಉತ್ತರ: ನಿಮ್ಮ ಹೆಂಡತಿ ಆರೋಗ್ಯ ಸರಿ ಇಲ್ಲ ಎನ್ನುವ ಒಂದೇ ಕಾರಣಕ್ಕೆ ನೀವು ಆಕೆಯ ನಾಮ ನಿರ್ದೇಶನ ರದ್ದುಪಡಿಸಿ ಮಗನ ಹೆಸರಿಗೆ ನಾಮ ನಿರ್ದೇಶನ ಮಾಡುವ ಅಗತ್ಯ ಇಲ್ಲ. ಒಂದು ವೇಳೆ ಆಕೆ ತೀರಿಕೊಂಡಲ್ಲಿ ನೀವು ಮಗನ ಹೆಸರಿಗೆ ನಾಮ ನಿರ್ದೇಶನ ಮಾಡಬಹುದು. ಜೀವಿತಕಾಲದಲ್ಲಿ ತಾನು ಇರಿಸುವ ಬ್ಯಾಂಕ್ ಠೇವಣಿ ಮೇಲಿನ ನಾಮ ನಿರ್ದೇಶನವನ್ನು ಬದಲಾಯಿಸುವ ಹಕ್ಕು ಠೇವಣಿದಾರನಿಗೆ ಇರುತ್ತದೆ. ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚಿನ ಸದಸ್ಯರು ಇರುವುದು ಸಹಜ. ಇಂತಹ ಸಂದರ್ಭದಲ್ಲಿ, ಉದಾಹರಣೆಗೆ ಒಂದು ಕುಟುಂಬದಲ್ಲಿ ನಾಲ್ಕು ಜನರಿದ್ದಲ್ಲಿ, ಠೇವಣಿ ಮೊತ್ತ ₹ 10 ಲಕ್ಷ ಇದ್ದರೆ, ಬ್ಯಾಂಕ್‌ನಿಂದ ₹ 2.5 ಲಕ್ಷದ ನಾಲ್ಕು ಠೇವಣಿ ರಶೀದಿ ಪಡೆದು ನಾಲ್ಕೂ ಜನರ ಹೆಸರಿನಲ್ಲಿ ನಾಮ ನಿರ್ದೇಶನ ಮಾಡಬಹುದು. ಎಲ್ಲದಕ್ಕೂ ಮುಖ್ಯವಾಗಿ, ಠೇವಣಿದಾರನಿಗಿಂತಲೂ ಮೊದಲೇ ನಾಮ ನಿರ್ದೇಶನ ಹೊಂದಿದ ವ್ಯಕ್ತಿ ಮೃತಪಟ್ಟಾಗ ಬೇರೆಯವರನ್ನು ತಕ್ಷಣವೇ ನಾಮನಿರ್ದೇಶನ ಮಾಡಲು ಎಂದಿಗೂ ಮರೆಯಬಾರದು. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

HOMAGE

Smt. Padma V Rao
07.05.1925 – 23.10.2021
Smt. Padma V Rao (Indira Ajji) left earth peacefully for heavenly abode at age 96.
Vaikunta Samaradhane at Bengaluru Home on 04.11.2021
Mourned by Family & Friends

ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕ ಸಾಧನೆ

ಕೆನರಾ ಬ್ಯಾಂಕ್ ಲಾಭ ಮೂರು ಪಟ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 1,333 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ₹ 444 ಕೋಟಿಗಳಷ್ಟಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಮೂರು ಪಟ್ಟು ಏರಿಕೆ ಕಂಡಿದೆ.

ಬ್ಯಾಂಕ್‌ನ ಒಟ್ಟು ವರಮಾನವು ₹ 20,793 ಕೋಟಿಯಿಂದ ₹ 21,331 ಕೋಟಿಗೆ ಏರಿಕೆ ಆಗಿದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಲ್. ವಿ. ಪ್ರಭಾಕರ್ ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪ್ರಭಾಕರ್

ಬ್ಯಾಂಕ್‌ನ ವಸೂಲಾಗದ ಸರಾಸರಿ ಸಾಲದ (ಜಿಎನ್‌ಪಿಎ) ಪ್ರಮಾಣವು 2020ರ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 8.21ರಷ್ಟು ಇತ್ತು. ಇದು 2021ರ ಸೆಪ್ಟೆಂಬರ್‌ನಲ್ಲಿ ಶೇ 8.42ಕ್ಕೆ ಏರಿಕೆ ಆಗಿದೆ. ಮೌಲ್ಯದ ಲೆಕ್ಕದಲ್ಲಿ ₹ 53,437 ಕೋಟಿಗಳಿಂದ ₹ 57,853 ಕೋಟಿಗೆ ಏರಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 3.42ರಿಂದ ಶೇ 3.21ಕ್ಕೆ ಇಳಿಕೆ ಆಗಿದೆ. ಮೌಲ್ಯದ ಲೆಕ್ಕದಲ್ಲಿ ₹ 21,063 ಕೋಟಿಯಿಂದ ₹ 20,861 ಕೋಟಿಗೆ ಇಳಿಕೆ ಆಗಿದೆ ಎಂದರು.

ಈ ಅವಧಿಯಲ್ಲಿ ಬಡ್ಡಿಯೇತರ ವರಮಾನ ಶೇ 95.10ರಷ್ಟು ಬೆಳವಣಿಗೆ ಕಂಡಿದೆ. ಚಾಲ್ತಿ ಮತ್ತು ಉಳಿತಾಯ ಖಾತೆ ಠೇವಣಿಗಳು ಶೇ 12.04ರಷ್ಟು ಪ್ರಗತಿ ಕಂಡಿವೆ. ರಿಟೇಲ್ ಮತ್ತು ಗೃಹ ಸಾಲಗಳು ಕ್ರಮವಾಗಿ ಶೇ 10.46 ಮತ್ತು ಶೇ 14.21ರಷ್ಟು ಬೆಳವಣಿಗೆ ಕಂಡಿವೆ ಎಂದು ಅವರು ವಿವರಿಸಿದರು.

ಎಂಆರ್‌ಪಿಎಲ್‌ಗೆ ಮತ್ತೆ ನಷ್ಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದಲ್ಲೂ ಇಲ್ಲಿನ ಮಂಗಳೂರು ರಿಫೈನರಿ ಆಂಡ್ ಪೆಟ್ರೋಕೆಮಿಕಲ್ಸ್ (ಎಂಆರ್‌ಪಿಎಲ್) ಕಂಪನಿಯು ನಷ್ಟ ಅನುಭವಿಸಿದೆ.

ಒಟ್ಟು ₹17,692 ಕೋಟಿ ವಹಿವಾಟು ನಡೆಸಲಾಗಿದ್ದು, ತೆರಿಗೆಗೂ ಮುನ್ನ ₹390 ಕೋಟಿ, ತೆರಿಗೆ ನಂತರ ₹243 ಕೋಟಿ ನಷ್ಟ ಅನುಭವಿಸಿದೆ. ಕಳೆದ ವರ್ಷದ ಎರಡನೇ ತ್ರೈಮಾಸಿಕದಲ್ಲಿ ತೆರಿಗೆ ನಂತರ ₹31 ಕೋಟಿ ಲಾಭ ಗಳಿಸಿತ್ತು.

ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಒಟ್ಟು ₹32,840 ಕೋಟಿ ವಹಿವಾಟು ನಡೆಸಲಾಗಿದ್ದು, ತೆರಿಗೆಗೂ ಮುನ್ನ ₹522 ಕೋಟಿ ಹಾಗೂ ತೆರಿಗೆ ನಂತರ ₹329 ಕೋಟಿ ನಷ್ಟ ಅನುಭವಿಸಿದೆ. ಕಳೆದ ವರ್ಷ ಈ ಅವಧಿಯಲ್ಲಿ ತೆರಿಗೆ ನಂತರ ₹493 ಕೋಟಿ ನಷ್ಟ ಅನುಭವಿಸಿತ್ತು.

ಆರ್ಥಿಕ ಪುನಶ್ಚೇತನಕ್ಕೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಎಂಆರ್‌ಪಿಎಲ್ ಪ್ರಕಟಣೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಚಿತ್ರದುರ್ಗ	
ಆಪಿ	47119-47559
ಬೆಟ್ಟೆ	39629-40199
ಕೆಂಪುಗೋಟು	30400-30800
ರಾಶಿ	46639-47069
ಪುತ್ತೂರು	
ಕೋಕ	10500-26000
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	32089-42699
ಚಾಲಿ	43299-47699
ಕೋಕ	27611-41599
ಕೆಂಪುಗೋಟು	29499-39609
ರಾಶಿ	42899-47499
ತಟ್ಟಿಬೆಟ್ಟೆ	37009-45089
ಶಿರಸಿ	
ಬೆಟ್ಟೆ	35699-47199
ಬಿಳಿಗೋಟು	19699-43679
ಚಾಲಿ	41199-48011
ರಾಶಿ	44699-48899
ಯಲ್ಲಾಪುರ	
ಬಿಳಿಗೋಟು	33612-41316
ಚಾಲಿ	41899-47869
ಕೋಕ	22899-30119
ಕೆಂಪುಗೋಟು	26679-34700
ರಾಶಿ	46819-51899
ತಟ್ಟಿಬೆಟ್ಟೆ	36899-45030
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	40700-50890
ಗೊರಬಲು	17266-37069
ರಾಶಿ	42569-47709
ಸಾಗರ	
ಬಿಳಿಗೋಟು	35699-37699
ಚಾಲಿ	42519-45229
ಕೋಕ	37199-37199
ಕೆಂಪುಗೋಟು	38299-38299
ರಾಶಿ	45110-46899
ಸಿಪ್ಪೆಗೋಟು	22460-25454
ರಾಮನಗರ ರೇಷ್ಮೆ	
ಮಿಶ್ರತಳಿ	271-473
ದ್ವಿತಳಿ	293-567

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	12000	13000	202.55 ಸೆಂಟ್ಸ್
ಎಸಿ	---	---	5375	
ಆರ್‌ಪಿ	---	---	6300	
ಆರ್‌ಸಿ	---	---	3660	2207 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

26-10-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1425 (1440)
ಒಂದು ವಾರದ ಡೆಲಿವರಿ	1420 (1435)
ಸೋಯಾ ಕಚ್ಚಾ	1255 (1255)
ಪಾಮ್ ವಾರದ ಡೆಲಿವರಿ	1198 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1280)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,850 (48,050)
ಬೆಳ್ಳಿ ಕೆ.ಜಿ 65,400 (65,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

'HAEID REQUIRES Experienced 4WH Automatic car Driver at Rajajinagar Bangalore. Attractive package & immediate placement Contact +91 6366443134

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ,ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ಸೌತ್ ಇಂಡಿಯನ್ ವೆಜ್ / ನಾನ್ ವೆಜ್ ಕುಕ್‌ಗಳು, ಹೆಲ್ಪರ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಸಂಪರ್ಕಿಸಿ: 9845618105, 9538785122, 8105803177

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ,ಐಟಿಐ,ಡಿಪ್ಲೊಮಾದವರು 16,600 - 62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ Salary+OT 16,800-45000/-.9902839010, 9980295449

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 7829215432, 9538804499

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ಭವಿಷ್ಯ

Astrology

★||ಕೇರಳದ ಶ್ರೀಭಗವತಿಭದ್ರಕಾಳಿ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ,ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣಸಮಸ್ಯೆಗಳಿಗೆ 11ಗಂಟೆಗಳಲ್ಲಿ ಪರಿಹಾರ. ಪಂಡಿತ್. ಜಯರಾಮ್‌ಭಟ್. 9900263706

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

ವಶೀಕರಣ ಸ್ಪೆಷಲಿಸ್ಟ್: ಸ್ತ್ರೀಪುರುಷ ವಶೀಕರಣ, ಲೈಂಗಿಕ ವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ. ಸ್ತ್ರೀಯರಿಗೆ ಉಚಿತ ಪರಿಹಾರ. 9448687421

HEALTH SPECIAL

ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್
ಮಧುಮೇಹ ಕೊಲಸ್ಟ್ರಾಲ್ ಥೈರಾಡ್ ಸಮಸ್ಯೆಗಳಿಗೆ ಉತ್ತಮ ಪರಿಣಾಮ
ಸೇವಿಸಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಿ
"ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್ ಸೇವನೆ ದಿನವೆಲ್ಲ ಉತ್ಸಾಹ"
ಎಲ್ಲಾ ಹಾಪ್ ಕಾಮ್ ಅಂಗಡಿಗಳಲ್ಲಿ, ಎಲ್ಲಾ ಕದಂಬ ಹೋಟೆಲ್‌ನಲ್ಲಿ ಹಾಗೂ ಇತರ ಅಂಗಡಿಗಳಲ್ಲಿ ದೊರೆಯುತ್ತದೆ.
ರಾಜ್ಯಾದ್ಯಂತ ವಿತರಕರು ಬೇಕಾಗಿದ್ದಾರೆ.
99002 65678
http://www.sirichaitanya.com

★||ಶ್ರೀಕಬ್ಬಾಳಮ್ಮ ದೇವಿ||★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾದೆ,ವ್ಯಾಪಾರ, ಶತ್ರುಕಾಟ,ಇನ್ನಾವುದೇ ಕಠಣ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಶಾಶ್ವತಪರಿಹಾರ. "ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ವಿಶೇಷ ಪರಿಹಾರ" ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

||ಶ್ರೀಧರ್ಮಶಾಸ್ತ್ರಂ ವಶೀಕರಣಂ|| ಸರ್ವಸಿದ್ಧಿ ಸಾಧಕರು, ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ ವಶೀಕರಣ ಪದ್ಧತಿಯಿಂದ ಶೀಘ್ರದಲ್ಲಿ ಶಾಸ್ತ್ರೋಕ್ತ ಪರಿಹಾರ ಕಲ್ಪಿಸುವರು. ವೇದಬ್ರಾಹ್ಮಣ ಶ್ರೀಶ್ರೀಮೃತ್ಯುಂಜಯರಾವ್ 9686980376

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಫೋನಿನ ಮುಖಾಂತರ ಉಚಿತವಾಗಿ ಭವಿಷ್ಯ ತಿಳಿಸುತ್ತಾರೆ ಸ್ತ್ರೀ ಪುರುಷ ವಶೀಕರಣ, ಶತ್ರುನಾಶ, ಸಾಲ ಭಾದೆ, ವ್ಯವಹಾರ, ದಾಂಪತ್ಯ ಕೇವಲ 1ಗಂಟೆಯಲ್ಲಿ ಪರಿಹಾರ: 9901922598

ಪ್ರವಾಸ

Travel

20.12.2021 ರಿಂದ 14 ದಿನಗಳು ಪಂಚದ್ವಾರಕಾ, ಓಂಕಾರೇಶ್ವರ್, ಉಜ್ಜಯಿನಿ, ಸೋಮನಾಥ್, ಮಾತ್ರಗಯಾ, ಡಾಕೂರ್, ಅಹಮದಾಬಾದ್/ 19.01.2022 ರಿಂದ 14 ದಿನಗಳು ಕಾಶಿ.,ಗಯಾ, ಪ್ರಯಾಗ, ಅಯೋಧ್ಯ, ನೈಮೀಶಾರಣ್ಯ, ಗೋರಕ್‌ಪುರ್/ 2022ರ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ 15/20/25 ದಿನಗಳ ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರನಾಥ್, ಕಾಶಿ,ಗಯಾ ಪೂರಿಜಗನ್ನಾಥ್, ವೈಷ್ಣೋದೇವಿ ಯಾತ್ರೆಗಳಿಗೆ ಕೂಡಲೇ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289, 9448119290, 9019301300

15-11-2021, 7 ದಿನಗಳ ತಮಿಳುನಾಡು, 10-11-2021, 6 ದಿನಗಳ 27 ಸ್ಥಳಗಳ ದಕ್ಷಿಣಕನ್ನಡ ಪ್ರವಾಸ. 28-12-2021, 4ದಿನಗಳ ಗೋವಾ ದುಧ್‌ಸಾಗರ್. 15-12-2021, 7ದಿನಗಳ ಅಸ್ಸಾಂ ಗುವಾಹಟಿ ಕಝಿರಂಗ್ 18-12-2021, 12 ದಿನಗಳ ದೆಹಲಿ,ಮನಾಲಿ, ವೈಷ್ಣೋದೇವಿ. 15-12-2021, 11 ದಿನಗಳು ಸಂಪೂರ್ಣ ಮಧ್ಯಪ್ರದೇಶ. 18-12-2021. 12 ದಿನಗಳ ಸಂಪೂರ್ಣ ರಾಜಸ್ಥಾನ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು. 9342848791, 9880847001

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE
NAME CHANGE
MATRI
ASTRO
EDUCATION
HEALTH
JOB
AUTO
condition apply*
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in
DH DECCAN HERALD
ಪ್ರಜಾವಾಣಿ ಕ್ಲಾಸಿಫೈಡ್ಸ್

ಚಾಂಪಿಯನ್ ವಿಂಡೀಸ್‌ಗೆ ಮತ್ತೊಂದು ಆಘಾತ; ಪ್ರಿಟೋರಿಯಸ್, ಎನ್ರಿಚ್ ಅಮೋಘ ಬೌಲಿಂಗ್

ದಕ್ಷಿಣ ಆಫ್ರಿಕಾ ಜಯಭೇರಿ

ದುಬೈ (ಪಿಟಿಐ): ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡ ಮತ್ತೊಂದು ಸೋಲಿನ ಆಘಾತ ಅನುಭವಿಸಿತು.

ಮಂಗಳವಾರ ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 8 ವಿಕೆಟ್‌ಗಳಿಂದ ವಿಂಡೀಸ್ ಬಳಗವನ್ನು ಸೋಲಿಸಿತು. ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ನಿರಾಶೆ ಅನುಭವಿಸಿದ್ದ ಕೀರನ್ ಪೊಲಾರ್ಡ್ ಬಳಗವು ಇಲ್ಲಿಯೂ ಜಯದ ಹಳಿಗೆ ಮರಳಲಿಲ್ಲ.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟ್ಸ್‌ಮನ್ ಎವಿನ್ ಲೂಯಿಸ್ (56; 35ಎಸೆತ) ಅರ್ಧಶತಕದ ಬಲದಿಂದ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 143 ರನ್ ಗಳಿಸಿತು. ದಕ್ಷಿಣ ಆಫ್ರಿಕಾ ತಂಡವು ಏಡನ್ ಮರ್ಕರಮ್ (ಔಟಾಗದೆ 51) ಮತ್ತು ರಸ್ಸಿ ವ್ಯಾನ್ ಡರ್ ಡಸೆನ್ (ಔಟಾಗದೆ 43; 51ಎ) ಅವರ ಆಟದ ನೆರವಿನಿಂದ 18.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 144 ರನ್ ಗಳಿಸಿ ಗೆದ್ದಿತು.

ವೆಸ್ಟ್ ಇಂಡೀಸ್ ತಂಡದ ದೊಡ್ಡ ಮೊತ್ತ ಗಳಿಸುವ ಗುರಿಗೆ ದಕ್ಷಿಣ ಆಫ್ರಿಕಾದ ಕೇಶವ್ ಮಹಾರಾಜ್ (24ಕ್ಕೆ2) ಮತ್ತು ಡ್ವೇನ್ ಪ್ರಿಟೋರಿಯಸ್ (17ಕ್ಕೆ3) ಅಡ್ಡಿಯಾದರು. ಎನ್ರಿಚ್ ನಾರ್ಕಿಯಾ ಒಂದು ವಿಕೆಟ್ ಪಡೆದರು. ಆದರೆ, ನಾಲ್ಕು ಓವರ್‌ಗಳಲ್ಲಿ ಕೇವಲ 14 ರನ್‌ಗಳನ್ನು ಮಾತ್ರ ಬಿಟ್ಟುಕೊಟ್ಟರು. ಕ್ರಿಸ್ ಗೇಲ್, ಆ್ಯಂಡ್ರೆ ರಸೆಲ್, ನಿಕೊಲಸ್ ಪೂರನ್ ಮತ್ತು ಶಿಮ್ರೊನ್ ಹೆಟ್ಮೆಯರ್ ಅವರಂತಹ ಸ್ಫೋಟಕ ಶೈಲಿಯ ಬ್ಯಾಟ್ಸ್‌ಮನ್‌ಗಳೂ ವಿಫಲರಾದರು.

ತನ್ನ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಸೋತಿದ್ದ ದಕ್ಷಿಣ ಆಫ್ರಿಕಾ ಇಲ್ಲಿ ಜಯ ಸಿಹಿ ಸವಿಯಿತು.

ಸಾಧಾರಣ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಮೊದಲ ಓವರ್‌ನಲ್ಲಿ ತೆಂಬಾ ಬವುಮಾ ಔಟಾದರು. ರೀಜಾ ಹೆನ್ರಿಕ್ಸ್ ಮತ್ತು ರಸಿ ವ್ಯಾನ್ ಡರ್ ಡಸೆನ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 57 ರನ್ ಸೇರಿಸಿದರು. ಅಕೇಲ್ ಹೊಸೇನ್ ಓವರ್‌ನಲ್ಲಿ ರೀಜಾ ಔಟಾದ ನಂತರ ಡಸೆ ಜೊತೆಗೂಡಿದ ಮರ್ಕರಮ್ ಕೇವಲ 26 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು. ನಾಲ್ಕು ಸಿಕ್ಸರ್ ಮತ್ತು ಎರಡು ಬೌಂಡರಿ ಸಿಡಿಸಿದರು.

ಸ್ಕೋರ್ ಕಾರ್ಡ್

ವೆಸ್ಟ್ ಇಂಡೀಸ್ 8ಕ್ಕೆ 143 (20 ಓವರ್)
ಸಿಮನ್ಸ್ ಬಿ ರಬಾಡ 16 (35ಎ), ಲೂಯಿಸ್ ಸಿ ರಬಾಡ ಬಿ ಮಹಾರಾಜ್ 56 (35ಎ, 4X3, 6X6), ಪೂರನ್ ಸಿ ಮಿಲ್ಲರ್ ಬಿ ಮಹಾರಾಜ್ 12 (7ಎ, 4X2), ಗೇಲ್ ಸಿ ಕ್ಲಾಸೆನ್ ಬಿ ಪ್ರಿಟೋರಿಯಸ್ 12 (12ಎ, 6X1), ಪೊಲಾರ್ಡ್ ಸಿ ಡಸೆನ್ ಬಿ ಪ್ರಿಟೋರಿಯಸ್ 26 (20ಎ, 4X2, 6X1), ರಸೆಲ್ ಬಿ ನಾರ್ಕಿಯಾ 5 (4ಎ, 4X1), ಹೆಟ್ಮೆಯರ್ ರನೌಟ್ (ಮಿಲ್ಲರ್/ ಕ್ಲಾಸೆನ್) 1 (2ಎ), ಬ್ರಾವೊ ಔಟಾಗದೆ 8 (5ಎ, 4X1), ವಾಲ್ಷ್ ಸಿ ಹೆಂಡ್ರಿಕ್ಸ್ ಬಿ ಪ್ರಿಟೋರಿಯಸ್ 0 (1ಎ), ಅಕೀಲ್ ಔಟಾಗದೆ 0)
ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 4) 7
ವಿಕೆಟ್ ಪತನ: 1–73 (ಎವಿನ್ ಲೂಯಿಸ್, 10.3), 2–87 (ನಿಕೋಲಸ್ ಪೂರನ್, 12.2), 3–89 (ಲೆಂಡ್ಲ್ ಸಿಮನ್ಸ್, 13.2), 4–121 (ಕ್ರಿಸ್ ಗೇಲ್, 17.1), 5–132 (ಆ್ಯಂಡ್ರೆ ರಸೆಲ್, 18.2), 6–133 (ಶಿಮ್ರಾನ್ ಹೆಟ್ಮೆಯರ್, 18.4), 7–137 (ಕೀರನ್ ಪೊಲಾರ್ಡ್, 19.2), 8–137 (ಹೇಡನ್ ವಾಲ್ಷ್, 19.3)
ಬೌಲಿಂಗ್: ಏಡನ್ ಮರ್ಕರಮ್ 3–1–22–0, ಕಗಿಸೊ ರಬಾಡ 4–0–27–1, ಎನ್ರಿಚ್ ನಾರ್ಕಿಯಾ 4–0–14–1, ಕೇಶವ್ ಮಹಾರಾಜ್ 4–0–24–2, ತಬ್ರೇಜ್ ಶಂಸಿ 3–0–37–0, ಡ್ವೇನ್ ಪ್ರಿಟೋರಿಯಸ್ 2–0–17–3

ದಕ್ಷಿಣ ಆಫ್ರಿಕಾ 2ಕ್ಕೆ 144 (18.2 ಓವರ್)
ಬವುಮಾ ರನೌಟ್ (ರಸೆಲ್) 2 (3ಎ), ಹೆಂಡ್ರಿಕ್ಸ್ ಸಿ ಹೆಟ್ಮೆಯರ್ ಸಿ ಹೊಸೇನ್ 39 (30ಎ, 4X4, 6X1), ಡಸೆನ್ ಔಟಾಗದೆ 43 (51ಎ, 4X3), ಮರ್ಕರಮ್ ಔಟಾಗದೆ 51 (26ಎ, 4X2, 6X4)
ಇತರೆ (ಲೆಗ್‌ಬೈ 1, ವೈಡ್ 8) 9
ವಿಕೆಟ್ ಪತನ: 1–4 (ತೆಂಬಾ ಬವುಮಾ, 0.6), 2–61 (ರೀಜಾ ಹೆಂಡ್ರಿಕ್ಸ್, 9.2).
ಬೌಲಿಂಗ್: ಅಕೀಲ್ ಹೊಸೇನ್ 4–0–27–1, ರವಿ ರಾಂಪಾಲ್ 3–0–22–0, ಆ್ಯಂಡ್ರೆ ರಸೆಲ್ 3.2–0–36–0, ಹೇಡನ್ ವಾಲ್ಷ್ 3–0–26–0, ಡ್ವೇನ್ ಬ್ರಾವೊ 4–0–23–0, ಕೀರನ್ ಪೊಲಾರ್ಡ್ 1–0–9–0

ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ ಎಂಟು ವಿಕೆಟ್‌ಗಳ ಜಯ

ಏಡನ್ ಮರ್ಕರಮ್ ಬ್ಯಾಟಿಂಗ್ –ರಾಯಿಟರ್ಸ್ ಚಿತ್ರ

ವಿರಾಟ್ ಕೊಹ್ಲಿ ನಡವಳಿಕೆ ಅನುಕರಣೀಯ: ಸನಾ

ದುಬೈ (ಪಿಟಿಐ): ಪಾಕಿಸ್ತಾನ ತಂಡದ ಎದುರು ತಮ್ಮ ತಂಡವು ಸೋತರೂ ನಾಯಕ ವಿರಾಟ್ ಕೊಹ್ಲಿ ತೋರಿದ ಕ್ರೀಡಾ ಮನೋಭಾವದ ಮತ್ತು ಸೌಹಾರ್ದಯುತ ನಡವಳಿಕೆಯೂ ಅಮೋಘವಾದದ್ದು. ಅವರು ಎಲ್ಲರಿಗೂ ಆದರ್ಶ ವ್ಯಕ್ತಿಯಾಗಿದ್ದಾರೆ ಎಂದು ಪಾಕ್ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಸನಾ ಮೀರ್ ಶ್ಲಾಘಿಸಿದ್ದಾರೆ.

ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೂಪರ್ –12 ಸುತ್ತಿನ ಪಂದ್ಯದಲ್ಲಿ ಭಾರತ ತಂಡವು 10 ವಿಕೆಟ್‌ಗಳಿಂದ ಪಾಕ್ ಎದುರು ಸೋತಿತ್ತು. ಪಂದ್ಯ ಮುಗಿದ ಕೂಡಲೇ ವಿರಾಟ್, ಪಾಕ್ ತಂಡದ ಬ್ಯಾಟ್ಸ್‌ಮನ್ ಮೊಹಮ್ಮದ್ ರಿಜ್ವಾನ್ ಅವರನ್ನು ಆಲಂಗಿಸಿ ಅಭಿನಂದಿಸಿದ್ದರು.

ಸನಾ ಮೀರ್

‘ವಿರಾಟ್ ಅವರು ಸೋಲನ್ನು ಸಮಚಿತ್ತದಿಂದ ಸ್ವೀಕರಿಸಿದರು. ಗೌರವಯುತವಾಗಿ ನಡೆದುಕೊಂಡರು. ಅವರ ಕ್ರೀಡಾಸ್ಫೂರ್ತಿಯನ್ನು ನಾನು ಬಹಳ ಮೆಚ್ಚಿಕೊಂಡಿದ್ದೇನೆ. ಆಟಗಾರರು ಅವರನ್ನು ನೋಡಿ ಕಲಿಯಬೇಕು’ ಎಂದು ಸನಾ ಹೇಳಿ ದ್ದಾರೆ.

‘ಈ ನಡವಳಿಕೆಯು ಅವರಲ್ಲಿರುವ ಮಾನಸಿಕ ಸದೃಢತೆ, ಭದ್ರತಾ ಭಾವ ಮತ್ತು ಮರಳಿ ಪುಟಿದೇಳುವ ಸಾಮರ್ಥ್ಯದ ಪ್ರತೀಕವಾಗಿದೆ. ಭಾರತ ತಂಡವು ಮತ್ತೆ ಗೆಲುವಿನ ಹಾದಿಗೆ ಮರಳುವುದು ಖಚಿತ’ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಾಬರ್ ಆಜಂ, ವಿರಾಟ್ ಕೊಹ್ಲಿ ಮತ್ತು ಮೊಹಮ್ಮದ್ ರಿಜ್ವಾನ್–ಎಎಫ್‌ಪಿ ಚಿತ್ರ

ಶಮಿ ಶ್ರೇಷ್ಠ ಬೌಲರ್: ರಿಜ್ವಾನ್

‘ಭಾರತದ ಮೊಹಮ್ಮದ್ ಶಮಿ ಅವರು ಪ್ರಸ್ತುತ ಕ್ರಿಕೆಟ್ ಕ್ಷೇತ್ರದಲ್ಲಿ ಶ್ರೇಷ್ಠ ಬೌಲರ್‌ಗಳಲ್ಲಿ ಒಬ್ಬರಾಗಿದ್ದಾರೆ. ಅವರನ್ನು ಗೌರವಿಸುವುದು ಕರ್ತವ್ಯ. ಅವರ ಬಗ್ಗೆ ಇಲ್ಲಸಲ್ಲದ ಹೇಳಿಕೆಗಳನ್ನು ನೀಡಬೇಡಿ’ ಎಂದು ಪಾಕಿಸ್ತಾನ ತಂಡದ ವಿಕೆಟ್‌ಕೀಪರ್ ಮೊಹಮ್ಮದ್ ರಿಜ್ವಾನ್ ಮನವಿ ಮಾಡಿದ್ದಾರೆ.

ಮೊಹಮ್ಮದ್ ಶಮಿ

ಭಾರತ ಸೋತ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಶಮಿಯನ್ನು ಟ್ರೋಲ್ ಮಾಡಿದ್ದರು. ಈ ಹಿನ್ನೆಲೆಯಲ್ಲಿ ರಿಜ್ವಾನ್ ಪ್ರತಿಕ್ರಿಯಿಸಿದ್ದಾರೆ.

‘ಒಬ್ಬ ಆಟಗಾರನು ಎದುರಿಸುವ ಒತ್ತಡ, ಪರಿಶ್ರಮ, ಕಷ್ಟ, ನಷ್ಟಗಳ ಬಗ್ಗೆ ಅವನಿಗೇ ಗೊತ್ತಿರುತ್ತದೆ. ಅಂತಹ ಎಲ್ಲ ಕಠಿಣ ಸವಾಲುಗಳನ್ನೂ ಗೆದ್ದು ವಿಶ್ವ ಶ್ರೇಷ್ಠ ಬೌಲರ್‌ಗಳಲ್ಲಿ ಶಮಿ ಸ್ಥಾನ ಪಡೆದಿದ್ದಾರೆ’ ಎಂದು ರಿಜ್ವಾನ್ ಹೇಳಿದ್ದಾರೆ.

ಮ್ಯಾಥ್ಯೂ ಹೇಡನ್ ಮೆಚ್ಚುಗೆ: ‘ಭಾರತ ಮತ್ತು ಪಾಕಿಸ್ತಾನ ತಂಡಗಳು ಕ್ರೀಡಾ ಸಹೋದರತ್ವವನ್ನು ತೋರಿಸಿರುವುದು ಮಾದರಿಯಾಗಿದೆ’ ಎಂದು ಆಸ್ಟ್ರೇಲಿಯಾ ತಂಡದ ಮಾಜಿ ಆಟಗಾರ ಮ್ಯಾಥ್ಯೂ ಹೇಡನ್ ಹೇಳಿದ್ದಾರೆ.

ಇಂಗ್ಲೆಂಡ್‌ಗೆ ಬಾಂಗ್ಲಾ ಸವಾಲು

ಅಬುಧಾಬಿ (ಪಿಟಿಐ): ಮೊದಲ ಪಂದ್ಯದಲ್ಲಿ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವನ್ನು ಸೋಲಿಸಿ ಆತ್ಮವಿಶ್ವಾಸದ ಉತ್ತುಂಗದಲ್ಲಿರುವ ಇಂಗ್ಲೆಂಡ್ ತಂಡವು ಬುಧವಾರ ಬಾಂಗ್ಲಾದೇಶದ ಸವಾಲನ್ನು ಎದುರಿಸಲಿದೆ.

ಸೂಪರ್ –12 ಹಂತದ ಮೊದಲ ಗುಂಪಿನಲ್ಲಿ ಶ್ರೀಲಂಕಾ ಎದುರು ಸೋತಿರುವ ಬಾಂಗ್ಲಾದೇಶದ ತಂಡಕ್ಕೆ ಇಂಗ್ಲೆಂಡ್ ಕಠಿಣ ಸವಾಲೊಡ್ಡುವ ಸಾಧ್ಯತೆ ಇದೆ.

ಇಂಗ್ಲೆಂಡ್ ಬೌಲಿಂಗ್ ಪಡೆಯು ಬಲಿಷ್ಠವಾಗಿದೆ. ವಿಂಡೀಸ್ ತಂಡವನ್ನು 55 ರನ್‌ಗಳಿಗೆ ಕಟ್ಟಿಹಾಕಿತ್ತು. ಬೆನ್ ಸ್ಟೋಕ್ಸ್, ಜೋಫ್ರಾ ಆರ್ಚರ್ ಮತ್ತು ಸ್ಯಾಮ್ ಕರನ್ ಅವರ ಅನುಪಸ್ಥಿತಿಯಲ್ಲಿಯೂ ತಂಡದ ಬೌಲಿಂಗ್ ಬಳಗ ಬಲಾಢ್ಯವಾಗಿದೆ.

ಆಲ್‌ರೌಂಡರ್ ಮೋಯಿನ್ ಅಲಿ ಮತ್ತು ಆದಿಲ್ ರಶೀದ್ ಇಂಗ್ಲೆಂಡ್ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದ್ದಾರೆ. ಬಾಂಗ್ಲಾ ತಂಡದಲ್ಲಿ ಶಕೀಬ್ ಅಲ್ ಹಸನ್ ಅವರಿಗೆ ಹೆಚ್ಚು ಅವಕಾಶ ನೀಡಿದರೆ ಪಂದ್ಯ ಗೆಲ್ಲಿಸಿಕೊಡುವಂತಹ ಸಮರ್ಥರಾಗಿದ್ದಾರೆ. ಲಂಕಾ ಎದುರಿನ ಮೊದಲ ಪಂದ್ಯದಲ್ಲಿ ಅವರು ನಾಲ್ಕು ಎಸೆತಗಳ ಅಂತರದಲ್ಲಿ ಎರಡು ವಿಕೆಟ್ ಗಳಿಸಿದ್ದರು. ಲಿಟನ್ ದಾಸ್, ಮೆಹದಿ ಹಸನ್ ಅವರು ಲಯಕ್ಕೆ ಮರಳಿದರೆ ಬ್ಯಾಟಿಂಗ್ ಬಲಿಷ್ಠವಾಗಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಬುಧವಾರ ಇನ್ನೊಂದು ಪಂದ್ಯದಲ್ಲಿ ಸ್ಕಾಟ್ಲೆಂಡ್ –ನಮೀಬಿಯಾ ತಂಡಗಳು ಸೆಣಸಲಿವೆ. ಸಂಜೆ 7.30ಕ್ಕೆ ಈ ಪಂದ್ಯ ಆರಂಭವಾಗಲಿದೆ.

ಏಯಾನ್ ಮಾರ್ಗನ್– ಎಎಫ್‌ಪಿ ಚಿತ್ರ

ಮಂಡಿಯೂರಲು ಕ್ವಿಂಟನ್ ನಕಾರ

ದುಬೈ (ಪಿಟಿಐ): ವಿಶ್ವಕಪ್ ಪಂದ್ಯದ ಆರಂಭಕ್ಕೂ ಮುನ್ನ ತಮ್ಮ ತಂಡದ ಆಟಗಾರರು ಮಂಡಿಯೂರಿ ನಿಂತು ಬ್ಲ್ಯಾಕ್ ಲೈವ್ಸ್ ಮ್ಯಾಟರ್ಸ್ ಅಭಿಯಾನ ಬೆಂಬಲಿಸಬೇಕು ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ ಹೇಳಿತ್ತು. ಆದರೆ ಈ ಮಾತನ್ನು ಧಿಕ್ಕರಿಸಿದ ಕ್ವಿಂಟನ್ ಡಿ ಕಾಕ್ ವಿಂಡೀಸ್ ಎದುರಿನ ಪಂದ್ಯದಲ್ಲಿ ಕಣಕ್ಕಿಳಿಯಲಿಲ್ಲ. ‘ಇದು ಪ್ರತಿಯೊಬ್ಬರ ವೈಯಕ್ತಿಕ ನಿರ್ಧಾರವಾಗಿದೆ. ಯಾರೂ ಒತ್ತಾಯಪೂರ್ವಕವಾಗಿ ಹೇರಲ ಸಾಧ್ಯವಿಲ್ಲ’ ಎಂದು ಡಿಕಾಕ್ ತಿಳಿಸಿದ್ದಾರೆ.

ಕೋಚ್ ಹುದ್ದೆಗೆ ದ್ರಾವಿಡ್ ಅರ್ಜಿ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮುಖ್ಯ ತರಬೇತುದಾರ ಆಗಿ ಕನ್ನಡಿಗ, ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಆಯ್ಕೆ ಬಹುತೇಕ ಖಚಿತಗೊಂಡಿದೆ. ಈ ಸ್ಥಾನಕ್ಕಾಗಿ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಅರ್ಜಿ ಸಲ್ಲಿಸಿದ್ದಾರೆ.

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ (ಎನ್‌ಸಿಎ) ಮುಖ್ಯಸ್ಥರಾಗಿರುವ ರಾಹುಲ್ ದ್ರಾವಿಡ್, ತಂಡದ ಮುಖ್ಯ ಕೋಚ್ ಸ್ಥಾನಕ್ಕೆ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅವರ ಏಕೈಕ ಆಯ್ಕೆಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಅರ್ಜಿ ಸಲ್ಲಿಸಲು ಕೊನೆಯ ದಿನವಾದ ಇಂದು ರಾಹುಲ್ ಔಪಚಾರಿಕವಾಗಿ ಕೋಚ್ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅವರ ಅರ್ಜಿ ಕೇವಲ ಔಪಚಾರಿಕವಾಗಿದೆ. ಎನ್‌ಸಿಎಯ ಬೌಲಿಂಗ್ ಕೋಚ್ ಪಾರಸ್ ಮಾಂಬ್ರೆ ಮತ್ತು ಫೀಲ್ಡಿಂಗ್ ಕೋಚ್ ಅಭಯ್ ಈಗಾಗಲೇ ಅರ್ಜಿ ಹಾಕಿದ್ದಾರೆ‘ ಎಂದು ಬಿಸಿಸಿಐನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಹುಲ್ ದ್ರಾವಿಡ್ ಅವರು ತರಬೇತುದಾರ ಸ್ಥಾನ ವಹಿಸಿಕೊಂಡ ಬಳಿಕ, ಭಾರತ ತಂಡದ ಮಾಜಿ ಆಟಗಾರ ವಿವಿಎಸ್ ಲಕ್ಷ್ಮಣ್ ಅವರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಚುಕ್ಕಾಣಿ ಹಿಡಿಯುವ ಸಾಧ್ಯತೆ ಇದೆ.

ರಾಹುಲ್ ದ್ರಾವಿಡ್ –ಪ್ರಜಾವಾಣಿ ಚಿತ್ರ

ಪಾಕಿಸ್ತಾನಕ್ಕೆ ಎರಡನೇ ಜಯ

ಶಾರ್ಜಾ(ಪಿಟಿಐ): ಹ್ಯಾರಿಸ್ ರವೂಫ್ ಶಿಸ್ತಿನ ಬೌಲಿಂಗ್ ನೆರವಿನಿಂದ ಪಾಕಿಸ್ತಾನ ತಂಡವು ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೂಪರ್ 12ರ ಹಂತದಲ್ಲಿ ಸತತ ಎರಡನೇ ಜಯ ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನ ತಂಡವು 5 ವಿಕೆಟ್‌ಗಳಿಂದ ನ್ಯೂಜಿಲೆಂಡ್ ಎದುರು ಜಯಿಸಿತು.

ಟಾಸ್ ಗೆದ್ದ ಪಾಕಿಸ್ತಾನ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರವೂಫ್ (22ಕ್ಕೆ4)ಅವರು ಉತ್ತಮ ಬೌಲಿಂಗ್ ಮಾಡಿದರು. ಇದರಿಂದಾಗಿ ಕಿವೀಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 134 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಪಾಕ್ ತಂಡವು 18.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 135 ರನ್ ಗಳಿಸಿತು.

ತನ್ನ ಮೊದಲ ಪಂದ್ಯದಲ್ಲಿ ಪಾಕಿಸ್ತಾನವು ಭಾರತದ ಎದುರು ಜಯಿಸಿತ್ತು. ನ್ಯೂಜಿಲೆಂಡ್ ತಂಡವು ಕೊಟ್ಟ ಸಾಧಾರಣ ಗುರಿಯನ್ನು ಸಾಧಿಸಲು ಪಾಕ್ ತಂಡವು ಬೆವರು ಹರಿಸಬೇಕಾಯಿತು.

ಬಾಬರ್ ಆಜಂ (9) ಅವರನ್ನು ಕ್ಲೀನ್ ಬೌಲ್ಡ್ ಮಾಡಿದ ಟಿಮ್ ಸೌಥಿ ತಮ್ಮ ತಂಡದಲ್ಲಿ ಗೆಲುವಿನ ಆಸೆ ಚಿಗುರುವಂತೆ ಮಾಡಿದರು. ಫಕ್ರ್ ಜಮಾನ್, ಸ್ಪಿನ್ನರ್ ಈಶ್ ಸೋಧಿ ಬೀಸಿದ ಎಲ್‌ಬಿಡ್ಬ್ಲು ಬಲೆಗೆ ಬಿದ್ದರು. ಮೊಹಮ್ಮದ್ ಹಫೀಜ್ ಅವರ ವಿಕೆಟ್ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಪಾಲಾಯಿತು.

ಆಸಿಫ್ ಅಲಿ

ಇದರಿಂದಾಗಿ ತಂಡದ ರನ್ ಗಳಿಕೆ ವೇಗವು ತಗ್ಗಿತು. ಒಂದು ಹಂತದಲ್ಲಿ ಪಾಕ್ ಕೈಯಿಂದ ಪಂದ್ಯ ಜಾರಿದಂತೆ ಕಂಡಿತ್ತು. ಆದರೆ, ಕೊನೆ ಐದು ಓವರ್‌ಗಳ ಆಟವೇ ಮುಖ್ಯವಾಗಿತ್ತು.

ಆದರೆ ಅನುಭವಿ ಆಟಗಾರ ಶೋಯಬ್ ಮಲಿಕ್ (ಔಟಾಗದೆ 26) ಮತ್ತು ಇಮದ್ ವಸೀಂ (ಔಟಾಗದೆ 27) ತಂಡವನ್ನು ಗೆಲುವಿನ ದಡ ಸೇರಿಸಿದರು.

ಸ್ಯಾಂಟನರ್ ಹಾಕಿದ 18ನೇ ಓವರ್‌ನಲ್ಲಿ 15 ರನ್‌ಗಳು ಹರಿದುಬಂದವು. ಶೋಯಬ್ ಒಂದು ಸಿಕ್ಸರ್ ಮತ್ತು ಬೌಂಡರಿ ದಾಖಲಿಸಿದರು. ಇದರಿಂದಾಗಿ ಕೈತಪ್ಪುವಂತಿದ್ದ ಪಂದ್ಯದ ಗೆಲುವು ಮತ್ತೆ ಪಾಕ್‌ನತ್ತ ವಾಲಿತು.

ನ್ಯೂಜಿಲೆಂಡ್ ತಂಡದ ಆರಂಭಿಕ ಜೋಡಿ ಮಾರ್ಟಿನ್ ಗಪ್ಟಿಲ್ ಮತ್ತು ಡೆರಿಲ್ ಮಿಚೆಲ್ ಮೊದಲ ಐದು ಓವರ್‌ಗಳಲ್ಲಿ ತಾಳ್ಮೆಯಿಂದ ಆಡಿ 36 ರನ್ ಸೇರಿಸಿದರು. ಆರನೇ ಓವರ್‌ನಲ್ಲಿ ಗಪ್ಟಿಲ್ ವಿಕೆಟ್ ಎಗರಿಸಿದ ರವೂಫ್ ಖಾತೆ ತೆರೆದರು.

ಡೆರಿಲ್ ಮತ್ತು ನಾಯಕ ಕೇನ್ ವಿಲಿಯಮ್ಸನ್ ಇನಿಂಗ್ಸ್ ಕಟ್ಟುವ ಪ್ರಯತ್ನ ಮಾಡಿದರು. ಆದರೆ, ಇಮದ್ ವಾಸೀಂ ಈ ಜೊತೆಯಾಟ ಬೆಳೆಯದಂತೆ ಮಾಡಿದರು. ಅವರು ಡೆರಿಲ್ ವಿಕೆಟ್ ಪಡೆದು ಜೊತೆಯಾಟವನ್ನೂ ಮುರಿದರು. ಜೇಮ್ಸ್ ನಿಶಾಮ್ ಬೇಗನೆ ಔಟಾದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 8ಕ್ಕೆ 134 (ಮಾರ್ಟಿನ್ ಗಪ್ಟಿಲ್ 17, ಡೆರಿಲ್ ಮಿಚೆಲ್ 27, ಕೇನ್ ವಿಲಿಯಮ್ಸನ್ 25 ಡೆವೊನ್ ಕಾನ್ವೆ 27, ಗ್ಲೆನ್ ಫಿಲಿಪ್ಸ್ 13; ಶಹೀನ್ ಶಾ ಆಫ್ರಿದಿ 21ಕ್ಕೆ 1, ಇಮದ್ ವಸೀಂ 24ಕ್ಕೆ 1, ಹ್ಯಾರಿಸ್ ರವೂಫ್ 22ಕ್ಕೆ 4, ಮೊಹಮ್ಮದ್ ಹಫೀಜ್ 16ಕ್ಕೆ 1). **ಪಾಕಿಸ್ತಾನ:** 18.4 ಓವರ್‌ಗಳಲ್ಲಿ 5ಕ್ಕೆ 135 (ಮೊಹಮ್ಮದ್ ರಿಜ್ವಾನ್ 33, ಫಕ್ರ್ ಜಮಾನ್ 11, ಮೊಹಮ್ಮದ್ ಹಫೀಜ್ 11, ಶೋಯಬ್ ಮಲಿಕ್ ಔಟಾಗದೆ 26, ಆಸಿಫ್ ಅಲಿ ಔಟಾಗದೆ 27; ಮಿಚೆಲ್ ಸ್ಯಾಂಟನರ್ 33ಕ್ಕೆ 1, ಟಿಮ್ ಸೌಥಿ 25ಕ್ಕೆ 1, ಟ್ರೆಂಟ್ ಬೌಲ್ಟ್ 29ಕ್ಕೆ 1, ಈಶ್ ಸೋಧಿ 28ಕ್ಕೆ 2). ಫಲಿತಾಂಶ: ಪಾಕಿಸ್ತಾನ ತಂಡಕ್ಕೆ ಐದು ವಿಕೆಟ್‌ಗಳ ಜಯ

ಈಜು: ಶ್ರೀಹರಿ, ಕುಶಾಗ್ರ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಕರ್ನಾಟಕದ ಶ್ರೀಹರಿ ನಟರಾಜ್ ಮತ್ತು ದೆಹಲಿಯ ಕುಶಾಗ್ರ ರಾವತ್ ಅವರು ರಾಜ್ಯ ಈಜು ಸಂಸ್ಥೆ ಅಶ್ರಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ದಾಖಲೆ ಬರೆದರು.

ಪುರುಷರ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಶ್ರೀಹರಿ ನಟರಾಜ್ 55.10 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೊದಲಿಗರಾದರು. ಕರ್ನಾಟಕದವರೇ ಆದ ಶಿವ ಎಸ್. 57.60 ಸೆಕೆಂಡುಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಗಳಿಸಿದರು. ಈ ವಿಭಾಗದ ಮೂರನೇ ಸ್ಥಾನ ಗೋವಾದ ಕ್ಷೇವಿಯರ್ ಮೈಕೆಲ್ ಡಿ‘ಸೋಜಾ ಪಾಲಾಯಿತು. ಕುಶಾಗ್ರ ರಾವತ್ ಪುರುಷರ 400 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ 3 ನಿಮಿಷ 53.68 ಸೆಕೆಂಡುಗಳಲ್ಲಿ ಗುರಿ ತಲುಪಿ ದಾಖಲೆ ಬರೆದರು. ಅವರಿಗೆ ಪ್ರಬಲ ಪೈಪೋಟಿ ನೀಡಿದ ಕಾರ್ನಾಟಕದ ಅನೀಶ್ ಗೌಡ ಮತ್ತು ಶಾನ್ ಗಂಗೂಲಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು. ಅನೀಶ್ 3:59.66 ನಿಮಿಷಗಳಲ್ಲಿ ಮತ್ತು ಶಾನ್ 4:00.14 ನಿಮಿಷದಲ್ಲಿ ಗುರಿ ಮುಟ್ಟಿದರು.

ಮೊದಲ ದಿನದ ಫಲಿತಾಂಶಗಳು: ಪುರುಷರ 400 ಮೀಟರ್ಸ್ ಫ್ರೀಸ್ಟೈಲ್: ಕುಶಾಗ್ರ ರಾವತ್ (ದೆಹಲಿ)–1. ಕಾಲ:3:53.68 (ಕೂಟ ದಾಖಲೆ), ಅನೀಶ್ ಗೌಡ (ಕರ್ನಾಟಕ)2, ಶಾನ್ ಗಂಗೂಲಿ (ಕರ್ನಾಟಕ)–3; ಪುರುಷರ 200 ಮೀ ಬ್ರೆಸ್ಟ್‌ಸ್ಟ್ರೋಕ್: ಲೋಹಿತ್ ಎಂ (ಆರ್‌ಎಸ್‌ಪಿಬಿ). ಕಾಲ: 2:19.00, ಧನುಷ್ ಎಸ್ (ತಮಿಳುನಾಡು)–2, ಅರುಣ್ ಎಸ್ (ಎಸ್‌ಎಸ್‌ಸಿಬಿ)–3; 100 ಮೀ ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಕರ್ನಾಟಕ)–1. ಕಾಲ: 55.10 , ಶಿವ ಎಸ್ (ಕರ್ನಾಟಕ)–2, ಕ್ಷೇವಿಯರ್ ಮೈಕೆಲ್ ಡಿ‘ಸೋಜ (ಗೋವಾ)–3; 50 ಮೀ ಬಟರ್‌ಫ್ಲೈ: ಸಜನ್ ಪ್ರಕಾಶ್ (ಪೊಲೀಸ್). ಕಾಲ: 24.90, ಮಿಹಿರ್ ಆಮ್ರೆ (ಮಹಾರಾಷ್ಟ್ರ), ಆದಿತ್ಯ ಡಿ (ತಮಿಳುನಾಡು)–2, ಬಿಕ್ರಂ ಚಂಗ್ಮೈ (ಅಸ್ಸಾಂ)–4; 4ಷ200 ಫ್ರೀಸ್ಟೈಲ್: ಕರ್ನಾಟಕ (ಸಂಭವ್, ಅನೀಶ್, ತನಿಶ್, ಶ್ರೀಹರಿ)–1. ಕಾಲ: 7:37.65 (ಕೂಟ ದಾಖಲೆ)–1, ದೆಹಲಿ–2, ಎಸ್‌ಎಸ್‌ಸಿಬಿ–3.

ಮಹಿಳೆಯರ 400 ಮೀಟರ್ಸ್ ಫ್ರೀಸ್ಟೈಲ್: ಶಿವಾಂಗಿ ಶರ್ಮಾ (ಅಸ್ಸಾಂ)–1. ಕಾಲ:4:31.86, ಅನ್ಯಾ ವಾಲ (ಮಹಾರಾಷ್ಟ್ರ)–2, ಪ್ರಾಚಿ ಟೋಕಸ್ (ದೆಹಲಿ)–3, 200 ಮೀ ಬ್ರೆಸ್ಟ್ ಸ್ಟ್ರೋಕ್: ಅಪೇಕ್ಷಾ ಫರ್ನಾಂಡಿಸ್ (ಮಹಾರಾಷ್ಟ್ರ)–1. ಕಾಲ: 2:42.97, ಲಿನೇಶಾ ಎ.ಕೆ (ಕರ್ನಾಟಕ)–2, ಕಲ್ಯಾಣಿ ಸಕ್ಸೇನಾ (ಗುಜರಾತ್)–3; 100 ಮೀ ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರ ಕುಮಾರ್ (ಕರ್ನಾಟಕ)–1. ಕಾಲ: 1:04.40, ಮಾನಾ ಪಟೇಲ್ (ಗುಜರಾತ್)–2, ನೀನಾ ವೆಂಕಟೇಶ್ (ಕರ್ನಾಟಕ)–3; 50 ಮೀ ಬಟರ್‌ಫ್ಲೈ: ಖುಜುತಾ ಖಾಡೆ (ಮಹಾರಾಷ್ಟ್ರ)–1. ಕಾಲ: 28.38, ದಿವ್ಯಾ ಸತೀಜ (ಹರಿಯಾಣ)–2, ನೀನಾ ವೆಂಕಟೇಶ್ (ಕರ್ನಾಟಕ)–3.

ಶ್ರೀಹರಿ ನಟರಾಜ್ ಗೆಲುವಿನ ಸಂಭ್ರಮ –ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಬ್ಯಾಸ್ಕೆಟ್‌ಬಾಲ್: ಮಂಗಳೂರಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ಬಿ.ಸಿ. ಹಾಗೂ ಮೌಂಟ್ಸ್ ಕ್ಲಬ್ ತಂಡಗಳು ರಾಜ್ಯ 18 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಜಯ ಗಳಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕರ ವಿಭಾಗದ ಪಂದ್ಯದಲ್ಲಿ ಮಂಗಳೂರು ತಂಡವು 73–38ರಿಂದ ವಿಮಾನಪುರ ಎಸ್.ಸಿ. ತಂಡವನ್ನು ಪರಾಭವಗೊಳಿಸಿತು. ಮತ್ತೊಂದು ಪಂದ್ಯದಲ್ಲಿ ಬಿ.ಸಿ.ಬಿ.ಸಿ ತಂಡವು 68–33ರಿಂದ ವೈಎಂಎಂಎ ತಂಡವನ್ನು ಸೋಲಿಸಿತು.

ಬಾಲಕಿಯರ ವಿಭಾಗದಲ್ಲಿ ಮೌಂಟ್ಸ್ ಕ್ಲಬ್ 70–32ರಿಂದ ಡಿವೈಇಎಸ್ ಮಂಡ್ಯ ತಂಡಕ್ಕೆ ಸೋಲುಣಿಸಿತು. ಇನ್ನೊಂದು ಹಣಾಹಣಿಯಲ್ಲಿ ಕೆ.ಎಸ್. ಹೆಗ್ಡೆ ನಿಟ್ಟೆ ತಂಡಕ್ಕೆ 39–32ರಿಂದ ಡಿವೈಇಎಸ್ ಮೈಸೂರು ಎದುರು ಜಯ ಒಲಿಯಿತು.

ಬಾಲಕರ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಸ್ಪೋರ್ಟ್ಸ್ ಹಾಸ್ಟೆಲ್ ಡಿವೈಇಎಸ್–ವಿವೇಕ್ ಸ್ಪೋರ್ಟ್ಸ್, ಸಾಯ್ ಧಾರವಾಡ–ಬೀಗಲ್ಸ್ ಬಿ.ಸಿ. ಮುಖಾಮುಖಿಯಾಗಲಿವೆ. ಬಾಲಕಿಯರ ವಿಭಾಗದಲ್ಲಿ ಜೆಎಸ್‌ಸಿ–ರಾಜ್‌ಮಹಲ್ ಬಿ.ಸಿ. ಮತ್ತು ಬೀಗಲ್ಸ್ ಬಿ.ಸಿ. ಮತ್ತು ಪಟ್ಟಾಭಿರಾಮನಗರ ಬಿ.ಸಿ. ನಡುವೆ ಹಣಾಹಣಿ ನಡೆಯಲಿದೆ.

ಕ್ರೀಡಾ ಇಲಾಖೆಯಲ್ಲಿ ಕ್ರೀಡಾಪಟುಗಳಿಗೆ ಶೇ 50ರಷ್ಟು ಮೀಸಲಾತಿ: ನಾರಾಯಣಗೌಡ

ಕಲಬುರಗಿ: ‘ಕ್ರೀಡಾ ಇಲಾಖೆಯಲ್ಲಿ ನನೆಗುದಿಗೆ ಬಿದ್ದಿರುವ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರ ಆರಂಭಿಸಲಾಗುವುದು. ಇದರಲ್ಲಿ ಕ್ರೀಡಾಪಟುಗಳಿಗೆ ಶೇ 50ರಷ್ಟು ಮೀಸಲಾತಿ ನೀಡಲು ಉದ್ದೇಶಿಸಲಾಗಿದೆ’ ಎಂದು ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ನಾರಾಯಣಗೌಡ ಹೇಳಿದರು.

‘ಬಹುಪಾಲು ಈಗ ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರ ಹುದ್ದೆಗಳಿವೆ. ತಾಲ್ಲೂಕು ಮಟ್ಟದಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗಳು ಖಾಲಿ ಇವೆ. ಕಳೆದ ಎರಡು ವರ್ಷಗಳಿಂದ ಕೊರೊನಾದಿಂದಾಗಿ ಯಾವುದೇ ಕ್ರೀಡಾಚಟುವಟಿಕೆ ನಡೆದಿಲ್ಲ. ಈಗ ತುಸು ನಿರಾಳವಾಗಿದ್ದು ಎಲ್ಲ ಕ್ರೀಡೆ ಹಾಗೂ ಇಲಾಖೆಯ ಕಾಮಗಾರಿಗಳಿಗೂ ವೇಗ ನೀಡಲಾಗುವುದು’ ಎಂದು ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ರಾಜ್ಯದಲ್ಲಿ ಸದ್ಯ 70 ಕೋಚ್‌ಗಳು ಮಾತ್ರ ಇದ್ದಾರೆ. ಎಲ್ಲ ಕಡೆಯೂ ಕೊರತೆ ಇದೆ. ಹೊಸ ನೇಮಕಾತಿ ಪ್ರಕ್ರಿಯೆಗೂ ಚಾಲನೆ ನೀಡಲಾಗಿದ್ದು, ಮೂರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ’ ಎಂದರು.

‘2022ರ ಮಾರ್ಚ್ ತಿಂಗಳಲ್ಲಿ ಬೆಂಗಳೂರಿನಲ್ಲಿ ರಾಷ್ಟ್ರ ಮಟ್ಟದ ವಿಶ್ವವಿದ್ಯಾಲಯಗಳ ‘ಖೇಲೋ ಇಂಡಿಯಾ’ ಸ್ಪರ್ಧೆ ಆಯೋಜಿಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಮುಂದಿನ ಒಲಿಂಪಿಕ್‌ಗೆ ಸಜ್ಜುಗೊಳಿಸಲು ಈಗಾಗಲೇ ರಾಜ್ಯದ 75 ಕ್ರೀಡಾಪಟುಗಳನ್ನು ಸರ್ಕಾರ ದತ್ತು ತೆಗೆದುಕೊಂಡಿದೆ. 15 ಖಾಸಗಿ ಕಂಪನಿಗಳು ಸಿಎಸ್‌ಆರ್ ನಿಧಿ ಅಡಿ ದತ್ತು ತೆಗೆದುಕೊಳ್ಳಲು ಮುಂದೆ ಬಂದಿವೆ’ ಎಂದರು.

ಬೆಂಗಳೂರಿನ ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ಇತ್ತೀಚೆಗೆ ಮುಕ್ತಾಯವಾದ ರಾಷ್ಟ್ರೀಯ ಜೂನಿಯರ್ ವಾಟರ್‌ಪೋಲೊದಲ್ಲಿ ಬೆಳ್ಳಿ ಪದಕ ಗೆದ್ದ ಕರ್ನಾಟಕ ಮಹಿಳಾ ತಂಡ. ಫೈನಲ್‌ನಲ್ಲಿ ತಂಡವು 7–9ರಿಂದ ಕೇರಳಕ್ಕೆ ಮಣಿಯಿತು. ನಿಂತವರು (ಎಡದಿಂದ) ಕೋಚ್ ಜಯರಾಜ್, ಮೃಣಾಲ್, ಪ್ರಚೇತಾ, ಕೆಎಸ್‌ಎ ಜಂಟಿ ಕಾರ್ಯದರ್ಶಿ ರಮ್ಯ ಬಾಲಕೃಷ್ಣ, ಕೆಎಸ್‌ಎ ಉಪಾಧ್ಯಕ್ಷ ವಿಜಯರಾಘವನ್, ಅನನ್ಯಾ, ಜುಡಿತ್, ವೈಜಯಂತಿ, ಇಕ್ಷಾ, ಕೋಚ್ ನಾಗರಾಜ್ (ಕುಳಿತವರು): ದೃತಿ, ಪ್ರಾಪ್ತಿ, ಸಂಗೀತಾ, ರೋಶಿನಿ, ರುಚಿತಾ ಹಾಗೂ ಧಿತಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ
ಯಾರೊಂದಿಗೂ ಹಸ್ತಲಾಘವ ಮಾಡಬೇಡಿ
ಪೌಷ್ಟಿಕ ಆಹಾರ ಸೇವಿಸಿ

ಆಕಾಶ್ ಸಂಗ್ವಾನ್ (ಎಡ)– ಟ್ವಿಟರ್ ಚಿತ್ರ

ಪುರುಷರ ವಿಶ್ವ ಬಾಕ್ಸಿಂಗ್: ಪ್ರೀಕ್ವಾರ್ಟರ್‌ಗೆ ದೀಪಕ್

ಬೆಲ್‌ಗ್ರೇಡ್ (ಪಿಟಿಐ): ಭಾರತದ ದೀಪಕ್ ಬೊಹ್ರಿಯಾ ಅವರು ಎಐಬಿಎ ವಿಶ್ವ ಪುರುಷರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಪ್ರಿಕ್ವಾರ್ಟರ್‌ಫೈನಲ್ ತಲುಪಿದ್ದಾರೆ. ಶಿವ ಥಾಪಾ, ಆಕಾಶ್ ಸಂಗ್ವಾನ್ ಹಾಗೂ ರೋಹಿತ್ ಮೋರ್ ಅವರಿಗೂ ಗೆಲುವು ಒಲಿದಿದೆ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಏಷ್ಯನ್ ಬೆಳ್ಳಿ ಪದಕ ವಿಜೇತ ದೀಪಕ್ 5–0ಯಿಂದ ಕಿರ್ಗಿಸ್ತಾನದ ಅಜತ್ ಉಸೆನಲಿಯೆವ್ ಎದುರು ಗೆದ್ದು 16ರ ಘಟ್ಟ ತಲುಪಿದರು.

63.5 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಶಿವ ಅವರು ಮೊದಲ ಸುತ್ತಿನಲ್ಲಿ ಮಂಗಳವಾರ 5–0ಯಿಂದ ಕೀನ್ಯಾದ ವಿಕ್ಟರ್ ನ್ಯಾದೆರಾ ಅವರಿಗೆ ಸೋಲಿನ ಪಂಚ್ ನೀಡಿದರು.

2015ರ ಕೂಟದಲ್ಲಿ ಕಂಚು ಗೆದ್ದಿರುವ ಭಾರತದ ಬಾಕ್ಸರ್‌ಗೆ ಮುಂದಿನ ಸುತ್ತಿನಲ್ಲಿ ಸಿಯಾರ ಲಿಯೋನ್‌ನ ಜಾನ್ ಬ್ರೌನ್ ಸವಾಲು ಎದುರಾಗಲಿದೆ.

ಆಕಾಶ್ ಅವರು ಸೋಮವಾರ ರಾತ್ರಿ ನಡೆದ 67 ಕೆಜಿ ವಿಭಾಗದ ಮೊದಲ ಬೌಟ್ ನಲ್ಲಿ 5-0ಯಿಂದ ಟರ್ಕಿಯ ಫುರ್ಕನ್ ಅಡೆಮ್ ಎದುರು ಗೆದ್ದು ಬೀಗಿದರು. ಈ ಹಣಾಹಣಿಯಲ್ಲಿ ಭಾರತದ ಬಾಕ್ಸರ್ ಸಂಪೂರ್ಣ ಪಾರಮ್ಯ ಮೆರೆದರು.

ಹಾಲಿ ರಾಷ್ಟ್ರೀಯ ಚಾಂಪಿಯನ್ ಆಕಾಶ್ ಅವರಿಗೆ ಮುಂದಿನ ಸುತ್ತಿನಲ್ಲಿ ಜರ್ಮನಿಯ ಡೇನಿಯಲ್ ಕ್ರೊಟರ್ ಸವಾಲು ಎದುರಾಗಿದೆ. ಕ್ರೊಟರ್ ಅವರಿಗೆ ಮೊದಲ ಸುತ್ತಿನಲ್ಲಿ ಬೈ ಸಿಕ್ಕಿತ್ತು.

57 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ರೋಹಿತ್ ಮೋರ್ ಅವರಿಗೂ ಮೊದಲ ಸುತ್ತಿನಲ್ಲಿ ಭರ್ಜರಿ ಜಯ ಒಲಿಯಿತು. ಅವರು 5-0ಯಿಂದ ಈಕ್ವೆಡಾರ್ ನ ಜೀನ್ ಕೊಯಿಸೆಡೊ ಅವರನ್ನು ಮಣಿಸಿದರು.

ದಕ್ಷಿಶ್ ಆರ್ಯನ್ ಬಸವರಾಜು

ಟೆನಿಸ್: ಕ್ವಾರ್ಟರ್‌ಗೆ ದಕ್ಷಿಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಶ್ ಆರ್ಯನ್ ಬಸವರಾಜು ಹಾಗೂ ಅಭ್ರದೀಪ್ ಭಟ್ಟಾಚಾರ್ಯ ಅವರು ಕೆಎಸ್‌ಎಲ್‌ಟಿಎ–ಎಐಟಿಎ ಟಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಎಂಟರಘಟ್ಟ ತಲುಪಿದರು.

ಮಂಗಳವಾರ ಇಲ್ಲಿ ನಡೆದ ಬಾಲಕರ ವಿಭಾಗದ ಜಿದ್ದಾಜಿದ್ದಿ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ದಕ್ಷಿಶ್ 2–6, 6–2, 6–0ರಿಂದ ಶ್ರೀಕರ್ ಧೋನಿ ಅವರನ್ನು ಮಣಿಸಿದರು. ಮತ್ತೊಂದು ಪಂದ್ಯದಲ್ಲಿ ಅಭ್ರದೀಪ್ 6-0, 6-1ರಿಂದ ಪ್ರಕಾಶ್ ಸರನ್ ಅವರ ಸವಾಲು ಮೀರಿದರು. ಇನ್ನುಳಿದ ಹಣಾಹಣಿಗಳಲ್ಲಿ ಆದಿತ್ಯ ನಾರಾಯಣನ್ 6-3, 6-0ರಿಂದ ಲಿಖಿತ್ ಎಸ್. ಗೌಡ ಎದುರು, ಅರಿಹಂತ್ ಕೌಲ್ 6-2, 6-3ರಿಂದ ಕೌಶಿಕ್ ರಾಜೇಶ್ ಎದುರು ಜಯ ಸಾಧಿಸಿದರು.

ಬಾಲಕಿಯರ ವಿಭಾಗದಲ್ಲಿ ಸಂಸ್ಕೃತಿ ಲಾಲ್ 6-2, 6-1ರಿಂದ ಸಂಗೀತಾ ಬಿ.ಎಂ. ಎದುರು, ಗುರ್ಲೀನ್ ಕೌಡ್ ಖನುಜಾ 6-1, 2-6, 6-1ರಿಂದ ಸೃಷ್ಟಿ ಕಿರಣ್ ವಿರುದ್ಧ, ಇಂದೂಷಾ ನಿಮಕಾಯಲ 6-4, 4-6, 6-4ರಿಂದ ತನು ವಿಶ್ವಾಸ್ ಎದುರು ಜಯಿಸಿ ಕ್ವಾರ್ಟರ್‌ಫೈನಲ್ ತಲುಪಿದರು. ಇನ್ನುಳಿದ ಪಂದ್ಯಗಳಲ್ಲಿ ದಿಶಾ ಕುಮಾರ್ 1-6, 7-5, 6-2ರಿಂದ ಕಾರ್ತಿಕಾ ಪದ್ಮಕುಮಾರ್ ಎದುರು, ಪೂಜಾ ನಾಗರಾಜ್ 6-3, 6-3ರಿಂದ ಆಯಲಿನ್ ಮರಿಯಂ ಎದುರು ಜಯಗಳಿಸಿ ಮುನ್ನಡೆದರು.

ಫ್ರೆಂಚ್ ಓಪನ್ ಬ್ಯಾಡ್ಮಿಂಟನ್: ಸಮೀರ್ ವರ್ಮಾ ಶುಭಾರಂಭ

ಸಮೀರ್ ವರ್ಮಾ

ಪ್ಯಾರಿಸ್ (ಪಿಟಿಐ): ಭಾರತದ ಸಮೀರ್ ವರ್ಮಾ ಅವರು ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ. ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು ಕೊರಿಯಾದ ಲೀ ಡಾಂಗ್ ಎದುರು ನೇರ ಸೆಟ್‌ಗಳಿಂದ ಗೆದ್ದರು.

ಪುರುಷರ ಸಿಂಗಲ್ಸ್ ವಿಭಾಗದ 54 ನಿಮಿಷಗಳ ಹಣಾಹಣಿಯಲ್ಲಿ ಸಮೀರ್ ಅವರಿಗೆ 21-14, 21-12ರಿಂದ ಜಯ ಒಲಿಯಿತು.

ಕೊರಿಯಾ ಆಟಗಾರನ ಎದುರು ಸಮೀರ್ ಅವರಿಗೆ ಇದು ಮೊದಲ ಗೆಲುವು. ಈ ಹಿಂದಿನ ಎರಡು ಪಂದ್ಯಗಳಲ್ಲಿ ಅವರು ಸೋಲು ಅನುಭವಿಸಿದ್ದರು. ಮಿಶ್ರ ಡಬಲ್ಸ್‌ನಲ್ಲಿ ಧ್ರುವ ಕಪಿಲ– ಎನ್.ಸಿಕ್ಕಿರೆಡ್ಡಿ ಜೋಡಿಯು ಜಿದ್ದಾಜಿದ್ದಿ ಪೈಪೋಟಿಯಲ್ಲಿ 19-21, 19-21ರಿಂದ ಮಲೇಷ್ಯಾದ ಚೆನ್ ಪೆಂಗ್ ಸೂನ್ ಮತ್ತು ಗೋಹ್ ಲಿಯು ಯಿಂಗ್ ಎದುರು ಸೋತರು.

ಮೈಸೂರು ರೇಸ್ ಮುಂದಕ್ಕೆ

ಬೆಂಗಳೂರು: ರಾತ್ರಿ ವೇಳೆ ಸುರಿದ ನಿರಂತರ ಮಳೆಯ ಕಾರಣ ರೇಸ್ ನಡೆಸಲು ಅನುಕೂಲಕರ ಪರಿಸ್ಥಿತಿ ಇಲ್ಲದಿರುವ ಹಿನ್ನೆಲೆಯಲ್ಲಿ ಬುಧವಾರ ನಡೆಯಬೇಕಿದ್ದ ಮೈಸೂರು ಕ್ಲಬ್ ರೇಸ್‌ಗಳನ್ನು ಮುಂದೂಡಲು ಕ್ಲಬ್‌ನ ಸ್ಟೀವರ್ಡ್‌ಗಳು ನಿರ್ಧರಿಸಿದ್ದಾರೆ.